ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪ್ಲೇಆಫ್‌ನಿಂದ ಮುಂಬೈ ಬಹುತೇಕ ಹೊರಕ್ಕೆ

ಆಡಿದ 9 ಐಪಿಎಲ್ ಪಂದ್ಯಗಳಲ್ಲಿ 7ನೇ ಸೋಲನುಭವಿಸಿದ ಮುಂಬೈ ಇಂಡಿಯನ್ಸ್ ಬಹುತೇಕ ಪ್ಲೇಆಫ್‌ನಿಂದ ಹೊರಬಿದ್ದಿದೆ. ಶನಿವಾರ ಚೆನ್ನೈನಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈ ಕಿಂಗ್ಸ್ ವಿರುದ್ಧ ಅದು 8 ವಿಕೆಟ್‌ಗಳಿಂದ ಸೋಲನುಭವಿಸಿತು. ಮುಂಬೈ 159/7 ರನ್ ಗಳಿಸಿದರೆ, ಚೆನ್ನೈ 2 ವಿಕೆಟ್‌ಗೆ 160 ರನ್ ಗಳಿಸಿತು. ಚೆನ್ನೈ ಪರ ಋತುರಾಜ್ 67 ರನ್ ಸಿಡಿಸಿ ತಂಡವನ್ನು ಗೆಲ್ಲಿಸಿದರು.

ಸೊಂಪಾದ ಪುಟಗಳು



ಇಂಗ್ಲಿಷ್ ಪದಗಳ ಅನುಕೂಲ, ಸಾಧ್ಯತೆ ಮತ್ತು ಡಾಗ್-ಇಯರಿಂಗ್

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ರಾಷ್ಟ್ರಋಣ ಸಂದಾಯದ ಪ್ರಜ್ಞೆ: ಭಾರತದ ಇಂದಿನ ಅಗತ್ಯ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಬದುಕು ಒಂದು ಅದ್ಭುತವಾದ ಕ್ಯಾನ್ವಾಸ್ ಇದ್ದಂತೆ. ಅದಕ್ಕೆ ಬಣ್ಣ ತುಂಬುವ ಕುಂಚ ನಿಮ್ಮ ಕೈಯಲ್ಲೇ ಇದೆ. ಪ್ರತಿಯೊಂದು ಮುಂಜಾನೆಯೂ ನಮಗೆ ಸಿಗುವ ಬಿಳಿ ಹಾಳೆ' ಇದ್ದಂತೆ; ಅಲ್ಲಿ ಹಳೆಯ ನೋವುಗಳನ್ನು ಬರೆಯುವ ಬದಲು ಹೊಸ ಆಸೆಗಳ ಚಿತ್ರ ಬಿಡಿಸಬಹುದು.

ವಕ್ರತುಂಡೋಕ್ತಿ



ಫೋಟೋ ಚೆನ್ನಾಗಿ ಬರಲಿ ಅಂತ ನಗೋದಕ್ಕೂ, ಲೈಫ್ ಚೆನ್ನಾಗಿರಲಿ ಅಂತ ನಗೋದಕ್ಕೂ ತುಂಬಾ ವ್ಯತ್ಯಾಸ ಇದೆ. ಎರಡರಲ್ಲೂ ಕಾಣಿಸುವುದು ಹಲ್ಲು ಮಾತ್ರ!

ಬಂಗಾಳದ ಫಾಲ್ಟಾ ಕ್ಷೇತ್ರದಲ್ಲಿ ಮೇ 21ಕ್ಕೆ ಮರು ಮತದಾನ

ಕೋಲ್ಕತಾ: ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದ ಎಲ್ಲಾ 285 ಮತಗಟ್ಟೆಗಳಲ್ಲಿ ಮೇ 21ರಂದು ಮರುಮತದಾನ ನಡೆಸಲು ಚುನಾವಣಾ ಆಯೋಗ ಶನಿವಾರ ಆದೇಶಿಸಿದೆ. ಮೇ 24ಕ್ಕೆ ಫಲಿತಾಂಶ ಘೋಷಣೆಯಾಗಲಿದೆ. 2ನೇ ಹಂತದ ಮತದಾನದ ವೇಳೆ ಇವಿಎಂ ಯಂತ್ರಗಳಲ್ಲಿ ಅಕ್ರಮ ಅಥವಾ ತಿರುಚುವಿಕೆ ಕಂಡುಬಂದ ಹಿನ್ನೆಲೆ 285 ಮತಗಟ್ಟೆಗಳಲ್ಲಿ ಮರುಮತದಾನ ನಡೆಸಲು ಆದೇಶ ಮಾಡಿದೆ.

ಚು.ಆಯೋಗದ ನಿರ್ಧಾರ ಪ್ರಶ್ನಿಸಿದ್ದ ಮಮತಾಗೆ ಬಿಸಿ

ದೆಹಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿನ ಮತ ಎಣಿಕೆಗೆ ಕೇಂದ್ರ ಸರಕಾರದ ಸಿಬ್ಬಂದಿ ನಿಯೋಜನೆ ಮಾಡಿರುವ ಚುನಾವಣಾ ಆಯೋಗದ ಕ್ರಮ ಟಿಎಂಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಇದು ಮಮತಾ ಬ್ಯಾನರ್ಜಿಗೆ ತೀವ್ರ ಮುಖಭಂಗವುಂಟು ಮಾಡಿದೆ.

ಅಮೆರಿಕ: ಪೆಟ್ರೋಲ್ ಬೆಲೆ ಗಗನಕ್ಕೆ, ಆಕ್ರೋಶ

ಲಾಸ್ ಏಂಜಲೀಸ್: ಅಮೆರಿಕದಲ್ಲಿ ಪೆಟ್ರೋಲ್ ಬೆಲೆ ಗಗನಕ್ಕೇರಿದೆ. ಇದರ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ವಿರುದ್ಧ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕ್ಯಾಲಿಫೋರ್ನಿಯಾದ ಜನರು ಸಿಟ್ಟಾಗಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಭಾರತದಾದ್ಯಂತ ಮೇ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ

ಸುದ್ದಿ



ಸಿಎಂ ಬದಲಿಲ್ಲ ಎಂಬ ಸುದ್ದಿಯ ನಂತರ ಸಂಪುಟ ಕಾವು

ಸಂಪುಟ ಸ್ಥಾನಕ್ಕೆ ಆಗ್ರಹ: 40 ಶಾಸಕರು ದೆಹಲಿಗೆ?

ಈ ತಿಂಗಳ 3ನೇ ವಾರದಲ್ಲಿ ಸಂಪುಟ ಪುನಾರಚನೆ ನಿರೀಕ್ಷೆ

ಪಂಚರಾಜ್ಯ ಚುನಾವಣಾ ಫಲಿತಾಂಶದ ಬೆನ್ನಲ್ಲೇ ದಿಲ್ಲಿಗೆ ಲಗ್ಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ 'ಚರ್ಚೆಯೇ ಆಗಿಲ್ಲ' ಎನ್ನುವ ಸ್ಪಷ್ಟನೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿದ ಬೆನ್ನಲ್ಲೇ, ಸಂಪುಟ ಪುನಾರಚನೆಯ ಕೂಗಿಗೆ ಬಲ ಸಿಕ್ಕಿದ್ದು, ಸಚಿವಾಕಾಂಕ್ಷಿಗಳಲ್ಲಿ



ಉತ್ಸಾಹ ಇಮ್ಮಡಿಯಾಗಿದೆ. ಈ ಹಿಂದೆ ದೆಹಲಿಗೆ ತೆರಳಿದ್ದ ಸಚಿವಾಕಾಂಕ್ಷಿಗಳ ನಿಯೋಗಕ್ಕೆ 'ಫಲಿತಾಂಶ'ದ ಬಳಿಕ ಬನ್ನಿ ಎನ್ನುವ ಸಂದೇಶವನ್ನು ಹೈಕಮಾಂಡ್ ನೀಡಿತ್ತು. ಈ ನಡುವೆ ಮಲ್ಲಿಕಾರ್ಜುನ ಖರ್ಗೆ ಅವರು ಸಿಎಂ ಬದಲಾವಣೆ ವಿಷಯ ಅಪ್ರಸ್ತುತ, ಚರ್ಚೆಗೆ ಸಮಯ ನಿಗದಿಯಾಗಿಲ್ಲ ಎನ್ನುವ ಸಂದೇಶವನ್ನು ಕಲಬುರಗಿಯಿಂದ ನೀಡಿದ ಬೆನ್ನಲ್ಲೇ ಸಚಿವ ಸಂಪುಟ ಪುನಾರಚನೆಗೆ ಒತ್ತಡ ಹೇರಲು ಹಿರಿಯ ಶಾಸಕರು ಮುಂದಾಗಿದ್ದಾರೆ.

ಸೋಮವಾರ ಪಂಚರಾಜ್ಯ ಚುನಾವಣೆಯ ಫಲಿತಾಂಶ ಬರುತ್ತಿದ್ದಂತೆ, 40ಕ್ಕೂ ಹೆಚ್ಚು ಶಾಸಕರು ದೆಹಲಿಗೆ ಭೇಟಿ ನೀಡಲು ತೀರ್ಮಾನಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ಭೇಟಿ ನೀಡುವ ಮೊದಲೇ, ಶಾಸಕರು ದೆಹಲಿಗೆ ತಲುಪಿ ಅಲ್ಲಿರುವ 'ಆಪ್ತ' ಮೂಲಗಳನ್ನು ಬಳಸಿಕೊಂಡು ಪಕ್ಷದ ಹೈಕಮಾಂಡ್ ಮೇಲೆ ಸಂಪುಟ ಪುನಾರಚನೆಗೆ ಹಾಗೂ ಪುನಾರಚನೆ ವೇಳೆಗೆ ತಮಗೆ ಅವಕಾಶ ನೀಡುವಂತೆ ಒತ್ತಡ ಹೇರುವ ಆಲೋಚನೆಯಲ್ಲಿ ಪಕ್ಷದ ಹಲವು ಶಾಸಕರಿದ್ದಾರೆ.

ಅದರಲ್ಲಿಯೂ ನಾಯಕತ್ವ ಬದಲಾವಣೆ, ಮುಖ್ಯಮಂತ್ರಿ ಬದಲಾವಣೆ, ಸಂಪುಟ ಪುನಾರಚನೆಯ ಬಗ್ಗೆ ದಿನಕ್ಕೊಂದು ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲಿಯೇ ದೆಹಲಿ ಮಟ್ಟದಲ್ಲಿ ಉತ್ತಮ ಒಡನಾಟ ಹೊಂದಿರುವ ಬಿ.ಕೆ.ಹರಿಪ್ರಸಾದ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿರುವುದು ಹಲವು ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ. ಈ ಬಾರಿಯ ಪುನಾರಚನೆಯ ವೇಳೆ ಆಯಕಟ್ಟಿನ ಸಚಿವ ಸ್ಥಾನದ ಮೇಲೆ ಹರಿಪ್ರಸಾದ್ ಕಣ್ಣಿಟ್ಟಿರುವುದರಿಂದ, ದೆಹಲಿಯಲ್ಲಿ ನಡೆಯುತ್ತಿರುವ ಚರ್ಚೆಯ ಸಂದೇಶವನ್ನು ಸಿದ್ದರಾಮಯ್ಯ ಅವರಿಗೆ ರವಾನಿಸಿದ್ದಾರೆ ಎನ್ನಲಾಗಿದೆ.

40 ಶಾಸಕರು ದೆಹಲಿಗೆ: ಕೆಲ ವಾರಗಳ ಹಿಂದೆ ಅಶೋಕ್ ಪಟ್ಟಣ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಶಾಸಕರು ದೆಹಲಿಗೆ ತೆರಳಿ ಪಕ್ಷದ ಹೈಕಮಾಂಡ್ ಜತೆ ಸಚಿವ ಸಂಪುಟ ಪುನಾರಚನೆ ಬಗ್ಗೆ ಬೇಡಿಕೆ ಇಟ್ಟಿದ್ದರು. ಆದರೀಗ, 40ಕ್ಕೂ ಹೆಚ್ಚು ಶಾಸಕರು ದೆಹಲಿಗೆ ಹೋಗುವ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಬಾರಿಯೂ ಈ ಎಲ್ಲ ಶಾಸಕರನ್ನು ಒಗ್ಗೂಡಿಸುವ ಜವಾಬ್ದಾರಿ ಅಶೋಕ್ ಪಟ್ಟಣ್ ಅವರಿಗೆ ನೀಡಲಾಗಿದೆ ಎಂದು ತಿಳಿದುಬಂದಿದೆ. ಪ್ರಮುಖವಾಗಿ ಮುಖ್ಯವಾಗಿ ಮೂರು, ನಾಲ್ಕು ಹಾಗೂ ಐದನೇ ಬಾರಿ ಗೆದ್ದಿರುವ ಹಿರಿಯ ಶಾಸಕರು ಪುನಾರಚನೆ ವೇಳೆ ಅವಕಾಶ ನೀಡಬೇಕು ಎಂದು ಒತ್ತಡ ಹೇರಲು ತೀರ್ಮಾನಿಸಿದ್ದಾರೆ.

'ಹಲವು ಬಾರಿ ಗೆದ್ದಿದ್ದೇವೆ, ನಮಗೂ ಅವಕಾಶ ಸಿಗಲೇಬೇಕು' ಎನ್ನುವ ವಾದವನ್ನು ಪಕ್ಷದ ಹೈಕಮಾಂಡ್ ಮುಂದೆ ಮಂಡಿಸಲು ಶಾಸಕರು ತೀರ್ಮಾನಿಸಿದ್ದಾರೆ ಎಂದು ತಿಳಿದುಬಂದಿದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ ಇನ್ನೂ ಸ್ಪಷ್ಟವಾಗದೇ ಇರುವುದರಿಂದ ಸಂಪುಟ ಪುನಾರಚನೆ ಪಟ್ಟು ಬಿಗಿಯಾಗಿದೆ.



ಸಚಿವ ಸಂಪುಟ ಪುನಾರಚನೆ ಯಾಗಬೇಕು ಎನ್ನುವುದು ಕೆಲವು ಶಾಸಕರ ವೈಯಕ್ತಿಕ ಅಭಿಪ್ರಾಯವಾಗಿದೆ. ಆದರೆ, ನಾನು ಸಚಿವ ಸ್ಥಾನಕ್ಕಾಗಿ ಎಂದಿಗೂ ಯಾರ ಮುಂದೆಯೂ ಬೇಡಿಕೆಯಿಟ್ಟಿಲ್ಲ. ಪಕ್ಷ ನನಗೆ ಜವಾಬ್ದಾರಿ ನೀಡಿದೆ, ಅದನ್ನು ನಿರ್ವಹಿಸುತ್ತಿದ್ದೇನೆ. ಒಂದು ವೇಳೆ ಹೈಕಮಾಂಡ್ ಹೊಸಬರಿಗೆ ಅವಕಾಶ ನೀಡುವ ಉದ್ದೇಶದಿಂದ ಸಚಿವ ಸ್ಥಾನ ಬಿಟ್ಟುಕೊಡು ಎಂದರೆ, ಈ ಕ್ಷಣವೇ ರಾಜೀನಾಮೆ ನೀಡಲು ಸಿದ್ಧ. ಸಚಿವ ಸ್ಥಾನ ಇಲ್ಲದೆಯೂ ಜನರ ಸೇವೆ ಮಾಡುವುದು ನನಗೆ ಗೊತ್ತು.

-ಶಿವಾನಂದ ಪಾಟೀಲ್, ಸಚಿವ

ಮೇ 6ರ ಬಳಿಕ ಸಿಎಂ ಸಿದ್ದರಾಮಯ್ಯ ದೆಹಲಿಗೆ?

ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಚರಾಜ್ಯ ಫಲಿತಾಂಶ ಪ್ರಕಟವಾದ ಬಳಿಕ ದೆಹಲಿಗೆ ತೆರಳುವ ಸಾಧ್ಯತೆಯಿದೆ ಎನ್ನಲಾಗಿದೆ. 4ಕ್ಕೆ ಫಲಿತಾಂಶ ಪ್ರಕಟವಾಗಲಿದ್ದು, 6ರ ಬಳಿಕ ಪಕ್ಷದ ಹೈಕಮಾಂಡ್ ನಾಯಕರ 'ಲಭ್ಯತೆ'ಯನ್ನು ನೋಡಿಕೊಂಡು ದೆಹಲಿ ಪ್ರವಾಸ ಕೈಗೊಳ್ಳುವ ಸಾಧ್ಯತೆಯಿದೆ. ಈ ವೇಳೆ ಸಚಿವ ಸಂಪುಟ ಪುನಾರಚನೆ ಮಾಡುವಂತೆ ಪಕ್ಷದ ಹೈಕಮಾಂಡ್ ಮೇಲೆ ಒತ್ತಡ ಹೇರಿ, ಅಗತ್ಯ ಹಾಗೂ ಯಾರಿಗೆಲ್ಲ ಅವಕಾಶ ನೀಡಬೇಕು ಎನ್ನುವ ಬಗ್ಗೆ ಸುದೀರ್ಘ ಮಾತುಕತೆ ನಡೆಸಲಿದ್ದಾರೆ ಎನ್ನಲಾಗಿದೆ.

ಅಭಿಮಾನೋತ್ಸವದ ನಡುವೆ ಬಿಎಸ್‌ವೈ-ಸಂತೋಷ್ ಭೇಟಿ

ಯಡಿಯೂರಪ್ಪಗೆ ಸಂತೋಷ್ ಸಂದೇಶ

ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಿಂದ ಗೌಪ್ಯ ಸಂದೇಶ?

ಪಂಚರಾಜ್ಯ ಫಲಿತಾಂಶದ ನಂತರ ರಾಜ್ಯದಲ್ಲೂ ಬದಲಾವಣೆ ಚರ್ಚೆ

ಬೆಂಗಳೂರು: ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರಕಾರದಲ್ಲಿ ನಾಯಕತ್ವ ಗೊಂದಲ ಜೀವಂತವಿರುವಾಗಲೇ, ಪಂಚರಾಜ್ಯಗಳ ಫಲಿತಾಂಶಕ್ಕೆ ದಿನಗಳಿರುವಾಗಲೇ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ದಿಢೀರ್ ಭೇಟಿ ಮಾಡಿರುವುದು ಕುತೂಹಲ ಹುಟ್ಟುಹಾಕಿದೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ನಂತರ ರಾಜ್ಯ ರಾಜಕೀಯದಲ್ಲೂ ದೊಡ್ಡ ಬದಲಾವಣೆ ಸಂಭವಿಸಲಿದೆ ಎಂಬ ಬಗ್ಗೆ ಇಬ್ಬರೂ ಚರ್ಚಿಸಿದ್ದಾರೆ ಎನ್ನಲಾಗಿದೆ.

ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಳ್ಳಲಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಪಯಣದ ಐವತ್ತು ವರ್ಷಗಳ ಸಂಭ್ರಮಾಚರಣೆಯ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಇದು ಸೌಹಾರ್ದಯುತ ಭೇಟಿ ಎಂದು ಹೇಳಲಾಗುತ್ತಿದ್ದರೂ, ರಾಜ್ಯ ರಾಜಕಾರಣದ ಕುರಿತು ಗಂಭೀರ ಚರ್ಚೆ ನಡೆದಿದೆ ಎನ್ನಲಾಗಿದೆ.

ಮಾಜಿ ಸಿಎಂ ಯಡಿಯೂರಪ್ಪ ಅವರ ಮನೆಗೆ ಶನಿವಾರ ಸೌಹಾರ್ದಯುತ ಭೇಟಿ ನೀಡಿ ಅವರೊಂದಿಗೆ ಉಪಾಹಾರ ಸೇವಿಸಿರುವ ಸಂತೋಷ್, ಪ್ರಸಕ್ತ ರಾಜಕೀಯ ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಪಂಚರಾಜ್ಯಗಳ ಚುನಾವಣೆಯಲ್ಲಿ

ಬಿಜೆಪಿಯು ಗಮನಾರ್ಹ ಸಾಧನೆ ಮಾಡಲಿದ್ದು, ಇದು ರಾಜ್ಯ ರಾಜಕಾರಣದ ಮೇಲೂ ಪರಿಣಾಮ ಬೀರಬಹುದಾದ ಸಂಭವವವಿದೆ. ಹೀಗಾಗಿ ಈ ಹಿರಿಯ ನಾಯಕರು ಚರ್ಚಿಸಿದ್ದು, ಕೇಂದ್ರದ ಗೌಪ್ಯ ವಿಚಾರವನ್ನು ಬಿಎಸ್‌ವೈ ಅವರಿಗೆ ತಿಳಿಸಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪಂಚರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸುವ ಬಗ್ಗೆ ಬಿಎಸ್‌ವೈ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

→ 4

ಕುತೂಹಲಗಳೇನು?

- ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ಬೆನ್ನಲ್ಲೇ ರಾಜ್ಯದಲ್ಲೂ ಬದಲಾವಣೆ ಆಗಬಹುದು ಎಂಬ ಸಂದೇಶ ರವಾನೆ ಸಾಧ್ಯತೆ
- ಕಾಂಗ್ರೆಸ್ ಸರಕಾರದಲ್ಲಿರುವ ಭಿನ್ನಮತ, ನಾಯಕತ್ವ ಬದಲಾವಣೆ ಗೊಂದಲಗಳ ಬಗ್ಗೆಯೂ ಮಾತುಕತೆಯಾಗಿದೆ: ಮೂಲಗಳು
- ಯಡಿಯೂರಪ್ಪ ಹಾಗೂ ಸಂತೋಷ್ ಅವರ ಭೇಟಿ ಸೌಹಾರ್ದಯುತವಾದದ್ದು, ಇದರಲ್ಲಿ ಯಾವುದೇ ರಾಜಕೀಯ ಬೆರೆಸಬೇಡಿ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮನವಿ

ಅಮಿತ್ ಶಾ ಆಗಮನ

ಮೇ 9ರಂದು ಬಿಎಸ್‌ವೈ ಅಭಿಮಾನೋತ್ಸವಕ್ಕೆ ಭರದ ಸಿದ್ಧತೆ ನಡೆಯುತ್ತಿದ್ದು, ಶನಿವಾರ ಮೈಸೂರಿನಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಅವರಿಗೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಗಿದ್ದು ಬರಲು ಒಪ್ಪಿದ್ದಾರೆ ಎಂದು ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. ಇದೇ ವೇಳೆ ಚಿತ್ರದುರ್ಗದ ಕಾರ್ಯಕ್ರಮ ಉದ್ಘಾಟನೆಗೆ ಖುದ್ದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮಿಸಲಿದ್ದಾರೆ. ಈ ಸಂತೋಷ್ ಬಿಎಸ್‌ವೈಗೆ ಮಾಹಿತಿ ನೀಡಿದ್ದಾರೆ.

ಮುಗಿಯದ ಸಾರಿಗೆ ಜಟಾಪಟಿ: ಮೇ 20 ಮತ್ತೆ ಸಿಬ್ಬಂದಿ ಮುಷ್ಕರ

ಮುಷ್ಕರದಲ್ಲಿ ಪಾಲ್ಗೊಂಡರೆ ಶಿಸ್ತುಕ್ರಮ: ಎಚ್ಚರಿಕೆ

ಬೆಂಗಳೂರು: ವೇತನ ಪರಿಷ್ಕರಣೆ, ಬಾಕಿ ವೇತನ ಪಾವತಿ ಸೇರಿದಂತೆ ಹಲವು ದಿನಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಸಾರಿಗೆಯ 4 ನಿಗಮಗಳ ಸಾರಿಗೆ ನೌಕರರು ಮೇ

20ರಂದು ಮತ್ತೆ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ, ವಾಯುವ್ಯ ಕರ್ನಾಟಕ ಸಾರಿಗೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಹಾಗೂ ಬಿಎಂಟಿಸಿ ಸಾರಿಗೆ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿರುವು ದರಿಂದ ಅಂದು ಬಸ್ಸುಗಳು ರಸ್ತೆಗಿಳಿಯುವ ಸಾಧ್ಯತೆ ಕಡಿಮೆ. ಮುಷ್ಕರದಲ್ಲಿ ನಾಲ್ಕು ನಿಗಮಗಳ ನೌಕರರು ಪಾಲ್ಗೊಳ್ಳುತ್ತಿರುವುದರಿಂದ ಬಸ್ಸುಗಳ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಸರಕಾರ ಮತ್ತು ನೌಕರರ ಸಂಘಟನೆಗಳ ನಡುವೆ ನಡೆದ ಮಾತುಕತೆ ವಿಫಲವಾಗಿರುವುದರಿಂದ ಮುಷ್ಕರ ಅನಿವಾರ್ಯವಾಗಿದೆ ಎಂದು ಜಂಟಿ ಕ್ರಿಯಾ ಸಮಿತಿ ಹೇಳಿದೆ.

ಬೇಡಿಕೆಗಳೇನು?

- 38 ತಿಂಗಳ ಹಿಂಬಾಕಿ ವೇತನ ನೀಡಬೇಕು
- 2024ರ ಜ. 1ರಿಂದ ಅನ್ವಯವಾಗುವಂತೆ ಮೂಲವೇತನ ಶೇ.25 ಏರಿಸಬೇಕು
- ಮೂಲವೇತನದಲ್ಲಿ ಶೇ.31 ತುಟ್ಟಿ ಭತ್ಯೆ ಬೇಕು
- ಕರೋನಾ ಸಮಯದ ಅರಿಯರ್ಸ್ ಬೇಕು

ನೌಕರರು ಶೇ.25 ವೇತನ ಹೆಚ್ಚಿಸಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಅಲ್ಲದೆ ಕಳೆದ 38 ತಿಂಗಳ ಬಾಕಿ ವೇತನವನ್ನು ಬಿಡುಗಡೆ ಮಾಡುವುದು ಇತರೆ ಭತ್ಯೆಗಳು ನೌಕರರಿಗೆ ಸಂಬಂಧಿಸಿದ ಬೇಡಿಕೆ ಕಾಲ ಮಿತಿಯೊಳಗೆ ಈಡೇರಿಸಬೇಕೆಂಬುದು ಸಂಘಟನೆಗಳ ಒತ್ತಾಯ. ರಾಜ್ಯ ಸರಕಾರವು ಈಗಾಗಲೇ ಮೊದಲ ಕಂತಿನ ಹಿಂಬಾಕಿ ವೇತನವನ್ನು ಬಿಡುಗಡೆ ಮಾಡಿರುವುದರಿಂದ ನೌಕರರ ಸಂಘಟನೆಗಳ ಬೇಡಿಕೆಯಂತೆ ಶೇ.7ರಷ್ಟು ವೇತನ ಹೆಚ್ಚಳದ ಪ್ರಸ್ತಾವನೆಯನ್ನು ಮುಂದಿಡಲಾಗಿದೆ. ಈ ಬಗ್ಗೆ ಮಾತುಕತೆ ಚಾಲ್ತಿಯಲ್ಲಿದೆ.

→ 4

ಈ ಬಾರಿ ನಿರೀಕ್ಷೆ ಮೀರಿ ಮುಂಗಾರು ಮಳೆ: ಐಎಂಡಿ

ಮೇ 14-16ರ ನಡುವೆ ಮುಂಗಾರು ಪ್ರವೇಶ

ಬೆಂಗಳೂರು: ಈ ಬಾರಿ ಕರ್ನಾಟಕಕ್ಕೆ ಮುಂಗಾರು ಮಳೆಯ ಕೊರತೆಯಾಗಲಿದೆ ಎಂಬ ಆತಂಕಗಳ ನಡುವೆಯೇ, ದೇಶಕ್ಕೆ ಮುಂಗಾರು ಪ್ರವೇಶಕ್ಕೆ ದಿನಾಂಕ ನಿಗದಿಯಾಗಿದೆ. ಈ ನಡುವೆ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಮೇ 14-16ರ ನಡುವೆ ದೇಶಕ್ಕೆ ಮುಂಗಾರು ಪ್ರವೇಶವಾಗಲಿದೆ. ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆಯಿದೆ. ಸದ್ಯ ದೇಶಾದ್ಯಂತವಿರುವ ಉರಿಬಿಸಿಲು ಶೀಘ್ರ ದಲ್ಲಿಯೇ ತಗ್ಗಲಿದೆ. ಅಂಡಮಾನ್ ಮತ್ತು ನಿಕೋಬಾರ್ ಮೂಲಕ ನೈಋತ್ಯ ಮಾನ್ಸೂನ್ ಆಗಮನವಾಗಲಿದೆ ಎಂದು ಮುನ್ಸೂಚನೆ ನೀಡಲಾಗಿದೆ.

ಮುಂಗಾರು ಪ್ರವೇಶದ ಹೊರತಾಗಿಯೂ ಹಿಮಾಲಯದ ತಪ್ಪಲಿನ ಕೆಲವು ಭಾಗಗಳು, ಪೂರ್ವ ಕರಾವಳಿ ರಾಜ್ಯಗಳು, ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಮೇನಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಬಿಸಿಯಲೆ ಮುಂದುವರಿ

ಯುವ ಸಾಧ್ಯತೆಯಿದೆ. ದೇಶಾದ್ಯಂತ ಸರಾಸರಿ ಮಳೆ ಸಾಮಾನ್ಯಕ್ಕಿಂತ ಹೆಚ್ಚಾದರೂ, ಪೂರ್ವ, ಈಶಾನ್ಯ ಮತ್ತು ಪೂರ್ವ ಮಧ್ಯ ಭಾರತದ ಕೆಲವು ಭಾಗಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು.

ಇನ್ನೊಂದು ವಾರ ಪೂರ್ವ ಮುಂಗಾರು?: ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಕೆಲಭಾಗದಲ್ಲಿ ಮೂರ್ನಾಲ್ಕು ದಿನಗಳಿಂದ ಅಬ್ಬರಿಸುತ್ತಿರುವ ಪೂರ್ವ ಮುಂಗಾರು ಮಳೆ ಚೇತರಿಕೆಯಾಗಿದ್ದು, ಮುಂದಿನ ಒಂದು ವಾರಗಳ ಕಾಲ ಮುಂದುವರಿಯುವ ಸಾಧ್ಯತೆಯಿದೆ. ಈಗಾಗಲೇ ಗರಿಷ್ಠ ತಾಪಮಾನ ಹೆಚ್ಚಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ತೀವ್ರವಾಗಿದೆ.

ಹುಗಿದಿಟ್ಟಿದ್ದ ಬಾಂಬ್ ಸ್ಫೋಟ: 4 ಭದ್ರತಾ ಸಿಬ್ಬಂದಿ ಹುತಾತ್ಮ

ನಕ್ಸಲ್ ನಿಗ್ರಹ ಘೋಷದ ನಡುವೆ ದುರ್ಘಟನೆ

ರಾಯಪುರ: ಈ ವರ್ಷ ಮಾ.31ಕ್ಕೆ ನಕ್ಸಲರನ್ನು ಮೂಲೋತ್ಪಾಟನೆ ಮಾಡಿರುವುದಾಗಿ ಘೋಷಿಸಿದ್ದ ಕೇಂದ್ರ ಸರಕಾರಕ್ಕೆ ಆಘಾತಕಾರಿ ಸುದ್ದಿ ಎದುರಾಗಿದೆ. ಶನಿವಾರ ಛತ್ತೀಸ್‌ಗಢದ ಕಾಂಕೇರ್ ಜಿಲ್ಲೆಯ ಛೋಟೆಬೆಠಿಯಾ ಅರಣ್ಯಪ್ರದೇಶದಲ್ಲಿ ನಕ್ಸಲರಿಗಾಗಿ ಶೋಧ ನಡೆಸುತ್ತಿದ್ದಾಗ ನಾಲ್ವರು ಡಿಆರ್‌ಜಿ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಐಇಡಿ (ಸುಧಾರಿತ ಸ್ಫೋಟಕ) ನೆಲಬಾಂಬನ್ನು ನಿಷ್ಕ್ರಿಯಗೊಳಿಸಲು ಭದ್ರತಾ ಸಿಬ್ಬಂದಿ ಯತ್ನಿಸುತ್ತಿತ್ತು. ಆಗ ಐಇಡಿ ಸ್ಫೋಟಗೊಂಡಿದೆ. ತೀವ್ರವಾಗಿ ಗಾಯಗೊಂಡ ಇನ್ಸ್‌ಪೆಕ್ಟರ್ ಸುಖರಾಮ್ ವಟ್ಟಿ, ಪೇದೆಗಳಾದ ಕೃಷ್ಣ ಕೊಮ್ರಾ, ಸಂಜಯ್ ಗಡ್ಪಲೆ ಸ್ಥಳದಲ್ಲೇ ಮೃತಪಟ್ಟರು. ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದ ಇನ್ನೊಬ್ಬ ಪೇದೆ ಪರಮಾನಂದ ಕೊಮ್ರಾ ಚಿಕಿತ್ಸೆ ವೇಳೆ ಕೊನೆಯುಸಿರೆಳೆದರು.

ಆಗಿದ್ದೇನು?: ಸತತ 2 ವರ್ಷಗಳಿಂದ ದೇಶಾದ್ಯಂತ ನಕ್ಸಲರ ನಿರ್ಮೂಲನೆಗೆ ಕೇಂದ್ರ ಸರಕಾರ ಕಾರ್ಯಾಚರಣೆ ನಡೆಸಿತ್ತು. ಈ ವರ್ಷ ಮಾ.31ಕ್ಕೆ ಹಲವು ನಕ್ಸಲ್ ನಾಯಕರ ಶರಣಾಗತಿ, ಸಾವಿನ ನಂತರ ನಕ್ಸಲರ ಮೂಲೋತ್ಪಾಟನೆಯಾಗಿದೆ

ಎಂದು ಘೋಷಿಸಿತ್ತು. ಆದರೆ ಅಳಿದುಳಿದ ಸಣ್ಣ ಪುಟ್ಟ ನಕ್ಸಲರಿಗಾಗಿ ಶೋಧ ಮುಂದುವರಿದೇ ಇತ್ತು. ಅದರ ಭಾಗವಾಗಿಯೇ ಶನಿವಾರ ಕಾಂಕೇರ್ ಜಿಲ್ಲೆಯ ಅರಣ್ಯಪ್ರದೇಶದಲ್ಲಿ ಶೋಧ ನಡೆದಿತ್ತು. ಆಗ ಐಇಡಿ ಪತ್ತೆಯಾಗಿದೆ. ಅದನ್ನು ನಿಷ್ಕ್ರಿಯಗೊಳಿಸುವಾಗಲೇ ಈ ದುರಂತ ಸಂಭವಿಸಿದೆ. ಬಹುಶಃ ಮುಂದಿನ ದಿನಗಳಲ್ಲಿ ನೆಲಬಾಂಬ್‌ಗಳನ್ನು ಪತ್ತೆ ಮಾಡುವುದು ಪೊಲೀಸರು, ಯೋಧರಿಗೆ ದೊಡ್ಡ ಸವಾಲಾಗಬಹುದು. ಸದ್ಯ ಈ ಪ್ರಕರಣದಲ್ಲಿ ನಕ್ಸಲರ ನೇರ ಕೈವಾಡವಿಲ್ಲ ಎಂದು ಹೇಳಲಾಗಿದೆ.

ದೇಶದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ಅಧಿಕೃತವಾಗಿ ಮುಗಿದಿದ್ದರೂ, ಸಣ್ಣಪುಟ್ಟ ನಕ್ಸಲರಿಗಾಗಿ ಶೋಧ ಮುಂದುವರಿದಿದೆ. ಭದ್ರತಾಪಡೆಗಳು ಈಗಲೂ ಎಚ್ಚರಿಕೆಯಲ್ಲಿವೆ.

ಮೊಬೈಲ್ ದಾಸ್ಯದಿಂದ ಮಗುವಿಗೆ 3 ವರ್ಷದಲ್ಲೇ ಆಟಿಸಂ: ಏಮ್ಸ್

ನವದೆಹಲಿ: ಹಾಲುಗಲ್ಲದ ಹಸುಳೆಗಳಿಗೆ ಮೊಬೈಲ್ ತೋರಿಸುವುದರಿಂದ ಅವರಲ್ಲಿ ಬುದ್ಧಿಮಾಂದ್ಯತೆ



(ಆಟಿಸಂ) ಬರುವ ಸಾಧ್ಯತೆಗಳು ದಟ್ಟವಾಗಿವೆ ಎಂಬ ಆತಂಕಕಾರಿ ವಿಚಾರವನ್ನು ದೆಹಲಿಯ ಏಮ್ಸ್ ಆಸ್ಪತ್ರೆಯ ಸಂಶೋಧಕರು ಪತ್ತೆ ಹಚ್ಚಿದ್ದಾರೆ. ಹಸುಗೂಸುಗಳಿಗೆ ಮೊಬೈಲ್ ತೋರಿಸುವುದರಿಂದ ಅವು ಮೂರು ವರ್ಷ ತುಂಬುವುದರೊಳಗೆ ಬುದ್ಧಿಮಾಂದ್ಯತೆಯಿಂದ ಬಳಲುವ ಸಾಧ್ಯತೆಗಳಿರುತ್ತವೆ ಎಂದು ವೈದ್ಯರು ತಿಳಿಸಿದ್ದಾರೆ.

ಈ ವಿಷಯ ತಿಳಿಸಿರುವ ಏಮ್ಸ್‌ನ ಮಕ್ಕಳ ನರವಿಜ್ಞಾನ ವಿಭಾಗದ ಮುಖ್ಯಸ್ಥೆಯಾದ ಪ್ರೊ. ಶೆಫಾಲಿ ಗುಲಾಟಿ, 'ಬುದ್ಧಿಮಾಂದ್ಯತೆಯು ಅನುವಂಶೀಯವಾದ ಸಮಸ್ಯೆ. ಕೆಲವೊಮ್ಮೆ ಇದು ನಮ್ಮ ಸುತ್ತಲಿನ ಪರಿಸರದ ಪ್ರಭಾವದಿಂದಲೂ ಮಕ್ಕಳಲ್ಲಿ ಈ ಸಮಸ್ಯೆ ಉಂಟಾಗುತ್ತದೆ. ಆದರೆ, ಸಾಮಾನ್ಯವಾಗಿ ಜನಿಸಿದ ಮಗುವಿಗೆ ಅದಿನ್ನೂ ಕೂಸಾಗಿರುವ ಹಂತದಲ್ಲೇ ಮೊಬೈಲ್ ವೀಕ್ಷಣೆಯನ್ನು ತೀವ್ರಗೊಳಿಸಿದರೆ ಅದು ಬುದ್ಧಿ ಮಾಂದ್ಯತೆಗೆ ಕಾರಣವಾಗುವ ಸಾಧ್ಯತೆಗಳಿರುತ್ತವೆ .

'ಮೊಬೈಲ್ ಸ್ಕ್ರೀನ್ ಟೈಂ ಹಾಗೂ ಬುದ್ಧಿಮಾಂದ್ಯತೆಗೂ ಸಂಬಂಧವಿದೆಯೇ ಎಂಬುದರ ಮೇಲೆ ನಮ್ಮ ಸಂಸ್ಥೆಯಲ್ಲಿ ಹಲವಾರು ಅಧ್ಯಯನಗಳಾಗಿವೆ. ಹುಟ್ಟಿ ಒಂದು ವರ್ಷದೊಳಗಿನ ಮಕ್ಕಳಿಗೆ ಅಥವಾ ಒಂದು ವರ್ಷ ತುಂಬಿದ ಮಕ್ಕಳಿಗೆ ಹೆಚ್ಚಾಗಿ ಮೊಬೈಲ್ ತೋರಿಸಿದರೆ ಅದು ಅವರ ಬೌದ್ಧಿಕ ವಿಕಸನಕ್ಕೆ ಅಡ್ಡಿಯಾಗುವುದಷ್ಟೇ ಅಲ್ಲ, ಮೂರು ವರ್ಷ ತುಂಬುವಷ್ಟರಲ್ಲಿ ಬುದ್ಧಿಮಾಂದ್ಯತೆ ಆವರಿಸುವ ಸಾಧ್ಯತೆಗಳನ್ನು ತಂದೊಡ್ಡುತ್ತದೆ' ಎಂದು ಹೇಳಿದ್ದಾರೆ.

ಕೆಆರ್‌ಎಸ್: ದೋಣಿ ಮಗುಚಿ 3 ಸಾವು

ಮೈಸೂರು: ಏಕಾಏಕಿ ಬೀಸಿದ ಬಿರುಗಾಳಿಗೆ ದೋಣಿ ಮಗುಚಿದ ಪರಿಣಾಮ ಮೂವರು ಸಾವಿಗೀಡಾದ ಘಟನೆ ಶುಕ್ರವಾರ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನಡೆದಿದೆ. ಹಿನ್ನೀರಿನಲ್ಲಿರುವ ಗಿರಿಯಾರಹಳ್ಳಿ ಬಳಿ ಎರಡು ಪ್ರತ್ಯೇಕ ದೋಣಿ ದುರಂತದಲ್ಲಿ ವೃದ್ಧ ದಂಪತಿ ಹಾಗೂ ಯುವಕ ನೀರುಪಾಲಾಗಿದ್ದರು. ಶನಿವಾರ ದಿನವಿಡೀ ನಡೆದ ಹುಡುಕಾಟದ ವೇಳೆ ವೃದ್ಧ ದಂಪತಿ ಶವ ಸಿಕ್ಕಿದೆ. ಯುವಕ ಮಧು ಶವಕ್ಕಾಗಿ ಶೋಧ ಮುಂದುವರಿದಿದೆ. ಬೆಂಗಳೂರಿನ ವರ್ತೂರು ಬಡಾವಣೆ ನಿವಾಸಿಗಳಾದ ವಿ.ಮಂಜುನಾಥ್ (62) ಪತ್ನಿ ಜಸ್ಸಿ ಮಂಜುನಾಥ್ (62), ಹಾಗೂ ಗಿರಿಯಾರಹಳ್ಳಿಯ ಮಧು (24) ಮೃತ ಪಟ್ಟವರು. ಶುಕ್ರವಾರ ಸಂಜೆ ಗಿರಿಯಾರಹಳ್ಳಿ ಬಳಿ ಇರುವ ಆರ್‌ಎಂಎಸ್‌ಸಿ ಎಂಬ ಖಾಸಗಿ ಸೇಲಿಂಗ್ ಸಂಸ್ಥೆ ವತಿಯಿಂದ ಮಗಳು, ಅಳಿಯ ಹಾಗೂ ಮೊಮ್ಮಗನ ಸಮೇತ ವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ ಬಿರುಗಾಳಿ ಬೀಸಿ ನದಿಗೆ ಬಿದ್ದಿದ್ದಾರೆ.

ಯುದ್ಧ ಭೀತಿ ನಡುವೆ ಅಮೆರಿಕ ನೌಕೆ ವಾಪಸ್

ಅಮೆರಿಕದ ಅತಿದೊಡ್ಡ ಯುದ್ಧನೌಕೆ ಜೆರಾಲ್ಡ್ ಫೋರ್ಡ್ ಇರಾನ್‌ನಿಂದ ದೂರ

ಅಮೆರಿಕ ನಮ್ಮ ಮೇಲೆ ದಾಳಿ ಮಾಡಲಿದೆ: ಇರಾನ್ ಸೇನೆ ಆತಂಕಕಾರಿ ಹೇಳಿಕೆ

ವಾಷಿಂಗ್ಟನ್: ಮಹತ್ವದ ಬೆಳವಣಿಗೆಯೊಂದರಲ್ಲಿ, ಇರಾನ್ ಬಳಿಯ ಕೆಂಪು ಸಮುದ್ರದಲ್ಲಿ ಬೀಡು ಬಿಟ್ಟಿದ್ದ ಅಮೆರಿಕದ ಅತಿದೊಡ್ಡ ಯುದ್ಧನೌಕೆ ಯುಎಸ್‌ಎಸ್ ಜೆರಾಲ್ಡ್ ಆರ್ ಫೋರ್ಡ್ ಎಂಬ ಯುದ್ಧನೌಕೆಯನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಟ್ರಂಪ್ ಸರಕಾರ ಆದೇಶಿಸಿದೆ. ಮೇ 4-5ರ ನಡುವಿನ ಮಧ್ಯರಾತ್ರಿಯಿಂದಲೇ ಅಮೆರಿಕದ ಕಡೆಗೆ ಪ್ರಯಾಣ ಬೆಳೆಸಲಿರುವ ಫೋರ್ಡ್ ನೌಕೆಯು ಇದೇ ತಿಂಗಳ ಮಧ್ಯಭಾಗದಲ್ಲಿ ವರ್ಜೀನಿಯಾದಲ್ಲಿರುವ ತನ್ನ ನೆಲೆಗೆ ಹಿಂದಿರುಗುವ ನಿರೀಕ್ಷೆಯಿದೆ. ಒಂದು ಕಡೆ ಇರಾನ್‌ನಲ್ಲಿ ಅಮೆರಿಕ-ಇಸ್ರೇಲ್‌ಗಳು ಮತ್ತೆ ದಾಳಿ ಮಾಡಲಿವೆ ಎಂಬ ಭೀತಿ ಹಬ್ಬಿರುವಂತೆಯೇ, ಜೆರಾಲ್ಡ್ ನೌಕೆ ಹಿಂದಿರುಗಲು ಸಿದ್ಧವಾಗಿದೆ.

ಮೇಲ್ನೋಟಕ್ಕೆ ದುರಸ್ತಿ ಕಾರಣಕ್ಕೆ ಈ ನೌಕೆ ಮರಳಿ ಹೊರಟಿದೆ ಎಂದು ಹೇಳಲ್ಪಟ್ಟಿದ್ದರೂ, ಅಮೆರಿಕ ಒಂದೊಂದಾಗಿ ತನ್ನ ಯುದ್ಧನೌಕೆಗಳನ್ನು ಮರಳಿ ಕರೆಸಿಕೊಳ್ಳಲು ಹೊರಟಿದೆ ಎಂಬ ವಿಶ್ಲೇಷಣೆಗಳಿವೆ. ಯುಎಸ್‌ಎಸ್ ಜಾರ್ಜ್ ಹೆಚ್ ಡಬ್ಲ್ಯೂ ಬುಷ್ ಹಾಗೂ ಯುಎಸ್‌ಎಸ್ ಅಬ್ರಹಾಂ ಲಿಂಕನ್ ಎಂಬ ಮತ್ತೆರಡು ಯುದ್ಧನೌಕೆಗಳ ಮೂಲಕ ಅಮೆರಿಕ, ಹೊರ್ಮುಜ್ ಜಲಸಂಧಿಯ ಮೇಲೆ ನಿಗಾ ಮುಂದುವರಿಸಿದೆ.

ಇರಾನ್ ಭೀತಿ: ಈ ನಡುವೆ ಇರಾನ್ ಸೇನಾ ಕಚೇರಿಯ ಉಪಮುಖ್ಯಸ್ಥ ಮೊಹಮ್ಮದ್ ಜಾಫರ್ ಅಸಾದಿ, ಅಮೆರಿಕ-ಇಸ್ರೇಲ್‌ಗಳು ಮತ್ತೆ ಇರಾನ್ ಮೇಲೆ ದಾಳಿ ಮಾಡುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಆ ದೇಶ ಯಾವುದೇ ಸಂಧಾನಕ್ಕೆ ಬದ್ಧತೆ ತೋರಿಸುವುದೇ ಇದಕ್ಕೆ ಸಾಕ್ಷಿ ಎಂದು ವಿಶ್ಲೇಷಿಸಿದ್ದಾರೆ.

ಫೋರ್ಡ್ ಮಾಡುತ್ತಿದ್ದ ಕೆಲಸವೇನು?: ಇರಾನ್-ಅಮೆರಿಕ ನಡುವಿನ ಪ್ರಕ್ಷುಬ್ಧ ಸನ್ನಿವೇಶ ಏರ್ಪಡುವುದಕ್ಕೆ 9 ತಿಂಗಳ ಮುನ್ನವೇ ಕೆಂಪುಸಮುದ್ರಕ್ಕೆ ರವಾನಿಸಲಾಗಿದ್ದ ಫೋರ್ಡ್ ನೌಕೆಯ ಮೂಲಕ ಅಮೆರಿಕ ಹಲವು ದೇಶಗಳ ಹಡಗುಗಳ ಸಂಚಾರದ ಮೇಲೆ ನಿಗಾಯಿಟ್ಟಿತ್ತು.

ಲೆಬನಾನ್ ಮೇಲೆ ಇಸ್ರೇಲ್ ದಾಳಿ: ಹಿಜ್ಬುಲ್ಲಾ ಉಗ್ರರ ನೆಲೆಯಾಗಿರುವ ಲೆಬನಾನ್‌ನ ಮೇಲೆ ಇಸ್ರೇಲ್ ತನ್ನ ದಾಳಿಯನ್ನು ತೀವ್ರಗೊಳಿಸಿದೆ. ಶುಕ್ರವಾರ ರಾತ್ರಿಯಿಂದೀಚೆಗೆ ನಡೆದಿರುವ ದಾಳಿಗಳಲ್ಲಿ ಹತ್ತು ಮಂದಿ ಸಾವಿಗೀಡಾಗಿ ನೂರಾರು ಮಂದಿ ಗಾಯಗೊಂಡಿದ್ದಾರೆ.

ನೌಕೆ ಹಿಂದಕ್ಕೆ ಯಾಕೆ?

- ಜೆರಾಲ್ಡ್ ಫೋರ್ಡ್ ನೌಕೆಯ ದುರಸ್ತಿ ಮಾಡುವುದು ಮೇಲ್ನೋಟದ ಕಾರಣ
- ಹಂತಹಂತವಾಗಿ ಇರಾನ್‌ನಿಂದ ಯುದ್ಧ ನೌಕೆ ವಾಪಸ್ ಕರೆಸಿಕೊಳ್ಳಲಿದೆ ಅಮೆರಿಕ?
- ಇನ್ನೂ 2 ಯುದ್ಧನೌಕೆ ಮೂಲಕ ಇರಾನ್ ಮೇಲೆ ಅಮೆರಿಕ ನಿಗಾ ಮುಂದುವರಿಕೆ

ಕತಾರ್‌ಗೆ 81 ಸಾವಿರ ಕೋಟಿ ರು. ಶಸ್ತ್ರಾಸ್ತ್ರ

ಕತಾರ್, ಇಸ್ರೇಲ್, ಕುವೈತ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡುವ ಅಂದಾಜು 81 ಸಾವಿರ ಕೋಟಿ ರು. ಮೌಲ್ಯದ ಯೋಜನೆಗೆ ಅಮೆರಿಕ ಸರಕಾರ ಒಪ್ಪಿಗೆ ನೀಡಿದೆ. ಅಲ್ಲಿಗೆ ಇರಾನ್ ವಿರುದ್ಧ ಈ ರಾಷ್ಟ್ರಗಳನ್ನು ಸಜ್ಜು ಮಾಡುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

ಇರಾನ್‌ಗೆ ಶುಲ್ಕ ಪಾವತಿಸಿದರೆ ದಿಗ್ಬಂಧನ: ಟ್ರಂಪ್ ಎಚ್ಚರಿಕೆ

ಇರಾನಿನ ಹೊರ್ಮುಜ್ ಜಲಸಂಧಿಯಿಂದ ತಮ್ಮ ಹಡಗುಗಳು ಸರಾಗವಾಗಿ ಬರಲು ಇರಾನ್ ದೇಶಕ್ಕೆ ಯಾವುದೇ ರಾಷ್ಟ್ರಗಳು ಶುಲ್ಕ ಪಾವತಿಸುವ ಅಗತ್ಯವಿಲ್ಲ. ಹಾಗೇನಾದರೂ ಶುಲ್ಕ ಪಾವತಿಸಿದರೆ ಅಂಥ ರಾಷ್ಟ್ರಗಳ ಮೇಲೆ ಅಗಾಧವಾದ ಸುಂಕ ಹೇರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಜರ್ಮನಿಯಿಂದ ಅಮೆರಿಕದ 5000 ಸೈನಿಕರು ವಾಪಸ್

2ನೇ ಮಹಾಯುದ್ಧ ಮುಗಿದ ನಂತರದ ದಿನಗಳಿಂದ ಇಲ್ಲಿಯವರೆಗೆ ಜರ್ಮನಿಯಲ್ಲಿ ಬೀಡುಬಿಟ್ಟಿದ್ದ ಸುಮಾರು 5000 ಅಮೆರಿಕ ಸೇನಾ ತುಕಡಿಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಅಮೆರಿಕ ನಿರ್ಧರಿಸಿದೆ. ಇತ್ತೀಚೆಗೆ, ಜರ್ಮನಿಯ ಪ್ರಧಾನಿ ಫ್ರೆಡ್ರಿಕ್ ಮೆರ್ಝ್ ಅವರು, ಇರಾನ್-ಅಮೆರಿಕ ಶಾಂತಿ ಒಪ್ಪಂದ ಮಾತುಕತೆಯಲ್ಲಿ ಅಮೆರಿಕ ತೀವ್ರ ಮುಖಭಂಗ ಎದುರಿಸಿತ್ತೆಂದು ಬಹಿರಂಗ ಹೇಳಿಕೆ ನೀಡಿದ್ದರು. ಇದರ ವಿರುದ್ಧ ಆಕ್ರೋಶಗೊಂಡ ಟ್ರಂಪ್ ಈ ನಿರ್ಧಾರ ಕೈಗೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ವರದಕ್ಷಿಣೆ ಕಿರುಕುಳ ಗೃಹಿಣಿ ಆತ್ಮಹತ್ಯೆ

ಬೆಂಗಳೂರು: ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಗೃಹಿಣಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದೆ. ಬೆಟ್ಟದಾಸನಪುರ ಮೂಲದ ವಂದನಾ (23) ಮೃತಪಟ್ಟ ದುರ್ದೈವಿ. ಕಳೆದ ಮೂರು ವರ್ಷಗಳ ಹಿಂದೆ ಹುಳಿಮಾವಿನ ನಿವಾಸಿಯಾಗಿದ್ದ ವಿಕ್ರಂ ಶೇಷ ಎಂಬಾತನೊಂದಿಗೆ ವಂದನಾ ಅವರ ವಿವಾಹವಾಗಿತ್ತು. ಮದುವೆಯಾದ ಆರಂಭದಿಂದಲೂ ಹಣಕ್ಕಾಗಿ ಪೀಡಿಸುತ್ತಿದ್ದ ಗಂಡ ವಿಕ್ರಂ ಹಾಗೂ ಆತನ ಕುಟುಂಬಸ್ಥರು, ವಂದನಾ ಅವರಿಗೆ ನಿರಂತರ ಕಿರುಕುಳ ನೀಡುತ್ತಿದ್ದರು. ಗುರುವಾರ ಸಂಜೆ ಹುಳಿಮಾವಿನ ಹಳೆ ಪೋಸ್ಟ್ ಆಫೀಸ್ ಸಮೀಪವಿರುವ ಮನೆಯಲ್ಲಿ ಅನುಮಾನಾಸ್ಪದವಾಗಿ ವಂದನಾ ಸಾವನ್ನಪ್ಪಿದ್ದಾರೆ. ಈ ದಂಪತಿಗೆ 3 ತಿಂಗಳ ಮಗು ಕೂಡ ಇದೆ. ಈ ಸಾವಿನ ಹಿಂದೆ ಪತಿ ಹಾಗೂ ಆತನ ಕುಟುಂಬದವರ ಕೈವಾಡವಿದೆ ಎಂದು ಮೃತಳ ಸಂಬಂಧಿಕರು ಆರೋಪಿಸಿದ್ದಾರೆ. ಘಟನಾ ಸ್ಥಳದಲ್ಲಿ ಫ್ಯಾನ್‌ನ ರೆಕ್ಕೆಗಳಿಗೆ ಸೀರೆ ಸಿಲುಕಿಕೊಂಡಿದ್ದು, ಅಂತಹ ಸ್ಥಿತಿಯಲ್ಲಿ ನೇಣು ಬಿಗಿದುಕೊಳ್ಳಲು ಸಾಧ್ಯವೇ ಇಲ್ಲ ಎಂದು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸದ್ಯ ಬೆಟ್ಟದಾಸನಪುರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಹುಳಿಮಾವು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕಲಾ ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆ

ಬೆಂಗಳೂರು: ಕಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿಭಾನ್ವೇಷಣೆ ಯೋಜನೆ ಪ್ರಾರಂಭಿಸಲಾಗಿದ್ದು, ಇದರಡಿ ನಡೆಸುವ ಕಲಾ ಸ್ಪರ್ಧೆಗೆ ಜೂನ್ ತಿಂಗಳಲ್ಲಿ ಅರ್ಜಿ ಆಹ್ವಾನಿಸಲಾಗುತ್ತದೆ ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ತಿಳಿಸಿದರು.

ಅಕಾಡೆಮಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಈ ಯೋಜನೆ ಪ್ರಾರಂಭಿಸಲಾಗಿದೆ. ಯೋಜನೆಯಡಿ ಕಳೆದ ಬಾರಿ ನಡೆಸಲಾದ ರಾಜ್ಯಮಟ್ಟದ ಕಲಾ ಸ್ಪರ್ಧೆಯಲ್ಲಿ 200ಕ್ಕೂ ಅಧಿಕ ಅರ್ಜಿಗಳು ಸ್ವೀಕೃತವಾಗಿದ್ದವು. ಅವುಗಳಲ್ಲಿ ಗುಣಮಟ್ಟದ ಆಧಾರದ ಮೇಲೆ ತೀರ್ಪುಗಾರರ ನೆರವಿನಿಂದ 30 ವಿದ್ಯಾರ್ಥಿಗಳನ್ನು ಸ್ಪರ್ಧೆಗೆ ಆಯ್ಕೆ ಮಾಡಲಾಗಿತ್ತು. ಅವರಿಗೆ ರಾಜ್ಯಮಟ್ಟದ ಸ್ಪರ್ಧೆ ನಡೆಸಿದ್ದು, ಹತ್ತು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ವಿಜೇತರಿಗೆ ತಲಾ 15 ಸಾವಿರ ನಗದು ಬಹುಮಾನ ನೀಡಲಾಗುತ್ತದೆ. ಅಕಾಡೆಮಿಯಲ್ಲಿ ಹೊಸದಾಗಿ 4 ದತ್ತಿ ಪ್ರಶಸ್ತಿಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದ್ದು, ದತ್ತಿ ದಾನಿಗಳ ಜತೆಗೆ ಮಾತುಕತೆ ನಡೆಸುತ್ತಿದ್ದೇವೆ ಎಂದರು.

ಶಿಕ್ಷಕರ ಚುನಾವಣೆ ಅಕ್ರಮ ಆರೋಪ

ಬೆಂಗಳೂರು: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026-31 ನೇ ಸಾಲಿನ ಸಾರ್ವತ್ರಿಕ ಚುನಾವಣೆಗಳು ಜರುಗಿದ್ದು, ಚುನಾವಣಾ ಅಧಿಸೂಚನೆಗೆ ತಡೆಯಾಜ್ಞೆ ನೀಡಿದ್ದರೂ ರಾಜ್ಯ ಚುನಾವಣಾಧಿಕಾರಿಗಳು ಅಕ್ರಮವಾಗಿ ಚುನಾವಣೆ ನಡೆಸಿದೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚಂದ್ರಶೇಖರ್ ಆರ್. ಎ. ಆರೋಪಿಸಿದರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚುನಾವಣೆಗೆ ಸಂಬಂಧಿಸಿದಂತೆ ದಿನಾಂಕ ಏ.1ರಂದು ಹೊರಡಿಸಿದ್ದ ರಾಜ್ಯ ಚುನಾವಣಾ ಅಧಿಸೂಚನೆಗೆ ಹೈಕೋರ್ಟ್‌ನ ಬೆಂಗಳೂರು ಮತ್ತು ಧಾರವಾಡ ಪೀಠ ತಡೆಯಾಜ್ಞೆ ನೀಡಿದ್ದು, ತಡೆಯಾಜ್ಞೆ ಆದೇಶದ ಪ್ರತಿಗಳನ್ನು ರಾಜ್ಯ ಚುನಾವಣಾ ಅಧಿಕಾರಿಗಳು ಕಚೇರಿಗೆ ಬಂದು ಸ್ವೀಕರಿಸದೆ ರಾಜ್ಯಾದ್ಯಂತ ನ್ಯಾಯಾಂಗ ನಿಂದನೆ ಮಾಡಿ ಅಕ್ರಮವಾಗಿ ಚುನಾವಣೆಗಳನ್ನು ನಡೆಸಿದೆ. ಬೆಂಗಳೂರು ಸಿವಿಲ್ ನ್ಯಾಯಾಲಯ ಚುನಾವಣೆಗೆ ತಡೆಯಾಜ್ಞೆ ನೀಡಿರುವ ಅಂಶವು ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಚುನಾವಣಾಧಿಕಾರಿಗಳಿಗೆ ತಿಳಿದಿದ್ದರೂ ಸಹ ಮೊಬೈಲ್ ಸಂಖ್ಯೆಗಳನ್ನು ಸ್ವಿಚ್ ಆಫ್ ಮಾಡಿಕೊಂಡು ನ್ಯಾಯಾಲಯದ ಆದೇಶವನ್ನು ಮೂಲೆಗುಂಪು ಮಾಡಿ ಚುನಾವಣೆ ಪ್ರಕ್ರಿಯೆಯನ್ನು ನಡೆಸಿರುತ್ತಾರೆ ಎಂದು ಆರೋಪಿಸಿದರು. ನಾಗನಗೌಡ ಎಂ. ಎ, ಸುಮತಿ ಜಿ, ಎಸ್. ಡಿ. ಪಾಟೀಲ್, ಓಂಕಾರ ಮೂರ್ತಿ ಸೇರಿ ಮತ್ತಿತರರು.

ಬೆಂಗಳೂರು ಹೋಟೆಲ್‌ಗಳ ಸಂಘದಿಂದ ಪ್ರಧಾನಿ ನರೇಂದ್ರ ಮೋದಿಗೆ ಪತ್ರ

ಬೆಲೆ ಏರಿಕೆ: ಹೋಟೆಲ್ ಉದ್ಯಮ ತತ್ತರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಶುಕ್ರವಾರ ಕೇಂದ್ರ ಸರಕಾರ ಪ್ರಕಟಿಸಿದ ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ, ಹೋಟೆಲ್ ಉದ್ಯಮಕ್ಕೆ ಬರಸಿಡಿಲಿನಂತೆ ಅಪ್ಪಳಿಸಿದ್ದು, ತಕ್ಷಣ ಉದ್ಯಮ ರಕ್ಷಣೆಗೆ 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆಯನ್ನು ಶೇ.18 ರಿಂದ ಶೇ.5 ಇಳಿಸಲು ಕರ್ನಾಟಕ ರಾಜ್ಯ ಹೋಟೆಲ್ ಅಸೋಸಿಯೇಶನ್ ವತಿಯಿಂದ ಮನವಿ ಮಾಡಲಾಗಿದೆ ಎಂದು ಅಧ್ಯಕ್ಷ ಜಿ.ಕೆ. ಶೆಟ್ಟಿ ತಿಳಿಸಿದರು.

ಈ ಕುರಿತು ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರ ತೈಲ ಮಾರಾಟ ಕಂಪನಿಗಳ ಮೂಲಕ ಕಳೆದ 60 ದಿನಗಳಲ್ಲಿ ಸಿಲಿಂಡರ್ ಬೆಲೆ 1308 ರು. ಹೆಚ್ಚಳ ಮಾಡಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಮಾಡಲಾದ ಅತಿ ದೊಡ್ಡ ಏರಿಕೆ. ಮಾ. ತಿಂಗಳಲ್ಲಿ ಸುಮಾರು 1,800 ರಿಂದ 2,000 ರು. ಇದ್ದ ಬೆಲೆ ಈಗ 3,152ಕ್ಕೆ ಮಟ್ಟಕ್ಕೆ ಏರಿದೆ. ಇದು ಹೋಟೆಲ್ ಉದ್ಯಮಕ್ಕೆ ಬರಸಿಡಿಲಿನಂತೆ ಅಪ್ಪಳಿಸಿದೆ. ನಗರ ಮತ್ತು ಸಮಯ ಅವಲಂಬಿಸಿ, ಒಟ್ಟು ಏರಿಕೆ ಪ್ರಮಾಣ 60 ದಿನಗಳಲ್ಲಿ ಶೇ.50 ರಿಂದ ಶೇ.70 ರಷ್ಟು ಏರಿಕೆಯಾಗಿದೆ ಎಂದರು.

ಜಾಗತಿಕ ವಿಕೋಪ- ಯುದ್ಧಗಳ ನೇರ ಪರಿಣಾಮ ಹೋಟೆಲ್ ಮತ್ತು ರೆಸ್ಟೋರೆಂಟ್ ಉದ್ಯಮದ ಮೇಲೆ ಬಿದ್ದಿದೆ. ಪಶ್ಚಿಮ ಏಷ್ಯಾ ಬಿಕ್ಕಟ್ಟು- ಯುದ್ಧ ಸೇರಿದಂತೆ ವಿವಿಧ ಕಾರಣಗಳಿಂದ ಸರಬರಾಜು ಸರಪಳಿಗಳ ಮೇಲೆ ಗಂಭೀರ ಪರಿಣಾಮಯಾಗಿದ್ದು, ವಾಣಿಜ್ಯ ಎಲ್‌ಪಿಜಿ ಕೊರತೆ ಹಾಗೂ ಬೆಲೆಗಳ ಭಾರೀ ಏರಿಕೆ ರಾಜ್ಯಾದ್ಯಂತ ಹೋಟೆಲ್‌ಗಳ ಕಾರ್ಯಾಚರಣಾ ವೆಚ್ಚಗಳನ್ನು ಗಣನೀಯವಾಗಿ ಹೆಚ್ಚಿಸಿದೆ. ಇತ್ತೀಚಿನ ವರ್ಷಗಳಲ್ಲಿ ಹೋಟೆಲ್ ಉದ್ಯಮ ನಾನಾ ಬಿಕ್ಕಟ್ಟುಗಳನ್ನು ಎದುರಿಸಿ, ಇದೀಗ ತಾನೇ ಚೇತರಿಸಿಕೊಳ್ಳುತ್ತಿದೆ. ಆತಿಥ್ಯ ವಲಯವು ಈಗ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಇಂಧನ ವೆಚ್ಚಗಳ ಏರಿಕೆಗೆ ಜತೆಗೆ, ಬೆಂಗಳೂರಿನಲ್ಲಿ ಮತ್ತು ಇತರೆ ಪ್ರದೇಶಗಳಲ್ಲಿ ಕಸದ ಸಂಗ್ರಹ ಶುಲ್ಕ ಸೇರಿದಂತೆ ಸ್ಥಳೀಯ ತೆರಿಗೆಗಳು ಹಾಗೂ ಇತರ ನಿಯಂತ್ರಣ ವೆಚ್ಚಗಳ ಭಾರವೂ ಇದೆ. ಈ ಒಟ್ಟಾರೆ ನಾನಾ ಬೆಲೆ ಏರಿಕೆಯಿಂದ ಹಲವಾರು ಸಣ್ಣ ಮತ್ತು ಮಧ್ಯಮ ಉದ್ಯಮಗಳು ಈಗಾಗಲೇ ಮುಚ್ಚಲ್ಪಟ್ಟಿದ್ದು, ಇನ್ನೂ ಹಲವರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ ಎಂದರು.

ಪ್ರಧಾನಿ ಮೋದಿಗೆ ಪತ್ರ

ವಾಣಿಜ್ಯ ದರದಲ್ಲಿ ಸಂಭವಿಸಿರುವ ಭಾರೀ ಏರಿಕೆಯಿಂದ ಹೋಟೆಲ್ ಮತ್ತು ಅತಿಥ್ಯ ವಲಯ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಇದನ್ನು ಪರಿಹರಿಸಲು ಪ್ರಧಾನಿ ನರೇಂದ್ರ ಮೋದಿ ಅವರ ತಕ್ಷಣದ ಹಸ್ತಕ್ಷೇಪ ಕೋರಿ ಬೆಂಗಳೂರು ಹೋಟೆಲ್ ಸಂಘದಿಂದ ಮನವಿ ಪತ್ರ ಸಲ್ಲಿಸಿದ್ದಾರೆ. ಕಳೆದ 60 ದಿನಗಳಲ್ಲಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಸುಮಾರು 1,200 ರು. ರಷ್ಟು ಏರಿಕೆಯಾಗಿದೆ. ವಾಣಿಜ್ಯ ಎಲ್‌ಪಿಜಿ ಮೇಲಿನ ಶೇ.18 ಜಿಎಸ್‌ಟಿ ದರ ಹೋಟೆಲ್‌ಗಳಿಗೆ ಅನ್ಯಾಯವಾಗಿದೆ. ಹೆಚ್ಚುತ್ತಿರುವ ಇನ್‌ಪುಟ್ ವೆಚ್ಚಗಳಿಂದ ಸಣ್ಣ ಮತ್ತು ಮಧ್ಯಮ ಹೋಟೆಲ್‌ಗಳು ಬದುಕುಳಿಯಲು ಕಷ್ಟಪಡುತ್ತಿವೆ. ಅನಿಲ ಪೂರೈಕೆಯ ಕೊರತೆ ಕೂಡ ಪರಿಸ್ಥಿತಿ ಮತ್ತಷ್ಟು ಗಂಭೀರಗೊಳಿಸಿದೆ ಹಾಗಾಗಿ ಸಂಘವು ಕೇಂದ್ರ ಸರಕಾರವನ್ನು ಎಲ್‌ಪಿಜಿ ದರವನ್ನು ತಕ್ಷಣ ಕಡಿಮೆ ಮಾಡಲು, ಜಿಎಸ್‌ಟಿ ದರವನ್ನು ಶೇ.5 ಗೆ ಸಮಾನಗೊಳಿಸಲು ಹಾಗೂ ಹೋಟೆಲ್ ವಲಯಕ್ಕೆ ನಿರಂತರ ಅನಿಲ ಪೂರೈಕೆಯನ್ನು ಖಚಿತಪಡಿಸಲು ಬೇಡಿಕೆಯೊಂದಿಗೆ ಪ್ರಧಾನಿ ಮೋದಿ ಅವರಿಗೆ ಪತ್ರದ ಬರೆಯಲಾಗಿದೆ ಎಂದು ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

ಸಂಘವು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್‌ಪುರಿ ಸೇರಿದಂತೆ ನಗರ ಎಂ.ಪಿ., ಕೇಂದ್ರ, ರಾಜ್ಯ ಸಚಿವರಿಗೂ ಕೂಡ ಪ್ರತಿಗಳನ್ನು ಕಳುಹಿಸಲಾಗಿದೆ. ಕೇಂದ್ರ ಸರಕಾರ ಈ ಮನವಿಗೆ ಪ್ರತಿಕ್ರಿಯಿಸಿ ಆತಿಥ್ಯ ವಲಯಕ್ಕೆ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲಿದೆ ಎಂಬ ನಿರೀಕ್ಷೆ ಇದೆ.

- ಪಿ.ಸಿ.ರಾವ್, ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವಾಧ್ಯಕ್ಷ

ವಾಣಿಜ್ಯ ಎಲ್‌ಪಿಜಿ ಬೆಲೆ ಏರಿಕೆ ಹಣದುಬ್ಬರದ ಒತ್ತಡವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಈ ಬೆಲೆ ಏರಿಕೆಯ ದುಷ್ಪರಿಣಾ ತಡೆಯಲು ಸರಕಾರಗಳು ತಕ್ಷಣ ಮಧ್ಯಪ್ರವೇಶಿಸದಿದ್ದರೆ, ಉದ್ಯಮ ಹೆಚ್ಚಳಗೊಂಡ ಬೆಲೆ ಏರಿಕೆಯ ಒತ್ತಡ ಗ್ರಾಹಕರ ಮೇಲೆ ವರ್ಗಾಯಿಸುವುದರ ಹೊರತಾಗಿ ಇತರ ಯಾವುದೇ ಬೇರೆ ದಾರಿ ಹೊಂದಿಲ್ಲ. ಇದರಿಂದ ಜನ ಸಾಮಾನ್ಯರ ಮೇಲೆ ಅಧಿಕ ಒತ್ತಡ ಬೀಳಲಿದ್ದು, ಉದ್ಯಮದ ಮೇಲೆ ಕೂಡಾ ದುಷ್ಪರಿಣಾಮ ಬೀರಲಿದೆ.

-ಜಿ.ಕೆ.ಶೆಟ್ಟಿ, ಕರ್ನಾಟಕ ರಾಜ್ಯ ಹೋಟೆಲ್ಸ್ ಅಸೋಸಿಯೇಶನ್ ಅಧ್ಯಕ್ಷ

ವೇತನದ ಆಧಾರದಲ್ಲಿ ಪಿಂಚಣಿ ನಿಗದಿಪಡಿಸಿ

ಬೆಂಗಳೂರು: ನೈಜ ವೇತನದ ಆಧಾರದಲ್ಲಿ ಪಿಂಚಣಿ ನಿಗದಿಪಡಿಸಬೇಕು ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಎಚ್‌ಎಎಲ್, ಬಿಇಎಂಎಲ್, ಎಚ್‌ಎಂಟೊ, ಐಟಿಐನಂತಹ ಸರಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದುವ ನೌಕರರಿಗೆ ನೈಜ ವೇತನದ ಆಧಾರದಲ್ಲಿಯೇ ಪಿಂಚಣಿ ನಿಗದಿಪಡಿಸಬೇಕು. ಈ ಮೂಲಕ ಇಪಿಎಸ್ 95ಯೋಜನೆಯಲ್ಲಿ ನೈಜ ವೇತನದ ಆಧಾರದ ಮೇಲೆ ಪಿಂಚಣಿ ನೀಡಲಿದ್ದ ಕಾನೂನು ಅಡೆತಡೆಗಳನ್ನು ಹೈಕೋರ್ಟ್ ತೆರವುಗೊಳಿಸಿದೆ. ಉದ್ಯೋಗಿ ತನ್ನ ನೈಜ ಸಂಬಳದ ಮೇಲೆ ಪಿಎಫ್ ವಂತಿಗೆ ಪಾವತಿಸಿದ್ದರೆ, ಅಂತಹವರಿಗೆ ಹೆಚ್ಚಿನ ಪಿಂಚಣಿ ನಿರಾಕರಿಸು ವಂತಿಲ್ಲ. ಟ್ರಸ್ಟ್ ನಿಯಮಗಳು ತಿದ್ದುಪಡಿಯಾಗಿಲ್ಲ ಎನ್ನುವುದುನ್ನು ಮುಂದಿಟ್ಟುಕೊಂಡು ಪಿಂಚಣಿ ನಿರಾಕರಿಸುವಂತಿಲ್ಲ. ಸುಪ್ರೀಂ ಕೋರ್ಟ್‌ನ ಈ ಹಿಂದಿನ ತೀರ್ಪಿನಂತೆ, ಹೆಚ್ಚಿನ ಪಿಂಚಣಿ ಯೋಜನೆಯು ವಿನಾಯಿತಿ ಪಡೆದ ಮತ್ತು ಪಡೆಯದ ಎರಡೂ ಸಂಸ್ಥೆಗಳ ನೌಕರರಿಗೆ ಸಮಾನವಾದ ನಿಯಮ ಅನ್ವಯಿಸುತ್ತದೆ. ಆದ್ದರಿಂದ ಹೆಚ್ಚು ಪಿಂಚಣಿಗೆ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ಮರುಪರಿಶೀಲಿಸಿ, ಮುಂದಿನ 90 ದಿನಗಳೊಳಗೆ ಹೆಚ್ಚಿನ ಪಿಂಚಣಿ ವಿತರಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ನ್ಯಾಯಾಲಯವು ಇಪಿಎಫ್‌ಗೆ ಆದೇಶಿಸಿದೆ.

ಪ್ರಕರಣದ ಹಿನ್ನೆಲೆ ಏನು?

ಎಚ್‌ಎಎಲ್, ಬಿಇಎಂಎಲ್, ಎಚ್‌ಎಂಟಿ, ಐಟಿಐ ಮತ್ತು ಸೈಲ್ -ವಿಸ್ಲ್ ನಂತಹ ಸಾರ್ವಜನಿಕ ವಲಯದ ಉದ್ದಿಮೆಗಳ ನೌಕರರು ಹೆಚ್ಚಿನ ಪಿಂಚಣಿಗಾಗಿ ಸಲ್ಲಿಸಿದ್ದ ಅರ್ಜಿಗಳನ್ನು ನೌಕರರ ಭವಿಷ್ಯ ನಿಧಿ ಸಂಸ್ಥೆ ತಿರಸ್ಕರಿಸಿತ್ತು. ಸಂಸ್ಥೆಯ ಆಂತರಿಕ ಟ್ರಸ್ಟ್ ನಿಯಮಗಳು ಹೆಚ್ಚಿನ ಪಿಂಚಣಿಗೆ ಅವಕಾಶ ನೀಡುವುದಿಲ್ಲ ಎಂಬ ನೆಪವನ್ನು ಒಡ್ಡಿತ್ತು. ಈ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ್ ರಾಮನಾಥ್ ಹೆಗ್ಡೆ ಅವರ ಪೀಠವು, ಇಪಿಎಫ್‌ಗೆ ಹೊರಡಿಸಿದ್ದ ಎಲ್ಲಾ ತಿರಸ್ಕಾರದ ಆದೇಶಗಳನ್ನು ರದ್ದುಗೊಳಿಸಿದೆ.

ನಿಮ್ಮ ಮೇಲಿರುವ ಸೂಪರ್ ಕಾಪ್ ಯಾರು?

ಲೋಕಾಯುಕ್ತ ಪೊಲೀಸ್‌ಗೆ ಜಡ್ಜ್ ತರಾಟೆ

ಬೆಂಗಳೂರು: ನಿಮ್ಮ ಮೇಲೆ ಕುಳಿತಿರುವ ಸೂಪರ್ ಕಾಪ್ (ಪೊಲೀಸ್ ಅಧಿಕಾರಿ) ಯಾರು? ಯಾವ ಕಾನೂನಿನ ಅಡಿ ಅಂತಿಮ ವರದಿ ಸಲ್ಲಿಸಲು ಅನುಮತಿಗೆ ಕಾಯುತ್ತಿದ್ದೀರಿ ಎಂದು ಲೋಕಾಯುಕ್ತ ಹಾಸನ-ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಶನಿವಾರ ಮೌಖಿಕವಾಗಿ ತರಾಟೆಗೆ ತೆಗೆದುಕೊಂಡಿತು.

ಹೈಕೋರ್ಟ್ ಸುದ್ದಿಗಳು

ಚಿಕ್ಕಮಗಳೂರಿನ ಶೃಂಗೇರಿಯ ಕಾಂಗ್ರೆಸ್ ಶಾಸಕ ಟಿ.ಡಿ. ರಾಜೇಗೌಡ, ಅವರ ಪತ್ನಿ ಮತ್ತು ಪುತ್ರನ ವಿರುದ್ಧದ ಆದಾಯ ಮೀರಿದ ಆಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯು ಮುಗಿದಿದ್ದು, ಮೇಲಾಧಿಕಾರಿಗಳ ಅನುಮತಿಗೆ ಕೇಂದ್ರೀಯ ಲೋಕಾಯುಕ್ತ ಕಚೇರಿಗೆ ವರದಿ ಕಳುಹಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಬಿ.ಎನ್.ನಂದಿನಿ ಅವರು ನ್ಯಾಯಾಧೀಶರಾದ ಸಂತೋಷ್ ಗಜಾನನ್ ಭಟ್ ಅವರ ಪೀಠಕ್ಕೆ ತಿಳಿಸಿದರು.

ಇದರಿಂದ ಕೆರಳಿದ ಪೀಠವು ತನಿಖಾ ವರದಿಯನ್ನು ಬೇರೊಬ್ಬರಿಗೆ ಕಳುಹಿಸಿದ್ದೇಕೆ? ಅದಕ್ಕೆ ಸಿಆರ್‌ಪಿಸಿಯಲ್ಲಿ ಅವಕಾಶ ಎಲ್ಲಿದೆ? ಯಾವ ಸೆಕ್ಷನ್ ಅಡಿ ಅವರಿಗೆ ಸಲ್ಲಿಸಿದ್ದೀರಿ. ಮೇಲಧಿಕಾರಿ ಒಪ್ಪಿಗೆ ನೀಡಿದ ಬಳಿಕ ನ್ಯಾಯಾಲಯಕ್ಕೆ ಸಲ್ಲಿಸುತ್ತೀರಾ? ಇದು ನಿಮ್ಮ ವಾದವೇ? ನಿಮ್ಮ ತನಿಖೆಯ ಮೇಲೆ ನಿಮಗೆ ನಿಯಂತ್ರಣ ಇಲ್ಲವೇ? ತನಿಖಾಧಿಕಾರಿಯಾಗಿ, ನೀವು ತನಿಖೆ ಪೂರ್ಣಗೊಳಿಸಿ, ವರದಿ ಸಿದ್ಧಪಡಿಸಿದ್ದೀರಿ. ಇಲ್ಲಿ ನಿಮ್ಮ ಸೂಪರ್ ತನಿಖಾಧಿಕಾರಿ ಯಾರು? ಇದು ಹೇಗೆ? ನೀವು ತನಿಖೆ ಪೂರ್ಣಗೊಳಿಸಿರುವಾಗ ಅದು ಏನೆಂದು ನೀವು ಹೇಳಬೇಕು. ಸಿಆರ್‌ಪಿಸಿಯ ಯಾವ ಸೆಕ್ಷನ್ ಅಡಿ ಮೇಲಧಿಕಾರಿ ತನಿಖಾ ವರದಿಗೆ ಒಪ್ಪಿಗೆ ನೀಡುತ್ತಾರೆ ತೋರಿಸಿ. ಸಿಆರ್‌ಪಿಸಿ, ಬಿಎನ್‌ಎಸ್‌ಎಸ್ ಮೀರಿ ಹೋಗಲಾಗದು. ಸಿಆರ್‌ಪಿಸಿ ಸೆಕ್ಷನ್ 173 ಅಡಿ ತನಿಖೆ ಮುಗಿದ ಮೇಲೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ನ್ಯಾಯಾಲಯ ಹೇಳಿತು.

ತನಿಖೆಗೆ ಸಂಬಂಧಿಸಿದ ಸ್ಥಿತಿಗತಿ ವರದಿಯಲ್ಲಿ ತನಿಖೆ ಮುಗಿದಿದ್ದು, ಲೋಕಾಯುಕ್ತ ಕೇಂದ್ರ ಕಚೇರಿಗೆ ಅನುಮತಿಗಾಗಿ ಕಳುಹಿಸಲಾಗಿದೆ ಎಂದು ತಿಳಿಸಲಾಗಿದೆ. ತನಿಖಾ ಸಂಸ್ಥೆಗಳು ತಮ್ಮದೇ ಆದ ಪ್ರಕ್ರಿಯೆ ಸಂಹಿತಾ ಪಾಲಿಸುತ್ತವೆ ಎಂಬುದನ್ನು ದಾಖಲಿಸುವುದು ದುರದೃಷ್ಟಕರವಾಗಿದೆ. ಹಾಲಿ ಪೊಲೀಸ್ ವರಿಷ್ಠಾಧಿಕಾರಿ ತನಿಖಾಧಿಕಾರಿಯಾಗಿದ್ದು, ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಮೇಲಧಿಕಾರಿಗಳ ಯಾವ ಸೆಕ್ಷನ್ ಅಡಿ ಅನುಮತಿಬೇಕಾಗಿದೆ ಎಂಬುದನ್ನು ತಿಳಿಸಬೇಕು. ಈ ಕುರಿತು ಮುಂದಿನ ವಿಚಾರಣೆಯ ವೇಳೆಗೆ ತನಿಖಾಧಿಕಾರಿ ವಿವರಿಸಬೇಕು ಎಂದು ಆದೇಶಿಸಿರುವ ನ್ಯಾಯಾಲಯವು ವಿಚಾರಣೆಯನ್ನು ಮೇ 7, 2026ಕ್ಕೆ ಮುಂದೂಡಿದೆ.

ಏನಿದು ಪ್ರಕರಣ?

ಕಾಂಗ್ರೆಸ್ ಶಾಸಕ ರಾಜೇಗೌಡ, ಅವರ ಪತ್ನಿ ಡಿ.ಕೆ.ಪುಷ್ಪಾ ಮತ್ತು ಪುತ್ರ ರಾಜದೇವ್ ಅವರು ಆದಾಯ ಮೀರಿ ಆಸ್ತಿ ಸಂಪಾದಿಸಿದ್ದಾರೆ. ಇದನ್ನು ಚುನಾವಣಾ ಅಫಿಡವಿಟ್‌ನಲ್ಲಿ ಬಚ್ಚಿಟ್ಟಿದ್ದಾರೆ ಎಂದು ಆರೋಪಿಸಿ ಚಿಕ್ಕಮಗಳೂರಿನ ಕೊಪ್ಪ ನಿವಾಸಿ ದಿನೇಶ್ ಅವರು ಖಾಸಗಿ ದೂರು ದಾಖಲಿಸಿದ್ದಾರೆ. ಈ ಸಂಬಂಧ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನ್ಯಾಯಾಲಯವು ಲೋಕಾಯುಕ್ತ ಪೊಲೀಸರಿಗೆ 2025ರ ಜೂನ್ 6ರಂದು ನಿರ್ದೇಶಿಸಿತ್ತು.

ಘೋಟಾ ಉಸ್ಮಾನ್‌ಗೆ 7 ವರ್ಷ ಜೈಲು

ಬೆಂಗಳೂರು: ಬೆಂಗಳೂರಿನ ಮನೆವೊಂದರಲ್ಲಿ ಸಜೀವ ಗ್ರೆನೇಡ್ ಪತ್ತೆ ಹಾಗೂ ಜೈಲಿನಲ್ಲಿ ಉಗ್ರ ಕೃತ್ಯಕ್ಕೆ ಸಂಚು ರೂಪಿಸಿದ ಪ್ರಕರಣದಲ್ಲಿ ಬಂಧಿತನಾಗಿದ್ದ ವಿಕ್ರಮ್ ಕುಮಾರ್ ಅಲಿಯಾಸ್ ಘೋಟಾ ಉಸ್ಮಾನ್‌ಗೆ ಎನ್‌ಐಎ ವಿಶೇಷ ನ್ಯಾಯಾಲಯ ಏಳು ವರ್ಷ ಜೈಲು ಶಿಕ್ಷೆ ಹಾಗೂ 30 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಅಪರಾಧಿ ವಿಕ್ರಮ್, 2017ರಲ್ಲಿ ನೂರ್ ಎಂಬಾತನ ಕೊಲೆ ಪ್ರಕರಣದಲ್ಲಿ ಜುನೈದ್ ಅಹಮದ್ ಹಾಗೂ ಇನ್ನಿತರರ ಜೈಲುಪಾಲಾಗಿದ್ದ. ಈ ವೇಳೆ, ಎಲ್‌ಇಟಿ ಉಗ್ರ ಟಿ.ನಾಸಿರ್‌ನ ಪ್ರಚೋದನೆಯಿಂದಾಗಿ ಮತಾಂತರಗೊಂಡು ಮೂಲಭೂತವಾದಿಯಾಗಿ ಪರಿವರ್ತನೆಯಾಗಿದ್ದ. ನಾಸಿರ್ ನೆರವಿನಿಂದ ಜುನೈದ್ ಹಾಗೂ ವಿಕ್ರಮ್ ನನ್ನ ಜಾಮೀನು ಕೊಡಿಸಿದ್ದ. ಇಬ್ಬರು ಹೊರಬಂದ ಬಳಿಕ ಜುನೈದ್ ವಿದೇಶದಲ್ಲಿ ತಲೆಮರೆಸಿಕೊಂಡಿದ್ದ. ಈತನ ಸೂಚನೆಯಂತೆ ಅಪರಾಧಿಗಳಾದ ವಿಕ್ರಂ, ಸಯ್ಯೆದ್ ಸುಹೇಲ್, ಮೊಹಮ್ಮದ್ ಉಮರ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮೊಹಮ್ಮದ್ ಫೈಜಲ್ ರಬಾನಿ, ಸನ್ಮಾನ್ ಖಾನ್ ಉಗ್ರ ಸಂಚಿನಲ್ಲಿ ಭಾಗಿಯಾಗಿದ್ದರು. ಇದಕ್ಕೂ ಮುನ್ನ ಜೈಲಿನಲ್ಲೇ ಕುಳಿತು ಕರ್ನಾಟಕ ಸೇರಿ ದೇಶದ ವಿವಿಧೆಡೆ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದರು ಎನ್‌ಐಎ ತಿಳಿಸಿದೆ.

ಘೋಟಾ ಉಸ್ಮಾನ್, ಟಿ. ನಾಸೀರ್, ಜುನೈದ್ ಅಗ್ಮದ್ ಹಾಗೂ ಇತರೆ ಆರೋಪಿಗಳ ಜತೆ ಎನ್ಕ್ರಿಪ್ಟ್ ಮಾಡಲಾದ ಸಂಹಹನ ವೇದಿಕೆಗಳ ಮೂಲಕ ಸಂಪರ್ಕದಲ್ಲಿದ್ದ. ಪ್ರಮುಖವಾಗಿ ಟೆಲಿಗ್ರಾಂ ಮತ್ತು ವಾಟ್ಸ್‌ಆ್ಯಪ್ ಮೂಲಕವೇ ಹೆಚ್ಚು ಸಂವಹನ ನಡೆಸುತ್ತಿದ್ದ. ಮತ್ತೊಂದೆಡೆ ಜುನೈದ್ ಅಹ್ಮದ್, ವಿಕ್ರಮ್ ಕುಮಾರ್‌ಗೆ ಅಪಾರವಾದ ಆರ್ಥಿಕ ಸಹಾಯ ಮಾಡಿದ್ದಾನೆ.

ಹರಿಯಾಣದಿಂದ ಸ್ಫೋಟಕ ವಸ್ತುಗಳ ತಂದಿದ್ದ ವಿಕ್ರಮ್

2023ರ ಮೇನಲ್ಲಿ ವಿಕ್ರಮ್ ಕುಮಾರ್, ಜುನೈದ್ ಸೂಚನೆ ಮೇರೆಗೆ ಹರಿಯಾಣದ ಅಂಬಾಲಕ್ಕೆ ಹೋಗಿ ಹ್ಯಾಂಡ್ ಗ್ರೆನೇಡ್ ಮತ್ತು ವಾಕಿ-ಟಾಕಿಗಳಿರುವ ಪಾರ್ಸೆಲ್ ತಂದಿದ್ದ. ಅದನ್ನು ಮತ್ತೊಬ್ಬ ಅಪರಾಧಿ ಸುಹೈಲ್ ಖಾನ್ ಮನೆಯಲ್ಲಿ ಇರಿಸಿ, ಬಳಿಕ ಜುನೈದ್ ಅಹ್ಮದ್, ಜಾಹಿದ್ ತಬ್ರೇಜ್ ಕೊಡಲಾಗಿತ್ತು. ಆ ಬಳಿಕ ಟಿ.ನಾಸೀರ್‌ನನ್ನು ಜೈಲಿನಿಂದ ನ್ಯಾಯಾಲಯಕ್ಕೆ ಕರೆದೊಯ್ಯುವ ಮಾರ್ಗ ಮಧ್ಯೆ ಸ್ಫೋಟಿಸಿ ಆತನನ್ನು ತಪ್ಪಿಸಿಕೊಳ್ಳಲು ಸಂಚು ರೂಪಿಸಲಾಗಿತ್ತು. ಈ ಸಂಚಿಗಾಗಿ ವಿಕ್ರಮ್ ಖಾತೆಗೆ ಜುನೈದ್ ಅಹ್ಮದ್, ಮೊಹಮ್ಮದ್ ಉರ್ಮ, ಜಾಹೀದ್ ತಬ್ರೇಜ್ ಹಾಗೂ ಇತರರು ಹಣ ವರ್ಗಾವಣೆ ಮಾಡಿರುವುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಎನ್‌ಐಎ ಹೇಳಿದೆ.

ಐಪಿಎಸ್‌ಯೇತರರನ್ನು ಬಡ್ತಿಗೆ ಪರಿಗಣಿಸಿ

ಬೆಂಗಳೂರು: ರಾಜ್ಯ ಪೊಲೀಸ್ ಸೇವೆಯಲ್ಲಿದ್ದ 30 ನಾನ್ ಐಪಿಎಸ್ ಅಧಿಕಾರಿಗಳಿಗೆ ಖಾಲಿ ಹುದ್ದೆಗಳ ಆಧಾರದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ವೃಂದಕ್ಕೆ ಬಡ್ತಿಗೆ ಪರಿಗಣಿಸಲು ಹೈಕೋರ್ಟ್ ರಾಜ್ಯ ಸರಕಾರಕ್ಕೆ ನಿರ್ದೇಶಿಸಿದೆ.

ಎಸ್‌ಪಿ ಹುದ್ದೆಗೆ ಬಡ್ತಿ ನೀಡುವ ಸಂಬಂಧ 2025ರ ಆ.20ರಂದು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ನೀಡಿದ್ದ ಆದೇಶ ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ನ್ಯಾಯಪೀಠ, ಅರ್ಜಿಯನ್ನು ಭಾಗಶಃ ಪುರಸ್ಕರಿಸಿದ್ದು, ಕರ್ನಾಟಕ ನಾಗರಿಕ ಸೇವಾ ನಿಯಮ (ಕೆಸಿಎಸ್‌ಆರ್)45 ರ ನಿಯಮದಡಿ ಬಡ್ತಿ ಪರಿಗಣನೆ ಮಾಡಲು ನಿರ್ದೇಶನ ನೀಡಿದೆ. ಅಲ್ಲದೇ, ರಾಜ್ಯದಲ್ಲಿರುವ ಎಸ್‌ಪಿ ಹುದ್ದೆಗಳ ಲಭ್ಯತೆ, ಇಲಾಖಾ ಬಡ್ತಿ ಸಮಿತಿ (ಡಿಪಿಸಿ) ಶಿಫಾರಸುಗಳನ್ನು ಗಮದನದಲ್ಲಿಟ್ಟುಕೊಂಡು, ಗೃಹ ಸಚಿವರ ಅನುಮೋದನೆ ಪಡೆದು ನಿಯಮ 42ರ ಅಡಿ ಮುಂದಿನ ಎರಡು ತಿಂಗಳಲ್ಲಿ ಎಸ್ಪಿ ಹುದ್ದೆಗೆ ಬಡ್ತಿ ನೀಡಲು ತೀರ್ಮಾನಿಸಬೇಕು ಎಂದು ಪೀಠ ಹೇಳಿದೆ. ಸರಕಾರದ ಪರ ವಾದ ಮಂಡಿಸಿರುವ ಅಡ್ವೋಕೇಟ್ ಜನರಲ್ ತಿಳಿಸಿರುವಂತೆ, ಉನ್ನತೀಕರಿಸಲಾದ ಹುದ್ದೆಗಳು ಕೇವಲ 2 ವರ್ಷಕ್ಕೆ ಲಭ್ಯವಿವೆ. ಆದರೆ ಬಡ್ತಿ ಆದೇಶ ಹೊರಡಿಸುವ ದಿನಾಂಕ 2023 ಪರಿಗಣಿಸಿದರೆ ಆ 30 ಹುದ್ದೆಗಳ ಉನ್ನತೀಕರಿಸಿದ ಅವಧಿ ಮುಕ್ತಾಯವಾಗಲಿದೆ. ಹಾಗಾಗಿ ಹುದ್ದೆಗಳು ಖಾಲಿ ಇರುವ ಅಂಶವನ್ನು ನ್ಯಾಯಮಂಡಳಿ ಪರಿಗಣಿಸಬೇಕಿತ್ತು. ಆದ್ದರಿಂದ ನ್ಯಾಯಮಂಡಳಿ ಆದೇಶವನ್ನು ಸ್ವಲ್ಪ ಮಾರ್ಪಾಡು ಮಾಡಬೇಕಾಗಿದೆ ಎಂದು ಕೋರಿರುವುದು ಸಮಂಜಸವಾಗಿದೆ ಎಂದು ಪೀಠ ಹೇಳಿದೆ.

ದೋಷಮುಕ್ತರಾದ ಕಾರ್ಮಿಕರನ್ನು ಸೇವೆಗೆ ಪರಿಗಣಿಸಲು ಹೈ ಆದೇಶ

ಬೆಂಗಳೂರು: ಕೊಲೆ ಆರೋಪದಲ್ಲಿ ವಿಚಾರಣಾಧೀನ ಕೈದಿಗಳಾಗಿ ನ್ಯಾಯಾಂಗ ಬಂಧನದಲ್ಲಿದ್ದು, ಕೆಲಸಕ್ಕೆ ಸುದೀರ್ಘ ಗೈರು ಹಾಜರಾದ ಇಬ್ಬರು ಕಾರ್ಮಿಕರನ್ನು ಅಧಿಕೃತ ವಿಚಾರಣೆ ನಡೆಸದೆ, ಸೇವೆಯಿಂದ ವಜಾಗೊಳಿಸಿದ್ದ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ) ಆದೇಶ ರದ್ದುಗೊಳಿಸಿರುವ ಹೈಕೋರ್ಟ್, ಇಬ್ಬರು ಗ್ಯಾಂಗ್‌ಮನ್‌ಗಳನ್ನು ಮತ್ತೆ ಸೇವೆಗೆ ಪರಿಗಣಿಸಬೇಕು ಎಂದು ಆದೇಶ ನೀಡಿದೆ.

ಮೆಸ್ಕಾಂ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಅನು ಸಿವರಾಮನ್ ಮತ್ತು ನ್ಯಾಯಮೂರ್ತಿ ಟಿ.ಎಂ.ನದಾಫ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಕಾರ್ಮಿಕರನ್ನು ಸೇವೆಯಿಂದ ವಜಾಗೊಳಿಸಬೇಕಾದಲ್ಲಿ ಪ್ರೊಬೇಷನರಿ ಮಜ್ದೂರ್ ನಿಯಮಗಳು 1997ರ ಪ್ರಕಾರ ಮೌಖಿಕ ವಿಚಾರಣೆ ಕಡ್ಡಾಯವಾಗಿ ನಡೆಸಬೇಕು ಎಂದು ತಿಳಿಸಲಾಗಿದೆ. ಆದರೆ, ಈ ಪ್ರಕರಣದಲ್ಲಿ ಅಂತಹ ವಿಚಾರಣೆ ನಡೆಸಲಾಗಿಲ್ಲ, ಅಲ್ಲದೆ, ಇಬ್ಬರೂ ಗ್ಯಾಂಗ್‌ಮನ್‌ಗಳು, ನ್ಯಾಯಾಂಗ ಬಂಧನದಲ್ಲಿದ್ದ ಕಾರಣ ಕೆಲಸಕ್ಕೆ ಗೈರು ಹಾಜರಾಗಿದ್ದರು. ಇದು ಅವರ ನಿಯಂತ್ರಣ ಮೀರಿದ ಅನಿವಾರ್ಯ ಪರಿಸ್ಥಿತಿಯಾಗಿದ್ದರಿಂದ, ಇದನ್ನು ಸ್ವಯಂಪ್ರೇರಿತವಾಗಿ ಕೆಲಸ ಬಿಟ್ಟು ಹೋದ ಪ್ರಕರಣ ಎಂದು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದೆ. ಗೈರು ಹಾಜರಿಯು ಉದ್ದೇಶಪೂರ್ವಕವಾಗಿದೆಯೇ ಅಥವಾ ಅನಿವಾರ್ಯ ಕಾರಣಗಳಿಂದಾಗಿದೆಯೇ ಎಂಬುದನ್ನು ಇಲಾಖಾ ತನಿಖೆಯ ಮೂಲಕ ಸಾಬೀತುಪಡಿಸದೆ ನೇರ ವಜಾ ಮಾಡುವುದು ಸರಿಯಾದ ಕ್ರಮವಲ್ಲ ಎಂದು ತಿಳಿಸಿರುವ ನ್ಯಾಯಪೀಠ, ಇಬ್ಬರೂ ನೌಕರರು ಜಾಮೀನಿನ ಮೇಲೆ ಬಿಡುಗಡೆಯಾದ ದಿನಾಂಕದಿಂದ ಮರು ನೇಮಕವಾಗುವವರೆಗಿನ ಅವಧಿಗೆ ಶೇ.50ರಷ್ಟು ಹಿಂಬಾಕಿ ವೇತನ ಮತ್ತು ಸೇವಾ ನಿರಂತರತೆ ನೀಡಬೇಕು ಎಂದು ಮೆಸ್ಕಾಂಗೆ ನಿರ್ದೇಶನ ನೀಡಿ ಆದೇಶಿಸಿದೆ.

ಹಿಟ್ ಆ್ಯಂಡ್ ರನ್: ಬೈಕ್ ಸವಾರ ಸಾವು

ಬೆಂಗಳೂರು: ಕೆಲಸ ಮುಗಿಸಿ ಮನೆಗೆ ತೆರಳುವ ವೇಳೆ ಹಿಟ್ ರನ್‌ಗೆ ಬೈಕ್ ಸವಾರ ಸ್ಥಳದಲ್ಲಿ ಸಾವನಪ್ಪಿರುವ ಘಟನೆ ನೆಲಮಂಗಲ ಬಳಿಯ ಹುಸ್ಕೂರು ಎಪಿಎಂಸಿ ಬಳಿ ನಡೆದಿದೆ.

ಟಾಟಾ ಏಸ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಿರೀಶ್ (30) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಬೆಂಗಳೂರು ಉತ್ತರ ತಾಲೂಕು ವಡೇರಹಳ್ಳಿ ಗ್ರಾಮದ ನಿವಾಸಿಯಾಗಿದ್ದ ಗಿರೀಶ್ ಚಾಲಕ ಕೆಲಸ ಮಾಡಿಕೊಂಡಿದ್ದರು. ಜಯಮ್ಮ ಹಾಗೂ ಪಾಪಣ್ಣ ದಂಪತಿಯ ಮಗ ಗಿರೀಶ್, ತಂದೆಯ ಮರಣದ ಬಳಿಕ ಡ್ರೈವಿಂಗ್ ಕೆಲಸ ಮಾಡಿಕೊಂಡು ಕುಟುಂಬಕ್ಕೆ ಆಧಾರವಾಗಿದ್ದರು. ಶುಕ್ರವಾರ ತಡರಾತ್ರಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಶುಕ್ರವಾರ ತಡರಾತ್ರಿ 12:41ರ ಸುಮಾರಿಗೆ ಅಪಘಾತ ಸಂಭವಿಸಿದ್ದು, ಸಿಸಿಟಿವಿಯಲ್ಲಿ ಅಪಘಾತದ ದೃಶ್ಯ ಸೆರೆಯಾಗಿದೆ. ಅಪಘಾತದ ಬಳಿಕ ಟಾಟಾ ಏಸ್ ವಾಹನ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಘಟನಾ ಸ್ಥಳಕ್ಕೆ ಮಾದನಾಯಕನಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸದ್ಯ ಮೃತದೇಹವನ್ನ ಮರಣೋತ್ತರ ಪರೀಕ್ಷೆಗೆ ನೆಲಮಂಗಲ ಸರಕಾರಿ ಆಸ್ಪತ್ರೆಗೆ ರವಾನಿಸಿ ಪ್ರಕರಣ ದಾಖಲಿಸಿದ್ದಾರೆ.

ದಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ
ಕಛೇರಿ: ನಂ.6, "ಲಕ್ಷ್ಮೀ ಸದನ" 5ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-560018

ಚಿನ್ನಾಭರಣಗಳ ಹರಾಜು ನೋಟೀಸು

ಈ ಮೂಲಕ ಚಿನ್ನದ ಮೇಲೆ ಸಾಲ ಪಡೆದ ಸಾಲಗಾರರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ತಿಳಿಸಿರುವ ಸಾಲಗಾರರು ಬ್ಯಾಂಕಿಗೆ ಕಟ್ಟಬೇಕಿದ್ದ ಚಿನ್ನದ ಸಾಲವನ್ನು ಮರು ಪಾವತಿಸಲು ವಿಫಲರಾಗಿರುತ್ತಾರೆ. ನೋಂದಾಯಿತ ಅಂಚೆ ಮೂಲಕ ಅವರಿಗೆ ಕಳುಹಿಸಿದ ನೋಟೀಸ್‌ಗಳು ಅವರಿಗೆ ತಲುಪಿವೆ/ತಲುಪದೆ ಬ್ಯಾಂಕ್‌ಗೆ ಹಿಂತಿರುಗಿವೆ ಮತ್ತು ಈ ನೋಟೀಸ್ ಮೂಲಕ ತಿಳಿಸುವುದೇನೆಂದರೆ ದಿನಾಂಕ: **15.05.2026 ರ ಸಂಜೆ 4.00 ಗಂಟೆ ಒಳಗೆ** ತಮ್ಮ ಎಲ್ಲಾ ಬಾಕಿಗಳನ್ನು ಆಯಾ ಚಿನ್ನದ ಸಾಲ ಖಾತೆಗಳಲ್ಲಿ ಆ ದಿನದ ಬಾಕಿ ಮೊತ್ತ ಮತ್ತು ಎಲ್ಲಾ ವೆಚ್ಚ ಶುಲ್ಕಗಳು/ವೆಚ್ಚಗಳನ್ನು ಒಳಗೊಂಡಂತೆ ಮರು ಪಾವತಿ ಮಾಡಲು ವಿಫಲವಾದರೆ ದಿನಾಂಕ: **16.05.2026 ರ ಸಂಜೆ 4.00 ಗಂಟೆಗೆ** ಅವರು ಅಡಮಾನ ಮಾಡಿದ ಚಿನ್ನಾಭರಣಗಳನ್ನು ಆಯಾ ಶಾಖೆಯ ಆವರಣದಲ್ಲಿ ಸಾರ್ವಜನಿಕ ಹರಾಜು ಮಾಡಲಾಗುವುದು. ಇದಕ್ಕಾಗಿ, ಸಂಬಂಧಿತ ಸಾಲಗಾರರಿಗೆ ಉಂಟಾಗುವ ಯಾವುದೇ ಅನಾನುಕೂಲತೆ ಅಥವಾ ಹಾನಿಗಳಿಗೆ ಬ್ಯಾಂಕಿನವರು ಜವಾಬ್ದಾರರಾಗಿರುವುದಿಲ್ಲ. ಮುಂದಿನ ಸೂಚನೆ ಮತ್ತು ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಹರಾಜನ್ನು ರದ್ದುಗೊಳಿಸುವ / ಮುಂದೂಡುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಶಾಖೆ ಹೆಸರು & ಸಾಲಗಾರರ ಹೆಸರು	ಈಡು ಮಾಡಿರುವ ಚಿನ್ನಾಭರಣಗಳು	ತೂಕ		ಸಾಲದ ಖಾತೆ ಸಂಖ್ಯೆ	ಬಾಕಿ ಮೊತ್ತ ರೂ.	ದೂರವಾಣಿ ಸಂಖ್ಯೆ
		ಗ್ರಾಂ	ಮಿ.ಗ್ರಾ			
ಯಶವಂತಪುರ ಶರಣಬಸಪ್ಪ	ಕಡಗ	43	900	119005 821923	ರೂ. 2,21,017/-	9620700424 8968169913 080-23372324
ರಘುನಂದನ್ ಎಲ್	3 ಬಳೆಗಳು 1 ಜೊತೆ ಓಲೆ 1 ಚೋಕರ್ 2 ಹಾರ	502	00	119005 841112	ರೂ. 28,99,051/-	
ಪ್ರಶಾಂತ್ ಎಲ್	1 ಜಡೆಬಿಲ್ಲೆ 1 ಹಾರ 2 ನೆಕ್ಲೆಸ್ 1 ಜೊತೆ ಓಲೆ 1 ರಿಂಗ್	510	00	119005 841349	ರೂ. 28,99,051/-	

ಸೂಚನೆ: ಪ್ರತಿ ಖಾತೆದಾರರು ಹಾಗೂ ಖರೀದಿದಾರು ಅವರಿಗೆ ತಗಲುವ ಬ್ಯಾಂಕ್ ರಿಕವರಿ ಖರ್ಚು/ವೆಚ್ಚಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

ದಿನಾಂಕ : 02.05.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ,
ಯಶವಂತಪುರ ಶಾಖೆ

ಸ್ಥಳೀಯ ಸಂಸ್ಥೆ ಚುನಾವಣೆ ವಿಳಂಬ: ಸುಪ್ರೀಂಗೆ ಪತ್ರ

ಬೆಂಗಳೂರು: ಅವಧಿ ಮುಕ್ತಾಯಗೊಂಡಿರುವ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಅಧಿಸೂಚನೆ ಹೊರಡಿಸಲು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಲು ವಕೀಲ ಎ.ಪಿ.ರಂಗನಾಥ್ ಅವರು ಸುಪ್ರೀಂಕೋರ್ಟ್‌ಗೆ ಪತ್ರ ಬರೆದಿದ್ದಾರೆ.

ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸೇರಿ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್ವಾರು ಮೀಸಲಿನ ಅಂತಿಮ ಅಧಿಸೂಚನೆ ಆದಷ್ಟು ಬೇಗ ಹೊರಡಿಸುವಂತೆ ನಿರ್ದೇಶನ ನೀಡಬೇಕು. ಜೂ.30 ರೊಳಗೆ ಅಧಿಸೂಚನೆ ಹೊರಡಿಸಿ, ಚುನಾವಣೆ ನಡೆಸುವಂತೆ ರಾಜ್ಯ ಸರಕಾರಕ್ಕೆ ಸೂಚಿಸುವಂತೆ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯದಲ್ಲಿ ಈಗಾಗಲೆ ಅನೇ ನಗರ ಸಭೆಗಳ ಚುನಾವಣೆ ನಡೆಯಬೇಕಿತ್ತು. ಆದರೆ ರಾಜ್ಯ ಸರಕಾರ ವಿಳಂಬ ಮಾಡುತ್ತಲೇ ಬಂದಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೂ (ಈಗಿನ ಜಿಬಿಎ) ಚುನಾವಣೆ ನಡೆಯಬೇಕಿತ್ತು. 2020ರ ಸೆಪ್ಟೆಂಬರ್ 30ಕ್ಕೇ ಬಿಬಿಎಂಪಿ ಅವಧಿ ಪೂರ್ಣಗೊಂಡಿದೆ. ಅವಧಿ ಮುಕ್ತಾಯಕ್ಕೂ ಮುನ್ನವೇ ರಾಜ್ಯ ಚುನಾವಣಾ ಆಯೋಗ ರಾಜ್ಯ ಸರಕಾರಕ್ಕೆ ಅನೇಕ ಪತ್ರ ಬರೆದಿತ್ತು. ಆದರೆ ಮೀಸಲು ನಿಗದಿ, ಕ್ಷೇತ್ರ ಮರುವಿಂಗಡಣೆಗೆ ರಾಜ್ಯ ಸರಕಾರ ತಲೆ ಕೆಡಿಸಿಕೊಳ್ಳದೆ ಈ ಪತ್ರಗಳನ್ನು ಕಡೆಗಣಿಸಿತ್ತು.

ಮಧ್ಯಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅಲ್ಲಿನ ಸರಕಾರ ಚುನಾವಣೆ ನಡೆಸಿಲ್ಲ. ಅವಧಿ ಮುಕ್ತಾಯಗೊಂಡಿದ್ದರೂ ಚುನಾವಣೆ ನಡೆಸದ ಸರಕಾರದ ನಡೆಯನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಈ ಕುರಿತ ತೀರ್ಪನ್ನು ಪ್ರಕಟಿಸಿತು. ಒಬಿಸಿ ಮೀಸಲಾತಿ ನಿಗದಿ ಆಗಿಲ್ಲ, ಕ್ಷೇತ್ರ ಮರುವಿಂಗಡಣೆ ಆಗಿಲ್ಲ ಎನ್ನುವ ಸಬೂಬು ನೀಡುವಂತಿಲ್ಲ. ಅವಧಿ ಮುಕ್ತಾಯವಾಗುವ ಮೊದಲೇ ಇದೆಲ್ಲವನ್ನೂ ರಾಜ್ಯ ಚುನಾವಣಾ ಆಯೋಗ ಪೂರ್ಣಗೊಳಿಸಬೇಕಿತ್ತು. ರಾಜ್ಯ ಸರಕಾರ ಇದಕ್ಕೆ ಸಂಪೂರ್ಣ ಸಹಕಾರ ನೀಡಬೇಕಿತ್ತು. ಮಧ್ಯಪ್ರದೇಶದ ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಅಧಿಸೂಚನೆಯನ್ನು ಎರಡು ವಾರದಲ್ಲಿ ಹೊರಡಿಸಬೇಕು, ಚುನಾವಣೆ ನಡೆಸಬೇಕು ಎಂದು ತೀರ್ಪಿನಲ್ಲಿ ತಿಳಿಸಿದೆ. ಮುಂದುವರಿದ ಸುಪ್ರೀಂಕೋರ್ಟ್, ಈ ತೀರ್ಪು ಮಧ್ಯಪ್ರದೇಶಕ್ಕಷ್ಟೆ ಅಲ್ಲ, ದೇಶದಲ್ಲಿ ಎಲ್ಲೆಲ್ಲಿ ಅವಧಿ ಪೂರ್ಣಗೊಂಡಿದ್ದರೂ ಚುನಾವಣೆ ನಡೆಯದ ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ಅನ್ವಯ ಎಂದಿದೆ. ಆದರೆ ಕರ್ನಾಟಕದಲ್ಲಿ ಸುಪ್ರೀಂಕೋರ್ಟ್ ಆದೇಶ ಉಲ್ಲಂಘನೆಯಾಗಿದೆ ಎಂದಿದ್ದಾರೆ.

ರಾಜ್ಯಪಾಲರಿಗೆ ಜೆಡಿಎಸ್ ದೂರು

ಜಿಬಿಎ ಚುನಾವಣೆ ನಡೆಸುವಂತೆ ರಾಜ್ಯಪಾಲರಿಗೆ ಜೆಡಿಎಸ್ ಕಾನೂನು ಘಟಕದಿಂದ ದೂರು ನೀಡಲಾಗಿದೆ. ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ಎ.ಪಿ ರಂಗನಾಥ್ ನೇತೃತ್ವದಲ್ಲಿ ದೂರು ಸಲ್ಲಿಕೆ ಮಾಡಲಾಗಿದ್ದು, ಜಿಬಿಎ ಚುನಾವಣೆ ನಡೆಸಲು ಸರಕಾರಕ್ಕೆ ಸೂಚನೆ ನೀಡುವಂತೆ ರಾಜ್ಯಪಾರಿಗೆ ಮನವಿ ಮಾಡಿದ್ದಾರೆ. ಕೋರ್ಟ್ ಆದೇಶ ಇದ್ದರೂ ಕೂಡಾ ರಾಜ್ಯ ಸರಕಾರ ಉದ್ದೇಶ ಪೂರ್ವಕವಾಗಿ ಜಿಬಿಎ ಚುನಾವಣೆ ಮುಂದೂಡಿಕೆ ಮಾಡುತ್ತಿದೆ. ಬೆಂಗಳೂರು ಜನರ ಕಷ್ಟ ಕೇಳುವವರಿಲ್ಲ. ಸ್ಥಳೀಯ ಸಂಸ್ಥೆಯಲ್ಲಿ ಜನಪ್ರತಿನಿಧಿಗಳು ಇಲ್ಲದೇ ಅನಾನುಕೂಲಗಳು ಉಂಟಾಗುತ್ತಿವೆ. ರಾಜ್ಯ ಸರಕಾರ ಕೂಡಲೇ ಜಿಬಿಎ ಚುನಾವಣೆ ನಡೆಸಬೇಕು. ಈಗಾಗಲೇ ಮುಖ್ಯ ಚುನಾವಣಾ ಆಯುಕ್ತರಿಗೂ ದೂರು ನೀಡಲಾಗಿದೆ. ಈಗ ರಾಜ್ಯಪಾಲರಿಗೆ ದೂರು ನೀಡಿದ್ದೇವೆ. ಈ ಬಗ್ಗೆ ರಾಷ್ಟ್ರಪತಿಗಳಿಗೆ ರಾಜ್ಯಪಾಲರು ವರದಿ ನೀಡಬೇಕೆಂದು ಮನವಿ ಮಾಡಿದ್ದೇವೆ ಎಂದು ಎಂ.ಪಿ.ರಂಗನಾಥ್ ತಿಳಿಸಿದ್ದಾರೆ.

160 ಕೋಟಿ ರು. ಮೌಲ್ಯದ ಬಿಡಿಎ ಜಾಗ ಕಬಳಿಕೆ ಯತ್ನ

ಬೆಂಗಳೂರು: ಬೆಂಗಳೂರಿನಲ್ಲಿ 160 ಕೋಟಿ ರು. ಮೌಲ್ಯದ ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಜಮೀನನ್ನು ನಕಲಿ ದಾಖಲೆಗಳ ಮೂಲಕ ಅಕ್ರಮವಾಗಿ ಕಬಳಿಕೆ ಮಾಡಲು ಯತ್ನಿಸಿದ ಪ್ರಕರಣ ಬೆಳಕಿಗೆ ಬಂದಿದೆ. ಬೆಂಗಳೂರು ದಕ್ಷಿಣದ ಕೊತ್ತನೂರಿನಲ್ಲಿರುವ ಬಿಡಿಎ ಆಸ್ತಿ ಕಬಳಿಕೆ ಆರೋಪ ಸಂಬಂಧ ಲಕ್ಷ್ಮಿನಾರಾಯಣ, ಮಾರುತಿ ಕುಮಾರ್ ಸೇರಿದಂತೆ ಐವರ ವಿರುದ್ಧ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ ದಾಖಲಾಗಿದೆ.

ಡಿವೈಎಸ್‌ಪಿ ಹನುಮಂತರಾಯ ಅವರು ನೀಡಿದ ದೂರಿನ ಆಧಾರದ ಮೇಲೆ ಈ ಪ್ರಕರಣ ದಾಖಲಿಸಲಾಗಿದ್ದು, ಸರಕಾರಿ ಜಾಗವನ್ನು ನಕಲಿ ದಾಖಲೆಗಳ ಮೂಲಕ ಗುಳುಂ ಮಾಡಲು ಯತ್ನಿಸಿದ ಭೂಗಳ್ಳರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಈ 160 ಕೋಟಿ ರು. ಮೌಲ್ಯದ ಜಾಗವು ಸರ್ವೆ ನಂಬರ್ 177/1 ಮತ್ತು 176/1 ರಲ್ಲಿ ಬರುವ 10 ಗುಂಟೆ ಆಸ್ತಿಯಾಗಿದೆ. ಬಿಡಿಎ ಈ ಆಸ್ತಿಯನ್ನು 1994ರ ಅಕ್ಟೋಬರ್‌ನಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಂಡಿತ್ತು. 1995ರ ಡಿಸೆಂಬರ್‌ನಲ್ಲಿ ಇದಕ್ಕೆ ಸಂಬಂಧಿಸಿದ ತೀರ್ಪು ಅನುಮೋದನೆಗೊಂಡಿತ್ತು ಮತ್ತು 1999ರಲ್ಲಿ ಇದನ್ನು ಅಭಿಯಂತರ ವಿಭಾಗಕ್ಕೆ ಹಸ್ತಾಂತರಿಸಲಾಗಿತ್ತು.

ಈ ಜಮೀನು ಬಿಡಿಎಗೆ ಸೇರಿದ್ದೆಂದು ಕರ್ನಾಟಕ ಹೈಕೋರ್ಟ್ ಸಹ ಆದೇಶ ನೀಡಿತ್ತು. ಅಷ್ಟೇ ಅಲ್ಲದೆ, 1996ರಲ್ಲಿ ವಾರಸುದಾರರಾದ ಮಾರಿಯಮ್ಮ ಅವರಿಗೆ ಬಿಡಿಎ ಕಡೆಯಿಂದ ಪರಿಹಾರವನ್ನೂ ನೀಡಲಾಗಿತ್ತು. ಆದರೂ, ಆರೋಪಿಗಳು ನಕಲಿ ಜಿಪಿಎ ದಾಖಲೆಗಳನ್ನು ಸೃಷ್ಟಿಸಿ ಈ ಕೋಟ್ಯಂತರ ರು. ಮೌಲ್ಯದ ಆಸ್ತಿ ಕಬಳಿಸಲು ಯತ್ನಿಸಿದ್ದಾರೆ. ಇತ್ತೀಚೆಗೆ ಹರ್ಷವರ್ಧನ್ ಎಂಬುವರು ಬಿಡಿಎ ಆಯುಕ್ತರಿಗೆ ಈ ಬಗ್ಗೆ ದೂರು ನೀಡಿದ್ದರು. ಡಿವೈಎಸ್‌ಪಿ ಹನುಮಂತರಾಯ ಅವರು ಈ ದೂರಿನ ತನಿಖೆ ನಡೆಸಿ, ನಕಲಿ ದಾಖಲೆಗಳ ಸೃಷ್ಟಿ ನಡೆದಿರುವುದನ್ನು ಖಚಿತಪಡಿಸಿಕೊಂಡ ನಂತರ ಎಫ್‌ಐಆರ್ ದಾಖಲಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ದೂರು ನೀಡಲು ಸಾಮಾಜಿಕ ಜಾಲತಾಣ ಬಳಸಿ: ಬೆಸ್ಕಾಂ

ಬೆಂಗಳೂರು: ವಿದ್ಯುತ್ ಸಂಬಂಧಿತ ದೂರುಗಳನ್ನು ದಾಖಲಿಸಲು ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗಳು ಹಾಗೂ ಬೆಸ್ಕಾಂ ಸಾಮಾಜಿಕ ಜಾಲತಾಣಗಳ ಮೂಲಕ ದೂರು ದಾಖಲಿಸಲು ಗ್ರಾಹಕರಿಗೆ ಬೆಸ್ಕಾಂ ಮನವಿ ಮಾಡಿದೆ. ಬೆಸ್ಕಾಂನ 1912 ಸಹಾಯವಾಣಿ ಸಂಖ್ಯೆಯ ಸಂಪರ್ಕ ಸಾಧ್ಯವಾಗದಿದ್ದರೆ, 11 ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗಳು, ಸಾಮಾಜಿಕ ಜಾಲತಾಣಗಳಾದ ನಮ್ಮ ಬೆಸ್ಕಾಂ ಫೇಸ್‌ಬುಕ್, ಟ್ವಿಟರ್ ಖಾತೆಯ ಮೂಲಕ ದೂರು ದಾಖಲಿಸಲು ಕೋರಲಾಗಿದೆ. ಜತೆಗೆ ಬೆಂಗಳೂರು ನಗರ ಜಿಲ್ಲೆ ದಕ್ಷಿಣ ವೃತ್ತ 8277884011, ಪಶ್ಚಿಮ ವೃತ್ತ 8277884012, ಪೂರ್ವ ವೃತ್ತ 8277884013, ಉತ್ತರ ವೃತ್ತ 8277884014, ಕೋಲಾರ 8277884015, ಚಿಕ್ಕಬಳ್ಳಾಪುರ 8277884016, ಬೆಂಗಳೂರು ಗ್ರಾಮಾಂತರ 8277884017, ರಾಮನಗರ 8277884018, ತುಮಕೂರು 8277884019, ಚಿತ್ರದುರ್ಗ 8277884020, ದಾವಣಗೆರೆ 8277884021. ಗ್ರಾಹಕರು ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗಳಿಗೆ ಸಂದೇಶದ ಜತೆಗೆ ವಿದ್ಯುತ್ ಸಂಬಂಧಿತ ದೂರಗಳ ಫೋಟೋ ಹಾಗೂ ವಿಡಿಯೋಗಳನ್ನು ಸಹ ಕಳುಹಿಸಬಹುದಾಗಿದೆ ಎಂದು ಬೆಸ್ಕಾಂ ತಿಳಿಸಿದೆ.

ಯಶೋಧರ ದಾಸಪ್ಪ ಪ್ರಶಸ್ತಿಗೆ ಘಂಟಿ ಆಯ್ಕೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2026ನೇ ಸಾಲಿನ 'ಯಶೋಧರ ದಾಸಪ್ಪ ಪ್ರಶಸ್ತಿ'ಗೆ ಸಾಹಿತಿ ಹಾಗೂ ಹಂಪಿ ಕನ್ನಡ ವಿವಿಯ ವಿಶ್ರಾಂತ ಕುಲಪತಿ ಡಾ. ಮಲ್ಲಿಕಾ ಎಸ್. ಘಂಟಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು 15 ಸಾವಿರ ರು. ನಗದು, ಕಂಚಿನ ಫಲಕ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದ್ದು, ಮೇ 20 ರಂದು ಸಂಜೆ 5.15ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಈ ವೇಳೆ ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ವಿಮರ್ಶಕಿ ಡಾ. ಎಂ. ಎಸ್. ಆಶಾದೇವಿ, ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ತಿಳಿಸಿದ್ದಾರೆ.

ಎಸ್‌ಪಿ ಲಾವಣ್ಯ ನಿಧನ

ಬೆಂಗಳೂರು: ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಎಸ್‌ಪಿ ಲಾವಣ್ಯ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ಬೆಸ್ಕಾಂ ವಿಜಿಲೆನ್ಸ್‌ನಲ್ಲಿ ಎಸ್‌ಪಿಯಾಗಿದ್ದ ಲಾವಣ್ಯ, ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಮಧ್ಯಾಹ್ನ 2:30 ರ ಸುಮಾರಿಗೆ ಸಾವನ್ನಪ್ಪಿದ್ದಾರೆ. ಮೃತರು 10 ವರ್ಷದ ಗಂಡು ಹಾಗೂ 3 ವರ್ಷದ ಹೆಣ್ಣು ಮಗುವನ್ನು ಅಗಲಿದ್ದಾರೆ. ಮೂಲತಃ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ದೊಡ್ಡಗಂಜೂರು ಗ್ರಾಮದವರಾದ ಲಾವಣ್ಯ, 2023 ರಿಂದಲೂ ಎಸ್‌ಪಿಯಾಗಿ ಸೇವೆ ಸಲ್ಲಿಸಿದ್ದಾರೆ. ಮಂಡ್ಯ ಮತ್ತು ಬಳ್ಳಾರಿಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷರಾಗಿ ಕೆಲಸ ಮಾಡಿದ್ದಾರೆ. ಬೆಂಗಳೂರಿನಲ್ಲಿ ಇಂಟಲಿಜೆನ್ಸ್ ಮತ್ತು ಡಿಸಿಆರ್‌ಇ ಎಸ್‌ಪಿ ಆಗಿ ಕೆಲಸ ಮಾಡಿದ್ದಾರೆ. ಇತ್ತೀಚೆಗಷ್ಟೇ ವಿದ್ಯಾರಣ್ಯಪುರದಲ್ಲಿರುವ ನಿವಾಸಕ್ಕೆ ಎರಡು ತಿಂಗಳ ಹಿಂದೆ ಡಿಜಿ, ಐಜಿಪಿ ಡಾ. ಎಂ.ಎ ಸಲೀಂ ಭೇಟಿ ನೀಡಿ ಧೈರ್ಯ ತುಂಬಿದ್ದರು. ಚೇತರಿಸಿಕೊಳ್ಳುವಂತೆ ಹಾರೈಸಿ ಕುಟುಂಬದವರಿಗೂ ಸಹ ಧೈರ್ಯ ತುಂಬಿ ಬಂದಿದ್ದರು.

ತ್ಯಾಗರಾಜ ಆರಾಧನೆಯ ಕಾರ್ಯಕ್ರಮ ಇಂದು

ಬೆಂಗಳೂರು: 6ನೇ ಆವೃತ್ತಿಯ ತ್ಯಾಗರಾಜ ಆರಾಧನೆಯ ಕಾರ್ಯಕ್ರಮ ಮೇ 3 ರಂದು ಸಂಜೆ

5.30ಕ್ಕೆ ನಗರದ ಜೆ.ಪಿ.ನಗರದ ವ್ಯೋಮ ಸ್ಟುಡಿಯೊದಲ್ಲಿ ನಡೆಯಲಿದೆ ಎಂದು ನಟನಮ್ ಇನ್‌ಸ್ಟಿಟ್ಯೂಟ್ ಆಫ್ ಡ್ಯಾನ್ಸ್ ಸಂಸ್ಥೆ ತಿಳಿಸಿದೆ. ಸಂಗೀತ, ಭಕ್ತಿ ಹಾಗೂ ಶಾಸ್ತ್ರೀಯ ನೃತ್ಯಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಈ ಕಾರ್ಯಕ್ರಮ ಕಲಾಭಿಮಾನಿಗಳ ಮನ ಸೂರೆಗೊಳ್ಳಲಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಕಲಾ ವಿಮರ್ಶಕಿ ಜ್ಯೋತಿ ರಘುರಾಮ್, ಭಾರತ ಸರಕಾರದ ಮಾಜಿ ಸಲಹೆಗಾರ ಡಾ. ಕೃಷ್ಣಮೂರ್ತಿ ಬಿ.ಎನ್., ಉದ್ಯಮಿ ಸತೀಶ್ ಗುಂಡಪ್ಪ ಉಪಸ್ಥಿತರಿರಲಿದ್ದಾರೆ. ಜತೆಗೆ ಡಾ. ರಕ್ಷಾ ಕಾರ್ತಿಕ್ ಅವರ ನೇತೃತ್ವದಲ್ಲಿ, ಕಲಾವಿದರಾದ ಭಾರತ್ವಾಜ್ ದಯಾನಿಧಿ, ದರ್ಶನ ಶಂಕರ್, ಎನ್. ಗುರುರಾಜು ಅವರಿಂದ ಭರತನಾಟ್ಯ ಮತ್ತು ಕುಚಿಪುಡಿ ನೃತ್ಯ ಪ್ರದರ್ಶನ ನೀಡಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಶಿವಸ್ವಾಮಿ, ಜಿತೇಂದ್ರಗೆ ಕಸಾಪ ದತ್ತಿ ಪ್ರಶಸ್ತಿ

ಬೆಂಗಳೂರು: ಕಸಾಪದ ಶ್ರೀಮತಿ ವಿ.ಗೌರಮ್ಮ ಗಂಗಾಧರಯ್ಯ ಮಕ್ಕಳು ಸಿಬ್ಬಂದಿ ಸೇವಾ ದತ್ತಿ ಪ್ರಶಸ್ತಿಗೆ ಕೆ.ಸಿ. ಶಿವಸ್ವಾಮಿ ಹಾಗೂ ಶ್ರೀಮತಿ ಎಸ್.ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿಗೆ ಎಂ.ಜೀತೇಂದ್ರ ಆಯ್ಕೆಯಾಗಿದ್ದಾರೆ.ಶಿವಸ್ವಾಮಿ ಅವರು 24 ವರ್ಷಗಳಿಂದ, ಜಿತೇಂದ್ರ ಅವರು 23 ವರ್ಷಗಳಿಂದ ಕಸಾಪದಲ್ಲಿ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೇ 5ರಂದು ಸಂಜೆ 4 ಗಂಟೆಗೆ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭವು ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆಯಲಿದೆ. ಈ ಸಮಾರಂಭದಲ್ಲಿ ಸಾಹಿತಿ ಹಂಪ ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಸಾಪ ಆಡಳಿತಾಧಿಕಾರಿ ಕೆ.ಎ.ದಯಾನಂದ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಅಧ್ಯಕ್ಷರಾದ ನಲ್ಲೂರು ಪ್ರಸಾದ್ ಹಾಗೂ ಮನು ಬಳಿಗಾರ್ ಅವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕೃಷಿ ಲಾಭದಾಯಕವಾಗಿಸಲು ವೈಜ್ಞಾನಿಕ ನೆರವು ನೀಡಲು ಸರಕಾರ ಬದ್ಧ: ಸಿಎಂ

ಯುವಕರು ಕೃಷಿಯತ್ತ ಮರಳಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೃಷಿಯನ್ನು ಲಾಭದಾಯಕವಾಗಿಸಲು ವೈಜ್ಞಾನಿಕ ನೆರವನ್ನು ನೀಡಲು ಸರಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಓಕಳೀಪುರದಲ್ಲಿ ಶನಿವಾರ ರೇಷ್ಮೆ ಮತ್ತು ಖನಿಜ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ಹಾಗೂ ಇ-ರೇಷ್ಮೆ ಪೋರ್ಟಲ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ರೇಷ್ಮೆ ಮೇಲೆ 1.50 ಲಕ್ಷ ಕುಟುಂಬಗಳು ಇದರ ಮೇಲೆ ಅವಲಂಬಿಸಿದ್ದು, ರೇಷ್ಮೆ ಲಾಭದಾ ಯಕವಾದ ಕಸುಬು. ಅದಕ್ಕಾಗಿಯೇ ಹೆಚ್ಚು ಜನ ವ್ಯವಸಾಯದ ಜತೆಗೆ ಉಪಕಸುಬು ಮಾಡಬೇಕು. ಕೃಷಿಯಿಂದ ವಿಮುಖರಾಗುತ್ತಿರುವ ಯುವಜನಾಂಗವನ್ನು ಪುನಃ ಸೆಳೆಯಲು ರೇಷ್ಮೆ ತೋಟಗಾರಿಕೆ, ಪಶುಸಂಗೋಪನೆಗೆ ಸರಕಾರ ಹೆಚ್ಚಿನ ಒತ್ತು ನೀಡುತ್ತಿದೆ ಎಂದರು.

ಬೈವೋಲ್ಟೀನ್ ರೇಷ್ಮೆಗೆ ಬೇಡಿಕೆ ಹೆಚ್ಚಾಗಿದ್ದು, ನಮ್ಮ ಸರಕಾರದ ಅವಧಿಯಲ್ಲಿ ಸಾಗಾಣಿಕೆ ವೆಚ್ಚವನ್ನು 10 ರಿಂದ 20 ರು.ಗಳಿಗೆ ಹೆಚ್ಚಿಸಲಾಯಿತು ಮತ್ತು ಬೈವೋಲ್ಟೀನ್ ಬೆಳೆಯಲು ಹೆಚ್ಚಿನ ನೆರವನ್ನು ನೀಡಲು ಬದ್ಧವಾಗಿದೆ. ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಹಾಲು ಉತ್ಪಾದನೆಯಲ್ಲಿ ಎರಡನೇ ಸ್ಥಾನ ಹಾಗೂ ಕಾಫಿ ಉತ್ಪಾದನೆಯಲ್ಲಿಯೂ ಮೊದಲ ಸ್ಥಾನದಲ್ಲಿದ್ದೇವೆ. ಒಂದು ದಿನಕ್ಕೆ 1 ಕೋಟಿ ಲೀ. ಹಾಲು ಉತ್ಪಾದನೆಯಲ್ಲಿ 1.22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆ ಹಾಕಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವೆಂಕಟೇಶ್, ಖನಿಜ ನಿಗಮದ ಅಧ್ಯಕ್ಷ ಜಿ.ಎಸ್ .ಪಾಟೀಲ್, ಉಪಾಧ್ಯಕ್ಷ ಎಚ್. ಲಕ್ಷ್ಮಣ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ರೇಷ್ಮೆ ಮತ್ತು ಖನಿಜ ಭವನ ನಿರ್ಮಾಣ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವೆಂಕಟೇಶ್, ಖನಿಜ ನಿಗಮದ ಅಧ್ಯಕ್ಷ ಜಿ.ಎಸ್.ಪಾಟೀಲ್, ಉಪಾಧ್ಯಕ್ಷ ಎಚ್.ಲಕ್ಷ್ಮಣ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇತರ ಇಲಾಖೆಗಳಿಗೂ ಸ್ಥಳಾವಕಾಶ

ಓಕಳೀಪುರದಲ್ಲಿರುವ 4 ಎಕರೆ 25 ಗುಂಟೆ ವಿಸ್ತೀರ್ಣದ ಸ್ಥಳ ರೇಷ್ಮೆ ಇಲಾಖೆಗೆ ಸೇರಿದ್ದು, 1995 ರಲ್ಲಿ ಇದನ್ನು ಖರೀದಿಸಲಾಗಿತ್ತು. ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ರೇಷ್ಮೆ ಭವನದ ಅಗತ್ಯತೆಯನ್ನು ಮನಗಂಡು ಸ್ಥಳವನ್ನು ರೇಷ್ಮೆ ಇಲಾಖೆ ಕೊಟ್ಟರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸೇರಿದ ಮೈಸೂರು ಖನಿಜ ಕಾರ್ಪೋರೇಷನ್ ವತಿಯಿಂದ ಭವನ ನಿರ್ಮಾಣ ಮಾಡುವುದು ಎಂದು ತೀರ್ಮಾನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ರೇಷ್ಮೆ ಇಲಾಖೆಯ ಅಭಿವೃದ್ಧಿಯ ದೃಷ್ಟಿಯಿಂದ ಅಗತ್ಯವಿರುವಷ್ಟು ಸ್ಥಳವನ್ನು ಬಳಸಿಕೊಂಡು ಇತರೆ ಇಲಾಖೆಗಳಿಗೂ ಸ್ಥಳಾವಾಕಾಶವನ್ನು ಮಾಡಿಕೊಡುವಂತೆ ಸೂಚಿಸಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ರೇಷ್ಮೆ ಭವನಕ್ಕೆ 666.75 ಕೋಟಿ ರು.ಗಳಿಗೆ ಟೆಂಡರ್ ಆಗಿದ್ದು, ಮೂರು ವರ್ಷಗಳ ಅವಧಿಯಲ್ಲಿ ಕಟ್ಟಡ ನಿರ್ಮಾಣವಾಗಬೇಕು. 13 ಅಂತಸ್ತಿನ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಿದ್ದು, ಕಟ್ಟಡ ಸದೃಢವಾಗಿರಬೇಕು ಎಂದು ಸ್ಥಳದಲ್ಲಿ ಹಾಜರಿದ್ದ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಮೂರು ವರ್ಷಗಳ ಕಾಲಮಿತಿಯಲ್ಲಿ ಕಟ್ಟಡ ಮುಗಿಯದಿದ್ದರೆ ನಿಮ್ಮ ವಿರುದ್ಧ ಕ್ರಮವಹಿಸಲಾಗುವುದು.
-ಸಿದ್ದರಾಮಯ್ಯ, ಸಿಎಂ

ಮೇ ತಿಂಗಳಂತ್ಯದೊಳಗೆ ರಸ್ತೆಗಳ ಡಾಂಬರೀಕರಣ ಪೂರ್ಣಗೊಳಿಸಿ

ಬೆಂಗಳೂರು: ಬೆಂಗಳೂರು ಪಶ್ಚಿಮ ಹಾಗೂ ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಮೇ ಅಂತ್ಯದೊಳಗಾಗಿ ಪೂರ್ಣಗೊಳಿಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಕುರಿತು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ನಗರದಲ್ಲಿ ನಡೆಯುತ್ತಿರುವ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆ ಅಭಿವೃದ್ಧಿ ಕಾಮಗಾರಿಗಳು ವೇಗವಾಗಿ ಪೂರ್ಣಗೊಳ್ಳಬೇಕು. ಪಾದಚಾರಿ ಮಾರ್ಗ ಹಾಗೂ ಚರಂಡಿ ಕಾಮಗಾರಿಗಳಿಗೆ ಆದ್ಯತೆ ನೀಡುವ ಮೂಲಕ ಮಳೆಗಾಲಕ್ಕೂ ಮುನ್ನ ಎಲ್ಲಾ ಅಗತ್ಯ ಮೂಲಸೌಕರ್ಯ ಸಿದ್ಧವಾಗಬೇಕು ಎಂದು ಸೂಚಿಸಿದರು.

ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಈಗಾಗಲೇ ಪೂರ್ಣ ಗೊಂಡಿರುವ ರಸ್ತೆಗಳನ್ನು ಅಧಿಕಾರಿಗಳು ಖುದ್ದಾಗಿ ಪರಿಶೀಲಿಸಬೇಕು. ಜತೆಗೆ, ಪ್ರಗತಿ ಯಲ್ಲಿರುವ ಕಾಮಗಾರಿಗಳ ಮೇಲ್ವಿಚಾರಣೆ ಬಲಪಡಿಸಲು ಪ್ರಾಜೆಕ್ಟ್ ಮಾನಿಟ ರಿಂಗ್ ಡ್ಯಾಶ್‌ಬೋರ್ಡ್ ರಚಿಸಿ, ಪ್ರತಿದಿನದ ಪ್ರಗತಿ, ಗುಣಮಟ್ಟ ಪ್ರಮಾಣಪತ್ರಗಳು ಮತ್ತು ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡು ವ ವ್ಯವಸ್ಥೆ ಜಾರಿಗೊಳಿಸಲು ಸೂಚಿ ಸಲಾಗಿದೆ. ಮಳೆಗಾಲದ ಮುನ್ನೆಚ್ಚರಿಕಾ ಕ್ರಮಗಳ ಭಾಗವಾಗಿ ಜಲಾವೃತ ಪ್ರದೇಶ ಗಳನ್ನು ಗುರುತಿಸಿ, ಚರಂಡಿಗಳ ಹೂಳೆತ್ತುವಿಕೆ, ಶೋಲ್ಡರ್ ಡ್ರೇನ್‌ಗಳ ಸ್ವಚ್ಛತೆ ಹಾಗೂ ತ್ಯಾಜ್ಯ ತೆರವು ಕಾರ್ಯಗಳನ್ನು ತ್ವರಿತವಾಗಿ ಪೂರ್ಣ ಗೊಳಿಸಲು ಸೂಚನೆ ನೀಡಲಾಗಿದೆ. ಇತ್ತೀಚಿನ ಮಳೆಯಿಂದ ಬಿದ್ದ ಮರಗಳು ಹಾಗೂ ಕೊಂಬೆಗಳನ್ನು ಕೂಡಲೇ ತೆರವುಗೊಳಿಸಲು ಹೆಚ್ಚುವರಿ ತಂಡಗಳನ್ನು ನಿಯೋಜಿಸಲು ಆದೇಶಿಸಲಾಗಿದೆ. ದಕ್ಷಿಣ ಪಾಲಿಕೆ ವ್ಯಾಪ್ತಿಯ ಕೆರೆಗಳ ಅಭಿವೃದ್ಧಿಗೆ ಕ್ರಿಯಾ ಯೋಜನೆ ರೂಪಿಸುವಂತೆ ಸೂಚನೆ ನೀಡಲಾಗಿದ್ದು, ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು ಎಂದರು.

ರಸ್ತೆ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಉಳಿಯುವ ಭಗ್ನಾವಶೇಷಗಳನ್ನು ಕೂಡಲೇ ತೆರವುಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಪ್ರಗತಿಯಲ್ಲಿರುವ ಕಾಮಗಾರಿಗಳ ಸ್ಥಳಗಳಲ್ಲಿ ಸೂಚನಾ ಫಲಕಗಳು ಹಾಗೂ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಅಳವಡಿಸಿ, ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು.
-ಡಾ.ಕೆ.ವಿ.ರಾಜೇಂದ್ರ, ಪಶ್ಚಿಮ ನಗರ ಪಾಲಿಕೆ ಆಯುಕ್ತ

ಡಾಂಬರೀಕರಣ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜತೆಗೆ ಹದಗೆಟ್ಟಿರುವ ರಸ್ತೆಗಳ ದುರಸ್ತಿ ಕಾರ್ಯಕ್ಕೂ ಸಿದ್ಧತೆ ಮಾಡಿಕೊಳ್ಳಲಾಗಿದೆ.
- ಕೆ.ಎನ್.ರಮೇಶ್, ದಕ್ಷಿಣ ನಗರ ಪಾಲಿಕೆ ಆಯುಕ್ತ

ಅಂತಾರಾಷ್ಟ್ರೀಯ ನೃತ್ಯ ದಿನದ ಅಂಗವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ಕಥಕ್ ನೃತ್ಯಪ್ರದರ್ಶನ ಮಾಡಿದ ಕಲಾವಿದರು.

ಶುಶ್ರೂಶಕ ಕ್ಷೇತ್ರದಲ್ಲಿ ವೃತ್ತಿ ಅವಕಾಶಗಳು ವಿಪುಲ

ಬೆಂಗಳೂರು: ಶುಶ್ರೂಶಕ ವೃತ್ತಿ ಅವಕಾಶಗಳ ಆಗರ. ಈ ರಂಗದಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ಇಂದಿಗೂ ದೇಶ ವಿದೇಶಗಳಲ್ಲಿ ಅತ್ಯಂತ ಬೇಡಿಕೆಯಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕಿ ಡಾ.ಸುಜಾತ ರಾಥೋಡ್ ಹೇಳಿದರು.

ಬಿಜಿಎಸ್ ಗ್ಲೋಬಲ್ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಮತ್ತು ಎಸ್‌ಜೆಬಿ ನರ್ಸಿಂಗ್ ಕಾಲೇಜಿನ ಪದವಿ ಪ್ರದಾನ ಕಾರ್ಯಕ್ರಮ ಹಾಗೂ 'ಆರಂಭ್ 2026' ನೂತನ ತರಗತಿಗಳ ಉದ್ಘಾಟನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವೈದ್ಯಕೀಯ ಕ್ಷೇತ್ರದಲ್ಲಿ ಶುಶ್ರೂಶಕರಿಗೆ ಮಹತ್ವದ ಪಾತ್ರವಿದೆ. ರೋಗಿಗಳ ತ್ವರಿತ ಚೇತರಿಕೆಯಲ್ಲಿ ನರ್ಸ್‌ಗಳ ಪಾತ್ರ ಗಮನಾರ್ಹವಾಗಿದೆ. ವೈದ್ಯರ ಅನುಭವದೊಂದಿಗೆ ಶುಶ್ರೂಶಕರ ಸೇವಾ ನಿಸ್ಪೃಹತೆ ಮಿಳಿತಗೊಂಡರೆ ರೋಗಿಯು ಶೀಘ್ರವಾಗಿ ಗುಣ ಮುಖ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಅತಿ ಶ್ರೇಷ್ಠ ಸೇವೆಯಾದ ನರ್ಸಿಂಗ್ ಕಾಯಕವನ್ನು ಶ್ರದ್ಧೆಯಿಂದ ನಿರ್ವಹಿಸಿದರೆ ಅದುವೇ ನಿಜವಾದ ದೈವ ಪೂಜೆ. ಬದ್ಧತೆ ಹಾಗೂ ನಿಷ್ಠೆಯಿಂದ ವೃತ್ತಿ ನಿರ್ವಹಿಸಬೇಕು ಎಂದರು.

ಪದವಿ ಪ್ರದಾನ ಕಾರ್ಯಕ್ರಮದಲ್ಲಿ ನಿರ್ದೇಶಕಿ ಡಾ.ಸುಜಾತ ರಾಥೋಡ್, ಬಿಜಿಎಸ್ , ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ, ಡಾ ಚಂದ್ರಶೇಖರ್, ಬಿಜಿಎಸ್ ಜಿಮ್ಸ್ ಕಾಲೇಜು ಪ್ರಾಂಶುಪಾಲ ಡಾ. ಮೋಹನ್ ಇದ್ದರು.

ಮೇ 5 ರಿಂದ ಆರ್‌ಇಐಟಿ ಐಪಿಒ

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧಿಕಾರಿಗಳಾದ ಶಶಾಂಕ್ ಬಾಗ್ಮನೆ, ಹ್ಯೂಸ್ ಆಂಡ್ರ್ಯೂ, ಆಶಯ್ ಶಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮುಂಬೈ: ಬೆಂಗಳೂರಿನ ಪ್ರಮುಖ ವಾಣಿಜ್ಯ ಕಚೇರಿ ರಿಯಲ್ ಎಸ್ಟೇಟ್ ಸಂಸ್ಥೆಯಾದ ಬಾಗ್ಮನೆ ಪ್ರಧಾನ ಕಚೇರಿ ಆರ್‌ಐಟಿ ತನ್ನ 3,405 ಕೋಟಿ ರು. ಮೊತ್ತದ ಪ್ರಾಥಮಿಕ ಸಾರ್ವಜನಿಕ ಹೂಡಿಕೆಯೊಂದಿಗೆ ಐಪಿಯೋ ಮೇ 5 ರಿಂದ 7 ರ ವರೆಗೆ ನಡೆಯಲಿದೆ. ಕಂಪನಿ ಪ್ರತಿ ಯೂನಿಟ್‌ಗೆ 95 ರಿಂದ 100 ರು. ದರಪಟ್ಟಿ ನಿಗದಿಪಡಿಸಿದ್ದು, ಕನಿಷ್ಠ 150 ಯೂನಿಟ್‌ಗಳಿಗೆ ಹಾಗೂ ನಂತರ 150ರ ಗುಣಾಕಾರದಲ್ಲಿ ಬಿಡ್ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆ್ಯಂಕರ್ ಹೂಡಿಕೆದಾರರ ಬಿಡ್ ಮೇ 4 ರಂದು ಇರಲಿದೆ ಎಂದು ಸಂಸ್ಥೆಯ ಶಶಾಂಕ್ ಬಾಗ್ಮನೆ ತಿಳಿಸಿದರು.

ಈ ಕುರಿತು ಮಾತನಾಡಿದ ಅವರು, ಈ ಐಪಿಒದಲ್ಲಿ 2,390 ಕೋಟಿ ರು. ಮೌಲ್ಯದ ಹೊಸ ಯೂನಿಟ್‌ಗಳ ಬಿಡುಗಡೆ ಹಾಗೂ 1,015 ಕೋಟಿ ರು. ಮೌಲ್ಯದ ಆಫರ್ ಫಾರ್ ಸೇಲ್ ಒಳಗೊಂಡಿದೆ. ಒಎಫ್‌ಎಸ್ ಭಾಗವನ್ನು ಬ್ಲಾಕ್‌ಸ್ಟೋನ್ ಸಂಸ್ಥೆ ಅಂಗ ಸಂಸ್ಥೆ ಮಾರಾಟ ಮಾಡುತ್ತಿದೆ. ಕಂಪನಿಯು 850 ಕೋಟಿ ರು. ಮೌಲ್ಯದ 8.5 ಕೋಟಿ ಯುನಿಟ್‌ಗಳಿಗೆ ತಂತ್ರಜ್ಞಾನ ಹೂಡಿಕೆ ದಾರರೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಪ್ರಮುಖ ಹೂಡಿಕೆದಾರರಾಗಿ ಯುಟಿಐ ಮ್ಯೂ ಚುಯಲ್ ಫಂಡ್, ಆಕ್ಸಿಸ್ ಮ್ಯಾಕ್ಸ್ ಲೈಫ್ ಇನ್ಶುರೆನ್ಸ್, ಐ ಸಂಯೋಜನೆ ಪಿಂಚಣಿ ನಿಧಿ ನಿರ್ವಹಣೆ, ಸ್ಟಾರ್ ಹೆಲ್ತ್ ಮತ್ತು ಅಲೈಡ್ ವಿಮೆ ಮತ್ತು ಕೊಟಕ್ ಮಹೀಂದ್ರಾ ಲೈಫ್ ಇನ್ಶುರೆನ್ಸ್ ಸೇರಿದಂತೆ ಹಲವು ಸಂಸ್ಥೆಗಳು.

ಸಂಗ್ರಹವಾಗುವ ಮೊತ್ತವನ್ನು ಬೆಂಗಳೂರಿನ ಬಾಗ್ಮನೆ ಕ್ಯಾಪಿಟಲ್ ಟೆಕ್ ಪಾರ್ಕ್ ಕಟ್ಟಡ ಹಾಗೂ ಬಾಗ್ಮನೆ ರಿಯೋ ಬಿಜಿನೆಸ್ ಪಾರ್ಕ್ ನಲ್ಲಿ ಶೇ. 93 ಪಾಲು ಸ್ವಾಧೀನಕ್ಕೆ ಬಳಸಲಾ ಗುವುದು. ಆರ್‌ಇಐಟಿ ನಿಯಮಾವಳಿಗಳ ಪ್ರಕಾರ, ಐಪಿಒದಲ್ಲಿ ಶೇ. 75 ಸಾಂಸ್ಥಿಕ ಹೂಡಿಕೆದಾರರಿಗೆ ಮತ್ತು ಕನಿಷ್ಠ ಶೇ.25 ನ್ಯಾನ್-ಇನ್‌ಸ್ಟಿಟ್ಯೂಷನಲ್ ಹೂಡಿಕೆದಾರರಿಗೆ ಹಂಚಿಕೆ ಮಾಡಲಾಗಿದೆ. ಆರ್‌ಇಐಟಿ ಯೂನಿಟ್‌ಗಳನ್ನು ಬಿಎಸ್‌ಇ ಮತ್ತು ಎನ್‌ಎಸ್‌ಇ ನಲ್ಲಿ ಪಟ್ಟಿ ಮಾಡುವ ಯೋಜನೆ ಇದೆ ಎಂದರು.

ಡಿಜಿಟಲ್ ಇ ನೋಂದಣಿ: ಭಾರೀ ವಿವಾದ

ಬೆಂಗಳೂರು: ರಾಜ್ಯದಲ್ಲಿ ಜಾರಿಗೊಂಡಿರುವ ಪೇಪರ್‌ಲೆಸ್ ಡಿಜಿಟಲ್ ಇ-ನೋಂದಣಿ ವ್ಯವಸ್ಥೆ ಇದೀಗ ಭಾರೀ ವಿವಾದಕ್ಕೆ ಕಾರಣವಾಗಿದ್ದು, ಸಾಮಾನ್ಯ ಜನರ ಆಸ್ತಿ ಭದ್ರತೆ ಗಂಭೀರ ಅಪಾಯಕ್ಕೆ ಸಿಲುಕಿದೆ. ವಿಶ್ವಾಸಾರ್ಹವಲ್ಲದ ಈ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಗಿ ಪಡೆದ (ದಸ್ತು)ಪತ್ರ ಬರಹಗಾರರ ಒಕ್ಕೂಟ ಎಚ್ಚರಿಕೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ವಿ.ಏಕಕೋಟೆ, ಈ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪದೋಷಗಳಿದ್ದು, ಜನ ಸಾಮಾ ನ್ಯರ ಆಸ್ತಿ ರಕ್ಷಣೆಗೆ ಗಂಭೀರ ಸವಾಲು ಎದುರಾಗಿದೆ. ತಾಂತ್ರಿಕ ದೋಷಗಳು, ಭದ್ರತಾ ಕೊರತೆ ಹಾಗೂ ಪಾರದರ್ಶಕತೆಯ ಅಭಾವ ದಿಂದ ಈ ವ್ಯವಸ್ಥೆ ಭೂಮಾಫಿಯಾ ಮತ್ತು ಹ್ಯಾಕರ್‌ಗಳಿಗೆ ನೆರವಾಗಲಿದೆ. ಇ-ನೋಂದಣಿ ಬಳಿಕ ಖರೀದಿದಾರರಿಗೆ ಯಾವುದೇ ಭೌತಿಕ ದಾಖಲೆಗಳನ್ನು ನೀಡುತ್ತಿಲ್ಲ. ಡಿಜಿಟಲ್ ಲಾಕರ್‌ನಲ್ಲೇ ದಾಖಲೆಗಳು ಉಳಿಯುತ್ತಿ ರುವುದರಿಂದ ಜನರಿಗೆ ತಮ್ಮ ಆಸ್ತಿಯ ನಿಖರ ದಸ್ತಾವೇಜುಗಳು ದೊರೆಯುವುದಿಲ್ಲ ಎಂದರು.

ಆಸ್ತಿ ಬಗ್ಗೆ ವಾರಸುದಾರರಿಗೆ ಮಾಹಿತಿಯೇ ಇರುವುದಿಲ್ಲ. ಆಸ್ತಿ ಕಳೆದುಕೊಳ್ಳುವ ಭೀತಿ ಎದುರಾಗಿದೆ. ಆಸ್ತಿ ಖರೀದಿ ಬಗ್ಗೆ ಕುಟುಂಬ ಸದಸ್ಯರಿಗೆ ಸ್ಪಷ್ಟ ಮಾಹಿತಿ ಸಿಗದಿರುವುದರಿಂದ ಮುಂದಿನ ದಿನಗಳಲ್ಲಿ ಆಸ್ತಿಗಳು ಕೈತಪ್ಪುವ ಕಳವಳ ಹೆಚ್ಚಾಗಿದೆ. ಇ-ಸಹಿ ದುರುಪಯೋಗವಾಗಲಿದ್ದು, ಮೋಸಕ್ಕೆ ಅವಕಾಶ ವಾಗಲಿದೆ. ಭೌತಿಕ ಸಹಿಯ ಬದಲು ಇ-ಸಹಿ ಯನ್ನು ಬಳಸುವುದರಿಂದ ಹಿರಿಯ ನಾಗರಿಕರು, ಅಕ್ಷರಜ್ಞಾನದ ಕೊರತೆಯವರು ಮೋಸಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ನವೀನ್ ಕುಮಾರ್, ಸಹ ಕಾರ್ಯದರ್ಶಿಗಳಾದ ಕರಿಬಸಪ್ಪ ಬಳ್ಳಿ, ಕೃಷ್ಣಮೂರ್ತಿ, ಖಜಾಂಚಿಗಳಾದ ಡಿ.ಆರ್.ಗಿರಿರಾಜು, ಕೆ.ಗಂಗಾಧರ್, ಸಂಚಾಲಕರಾದ ರಾಜಶೇಖರ್, ನಿರ್ದೇಶಕರುಗಳಾದ ಕೇಶವಮೂರ್ತಿ, ನಾಗರಾಜ್ ಟಿ, ಜಿ.ಲಕ್ಷ್ಮಣ್, ಜಯಕುಮಾರ್ ಇದ್ದರು.

ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿ ಉದ್ದೇಶಿಸಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ವಿ. ಏಕಕೋಟೆ ಮಾತನಾಡಿದರು.

ಕಾವೇರಿ ತಂತ್ರಾಂಶ ಭದ್ರತೆ ಇಲ್ಲ: ಒಕ್ಕೂಟ ಆರೋಪ

ಬೆಂಗಳೂರು: ಕಾವೇರಿ ತಂತ್ರಾಂಶದ ಮೂಲಕ ಪೇಪರ್‌ಲೆಸ್ ಡಿಜಿಟಲ್ ನೋಂದಣಿ ಜಾರಿಗೆ ಬಂದಿದ್ದು , ಇದರಿಂದ ಸಾರ್ವಜನಿಕರ ಆಸ್ತಿ ದಾಖಲಾತಿಗೆ ಭದ್ರತೆ ಇಲ್ಲದಂತಾಗಿದೆ ಎಂದು ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಿಗೆ ಪಡೆದ ಪತ್ರ ಬರಹಗಾರರ ಒಕ್ಕೂಟದ ಉಪಾಧ್ಯಕ್ಷ ನವೀನ್ ಕುಮಾರ್.ಎನ್ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ತಿ ನೋಂದಣಿ ಆಗಿರುವ ಬಗ್ಗೆ ಯಾವುದೇ ಭೌತಿಕ ಪತ್ರಗಳನ್ನು ಖರೀದಿದಾರರಿಗೆ ನೀಡದೇ ಇರುವುದರಿಂದ ಹಾಗೂ ಡಿಜಿಟಲ್ ಲಾಕರ್‌ನಲ್ಲಿ ಸೇವ್ ಆಗುವುದರಿಂದ ಆಸ್ತಿ ಖರೀದಿದಾರರಿಗೆ ಯಾವುದೇ ನಿಖರವಾದ ಪತ್ರಗಳು, ದಾಖಲೆಗಳು ಸಿಗುವುದಿಲ್ಲ. ಸರಕಾರವು ಕಾವೇರಿ ತಂತ್ರಾಂಶದಡಿ ಪೇಪರ್ ಲೆಸ್ ನೋಂದಣಿ ಕಾರ್ಯವನ್ನು ಯಶಸ್ವಿ ಯಾಗಿದೆ ಎಂದು ತೋರಿಸುವ ಸಲುವಾಗಿ ಪ್ರಾಯೋ ಗಿಕವಾಗಿ ರಾಜ್ಯದ ಅತಿ ಹಿಂದುಳಿದ ಹಾಗೂ ಅತಿ ಕಡಿಮೆ ದಸ್ತಾವೇಜುಗಳು ನೋಂದಣಿ ಆಗುವ ಜಿಲ್ಲೆಯಾದ ಚಾಮರಾಜನಗರವನ್ನು ಆಯ್ಕೆ ಮಾಡಿ ಕೊಂಡು ಯಶಸ್ವಿ ಎಂದು ಜಾರಿಗೆ ತರಲು ಮುಂದಾ ಗಿರುವುದು ದುರಂತವಾಗಿದೆ. ಆಸ್ತಿ ಖರೀದಿಸಿದವರಿಗೆ ಯಾವುದೇ ಪತ್ರಗಳು ಸಿಗದೇ ಇರುವುದರಿಂದ ಮುಂದೆ ಅವರ ವಾರಸುದಾರರಿಗೆ ಸಹಾ ಆಸ್ತಿ ಖರೀದಿಸಿರುವ ಬಗ್ಗೆ ಮಾಹಿತಿ ಇರುವುದಿಲ್ಲ.

ಇಂತಹ ಸಂದರ್ಭಗಳಲ್ಲಿ ಆಸ್ತಿಗಳು ಕುಟುಂಬದ ವಾರಸು ದಾರರಿಗೆ ಕೈತಪ್ಪಿ ಹೋಗುವ ಸಂಭವ ಹೆಚ್ಚಾಗಿ ಇರುತ್ತದೆ ಎಂದರು. ಈ ವೇಳೆ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಸಹ ಕಾರ್ಯದರ್ಶಿ ಕೃಷ್ಣಮೂರ್ತಿ, ವಿನೋದಗೌಡ ಸಿ ಪಾಟೀಲ್ ಸೇರಿದಂತೆ ಮತ್ತಿತರರು ಇದ್ದರು.

ಮೂರು ಪ್ರಕರಣಗಳಲ್ಲಿ 450 ಎಕರೆ ಭೂಮಿ ಸ್ವಾಧೀನಕ್ಕೆ ಎಪಿಎಂಸಿ ಆದಾಯದಿಂದಲೇ 410 ಕೋಟಿ ರು. ಪಾವತಿ

ಸುದೀರ್ಘ ಕಾನೂನು ಸಮರದಲ್ಲಿ ಎಪಿಎಂಸಿ ಪರ ತೀರ್ಪು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮೂರು ಭೂಸ್ವಾಧೀನ ಪ್ರಕರಣಗಳ ಸುದೀರ್ಘ ಕಾನೂನು ಸಮರದಲ್ಲಿ ಎಪಿಎಂಸಿ ಪರ ತೀರ್ಪು ಬಂದಿದ್ದು, ಎಪಿಎಂಸಿ ಆದಾಯದ ಮೂಲದಿಂದಲೇ 410 ಕೋಟಿ ರು. ಪರಿಹಾರ ಧನ ಪಾವತಿ ಮಾಡಿ 450 ಎಕರೆ ಭೂಮಿ ಸ್ವಾಧೀನಕ್ಕೆ ಪಡೆಯಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಸರಕಾರ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದಿದ್ದ ಪರಿಣಾಮ ಬಹುತೇಕ ಎಪಿಎಂಸಿಗಳು ದುಸ್ಥಿತಿ ತಲುಪಿದ್ದವು. ಎಪಿಎಂಸಿ ಆಸ್ತಿಗಳು ಕೈತಪ್ಪಿ ಹೋಗುವ ಪರಿಸ್ಥಿತಿ ಇತ್ತು. ಇಲಾಖೆ ಸಚಿವನಾದ ಬಳಿಕ ಎಪಿಎಂಸಿಗಳಿಗೆ ಪುನಶ್ಚೇತನ ನೀಡಿ ಆಸ್ತಿಗಳ ರಕ್ಷಣೆ ಮಾಡಲು ಹಾಗೂ ರೈತಸ್ನೇಹಿ ಮಾರುಕಟ್ಟೆ ನಿರ್ಮಿಸಲು ಒತ್ತು ನೀಡಲಾಗಿದೆ ಎಂದರು.

ಇದರ ಪರಿಣಾಮವಾಗಿ ಮೂರೂ ಭೂಸ್ವಾಧೀನ ಪ್ರಕರಣಗಳಲ್ಲಿ ಎಪಿಎಂಸಿ ಪರ ತೀರ್ಪು ಬಂದಿದ್ದು, ಮೆಗಾ ಮಾರುಕಟ್ಟೆ ನಿರ್ಮಾಣ ಸೇರಿದಂತೆ ಉದ್ದೇಶಿತ ಯೋಜನೆಗಳನ್ನು ಕೈಗೊಳ್ಳಲು ಇದ್ದ ಅಡ್ಡಿ ನಿವಾರಣೆಯಾಗಿದೆ. ಮೆಗಾ ಮಾರ್ಕೆಟ್ ನಿರ್ಮಾಣ ಉದ್ದೇಶಕ್ಕೆ 1994ರಲ್ಲಿ ಯಶವಂಪುರ ಎಪಿಎಂಸಿಯಿಂದ ಶ್ರೀಗಂಧ ಕಾವಲು ಗ್ರಾಮದ 172 ಎಕರೆ 22 ಗುಂಟೆ ಹಾಗೂ ಇದಕ್ಕೆ ಹೊಂದಿಕೊಂಡ ಹೇರೋಹಳ್ಳಿ ಗ್ರಾಮದ 100 ಎಕರೆ 11 ಗುಂಟೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಜಮನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್ ಭೂಸ್ವಾಧೀನವನ್ನು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿತ್ತು. ಹೈಕೋರ್ಟ್‌ನಲ್ಲಿ ಎಪಿಎಂಸಿ ಪರವಾಗಿ ತೀರ್ಪು ಬಂದಿದ್ದು, ಸುಪ್ರೀಂ ಕೋರ್ಟ್ ಮೇಲ್ಮನವಿ ಸಲ್ಲಿಸಿದ್ದರು. ಕಳೆದ ವಾರ ಸುಪ್ರೀಂ ಕೋರ್ಟ್‌ನಲ್ಲೂ ಎಪಿಎಂಸಿ ಪರವಾಗಿ ತೀರ್ಪು ಬಂದಿದೆ. ಭೂಸ್ವಾಧೀನ ಪರಿಹಾರಕ್ಕೆ 186 ಕೋಟಿ ರು. ಪಾವತಿಸಲಾಗಿದೆ ಎಂದರು.

ಹಣ್ಣು, ಹೂವು ಮತ್ತು ತರಕಾರಿ ಮಾರುಕಟ್ಟೆ ನಿರ್ಮಾಣಕ್ಕಾಗಿ 2003ರಲ್ಲಿ ಸರ್ಜಾಪುರ ಹೋಬಳಿಯ ಗೂಳಿಮಂಗಲದಲ್ಲಿ 42 ಎಕರೆ 31 ಗುಂಟೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಈ ಪ್ರಕರಣವೂ ನ್ಯಾಯಾಲಯಗಳಲ್ಲಿ ವಿಚಾರಣೆಗೊಂಡು ಇತ್ತೀಚೆಗೆ ಎಪಿಎಂಸಿ ಪರ ತೀರ್ಪು ಬಂದಿದೆ. ಈ ಹಿನ್ನೆಲೆಯಲ್ಲಿ 211.37 ಕೋಟಿ ರು.ಪಾವತಿಸಲಾಗಿದೆ. ಜತೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕೆ 2012ರಲ್ಲಿ 136 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಪ್ರಕರಣದಲ್ಲಿ ಹೈಕೋರ್ಟ್ ಎಪಿಎಂಸಿ ಪರ ತೀರ್ಪು ನೀಡಿದ್ದು, 12 ರು. ಕೋಟಿ ಪರಿಹಾರಧನ ಪಾವತಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಮಾತನಾಡಿದರು.

ಈಗ ಎಪಿಎಂಸಿ ಸ್ವಾಧೀನಕ್ಕೆ ಪಡೆದಿರುವ ಶ್ರೀಗಂಧ ಕಾವಲು ಮತ್ತು ಹೇರೋಹಳ್ಳಿಯಲ್ಲಿ ಮೆಗಾ ಮಾರುಕಟ್ಟೆ, ಗೂಳಿ ಮಂಗಲದಲ್ಲಿ ಹಣ್ಣು, ಹೂವು, ತರಕಾರಿ ಮಾರುಕಟ್ಟೆ ಹಾಗೂ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಿಸಲು ಯೋಜನೆ ರೂಪಿಸಲಾಗಿದ್ದು, ಭೂಸ್ವಾಧೀನ ಪ್ರಕರಣಗಳಲ್ಲಿ ತೀರ್ಪು ನಮ್ಮ ಪರವಾಗಿ ಬಂದಿರುವುದರಿಂದ ಈ ಯೋಜನೆಗಳನ್ನು ಕೈಗೊಳ್ಳಲು ಇದ್ದ ಅಡ್ಡಿ ನಿವಾರಣೆಯಾಗಿದೆ .
-ಶಿವಾನಂದ ಪಾಟೀಲ, ಕೃಷಿ ಮಾರುಕಟ್ಟೆ ಸಚಿವ

ದಾಸನಪುರ ಎಪಿಎಂಸಿಗೆ ಬಿಎಂಟಿಸಿ ಭೂಮಿ

ದಾಸನಪುರ ಎಪಿಎಂಸಿಗೆ ಹೊಂದಿಕೊಂಡಿರುವ ಬಿಎಂಟಿಸಿಗೆ ಸೇರಿದ 12 ಎಕರೆ ಭೂಮಿಯನ್ನು ಬಾಡಿಗೆ ಆಧಾರದ ಮೇಲೆ ನೀಡಲು ಸಚಿವ ಸಂಪುಟ ಅನುಮೋದನೆ ನೀಡಿದೆ. ಯಶವಂತಪುರ ಮಾರುಕಟ್ಟೆಯಿಂದ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ ಮತ್ತು ಶುಂಠಿ ವಹಿವಾಟನ್ನು ದಾಸನಪುರಕ್ಕೆ ಸ್ಥಳಾಂತರಿಸುವ ಯೋಜನೆ ರೂಪಿಸಲಾಗಿದ್ದು, ಇದರಿಂದ ಟ್ರಾಫಿಕ್ ಸಮಸ್ಯೆ ಕಡಿಮೆಯಾಗಲಿದೆ. ಉತ್ತರ ಕರ್ನಾಟಕದಿಂದ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳು ಆಗಮಿಸುವ ಹಿನ್ನೆಲೆ, ದಾಸನಪುರ ಮಾರುಕಟ್ಟೆ ಅಭಿವೃದ್ಧಿಗೆ ಇದು ನೆರವಾಗಲಿದೆ ಎಂದು ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಮೋತಿ ಕಾರ್ಯಕ್ರಮ ಇಂದು

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವತಿಯಿಂದ ಸಮುದಾಯ ಶ್ವಾನಗಳ ದತ್ತು ಸ್ವೀಕಾರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮೋತಿ ಕಾರ್ಯಕ್ರಮ ಮೇ 3ರಂದು ಬೆಳಗ್ಗೆ 7 ರಿಂದ 11 ಗಂಟೆಯವರೆಗೆ ನಗರದ ಕಬ್ಬನ್ ಪಾರ್ಕ್‌ನಲ್ಲಿ ಆಯೋಜಿಸಲಾಗಿದೆ ಎಂದು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದರು.

ಈ ಕುರಿತು ಮಾತನಾಡಿದ ಅವರು, ನಗರದಲ್ಲಿ ಸಹಾನುಭೂತಿ ಮತ್ತು ಜವಾಬ್ದಾರಿಯುತ ಸಹಜೀವನವನ್ನು ಬೆಳೆಸುವ ಉದ್ದೇಶದಿಂದ ರೂಪಿಸಲಾದ ಮೋತಿ ಕಾರ್ಯಕ್ರಮ ಕೇವಲ ಪೋಷ್ಯ ಪ್ರಾಣಿಗಳ ಕಾರ್ಯಕ್ರಮವಲ್ಲ, ಬದಲಾಗಿ ನಾಗರಿಕ ಚಳವಳಿಯಾಗಿದೆ. ಸಮುದಾಯದ ಶ್ವಾನಗಳನ್ನು ದತ್ತು ಪಡೆದುಕೊಳ್ಳುವ ಮೂಲಕ ಮಾನವ ಮತ್ತು ಪ್ರಾಣಿಗಳ ನಡುವಿನ ನಂಬಿಕೆ ಹಾಗೂ ಒಳಗೊಳ್ಳುವಿಕೆಯನ್ನು ಹೆಚ್ಚಿಸುವುದು ಇದರ ಪ್ರಮುಖ ಗುರಿಯಾಗಿದೆ. ಕಾರ್ಯಕ್ರಮದಲ್ಲಿ ದತ್ತು ಸ್ವೀಕಾರ ಅಭಿಯಾನದೊಂದಿಗೆ ವಿವಿಧ ಚಟುವಟಿಕೆಗಳು ನಡೆಯಲಿವೆ. ಪ್ರೀತಿಯ ಮನೆಯನ್ನು ಹುಡುಕುತ್ತಿರುವ ಸಮುದಾಯದ ಡಾಗ್ಸ್‌ಗಳಿಗೆ ಹೊಸ ಮನೆ ಒದಗಿಸುವ ಅವಕಾಶ ಕಲ್ಪಿಸಲಾಗಿದ್ದು, ದತ್ತು ಸ್ವೀಕಾರದ ವೇಳೆ ಅಗತ್ಯ ಲಸಿಕೆಗಳನ್ನು ನೀಡಿ, ಆಹಾರ, ಕುತ್ತಿಗೆ ಪಟ್ಟಿ ಹಾಗೂ ಚೈನ್ ಒಳಗೊಂಡ ಕಿಟ್ ವಿತರಿಸಲಾಗುತ್ತದೆ.

ಜತೆಗೆ ಡಾಗ್ ಥಾನ್ ಸಂಕೇತಾತ್ಮಕ ನಡಿಗೆ, ಲೀಫ್ ಆಫ್ ಚೇಂಜ್ ಉಪಕ್ರಮದಡಿ ಸ್ವಯಂಸೇವಕರ ನೋಂದಣಿ, ಮಕ್ಕಳಿಗಾಗಿ ಪೇಂಟ್ ವಿತ್ ಪಪ್ಪೀಸ್ ಚಿತ್ರಕಲೆ ಚಟುವಟಿಕೆಗಳು ಹಾಗೂ ಕವನ, ಕಥನ, ಕಲಾತ್ಮಕ ಅಭಿವ್ಯಕ್ತಿಗಳಿಗೆ ವೇದಿಕೆ ಒದಗಿಸಲಾಗಿದೆ. ದತ್ತು ಸ್ವೀಕಾರ, ಸ್ಟೆರಿಲೈಸೇಶನ್, ಜವಾಬ್ದಾರಿಯುತ ಆಹಾರ ಪೂರೈಕೆ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ ಕುರಿತು ಜಾಗೃತಿ ಮಳಿಗೆಗಳೂ ಇರಲಿವೆ. ಕ್ಯೂಆರ್ ಕೋಡ್ ಮೂಲಕ ನಾಗರಿಕರು ಮತ್ತು ಸ್ವಯಂಸೇವಕರು ಸುಲಭವಾಗಿ ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಜತೆಗೆ ಪ್ರಾಣಿ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿರುವ ಹೋರಾಟಗಾರರು ಮತ್ತು ಸ್ವಯಂಸೇವಕರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮವೂ ನಡೆಯಲಿದೆ ಎಂದರು.

ಅಧಿಕಾರಿಗಳಿಂದ ರಾಜಕಾರಣಿಗಳ ಓಲೈಕೆ ಸಲ್ಲ

ಕಾನೂನು ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಿ, ಬಜೆಟ್ ಘೋಷಣೆಗಳ ಅನುಷ್ಠಾನ ಕಾರ್ಯದರ್ಶಿಗಳ ಹೊಣೆ: ಸಿಎಂ ಕಿವಿಮಾತು

ಬೆಂಗಳೂರು: ಅಧಿಕಾರಿಗಳು ರಾಜಕಾರಣಿಗಳ ಒತ್ತಡಕ್ಕೆ ಮಣಿಯದೇ, ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಿ, ಸಚಿವರಿಗೆ ಕಾನೂನಿನ ವ್ಯಾಪ್ತಿಯೊಳಗೆ ಸಲಹೆಗಳನ್ನು ನೀಡಿ. ಸರಕಾರಕ್ಕೆ ಒಳ್ಳೆಯ ಹೆಸರು ತರುವುದು ಕಾರ್ಯದರ್ಶಿಗಳ ಮೇಲೆ ನಿಂತಿದೆ. ಆಡಳಿತಕ್ಕೆ ಇನ್ನಷ್ಟು ಚುರುಕು ಮೂಡಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿಧಾನಸೌಧದ ಸಭಾಂಗಣದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ರಾಜಕಾರಣಿಗಳನ್ನು ಓಲೈಕೆ ಮಾಡಲು ಅಧಿಕಾರಿಗಳು ಹೋಗಬಾರದು. ಇದು ಸರ್ವಾಧಿಕಾರಕ್ಕೆ ಹಾದಿ ಮಾಡುತ್ತದೆ. ರಾಜ್ಯದ ಆಡಳಿತ ಸಮರ್ಪಕವಾಗಿ ನಡೆಯಲು ಇಲಾಖಾ ಕಾರ್ಯದರ್ಶಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇದನ್ನು ಸಂವಿಧಾನದಲ್ಲಿಯೇ ಉಲ್ಲೇಖಿಸಲಾಗಿದೆ. ಅಧಿಕಾರಿಗಳು ಯಾವತ್ತೂ ಸರಕಾರಕ್ಕೆ ತಪ್ಪು ಮಾಹಿತಿ ನೀಡಬಾರದು ಹಾಗೂ ತಪ್ಪು ಹಾದಿಗೆ ಎಳೆಯಬಾರದು. ನಮ್ಮ ನಿಲುವುಗಳು, ತೀರ್ಮಾನಗಳು ಯಾವತ್ತೂ ಜನಪರವಾಗಿರಬೇಕು. ಅಧಿಕಾರಿಗಳು 30-35 ವರ್ಷಗಳ ಕಾಲ ಆಡಳಿತ ವ್ಯವಸ್ಥೆಯಲ್ಲಿದ್ದರೆ, ಜನಪ್ರತಿನಿಧಿಗಳು ಕೇವಲ 5 ವರ್ಷಗಳ ಕಾಲ ಮಾತ್ರ ಇರುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚಾಗಿದೆ ಎಂದು ತಾಕೀತು ಮಾಡಿದರು.

ಬಜೆಟ್‌ನಲ್ಲಿ ಮಾಡಿರುವ ಘೋಷಣೆಗಳನ್ನು ಜಾರಿಗೊಳಿಸುವ ಕಾರ್ಯ ಅಧಿಕಾರಿಗಳದ್ದು. ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಿಸಿದ 15 ಘೋಷಣೆಗಳ ಜಾರಿ ಇನ್ನೂ ಆಗಿಲ್ಲ. ಇದಕ್ಕೆ ಯಾರು ಹೊಣೆ?. ಈ ವರ್ಷದ ಬಜೆಟ್‌ನಲ್ಲಿ 218 ಹೊಸ ಘೋಷಣೆಗಳು ಸೇರಿದಂತೆ ಒಟ್ಟಾರೆ 565 ಘೋಷಣೆಗಳನ್ನು ಮಾಡಿದ್ದೇವೆ. ಬಜೆಟ್‌ನ ಎಲ್ಲಾ ಘೋಷಣೆಗಳನ್ನು ಅದೇ ವರ್ಷ ಜಾರಿಗೊಳಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಬಜೆಟ್ ಘೋಷಣೆಗಳು ಯಾವುದೇ ಕಾರಣಕ್ಕೂ ಅನುಷ್ಠಾನಗೊಳ್ಳದೆ ಇರಬಾರದು. ಅನುಷ್ಠಾನದಲ್ಲಿನ ಪ್ರಾಯೋಗಿಕ ತೊಡಕುಗಳನ್ನು ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತರಬೇಕು ಎಂದು ಸೂಚಿಸಿದರು.

ಕಾರ್ಯದರ್ಶಿಗಳೇ ಹೊಣೆಗಾರರು: 2026-27ನೇ ಬಜೆಟ್‌ನಲ್ಲಿನ ಘೋಷಣೆಗಳ ಪೈಕಿ ಕೇವಲ 5 ಘೋಷಣೆಗಳಿಗೆ ಸಂಬಂಧಿಸಿದಂತೆ ಸರಕಾರಿ ಆದೇಶ ಮಾಡಲಾಗಿದೆ. ಮೇ ತಿಂಗಳ ಒಳಗಾಗಿ ಎಲ್ಲಾ ಸರಕಾರಿ ಆದೇಶಗಳನ್ನು ಜಾರಿಗೊಳಿಸಿ, ಅನುಷ್ಠಾನ ಕಾರ್ಯ ಆರಂಭಿಸಬೇಕು. ಇಲ್ಲದಿದ್ದರೆ ಆಯಾ ಕಾರ್ಯದರ್ಶಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ಇಲಾಖೆಗಳ ಯೋಜನೆ ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ವೇಳೆ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಸೇರಿ ಹಲವರಿದ್ದರು.

ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕೆ 11,367 ಕೋಟಿ ರು. ಅನುದಾನ ಬಾಕಿ

ವಿವಿಧ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಲ್ಲಿ 2025-26 ನೇ ಸಾಲಿನಲ್ಲಿ ರಾಜ್ಯ ಸರಕಾರ ತನ್ನ ಪಾಲಿನ 22,768 ಕೋಟಿ ಬಿಡುಗಡೆ ಮಾಡಿದ್ದು, ಕೇಂದ್ರ ಸರಕಾರ 16,729 ಕೋಟಿ ಬಿಡುಗಡೆ ಮಾಡಿದೆ. ಕೇಂದ್ರದಿಂದ 11,367 ರು. ಕೋಟಿ ಅನುದಾನ ಬಿಡುಗಡೆಗೆ ಬಾಕಿಯಿದೆ. ಈ ಅವಧಿಯಲ್ಲಿ ಒಟ್ಟಾರೆ 42,222 ಕೋಟಿ ಲಭ್ಯ ಅನುದಾನವಿದ್ದು, 38,236 ಕೋಟಿ ವೆಚ್ಚ ಮಾಡಲಾಗಿದೆ. ಅನುದಾನವನ್ನು ನಿಗದಿತ ಅವಧಿಯ ಒಳಗಾಗಿ ಖರ್ಚು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು. ಗುತ್ತಿಗೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಎರಡು ಕೋಟಿವರೆಗೆ ಮೀಸಲಾತಿ ಕಲ್ಪಿಸಲಾಗಿದೆ. ವಿವಿಧ ಕಾಮಗಾರಿಗಳನ್ನು ಒಟ್ಟು ಸೇರಿಸಿ ಪ್ಯಾಕೇಜ್ ಮಾಡುವ ಮೂಲಕ ಮೀಸಲಾತಿ ತಪ್ಪಿಸಲು ಅವಕಾಶ ನೀಡಬಾರದು. ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯ ಒಳಗಾಗಿ ಪೂರ್ಣಗೊಳಿಸಬೇಕು. ಕಾಮಗಾರಿ ವಿಳಂಬದಿಂದ ನಿರ್ಮಾಣ ವೆಚ್ಚ ಹೆಚ್ಚಳಕ್ಕೆ ಅವಕಾಶ ಮಾಡಬಾರದು ಎಂದು ಸೂಚಿಸಿದರು.

ಅಧಿಕಾರಕ್ಕೆ ಬಂದ ಬಳಿಕ ರಾಜ್ಯಮಟ್ಟದಲ್ಲಿ ಎರಡು ಜನಸ್ಪಂದನ ಸಭೆಯಲ್ಲಿ ಸ್ವೀಕರಿಸಲಾಗಿದ್ದ 15,334 ಸ್ವೀಕೃತಿಗಳ ಪೈಕಿ 15,295 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಬಾಕಿಯಿರುವ 45 ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಸಾರ್ವಜನಿಕ ಕುಂದುಕೊರತೆಯಡಿ 3,27,052 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, 3,17,576 ವಿಲೇವಾರಿ ಮಾಡಲಾಗಿದೆ. 1828 ಅರ್ಜಿಗಳ ವಿಲೇವಾರಿ ನಿಗದಿತ ಕಾಲಾವಧಿ ಮುಗಿದಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಇದಕ್ಕೆ ಅವಕಾಶ ಮಾಡಬಾರದು. ಇದೇ ರೀತಿ ಸಕಾಲ ಅಡಿ ಸ್ವೀಕರಿಸಲಾಗುವ ಅರ್ಜಿಗಳನ್ನು ಸಹ ಸಕಾಲದಲ್ಲಿಯೇ ವಿಲೇವಾರಿ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಗೂ ಮುನ್ನ ಸಿಎಂ ಸಿದ್ದರಾಮಯ್ಯನವರು ರಾಜ್ಯದ ಎಲ್ಲಾ ಇಲಾಖೆಗಳ ಮಾಹಿತಿ ಯೋಜನೆಗಳ ಪರಿಶೀಲನೆ, ಅನುಮೋದನೆಗಳು, ಯೋಜನೆಗಳ ಸಮನ್ವಯ ಕುರಿತಂತೆ ನೂತನ ಕರ್ನಾಟಕ ಪ್ರಗತಿ ಪೋರ್ಟಲ್ ಹಾಗೂ ಕೈಪಿಡಿಯನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಸೇರಿದಂತೆ ಸರಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರುಗಳು ಪಾಲ್ಗೊಂಡಿದ್ದರು.

ಮಂಜೂರಾತಿ ನೀಡಲಾಗಿರುವ ಹುದ್ದೆಗಳ ಭರ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಆರ್ಥಿಕ ಇಲಾಖೆಯಿಂದ 24,300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ವೃಂದದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ ಬಾಕಿಯಿರುವ 32,132 ಹುದ್ದೆಗಳಿವೆ. ಕೆಲವು ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿ ಪರಿಷ್ಕರಣೆ ಬಾಕಿಯಿದ್ದು, ಇದನ್ನು ಆದಷ್ಟು ಬೇಗನೆ ಮುಗಿಸಬೇಕು.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಸಮಾಚಾರ ಸಣ್ಣದಲ್ಲ

ಮುಖ್ಯಮಾಹಿತಿ ಆಯುಕ್ತರಾಗಿ ಸತ್ಯವತಿ

ಬೆಂಗಳೂರು: ರಾಜ್ಯ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತೆಯಾಗಿ ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿ ಅವರನ್ನು ನೇಮಿಸಿ ರಾಜ್ಯಪಾಲ ಥಾವರ್ ಚಂದ್‌ಗೆಹ್ಲೋತ್ ಅವರು ಶನಿವಾರ ಆದೇಶ ಹೊರಡಿಸಿದ್ದಾರೆ. ಕಳೆದ ವರ್ಷ ಜೂನ್ 30ರಂದು ನಿವೃತ್ತಿ ಹೊಂದಿದ್ದ ಜಿ. ಸತ್ಯವತಿಯವರನ್ನು ರಾಜ್ಯ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರನ್ನಾಗಿ ನೇಮಿಸುವಂತೆ ರಾಜ್ಯ ಸರಕಾರವು ಇತ್ತೀಚೆಗೆ ರಾಜ್ಯಪಾಲರಿಗೆ ಶಿಫಾರಸು ಮಾಡಿತ್ತು. ಈ ಹಿನ್ನೆಲೆಯಲ್ಲಿ ಸರಕಾರದ ಶಿಫಾರಸನ್ನು ರಾಜ್ಯಪಾಲರು ಅಂಗೀಕರಿಸಿದ್ದಾರೆ. 2004ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾದ ಜಿ.ಸತ್ಯವತಿಯವರು, ಕೋಲಾರ, ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಜತೆಗೆ ಬಿಎಂಟಿಸಿಯ ಎಂಡಿ, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿ, ಕರ್ನಾಟಕ ಲೋಕ ಸೇವಾ ಆಯೋಗ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಇದೀಗ ಇವರನ್ನು ರಾಜ್ಯದ ನೂತನ ಮುಖ್ಯ ಮಾಹಿತಿ ಆಯುಕ್ತೆಯಾಗಿ ನೇಮಿಸಲಾಗಿದೆ.

ವಿನಯ್ ಕುಲಕರ್ಣಿ ಶಾಸಕತ್ವ ಅನರ್ಹ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿರುವ ಧಾರವಾಡ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರನ್ನು ಶಾಸಕತ್ವದಿಂದ ಅನರ್ಹಗೊಳಿಸಿ ವಿಧಾನಸಭೆ ಕಾರ್ಯದರ್ಶಿ ಅಧಿಸೂಚನೆ ಹೊರಡಿಸಿದ್ದಾರೆ. ಅನರ್ಹದ ಮೂಲಕ ಕರ್ನಾಟಕ ವಿಧಾನಸಭೆಯಲ್ಲಿ ಒಂದು ಸ್ಥಾನ ತೆರವಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಗೋಕರ್ಣ ಮಹಾಬಲೇಶ್ವರ ದೇಗುಲ ತೆರಿಗೆ ಬಾಕಿ ಶೂನ್ಯ: ವಿಚಾರಣಾ ಆಯುಕ್ತರ ಆದೇಶ

ಬೆಂಗಳೂರು: ಶ್ರೀಸಂಸ್ಥಾನ ಶ್ರೀ ಮಹಾಬಲೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ತೆರಿಗೆ ಬಾಕಿ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯು ಆದೇಶದ ವಿರುದ್ಧ ಸಲ್ಲಿಸಲಾಗಿದ್ದ ಮೇಲ್ಮನವಿ ಪುರಸ್ಕರಿಸಲಾಗಿದ್ದು, ತೆರಿಗೆ ಬಾಕಿ ಶೂನ್ಯ ಎಂಬುದನ್ನು ಆದಾಯ ತೆರಿಗೆ ಇಲಾಖೆಯ ಮೇಲ್ಮನವಿ ವಿಚಾರಣಾ ಆಯುಕ್ತರು ಆದೇಶದಲ್ಲಿ ದೃಢೀಕರಿಸಿದ್ದಾರೆ.

ಮೌಲ್ಯಮಾಪನ ವರ್ಷ 2016-17 ಸಾಲಿಗೆ 13 ಲಕ್ಷ ರು. ಮತ್ತು 2019-20 ನೇ ಸಾಲಿಗೆ 90 ಲಕ್ಷ ರು. ಪಾವತಿಸುವಂತೆ ಆದಾಯ ತೆರಿಗೆ ಇಲಾಖೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಶ್ರೀ ಸಂಸ್ಥಾನ ಮೇಲ್ಮನವಿ ಸಲ್ಲಿಸಿತ್ತು. ದೇವಾಲಯದ ಆಡಳಿತದ ವಿರುದ್ಧದ ಎಲ್ಲಾ ಆದಾಯ ತೆರಿಗೆ ಪ್ರಕರಣಗಳೂ ಮುಕ್ತಾಯಗೊಂಡಿವೆ. ಇದಕ್ಕೂ ಮುನ್ನ 2015-16ನೆಯ ವರ್ಷದ ಪ್ರಕರಣದಲ್ಲಿಯೂ 1.42 ಕೋಟಿ ರು. ತೆರಿಗೆ ಬಾಕಿ ಪ್ರಕರಣದಲ್ಲೂ ದೇವಸ್ಥಾನದ ಆಡಳಿತಕ್ಕೆ ಜಯ ಲಭಿಸಿದೆ.

ಶ್ರೀರಾಮಚಂದ್ರಾಪುರ ಮಠವು ಸರಕಾರದ ಆದೇಶದನ್ವಯ 2008 ರಿಂದ ಶ್ರೀ ಮಹಾಬಲೇಶ್ವರ ದೇವಾಲಯದ ಆಡಳಿತವನ್ನು ಪುನಃ ವಹಿಸಿಕೊಂಡಿತ್ತು ಹಾಗೂ ಸುಪ್ರೀಂ ಮಧ್ಯಂತರ ತೀರ್ಪಿನ ಅನ್ವಯ 08.05.2021 ರಂದು ಮೇಲುಸ್ತುವಾರಿ ಸಮಿತಿಗೆ ಶ್ರೀಮಠದಿಂದ ಆಡಳಿತವು ಹಸ್ತಾಂತರಿಸಲ್ಪಟ್ಟಿದೆ. ಶ್ರೀ ರಾಮಚಂದ್ರಾಪುರ ಮಠವು ಸುಮಾರು 13 ವರ್ಷಗಳ ಕಾಲ ಶ್ರೀಸಂಸ್ಥಾನ ಮಹಾಬಲೇಶ್ವರ ದೇವಾಲಯದ ಆಡಳಿತವನ್ನು ನಿರ್ವಹಿಸಿದ್ದು, ಪ್ರತಿ ವರ್ಷ ಲೆಕ್ಕಪರಿಶೋಧನೆ ನಡೆಸಿ, ಸುವ್ಯವಸ್ಥಿತವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸಿ- ಸುಭದ್ರವಾಗಿ ದಾಖಲೀಕರಣ ಮಾಡಿದೆ.

ಪಾರದರ್ಶಕ ಆಡಳಿತಕ್ಕಾಗಿ ಐಎಸ್‌ಒ ಪ್ರಮಾಣ ಪತ್ರ

ದೇವಾಲಯದಲ್ಲಿ ಶ್ರೀಮಠದ ಸುವ್ಯವಸ್ಥಿತ-ಸುಭದ್ರ ಹಾಗೂ ಪಾರದರ್ಶಕ ಆಡಳಿತಕ್ಕಾಗಿ ಅಂತಾರಾಷ್ಟ್ರೀಯ ಪ್ರಮಾಣಪತ್ರವೂ ಲಭಿಸಿದೆ. ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾ ಸ್ವಾಮಿಗಳ ಮಾರ್ಗದರ್ಶನದಲ್ಲಿ ಮಠದ ಆಡಳಿತದ ಅವಧಿಯಲ್ಲಿ ದೇವಹಿತ ಭಕ್ತಹಿತ ಸೇವಕಹಿತ ಎಂಬ ಮೂರು ಅಂಶಗಳನ್ನು ಪ್ರಧಾನವಾಗಿ ಇರಿಸಿಕೊಂಡು ಸಂಸ್ಥಾನ ಶ್ರೀಮಹಾಬಲೇಶ್ವರ ದೇವಾಲಯದ ಆಡಳಿತ ವನ್ನು ಸುವ್ಯವಸ್ಥಿತ ಹಾಗೂ ಪಾರದರ್ಶಕಗೊಳಿಸಲಾಗಿತ್ತು.

ಯಡಿಯೂರಪ್ಪಗೆ ಸಂತೋಷ್ ಸಂದೇಶ?

← ಮೊದಲಪುಟದಿಂದ

ಭೇಟಿಯ ವೇಳೆ ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಪಯಣದ ಕುರಿತು ಆತ್ಮೀಯವಾಗಿ ಸಂತೋಷ್ ಶುಭ ಾಶಯ ಸಲ್ಲಿಸಿದ್ದಾರೆ. ಸಂತೋಷ್ ಅವರ ಸಂಘಟನಾ ಸಾಮರ್ಥ್ಯ, ಚತುರತೆ ಪ್ರತಿಯೊಬ್ಬ ಕಾರ್ಯಕರ್ತನಿಗೂ ಸ್ಫೂರ್ತಿಯ ಸೆಲೆಯಾಗಿದೆ ಎಂದು ಯಡಿಯೂರಪ್ಪ ತಿಳಿಸಿದ್ದಾರೆ. ರಾಜ್ಯದ ಕಾಂಗ್ರೆಸ್ ಸರಕಾರದಲ್ಲಿ ನಾಯಕತ್ವಕ್ಕೆ ಸಂಬಂಧಿಸಿದಂತೆ ಕೆಲ ಗೊಂದಲಗಳಿವೆ. ಇದೇ ವೇಳೆಯಲ್ಲಿ ಎಐಸಿಸಿ ಅಧ್ಯಕ್ಷ ಖರ್ಗೆ ಹೇಳಿಕೆಗಳೂ ಕೂಡ ಪ್ರಬಲ ವಾಗಿಲ್ಲದೆ, ತಾವೂ ಆಕಾಂಕ್ಷಿಯಾಗಿರುವ ಆಸೆ ವ್ಯಕ್ತಪಡಿಸುತ್ತಲೇ ಸಿಎಂ ಬದಲಾವಣೆಗೆ ಕಾಲಕೂಡಿ ಬಂದಿಲ್ಲ ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಿದ್ದಾರೆ. ಈ ಬೆಳವಣಿಗೆಗಳ ಮಧ್ಯೆಯೇ ಬೆಂಗಳೂರು ನಗರದ ಅಭಿವೃದ್ಧಿ ಸಂಬಂಧ ಪ್ರಮುಖವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಸೇರಿ ಇತರೆ ಕೇಂದ್ರ ಸಚಿವರು ಹಾಗೂ ವಿವಿಧ ರಾಜ್ಯಗಳ ಚುನಾವಣೆ ಬಗ್ಗೆ ಹೈಕಮಾಂಡ್ ನಾಯಕರನ್ನು ಭೇಟಿಯಾಗಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್, ಅಲ್ಲಿಂದ ಬರುತ್ತಲೇ ಯಾವಾಗ ಏನು ಆಗಬೇಕೋ ಆಗುತ್ತದೆ, ಈ ವಿಚಾರವಾಗಿ ಮಾತನಾಡ ಲಾರೆ, ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ ಎಂದು ಮಾರ್ಮಿಕವಾಗಿ ಉತ್ತರಿಸಿದ್ದರು. ಬಿಎಸ್‌ವೈ ಹಾಗೂ ಸಂತೋಷ್ ಅವರ ಭೇಟಿಯ ವೇಳೆಯಲ್ಲಿ ಪ್ರಸ್ತುತ ರಾಜ್ಯ ರಾಜಕಾರಣದ ಬಗ್ಗೆ ಇಬ್ಬರೂ ಹಿರಿಯ ನಾಯಕರು ಚರ್ಚಿಸಿರುವ ವಿಚಾರ ಈಗ ಕುತೂಹಲ ಮೂಡಿಸಿದೆ.

ಯಡಿಯೂರಪ್ಪ ಅಭಿಮಾನೋತ್ಸವಕ್ಕೆ ಯಾವುದೇ ರಾಜಕೀಯ ಬಣ್ಣ ಕಟ್ಟಬೇಡಿ. ಚುನಾವಣೆ ಆರು ತಿಂಗಳು ಇರುವಾಗ ಈ ಕಾರ್ಯಕ್ರಮ ಆಯೋಜಿಸಿದರೆ ಲಾಭವಾಗಲಿದೆ ಎಂದು ಹೇಳಬಹುದಿತ್ತು. ಆದರೆ ಅಂತಹ ಯಾವುದೇ ಲಾಭ ಪಡೆಯುವ ಉದ್ದೇಶವಿಲ್ಲ. ಆದರೆ ಸಿದ್ದರಾಮಯ್ಯ ಮತ್ತು ಡಿಕೆಶಿ ಅವರು ನಡುವೆ ಮಲ್ಲಿಕಾರ್ಜುನ ಖರ್ಗೆ ಅವರು ಸಿಎಂ ಸ್ಥಾನಕ್ಕೆ ಟವೆಲ್ ಹಾಕಿ ಕೂತಿದ್ದಾರೆ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸಾರಿಗೆ ಜಟಾಪಟಿ: ಮೇ 20 ಮತ್ತೆ ಸಿಬ್ಬಂದಿ ಮುಷ್ಕರ

← ಮೊದಲಪುಟದಿಂದ

ಆದರೆ ಇದಕ್ಕೆ ನೌಕರರು ಒಪ್ಪಿಕೊಂಡಿಲ್ಲ. 38 ತಿಂಗಳ ವೇತನ ಬಾಕಿ ನೀಡಬೇಕು. 2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಶೇ.25ರಷ್ಟು ವೇತನ ಹೆಚ್ಚಳ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸಬೇಕು ಎಂದು ಸಚಿವರಿಗೆ ಮನವಿ ಮಾಡಿದೆವು. ಅವರು ಶೇ.7ರಷ್ಟು ವೇತನ ಹೆಚ್ಚಳ ಮಾಡುವುದಾಗಿ, 2025ರ ಏಪ್ರಿಲ್ 1ರಿಂದ ಪರಿಗಣಿಸುವುದಾಗಿ ಹೇಳಿದರು. ಹಾಗಾಗಿ, ಮಾತುಕತೆ ಫಲಪ್ರದವಾಗಲಿಲ್ಲ ಎಂದು ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿಗಳು ತಿಳಿಸಿದ್ದಾರೆ.

ಮುಷ್ಕರ ಮಾಡಿದರೆ ಶಿಸ್ತುಕ್ರಮದ ಎಚ್ಚರಿಕೆ: ಜಂಟಿ ಕ್ರಿಯಾ ಸಮಿತಿ ಕರೆ ಕೊಟ್ಟಿರುವ ಪ್ರತಿಭಟನೆಯಲ್ಲಿ ಯಾರೊಬ್ಬರು ಭಾಗಿಯಾಗಬಾರದೆಂದು ಸಾರಿಗೆ ಇಲಾಖೆ ಎಚ್ಚರಿಕೆ ಕೊಟ್ಟಿದೆ. ನೌಕರರ ಬೇಡಿಕೆಗಳನ್ನು ಈಡೇರಿಸಲು ಸರಕಾರ ಬದ್ಧವಾಗಿದೆ. ಈಗಾಗಲೇ ಹಿಂಬಾಕಿ ವೇತನವನ್ನು ಬಿಡುಗಡೆ ಮಾಡಿದ್ದೇವೆ. ಹಂತಹಂತವಾಗಿ ಬೇಡಿಕೆಗಳನ್ನು ಈಡೇರಿಸುತ್ತೇವೆ. ಏಕಾಏಕಿ ಶೇ.7ರಷ್ಟು ವೇತನ ಹೆಚ್ಚಳ ಹಾಗೂ 38 ತಿಂಗಳ ಬಾಕಿ ವೇತನವನ್ನು ಬಿಡುಗಡೆ ಮಾಡಬೇಕೆಂದು ಒತ್ತಡ ಹೇರಿದರೆ ಸಾಧ್ಯವಿಲ್ಲ. ಸಾರಿಗೆ ಇಲಾಖೆಯ ಆರ್ಥಿಕ ಸ್ಥಿತಿಗತಿ ನೋಡಿಕೊಂಡು ನೌಕರರು ಕಾರ್ಯನಿರ್ವಹಿಸಬೇಕು. ಒಂದು ವೇಳೆ ಸಾರ್ವಜನಿಕರಿಗೆ ತೊಂದರೆ ಕೊಟ್ಟು ಕರ್ತವ್ಯಕ್ಕೆ ಗೈರು ಹಾಜರಾಗಿ ಮುಷ್ಕರದಲ್ಲಿ ಪಾಲ್ಗೊಂಡವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಇಲಾಖೆ ಎಚ್ಚರಿಸಿದೆ.

ವಿಫಲವಾದ 12 ಸುತ್ತಿನ ಸಭೆಗಳು: ವೇತನ ಹೆಚ್ಚಳ ಮತ್ತು ಹಿಂಬಾಕಿ ಪಾವತಿ ಕುರಿತಂತೆ ಸಿಎಂ ಹಾಗೂ ಸಾರಿಗೆ ಸಚಿವರ ನೇತೃತ್ವದಲ್ಲಿ ಈಗಾಗಲೇ 12 ಬಾರಿ ಮಾತುಕತೆ ನಡೆದಿದೆ. ಆದರೆ, ಈ ಎಲ್ಲಾ ಸಭೆಗಳು ವಿಫಲವಾಗಿವೆ. ಸರಕಾರವು 38 ತಿಂಗಳ ಹಿಂಬಾಕಿಯ ಬದಲಾಗಿ ಕೇವಲ 26 ತಿಂಗಳ ಬಾಕಿ ಹಣ ನೀಡಲು ಮುಂದಾಗಿದೆ. ಆದರೆ ನೌಕರರು ಪೂರ್ಣ ಪ್ರಮಾಣದ 38 ತಿಂಗಳ ಬಾಕಿ ನೀಡಲೇಬೇಕು ಎಂದು ಪಟ್ಟು ಹಿಡಿದಿದ್ದಾರೆ. ಆದರೆ ನೌಕರರ ಸಂಘಟನೆಗಳು, ಬೇಡಿಕೆ ಈಡೇರುವವರೆಗೂ ಹೋರಾಟ ಕೈಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿವೆ.

ಮರು ಮತಎಣಿಕೆ: ಟಿ.ಡಿ.ರಾಜೇಗೌಡ ಜಯ

ಚಿಕ್ಕಮಗಳೂರು: ಅತ್ಯಂತ ಕುತೂಹಲ ಕೆರಳಿಸಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ವಿಧಾನಸಭಾ ಚುನಾವಣೆಯ ಅಂಚೆ ಮತಗಳ ಮರು ಎಣಿಕೆ ಕಾರ್ಯ ಮುಕ್ತಾಯಗೊಂಡಿದ್ದು, ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಗೆಲುವು ಸಾಧಿಸಿದ್ದಾರೆ. ಹೈಕೋರ್ಟ್ ಆದೇಶದಂತೆ ಅಂಚೆ ಮತಗಳ ಮರು ಎಣಿಕೆ ಕಾರ್ಯ ಶನಿವಾರ ನಡೆದಿದ್ದು, ಟಿ.ಡಿ. ರಾಜೇ ಗೌಡ ಪ್ರತಿಸ್ಪರ್ಧಿ ಡಿ.ಎನ್. ಜೀವರಾಜ್ ವಿರುದ್ಧ ಜಯಗಳಿಸುವ ಮೂಲಕ ಶಾಸಕ ಸ್ಥಾನ ಭದ್ರಪಡಿಸಿಕೊಂಡಿದ್ದಾರೆ.

ಅಂಚೆ ಮತಗಳ ಮರು ಎಣಿಕೆ: 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ 201 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಬಿಜೆಪಿ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

ಮೊಕದ್ದಮೆ ಕೈಗೆತ್ತಿಕೊಂಡ ಹೈಕೋರ್ಟ್ ಅಂಚೆ ಮತಗಳ ಮರು ಎಣಿಕೆಗೆ ಆದೇಶ ನೀಡಿತ್ತು. ಕೋರ್ಟ್ ಆದೇಶದಂತೆ ಶನಿವಾರ ಅಂಚೆ ಮತಗಳ ಮರು ಎಣಿಕೆ ಮಾಡಲಾಗಿದ್ದು, ಅದರಲ್ಲಿ ಹಾಲಿ ಶಾಸಕ ಟಿ.ಡಿ. ರಾಜೇಗೌಡ ಅವರು ಇನ್ನು 2 ಮತಗಳನ್ನು ಹೆಚ್ಚುವರಿಯಾಗಿ ಪಡೆದಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರ ವಿಜಯೋತ್ಸವ: ಮರು ಮತ ಎಣಿಕೆ ಫಲಿತಾಂಶ ಹೊರ ಬೀಳುತ್ತಿದ್ದಂತೆ ಮತ ಎಣಿಕೆ ಕೇಂದ್ರದ ಬಳಿ ಜಮಾಯಿಸಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಶಾಸಕ ಟಿ.ಡಿ.ರಾಜೇಗೌಡ ಬೆಂಬಲಿಗರು ಕುಣಿದು ಕುಪ್ಪಳಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸತ್ಯಕ್ಕೆ ಜಯ ಸಿಕ್ಕಿದೆ. ಜನಾದೇಶ ಬದಲಿಸಲು ಸಾಧ್ಯವಿಲ್ಲ ಎಂಬ ಘೋಷಣೆಗಳನ್ನು ಕೂಗಿದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಚೇರಿ, ಶಾಂತಿನಗರ, ಬೆಂಗಳೂರು - 560 027.
ಸಂಖ್ಯೆ. ಬೆಮಸಾ/ಕೇಕ/ಕಾಇ/ಕಾನಿಅ/167/2026-27 ದಿನಾಂಕ: 02.05.2026
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 02/2026-27
ಅರ್ಹ ಗುತ್ತಿಗೆದಾರರಿಂದ (1) "ಬೆಂಗಳೂರಿನ ದೊಮ್ಮಲೂರು ಟಿ.ಟಿ.ಎಂ.ಸಿ.ಯಲ್ಲಿ ಬಣ್ಣ ಲೇಪಿಸುವುದು ಹಾಗೂ ಎಕ್ಸ್‌ಪ್ಯಾನ್‌ಷನ್ ಜಾಯಿಂಟ್, ವಾಟರ್ ಪ್ರೂಫೀಂಗ್, ನೀರಿನ ಪೈಪ್, ಒಳಚರಂಡಿ ವ್ಯವಸ್ಥೆ, ರೈಲಿಂಗ್, ಸ್ಟ್ರಕ್ಚರಲ್ ಗ್ಲೇಜಿಂಗ್, ಮತ್ತು ಫಾಲ್ಸ್ ಸೀಲಿಂಗ್ ರಿಪೇರಿ ಕೆಲಸಗಳು ಅಭಿವೃದ್ಧಿ ಕಾಮಗಾರಿಗಳು" **ಟೆಂಡರ್‌ಗಿಟ್ಟ ಮೊತ್ತ ರೂ. 51.00 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 1,02,000/-.** (2) "ಬೆಂಗಳೂರಿನ ಯಲಹಂಕ ನ್ಯೂಟೌನ್ ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳು" **ಟೆಂಡರ್‌ಗಿಟ್ಟ ಮೊತ್ತ ರೂ. 12.75 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 32,000/-.** (3) "ಬೆಂಗಳೂರಿನ ಬನ್ನೇರುಘಟ್ಟ ಟಿ.ಟಿ.ಎಂ.ಸಿ.ಯಲ್ಲಿ ಒಳಚರಂಡಿ ವ್ಯವಸ್ಥೆ, ನೀರಿನ ಪೈಪ್, ಮಳೆ ನೀರಿನ ಪೈಪ್‌ಗಳು, ವಾಟರ್ ಪ್ರೂಫೀಂಗ್ ಮತ್ತು ಎಸಿಪಿ ರಿಪೇರಿ ಹಾಗೂ ಬಣ್ಣಲೇಪಿಸುವ ಕೆಲಸಗಳು" **ಟೆಂಡರ್‌ಗಿಟ್ಟ ಮೊತ್ತ ರೂ. 12.75 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 32,000/-,** ಮತ್ತು (4) "ಬೆಂಗಳೂರಿನ ಯಲಹಂಕ ಓಲ್ಡ್‌ಟೌನ್ ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳು" **ಟೆಂಡರ್‌ಗಿಟ್ಟ ಮೊತ್ತ ರೂ. 8.50 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 22,000/-.** ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಭಾಗವಹಿಸುವ ಗುತ್ತಿಗೆದಾರರು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.
ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 12.05.2026. ಟೆಂಡರ್ ತೆರೆಯುವ ದಿನಾಂಕ: 14.05.2026
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ. ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ
E-mail: ka.kolar.dudc@gmail.com, phone & Fax no: 08152-243555
ಸಂಖ್ಯೆ:ಜಿನಕೋ/ತಾಂತ್ರಿಕ/ಸಿಆರ್/34/2026-27 ದಿನಾಂಕ: 27.04.2026
ಟೆಂಡರ್ ಪ್ರಕಟಣೆ (ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧ್ಯಾದ್ಯೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಟೆಂಡರ್ ಸಲ್ಲಿಕೆಗಾಗಿ ಅಂತರ್ಜಾಲ **http//kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಟೆಂಡರ್ ತಿದ್ದುಪಡಿಗಳನ್ನು ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರವೇ ಪ್ರಚುರಪಡಿಸಲಾಗುತ್ತದೆ. **ಇಂಡೆಂಟ್ ನಂ: DMA/2026-27/IND6208,** Manufacturing, Supplying and Fixing of Dr. BR Ambedkar statue (Approximtely 3500 Kgs) 21 Feet 9 Inches Height x 7 Feet 6 inches width x6 feet side In Deputy Commissioner Office Kolar. **ಟೆಂಡರ್ ಇಟ್ಟ ಮೊತ್ತ ರೂ. 98.00 ಲಕ್ಷ.** ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಇತರೆ ಮಾಹಿತಿ ವೆಬ್‌ಸೈಟ್ ಮೂಲಕ ಪಡೆದುಕೊಳ್ಳುವುದು.
ಸಹಿ/- ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:51/ಕೆಎಸ್‌ಎಂಸಿಎ/2026-27

ಪುರಸಭೆ ಕಾರ್ಯಾಲಯ, ಸೊರಬ 577429
ಶಿವಮೊಗ್ಗ ಜಿಲ್ಲೆ, ಕರ್ನಾಟಕರಾಜ್ಯ, ದೂರವಾಣಿ ಸಂ: 08184-272232,,
e-mail: itstaff_ulb_sorab@yahoo.com,
Web: www.sorabatown.mrc.gov.in
ಸಂಖ್ಯೆ:ಸೊಪುಸ.ಜೆ.ಇ/ಸಿಆರ್/ಟೆಂಡರ್/05/2026-27 ದಿ: 27.04.2026
"ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ)
ಸೊರಬ ಪುರಸಭೆಯ ಉದ್ದಿಮೆ ನಿಧಿ ಅನುದಾನದಡಿ ವಿವಿಧ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಪ್ರಸಕ್ತ ಬ್ಲಾಕ್ ಅವಧಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ಸ್ KW-3 ನಿಯಮದನ್ವಯ ಕೆ.ಪಿ.ಪಿ. ಪೋರ್ಟ್‌ಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟ್‌ಲ್ ಮುಖಾಂತರ ಆಹ್ವಾನಿಸಲಾಗಿದೆ. ಕೆ.ಪಿ.ಪಿ. ಪೋರ್ಟ್‌ಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದು ಭಾಗವಹಿಸಬಹುದಾಗಿದೆ.
ಕ್ರ.ಸಂ. 1. ಇಂಡೆಟ್ ನಂ.: DMA/2025-26/OW/WORK_INDENT56087/CALL-2 **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 75.00 **ಟೆಂಡರ್ ಇ.ಎಂ.ಡಿ:** 126991.00 **ಕಾಲಾವಧಿ:** 6 ತಿಂಗಳು
*) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 11.05.2026 ಸಮಯ: ಸಂಜೆ 5.30 ಗಂಟೆಗೆ *) ಟೆಂಡರ್ ಸಲ್ಲಿಸುವ ಕೊನೆಯ ದಿ: 12.05.2026 ಸಮಯ: ಸಂಜೆ 5.30 ಗಂಟೆವರೆಗೆ. *) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 14.05.2026 ಸಮಯ :ಸಂಜೆ 5.30 ಗಂಟೆಗೆ *) ಆರ್ಥಿಕ ಬಿಡ್ ತೆರೆಯುವ ದಿನಾಂಕ : 15.05.2026 ಸಮಯ : ಸಂಜೆ 5.30 ಗಂಟೆಗೆ
ಸಹಿ/- ಅಧ್ಯಕ್ಷಿಯಾಧಿಕಾರಿ ಪುರಸಭೆ, ಸೊರಬ **ಸಹಿ/- ಮುಖ್ಯಾಧಿಕಾರಿ ಪುರಸಭೆ, ಸೊರಬ**
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/157/04/158

ಕರ್ನಾಟಕ ಸರ್ಕಾರ
ಹುಸ್ಕೂರು ಗ್ರಾಮ ಪಂಚಾಯತ್ ಕಾರ್ಯಾಲಯ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
ಸಂಖ್ಯೆ: ಹು.ಗ್ರಾ.ಪಂ/01/2026-27 ದಿನಾಂಕ: 30.04.2026
ಇ-ಟೆಂಡರ್ ಪ್ರಕಟಣೆ
ಆಡಳಿತ ಅಧಿಕಾರಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹುಸ್ಕೂರು ಗ್ರಾಮ ಪಂಚಾಯತಿಯಲ್ಲಿ 2026-27 ನೇ ಸಾಲಿನ ವರ್ಗ-1/15ನೇ ಹಣಕಾಸು ಯೋಜನೆ / ವಿವಿಧ ಯೋಜನೆಯಡಿ ವಿವಿಧ ಸಾಮಾಗ್ರಿ ಖರೀದಿ/ ಸೇವೆ ಪಡೆಯಲು ಇ-ಟೆಂಡರ್ ಆಹ್ವಾನಿಸಲಾಗಿದೆ ವಿವರ ಕೆಳಗಿನಂತಿದೆ.
1. Procurement of Pump Motors and Allied Accessories--RDPR/2026-27/IND14081. **2**. Procurement of Cleaning Materials--RDPR/2026-27/IND14084. **3**. Procurement of Electrical Items--RDPR/2026-27/IND14080. **4**. Procurement of Stationary items-RDPR/2026-27/IND14085 **5**. Procurement of PVC, CPVC, HDPE Pipes and Electrofusion Fittings for Water Supply Works--RDPR/2026-27/IND14082. **6**.Annual RO Plant Maintainance,Supply and Service--RDPR/2026-27/SE3810. **7**.Procurement of tractor and jcb on Rental Basis for SWM management and other works– RDPR/2026-27/SE3809. **8** Annual Pump and Motor Maintainance Work--RDPR/2026-27/SE3807.
1) ಟೆಂಡರ್ ದಾಖಲಾತಿಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **30.04.2026** ರಿಂದ **14.05.2026 ಸಂಜೆ 16-00** ಗಂಟೆಯ ವರೆಗೆ ಸಲ್ಲಿಸಬಹುದು. ಕೆಲಸದ ಹೆಸರು/ ಪೂರೈಕೆದಾರರ ಅರ್ಹತೆ/ ಟೆಂಡರ್ ನಿಯಮಗಳು/ ಟೆಂಡರ್ ಪ್ರೋಸೆಸ್ಸಿಂಗ್/ಫೀ ಇತ್ಯಾದಿ ವಿವರಗಳಿಗೆ **www.KPPP.karnataka.gov.in** ಮೂಲಕ ಪಡೆಯಬಹುದು.
ಸಹಿ/- ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುಸ್ಕೂರು ಗ್ರಾಮ ಪಂಚಾಯತ್ **ಸಹಿ/ ಆಡಳಿತ ಅಧಿಕಾರಿ ಹುಸ್ಕೂರು ಗ್ರಾಮ ಪಂಚಾಯತ್**
ವಾಸಾಸಂಇ/ವಾಪ್ರ/461/ಶಿರಡಿ ಸಾಯಿ/2026-27

ಕರ್ನಾಟಕ ಸರಕಾರ
ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ
ದೂರವಾಣಿ ಸಂಖ್ಯೆ: 0836-2741277, 0836-2748374,
ಫ್ಯಾಕ್ಸ್ ಸಂಖ್ಯೆ: 0836-2741277,
Email Id : dsdharwad@gmail.com
ಸತ್ಯಮೇವ ಜಯತೇ ಆರೋಗ್ಯವೇ ಭಾಗ್ಯ
ಕ್ರ: ಜಿಆಧಾ/ಎ.ಆರ್.ಎಸ್/03/2026-27 ದಿನಾಂಕ: 02-05-2026
ಟೆಂಡರ್ ಪ್ರಕಟಣೆ
ವಿಷಯ : 2026-2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಇ-ಟೆಂಡರ್ ಆಹ್ವಾನಿಸಿರುವ ಕುರಿತು.
2026-2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಇ-ಟೆಂಡರ್ ಮೂಲಕ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000 ರ ಪ್ರಕಾರ ದ್ವಿ-ಬಿಡ್ **(Technical and Financial)** ಪದ್ಧತಿಯಲ್ಲಿ ಟೆಂಡರ್ (ಇ-ಟೆಂಡರ್) ಆಹ್ವಾನಿಸಲಾಗಿದೆ.
1) ಇ-ಪೋರ್ಟಲ್‌ದಲ್ಲಿ ಅಪ್‌ಲೋಡ್ ಮಾಡುವ **ದಿನಾಂಕ: 22-04-2026 ರಿಂದ 06-05-2026 ರವರೆಗೆ ಸಾಯಂಕಾಲ 4.00 ಗಂಟೆಯವರೆಗೆ** 2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 08-05-2026 ರಂದು 11.30 ಗಂಟೆಗೆ** 3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 11-05-2026 ರಂದು 12.00 ಗಂಟೆಗೆ.**
ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ **(www.kppp.karnataka.gov.in)** ದಿಂದ ಪಡೆಯುಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.
ಸಹಿ/- ಜಿಲ್ಲಾ ಶಸ್ತ್ರ ಚಿಕಿತ್ಸಕರು ಜಿಲ್ಲಾ ಆಸ್ಪತ್ರೆ, ಧಾರವಾಡ
ವಾ.ಸಾ.ಇ./ಧಾರವಾಡ/110/2026-27/ದೇಶಪಾಂಡೆಪಬ್ಲಿಸಿಟಿ

ನಗರಸಭೆ ಕಾರ್ಯಾಲಯ, ಸಿಂಧನೂರು
ಸಂಖ್ಯೆ:ನಕಾಸಿಂ:ತಾಂತ್ರಿಕ:ಇ-ಟೆಂಡರ್:01:2026-27 ದಿನಾಂಕ: 30-04-2026
-:: ಟೆಂಡರ್ ಪ್ರಕಟಣೆ ::-
(ಕೆಪಿಪಿಪಿ ಪೋರ್ಟಲ್ ಮುಖಾಂತರ)
ಸನ್ 2026-27ನೇ ಸಾಲಿನ ನಗರಸಭೆ ನಿಧಿ ಅನುದಾನದಲ್ಲಿ, ಸಿಂಧನೂರು ನಗರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ ನಂ. 01 ರಿಂದ 31 ರ ವರೆಗಿನ ಬೀದಿ ದೀಪಗಳ ನಿರ್ವಹಣೆ ಹಾಗೂ ಕಿರು ನೀರು ಸರಬರಾಜು ನಿರ್ವಹಣೆಯನ್ನು ವಾರ್ಷಿಕವಾಗಿ ನಿರ್ವಹಿಸಲು (ಇಂಡೆಂಟ್ ಸಂಖ್ಯೆ: 57812, 57814) ಕೆ.ಡಬ್ಲೂ-2 ಟೆಂಡರ್ ಡಾಕ್ಯೂಮೆಂಟನ ಷರತ್ತಿಗೊಳಪಟ್ಟು ಅರ್ಹ ನೋಂದಾಯಿತ ಎಲೇಕ್ಟ್ರೀಕಲ್ ಗುತ್ತಿಗೆದಾರರಿಂದ ದರಗಳನ್ನು ಅಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಅರ್ಹ ನೋಂದಾಯಿತ ಎಲೇಕ್ಟ್ರೀಕಲ್ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ತಮ್ಮ ಬಿಡ್ ದರಗಳನ್ನು http://kppp.karnataka.gov.in ವೆಬ್‌ಸೈಟ್‌ನಿಂದ ಡೌನಲೋಡ ಮಾಡಿಕೊಂಡು ದಿನಾಂಕ: 16-05-2026 @5.30 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ. ಸದರಿ ಭರ್ತಿ ಮಾಡಿ ಸಲ್ಲಿಸಲಾದ ಟೆಂಡರ್‌ಗಳನ್ನು ದಿನಾಂಕ: 18-05-2026@10:30ರ ನಂತರ ತೆರೆಯಲಾಗುವುದು ಹೆಚ್ಚಿನ ವಿವರಗಳಿಗೆ ನಗರಸಭೆಯ ವೆಬ್‌ಸೈಟ್ www.sindhanurcity.mrc.gov.in ಮುಖಾಂತರ ಪಡೆದು ಸಲ್ಲಿಸಬಹುದು.
ಸಹಿ/- ಪೌರಾಯುಕ್ತರು ನಗರಸಭೆ ಸಿಂಧನೂರು
DIP/RCR/48/KSMC&A/50/2026-27

ಸಮಾಚಾರ ಸಣ್ಣದಲ್ಲ

ಸಿಡಿಲು ಬಡಿದು 12 ಕುರಿಗಳು ಸಾವು

ಹುಳಿಯಾರು: ಹೋಬಳಿಯ ಹೊಯ್ಸಳಕಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳ್ಳಾರದ ಮೇಗಲ ಗೊಲ್ಲರಹಟ್ಟಿಯಲ್ಲಿ ಶುಕ್ರವಾರ ಸಿಡಿಲು ಬಡಿದು ಮುದ್ದಯ್ಯ ಅವರಿಗೆ ಸೇರಿದ 12 ಕುರಿಗಳು ಮೃತಪಟ್ಟಿವೆ. ಬೆಳ್ಳಾರ ಮೇಗಲ ಗೊಲ್ಲರಹಟ್ಟಿಯ ಮುದ್ದಯ್ಯ ತಮ್ಮ 50 ಕುರಿಗಳನ್ನು ಮೇಯಿಸಲು ಗ್ರಾಮದ ಸಮೀಪ ಇರುವ ಗುಡ್ಡಕ್ಕೆ ಹೋದಾಗ 12 ಕುರಿಗಳು ಸಿಡಿಲಿನ ಅಬ್ಬರಕ್ಕೆ ಸಿಲುಕಿ ಸಾವನ್ನಪ್ಪಿವೆ. ಕುರಿಗಾಯಿ ಮುದ್ದಯ್ಯ ಅವರಿಗೆ ಸಿಡಿಲು ಬಡಿದಿದ್ದು, ಸಣ್ಣ ಪುಟ್ಟ ಗಾಯಗಳಾಗಿವೆ.

ಮಕ್ಕಳ ಕೊಂದು ತಂದೆ ಆತ್ಮಹತ್ಯೆ

ಕುಣಿಗಲ್: ತಾಲೂಕಿನ ಹುತ್ರಿದುರ್ಗ ಹೋಬಳಿ ಆಲ್ಕೆರೆ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಇಬ್ಬರು ಮಕ್ಕಳನ್ನು ಕೊಂದು ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಲ್ಲೇಶ್ವರ ಸ್ವಾಮಿ ದೇಗುಲದ ಅರ್ಚಕ ಶಿವಣ್ಣ (40), ಪುತ್ರರಾದ ಜೀವಂತ್ (10), ಪ್ರಾಣೇಶ್ (5) ಮೃತರು. ಮಕ್ಕಳನ್ನು ಉಸಿರು ಗಟ್ಟಿಸಿ ಕೊಂದು, ನಂತರ ಶಿವಣ್ಣ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಶಿವಣ್ಣ ಪತ್ನಿ ಕಾವ್ಯಾ (35) ಬೇರೊಬ್ಬರ ಜತೆಗೆ ಅಕ್ರಮ ಸಂಬಂಧ ಹೊಂದಿದ್ದರು ಎಂಬ ಕಾರಣಕ್ಕೆ ಇಬ್ಬರ ಮಧ್ಯೆ ಆಗಾಗ ಗಲಾಟೆ ನಡೆಯುತ್ತಿತ್ತು. ಕಳೆದ ಕೆಲ ದಿನಗಳಿಂದ ಕಾವ್ಯಾ ಕೊತ್ತಗೆರೆ ಹೋಬಳಿಯ ಕುರುಡಿಹಳ್ಳಿಯ ತವರು ಮನೆಗೆ ಹೋಗಿದ್ದರು. ಶುಕ್ರವಾರ ಸಂಜೆ ಶಿವಣ್ಣ ಇಬ್ಬರು ಮಕ್ಕಳನ್ನು ವಾಪಸ್ ಆಲ್ಕೆರೆಗೆ ಕರೆದುಕೊಂಡು ಬಂದಿದ್ದರು. ತಡರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳಗ್ಗೆ ಅಕ್ಕಪಕ್ಕದ ಮನೆಯವರು ಹೋಗಿ ನೋಡಿದಾಗ ಆತ್ಮಹತ್ಯೆ ವಿಚಾರ ಗೊತ್ತಾಗಿದೆ. ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎನ್‌ಎಸ್‌ಯುಐನ 15 ಮಂದಿ ಮೇಲೆ ಕೇಸ್

ಶಿವಮೊಗ್ಗ: ಕುವೆಂಪು ವಿವಿ ವಿದ್ಯಾರ್ಥಿ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿ, ಪೀಠೋಪಕರಣ ಧ್ವಂಸಗೊಳಿಸಿದ್ದ ಎನ್‌ಎಸ್‌ಯುಐ ಸಂಘಟನೆಯ 15 ಮಂದಿ ಮೇಲೆ ಭದ್ರಾವತಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುವೆಂಪು ವಿವಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ನಾಗರಾಜ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ. **ದೂರಿನಲ್ಲಿದೆ:** ಎನ್‌ಎಸ್‌ಯುಐ ಸಂಘಟನೆರವರು ಅಕ್ರಮವಾಗಿ ಕೂಟ ಕಟ್ಟಿಕೊಂಡು ಆಡಳಿತ ಕಚೇರಿಯ ಪ್ರವೇಶ ದ್ವಾರದಲ್ಲಿದ್ದ ಅನೇಕ ಸಸ್ಯ ಕುಂಡಗಳನ್ನು ಎತ್ತಿ ಹಾಕಿ ಒಡೆದು ಹಾಕಿದ್ದಾರೆ. ವಿವಿಯ ಸಿಬ್ಬಂದಿಗಳಾದ ಮೋಹಿತ್ ಗುಜ್ಜರ್ ಉಪ ಕುಲಸಚಿವರಾದ ಸುಜಾತ, ಶಾಖಾಧಿಕಾರಿ ರೇಖಾ, ಪ್ರಥಮ ದರ್ಜೆ ಸಹಾಯಕರಾದ ಅಮರ ಜ್ಯೋತಿ, ಸಹಾಯಕ ಉಪ ಕುಲಸಚಿವರಾದ ಗೋವಿಂದಾಚಾರಿ ಸೇರಿ ಇತರರು ತಡೆಯಲು ಯತ್ನಿಸಿದಾಗ ಅವರನ್ನು ತಳ್ಳಾಡಿ, ನಿಮ್ಮನ್ನೆಲ್ಲಾ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದಾರೆ.

ಉ.ಕ ಅಭಿವೃದ್ಧಿಗೆ ಬಿಎಸ್‌ವೈ ಅಡಿಗಲ್ಲು

ಕಲಬುರಗಿ: ರಾಜ್ಯದ ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವ ಜತೆಗೆ ಮೊದಲ ಬಾರಿಗೆ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದವರು ರೈತ ನಾಯಕ ಬಿ.ಎಸ್.ಯಡಿಯೂರಪ್ಪ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್ ಬಣ್ಣಿಸಿದರು. ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೇ.9ರಂದು ಚಿತ್ರದುರ್ಗದಲ್ಲಿ ಆಯೋಜಿಸಲಾಗಿರುವ ಬಿಎಸ್‌ವೈ ಅವರ 50 ವರ್ಷಗಳ ಸಾರ್ಥಕ ರಾಜಕೀಯ ಜೀವನದ 'ಅಭಿಮಾನೋತ್ಸವ' ಕಾರ್ಯಕ್ರಮ ಹಾಗೂ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.ರಾಜ್ಯದ ಮುಖ್ಯಮಂತ್ರಿಗಳ ಪೈಕಿ ಅತಿ ಹೆಚ್ಚು ಬಾರಿ ಕಲಬುರಗಿಗೆ ಭೇಟಿ ನೀಡಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಬೆಂಗಳೂರು ಹೊರತುಪಡಿಸಿ ಕಲಬುರಗಿಯಲ್ಲೇ 3 ಬಾರಿ ಸಚಿವ ಸಂಪುಟ ಸಭೆ ನಡೆಸುವ ಮೂಲಕ ಈ ಭಾಗದ ಮೇಲೆ ತಮಗಿರುವ ಕಾಳಜಿಯನ್ನು ಅವರು ಪ್ರದರ್ಶಿಸಿದ್ದಾರೆ. ಕಲಬುರಗಿ ಮಹಾನಗರ ಪಾಲಿಕೆಗೆ ಮೊದಲ ಬಾರಿಗೆ 100 ಕೋಟಿ ರು.ವಿಶೇಷ ಅನುದಾನ ನೀಡಿದ್ದು ಬಿಎಸ್‌ವೈ ಅವರೇ ಎಂದು ಸ್ಮರಿಸಿದರು.

ದಿನ ವಿಶೇಷ

03 ಏಪ್ರಿಲ್ 2026 ಭಾನುವಾರ

- » ಸೂರ್ಯೋದಯ : 5-54
- » ಸೂರ್ಯಾಸ್ತ : 6-53
- » ತಿಥಿ : ದ್ವಿತೀಯಾ
- » ನಕ್ಷತ್ರ : ವಿಶಾಖ
- » ಸಂವತ್ಸರ : ಪರಾಭವ
- » ಅಯನ : ಉತ್ತರಾಯನ
- » ಋತು : ಗ್ರಿಷ್ಮ
- » ಮಾಸ : ವೈಶಾಖ
- » ಪಕ್ಷ : ಶುಕ್ಲಪಕ್ಷ

ಬಿಎಸ್‌ವೈ ಅಭಿಮಾನೋತ್ಸವದಲ್ಲಿ 10 ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ: ಬಿ.ವೈ.ವಿಜಯೇಂದ್ರ ವಿಶ್ವಾಸ

ರಾಜಕೀಯ ಲಾಭದಾಸೆ ನನಗೂ ಇಲ್ಲ, ಪಕ್ಷಕ್ಕೂ ಇಲ್ಲ

ಮೈಸೂರು: ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಳ್ಳಲಾಗಿರುವ ಬಿಎಸ್‌ವೈ ಅಭಿಮಾನೋತ್ಸವದಿಂದ ರಾಜಕೀಯ ಲಾಭ ಪಡೆಯುವ ಆಸೆ ನನಗೂ ಇಲ್ಲ, ಪಕ್ಷಕ್ಕೂ ಇಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಇಲ್ಲಿನ ಸುತ್ತೂರು ಮಠದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಶನಿವಾರ ಭೇಟಿಯಾಗಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕೆಲವರು ಅದೃಷ್ಟದಿಂದ ಮುಖ್ಯಮಂತ್ರಿ ಆಗಿದ್ದಾರೆ. ಆದರೆ, ಬಿ.ಎಸ್.ಯಡಿಯೂರಪ್ಪ ಅವರು ಅದೃಷ್ಟದಿಂದ ಮುಖ್ಯಮಂತ್ರಿ ಆದವರಲ್ಲ. ಸತತ ಹೋರಾಟದಿಂದ ಆ ಸ್ಥಾನ ಗಳಿಸಿದವರು. 50 ವರ್ಷಗಳ ರಾಜಕಾರಣದಲ್ಲಿ 45 ವರ್ಷ ಹೋರಾಟವನ್ನೇ ಮಾಡಿದ್ದಾರೆ. ಇದನ್ನು ಸ್ಮರಿಸುವ ಕಾರಣದಿಂದ ನಾವು ಸಮಾವೇಶ ನಡೆಸುತ್ತಿದ್ದೇವೆ ಎಂದರು.

ವಿಧಾನಸಭೆ ಚುನಾವಣೆಗೆ ಆರು ತಿಂಗಳಿದೆ ಎನ್ನುವಾಗ ಸಮಾವೇಶ ನಡೆಸಿದ್ದರೆ, ರಾಜಕೀಯ ಲಾಭದ ಲೆಕ್ಕಾಚಾರ ಹಾಕಬಹುದಿತ್ತು. ಈಗ ಆ ರೀತಿಯ ಪ್ರಶ್ನೆ ಉದ್ಭವಿಸುವುದಿಲ್ಲ. ರಾಜಕಾರಣಿಗಳ ಜತೆಗೆ, ರಾಜ್ಯದ ಬಹುತೇಕ ಮಠಾಧೀಶರೂ ಭಾಗವಹಿಸುತ್ತಾರೆ. ಸಮಾವೇಶದ ಸಂದೇಶ ಏನೆಂಬುದು ಅದು ಮುಗಿದ ಬಳಿಕ ಗೊತ್ತಾಗಲಿದೆ. 10 ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆಯಲ್ಲಿದ್ದೇವೆ ಎಂದು ತಿಳಿಸಿದರು.

ಚಿತ್ರದುರ್ಗದಲ್ಲಿ ಆಯೋಜಿಸಲಾಗಿರುವ ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶನಿವಾರ ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಗೆ ಆಹ್ವಾನ ನೀಡಿದರು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಹಾಗೂ ಕುಂಬ್ರಳ್ಳಿ ಸುಬ್ಬಣ್ಣ ಇದ್ದರು.

ಅದ್ದೂರಿ ಕಾರ್ಯಕ್ರಮ: ಸುತ್ತೂರು ಶ್ರೀ ಮಠದಲ್ಲಿ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಜನಸೇವೆಯಲ್ಲಿ ಸಾರ್ಥಕ 50 ವರುಷ ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದೇವೆ. ಕಾರ್ಯಕ್ರಮಕ್ಕೆ ಬರಲು ಸ್ವಾಮೀಜಿ ಒಪ್ಪಿದ್ದಾರೆ. ಮೇ 8 ರಂದು ಯಡಿಯೂರಪ್ಪ ಚಿತ್ರದುರ್ಗದ ಪುರ ಪ್ರವೇಶ ಮಾಡುತ್ತಾರೆ. ಅವರಿಗೆ ಅದ್ದೂರಿಯಾಗಿ ಸ್ವಾಗತ ಕೋರುತ್ತೇವೆ. ಮೇ 9ರಂದು ಅಮಿತ್ ಶಾ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸುತ್ತಾರೆ. ಮಿನಿ ದಸರಾ ಮಾದರಿಯಲ್ಲಿ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿದರು.

ಉಡ್ತಾ ಪಂಜಾಬ್: ಕರ್ನಾಟಕ ಕೂಡ ಉಡ್ತಾ ಪಂಜಾಬ್ ಆಗಿದೆ. ಮೈಸೂರಿನಲ್ಲೇ ನೋಡಿ ಏನಾಗ್ತಿದೆ, ಡ್ರಗ್ ಹಾವಳಿ ಜಾಸ್ತಿಯಾಗಿದೆ. ಕಾಂಗ್ರೆಸ್ ಸರಕಾರ ಮನುಷ್ಯತ್ವ ಇಲ್ಲದ ಸರಕಾರವಾಗಿದೆ. ಮೈಸೂರಿನಲ್ಲಿ 3 ವರ್ಷದಿಂದ ಒಂದೇ ಒಂದು ಅಭಿವೃದ್ಧಿ ಕಾರ್ಯ ಆಗಿಲ್ಲ. ರಾಜ್ಯದ ಅಭಿವೃದ್ಧಿಗೆ ಕಾಂಗ್ರೆಸ್ ಮನಸ್ಸು ಮಾಡಿಲ್ಲ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕೇವಲ ಕುರ್ಚಿ ಉಳಿಸಿಕೊಳ್ಳುವ ಹಪಾಹಪಿ ಅಷ್ಟೇ ಕಾಣಿಸುತ್ತಿದೆ ಎಂದರು.

ಸಿಎಂ ಬದಲಾವಣೆ ಸಮಯ ಬಂದಿದೆ

ಮೈಸೂರು: ರಾಜ್ಯದಲ್ಲಿ ಸಿಎಂ ಬದಲಾಗುವ ಸಮಯ ಬಂದಿದೆ. ಇದನ್ನೇ, ದಿನಾಂಕ ನಿಗದಿ ಯಾಗಿಲ್ಲ ಎನ್ನುವ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಹೇಳಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಬಿ.ವೈ.ವಿಜಯೇಂದ್ರ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕುರ್ಚಿಗಾಗಿ ದಿನವೂ ಕಿತ್ತಾಡುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಗ್ಯಾಂಗ್ ಮೊದಲು ದೆಹಲಿಗೆ ಹೋದರೆ, ಬಳಿಕ ಡಿಸಿಎಂ ಡಿ.ಕೆ.ಶಿವಕುಮಾರ್ ಗ್ಯಾಂಗ್ ಹೋಗುತ್ತಿದೆ. ಇವರಿಬ್ಬರ ಜಗಳದಲ್ಲಿ ನನಗೇನಾದರೂ ಲಾಭ ಆಗುತ್ತದೆಯೇ ಎಂದು ಮಲ್ಲಿಕಾರ್ಜುನ ಖರ್ಗೆ ಕೂಡ ಟವೆಲ್ ಹಾಕಿದ್ದಾರೆ ಎಂದು ಟೀಕಿಸಿದರು. ರಾಜ್ಯದಲ್ಲಿರುವುದು ಮಾನವೀಯತೆ ಇಲ್ಲದ ಭ್ರಷ್ಟ ಸರಕಾರ. ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲುತ್ತದೆ ಎಂದು ಆ ಪಕ್ಷದ ಮುಖಂಡರೇ ಹೇಳುತ್ತಿದ್ದಾರೆ. ಇದು ಆ ಪಕ್ಷದ ಸ್ಥಿತಿ ಎಂದು ಆರೋಪಿಸಿದರು.

> ಉಪಚುನಾವಣೆ ನಡೆದಿರುವ ಎರಡು ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸ ಇಲ್ಲ ಅಂತ ಕಾಂಗ್ರೆಸ್ ಮುಖಂಡರೇ ನನಗೆ ಹೇಳಿದ್ದಾರೆ. ಫಲಿತಾಂಶ ಬಂದ ಮೇಲೆ ರಾಜ್ಯದ ಸಿಎಂ ಹಾಗೂ ಕಾಂಗ್ರೆಸ್‌ಗೆ ಪಾಠವಾಗುತ್ತದೆ.
>
> - ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ದಾವಣಗೆರೆಯಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ

ಅಭಿಮಾನೋತ್ಸವ ಶಕ್ತಿಪ್ರದರ್ಶನವಲ್ಲ, ಸಂಘಟನೆ ಸಂಕೇತ

ದಾವಣಗೆರೆ: ಕೋಟೆ ನಾಡಿನಲ್ಲಿ ಏರ್ಪಡಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ಜನಸೇವೆಯ ಗೌರವಾರ್ಥ ಆಯೋಜಿಸಲಾಗಿರುವ 'ಅಭಿಮಾನೋತ್ಸವ' ಕಾರ್ಯಕ್ರಮ ಕೇವಲ ಒಂದು ಗುಂಪಿನ ಶಕ್ತಿ ಪ್ರದರ್ಶನವಲ್ಲ, ಬದಲಾಗಿ ಇಡೀ ಸಂಘಟನೆಯ ಒಗ್ಗಟ್ಟಿನ ಸಂಕೇತ ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ಯಡಿಯೂರಪ್ಪ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಶನಿವಾರ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದಲ್ಲಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ರಾಜ್ಯದಲ್ಲಿ ಸುಮಾರು 7 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಯೋಜನೆ ತಲುಪಿಸಿದ ಕೀರ್ತಿ ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರಕಾರಕ್ಕೆ ಸಲ್ಲುತ್ತದೆ ಎಂದು ಸ್ಮರಿಸಿದರು. ಹೆಣ್ಣು ಮಕ್ಕಳ ಭ್ರೂಣ ಹತ್ಯೆ ತಡೆಯಲು ಮತ್ತು ಅವರ ಭವಿಷ್ಯಕ್ಕೆ ಭದ್ರತೆ ನೀಡಲು ಜಾರಿಗೆ ತಂದ 'ಭಾಗ್ಯಲಕ್ಷ್ಮಿ ಬಾಂಡ್' ಯೋಜನೆಯು ಯಡಿಯೂರಪ್ಪ ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿ. ಮೊದಲು 10 ಸಾವಿರ ರು. ಇದ್ದ ಮೊತ್ತ ನಂತರ 20 ಸಾವಿರಕ್ಕೆ ಏರಿಸಿ, ಮಗು 18 ವರ್ಷ ತುಂಬುವಷ್ಟರಲ್ಲಿ 1.20 ಲಕ್ಷ ರು. ಸಿಗುವಂತೆ ಮಾಡಿದ ಧೀಮಂತ ನಾಯಕ ಎಂದು ಬಣ್ಣಿಸಿದರು.

ಯಡಿಯೂರಪ್ಪ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಶನಿವಾರ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದಲ್ಲಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯನ್ನು ಸಂಸದ ಬಿ.ವೈ.ರಾಘವೇಂದ್ರ ಉದ್ಘಾಟಿಸಿದರು.

ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿ: ಪ.ಜಾತಿ ಮತ್ತು ಪ.ಪಂಗಡಗಳ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸಿ, ಕೋಟ್ಯಂತರ ಅನುದಾನ ಒದಗಿಸಿದರು. ಕನಕ ಜಯಂತಿ, ವಾಲ್ಮೀಕಿ ಜಯಂತಿಯಂತಹ ಸಾಂಸ್ಕೃತಿಕ ಆಚರಣೆಗಳಿಗೆ ಒತ್ತು ನೀಡುವ ಮೂಲಕ ಎಲ್ಲ ಸಮುದಾಯ ಒಗ್ಗೂಡಿಸುವ ಕೆಲಸ ಬಿಎಸ್‌ವೈ ಮಾಡಿದರು. ದಾವಣಗೆರೆ, ಹರಿಹರ, ಶಿವಮೊಗ್ಗ ಮತ್ತು ಚನ್ನಗಿರಿ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಸಮಾವೇಶಕ್ಕೆ ಸಾಕ್ಷಿಯಾಗಲಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವರಾದ ಎಸ್.ಎ.ರವೀಂದ್ರನಾಥ್, ಬಿ.ಸಿ.ಪಾಟೀಲ್, ಎಂ.ಪಿ.ರೇಣುಕಾಚಾರ್ಯ, ಡಾ.ಎ.ಎಚ್.ಶಿವಯೋಗಿಸ್ವಾಮಿ, ಗಾಯತ್ರಿ ಸಿದ್ದೇಶ್ವರ, ಜಿ.ಎಸ್.ಅನಿತ್, ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರ, ಎಚ್.ಪಿ.ರಾಜೇಶ್, ಬಸವರಾಜ್ ನಾಯ್ಕ್, ಮಾಡಾಳು ಮಲ್ಲಿಕಾರ್ಜುನ್, ಸುರೇಶ್, ಹನಗವಾಡಿ ವೀರೇಶ್, ಕೋಳೇನಹಳ್ಳಿ ಬಿ.ಎಂ.ಸತೀಶ್, ಜಯಮ್ಮ, ಮೇಘರಾಜ್, ದೇವರಮನಿ ಶಿವಕುಮಾರ್, ಆಲೂರು ನಿಂಗರಾಜ್, ಜಗದೀಶ್ ಇತರರಿದ್ದರು.

> ದಾವಣಗೆರೆ ಬಿಎಸ್‌ವೈಗೆ ಹಾಗೂ ಬಿಜೆಪಿಗೆ ಶಕ್ತಿ ತುಂಬಿದ ಕ್ಷೇತ್ರ. ಕೋಟೆನಾಡಿನಲ್ಲಿ ಹಮ್ಮಿಕೊಂಡಿರುವ ಅಭಿಮಾನೋತ್ಸವಕ್ಕೆ ದಾವಣಗೆರೆ ಜಿಲ್ಲೆಯಿಂದಲೇ ಎರಡು ಲಕ್ಷ ಜನ ಬರುವ ನಿರೀಕ್ಷೆ ಇದೆ.
>
> - ಬಿ.ವೈ.ರಾಘವೇಂದ್ರ ಸಂಸದ

ಅಮಿತ್ ಶಾ ಆಗಮನ

ಅಭಿಮಾನೋತ್ಸವಕ್ಕೆ ಪ್ರಧಾನಿ ಮೋದಿ ಮತ್ತು ಕೇಂದ್ರ ಸಚಿವ ಅಮಿತ್ ಶಾ ಅವರು ಆಗಮಿಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಆಗಲಿದ್ದು, 12:15ಕ್ಕೆ ವೇದಿಕೆಗೆ ಬರಲಿದ್ದಾರೆ. ಸಮಾರಂಭದಲ್ಲಿ ತರಳಬಾಳು ಶ್ರೀಗಳು, ಪಂಚಪೀಠದ ಶ್ರೀಗಳು, ಕನಕಪೀಠದ ಶ್ರೀಗಳು ಮತ್ತು ಮಾದಾರ ಚೆನ್ನಯ್ಯ ಶ್ರೀಗಳು, ವಾಲ್ಮೀಕಿ ಶ್ರೀಗಳು ಸೇರಿದಂತೆ ಅನೇಕ ಮಠಾಧೀಶರು ಭಾಗವಹಿಸಲಿದ್ದಾರೆ ಎಂದು ಸಂಸದ ರಾಘವೇಂದ್ರ ತಿಳಿಸಿದರು.

ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ ಖಂಡಿಸಿ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಶನಿವಾರ ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಗೌಡ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಗೆ ಕಾರಣ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ಕೈನಿಂದಲೇ ಕಂಪನಿಗಳಿಗೆ ಬೆಲೆ ಏರಿಕೆ ಅಧಿಕಾರ

ದಾವಣಗೆರೆ: ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ಆದರೆ, ಅದು ಆಯಾ ಕಂಪನಿಗಳು ಏರಿಕೆ ಮಾಡಿದ್ದು, 2004-2005 ರಲ್ಲಿ ಕಾಂಗ್ರೆಸ್ ಇದ್ದಾಗ ಕಂಪನಿಗಳಿಗೆ ಬೆಲೆ ಏರಿಕೆ ಮಾಡುವ ಅವಕಾಶ ಮಾಡಿಕೊಟ್ಟಿದ್ದರಿಂದ ಕಂಪನಿಗಳು ಮನಸೋಇಚ್ಛೆ ದರ ಏರಿಸುತ್ತಿವೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಜಾಗತಿಕ ಸ್ಥಿತಿಗತಿಗಳ ಬೆಳವಣಿಗೆ ಕೂಡ ಏರಿಕೆಗೆ ಕಾರಣವಾಗುತ್ತದೆ. ಪಾಕಿಸ್ತಾನ ಸೇರಿದಂತೆ ಕೆಲ ದೇಶಗಳಲ್ಲಿ ಎಲ್‌ಪಿಜಿ, ಪೆಟ್ರೋಲಿಯಂ ಸಿಗುತ್ತಿಲ್ಲ. ಆದರೆ, ಭಾರತದಲ್ಲಿ ನಿರಂತರವಾಗಿ ಸಿಗುತ್ತಿದೆ. ಹಾರ್ಮೋಜ್ ಜಲಸಂಧಿಯಿಂದಲೇ ಬರಬೇಕಾದ ಹಿನ್ನೆಲೆ ಸ್ವಲ್ಪ ತೊಂದರೆಯಾಗಿದೆ. ಆಮದು ಮಾಡಿಕೊಳ್ಳುವುದೇ ಜಾಸ್ತಿ ಇರೋದ್ರಿಂದ ಬೆಲೆ ಏರಿಕೆಯಾಗಿದೆ. ಸಮಸ್ಯೆ ಬಗೆಹರಿದ ನಂತರ ದರ ಕಡಿಮೆ ಮಾಡುವ ಕೆಲಸ ಮಾಡಲಾಗುತ್ತದೆ ಎಂದರು.

ಬಿಜೆಪಿ ಬಹುದೊಡ್ಡ ಸಾಧನೆ: ದೇಶದ ಐದು ರಾಜ್ಯಗಳಲ್ಲಿ ಚುನಾವಣೆಯಾಗಿದೆ. ನಾಲ್ಕನೇ ತಾರೀಖು ಫಲಿತಾಂಶ ಸಿಗಲಿದ್ದು, ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಹುದೊಡ್ಡ ಸಾಧನೆ ಈ ಚುನಾವಣೆಯಲ್ಲಿ ಮಾಡುತ್ತೇವೆ ಎಂದರು. ಪಶ್ಚಿಮ ಬಂಗಾಳದಲ್ಲಿ ಸೋಲಿನ ಭಯದಲ್ಲಿ ಮಮತಾ ಬ್ಯಾನರ್ಜಿ ಸ್ಟ್ರಾಂಗ್ ರೂಂಗೆ ನುಗ್ಗೋದು, ಅಧಿಕಾರಿಗಳಿಗೆ ಬಾಯಿಗೆ ಬಂದಂತೆ ಬೈಯುವ ಕೆಲಸ ಮಾಡುತ್ತಿದ್ದಾರೆ. ಅವರ ಈ ರೀತಿಯ ವರ್ತನೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ ಎನ್ನುವುದು ತಿಳಿಯುತ್ತೆ. ಸ್ಥಳೀಯ ಚುನಾವಣೆಯಲ್ಲಿ ಜನರಿಗೆ ಯಾವ ರೀತಿ ಹಿಂಸೆ ಮಾಡಿದ್ದಾರೆ ಎನ್ನುವುದು ನಮಗೆ ಅರಿವಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುತ್ತದೆ. ಅದೇ ರೀತಿ ಅಸ್ಸಾಂ ಸೇರಿದಂತೆ ಹಲವು ರಾಜ್ಯಗಳಲ್ಲಿ ಗೆಲುವು ಸಾಧಿಸಲಿದ್ದೇವೆ. ಕೇರಳದಲ್ಲಿ ನಿರೀಕ್ಷೆಗೆ ಮೀರಿ ಸೀಟ್‌ಗಳು ಬರಲಿವೆ ಎಂದರು.

ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿ ಎಲ್ಲಿ ಕೂಡ ಕಾಣಿಸುತ್ತಿಲ್ಲ. ಕಾಂಗ್ರೆಸ್‌ನ ಸ್ಥಿತಿ ರಾಹುಲ್ ಗಾಂಧಿಯವರ ನೇತೃತ್ವದಲ್ಲಿ ಹೇಗೆ ಇದೆ ಎನ್ನುವುದು ಜನರಿಗೆ ತಿಳಿದಿದೆ. ಅಲ್ಲದೆ, ರಾಜ್ಯದಲ್ಲಿ ಉಪಚುನಾವಣೆಯಲ್ಲಿ ಎರಡು ಚುನಾವಣೆ ಗೆಲ್ಲಲಿದ್ದೇವೆ. ಹಣದ ಹೊಳೆ ಹರಿಸಿ, ಸರಕಾರದ ಯಂತ್ರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಆದರೂ ನಾವು ಎರಡು ಉಪಚುನಾವಣೆ ಗೆಲ್ಲಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಹುಬ್ಬಳ್ಳಿ ಡ್ರಗ್ಸ್ ಕೇಸ್‌ನಲ್ಲಿ ಯಾರ ನೆಗಿಟೀವ್ ಬಂದಿದೆ ಅವರ ಹತ್ತಿರ ಹಣ ಪಡೆದಿದ್ದಾರೆ. ಜತೆಗೆ ಪಾಸಿಟಿವ್ ಬಂದಿರುವವರ ಬಳಿ ಕೂಡ ಹಣ ವಸೂಲಿ ಮಾಡಿದ್ದಾರೆ ಎಂದರು.

ಕಾಂಗ್ರೆಸ್‌ನಲ್ಲಿ ಖುರ್ಚಿ ಕಿತ್ತಾಟ

ಸಿಎಂ ವಿಚಾರದಲ್ಲಿ ಮಲ್ಲಿಕಾರ್ಜುನ್ ಖರ್ಗೆಯವರನ್ನು ವಿನಾಕಾರಣ ಎಳೆದು ತಂದಿದ್ದಾರೆ. ಈ ಖುರ್ಚಿ ಕದನದಲ್ಲಿ ಖರ್ಗೆ ಹೆಸರು ತಂದು ಗೊಂದಲ ಸೃಷ್ಟಿ ಮಾಡುತ್ತಿದ್ದು, ಡಿಕೆಶಿಯವರನ್ನು ಸಿಎಂ ಮಾಡುವುದಾಗಿ ಹೈಕಮಾಂಡ್ ನಿರ್ಧಾರ ಮಾಡಿರುವುದಾಗಿ ಚರ್ಚೆ ಶುರುವಾಗಿದೆ. ಹಾಗಾಗಿ, ಖರ್ಗೆ ಅವರ ಹೆಸರು, ಪರಮೇಶ್ವರ ಹೆಸರು ತರುತ್ತಿದ್ದಾರೆ ಅಷ್ಟೇ ಎಂದು ಜೋಶೀ ಹೇಳಿದರು.

ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೇರಲು ಬಿಎಸ್‌ವೈ ಶ್ರಮ ಅಧಿಕ: ಪ್ರಲ್ಹಾದ ಜೋಶಿ

ಬಿಎಸ್‌ವೈ ಅಭಿಮಾನಕ್ಕಾಗಿ ಬೃಹತ್ ಕಾರ್ಯಕ್ರಮ

ಚಿತ್ರದುರ್ಗ: ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೇರಲು ಯಡಿಯೂರಪ್ಪರವರ ಪರಿಶ್ರಮ ಅಧಿಕವಾಗಿದೆ. ಅವರ ಹೋರಾಟದ ಫಲವಾಗಿ ರಾಜ್ಯದಲ್ಲಿ ಬಿಜೆಪಿ ಅಧಿಕಾರವನ್ನು ನಡೆಸಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಅವರ 50 ವರ್ಷದ ರಾಜಕೀಯ ಸಾರ್ಥಕ ಜೀವನಕ್ಕೆ ಪೂರಕವಾಗಿ ಮೇ 9ರಂದು ಅಭಿಮಾನೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಚಿತ್ರದುರ್ಗ ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ಮೇ 9 ರಂದು ನಡೆಸಲು ಉದ್ದೇಶಿಸಿರುವ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪೆಂಡಾಲ್ ನಿರ್ಮಾಣ ಸ್ಥಳವನ್ನು ವೀಕ್ಷಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಅಭಿಮಾನೋತ್ಸವ ಯಾವುದೇ ರಾಜಕಾರಣದ ಉದ್ದೇಶದಿಂದ ನಡೆಯುತ್ತಿರುವುದಲ್ಲ, ಅವರ ಮೇಲಿನ ಅಭಿಮಾನಕ್ಕಾಗಿ ನಡೆಯುತ್ತಿರುವುದು. ಇಲ್ಲಿ ಯಾವ ಶಕ್ತಿ ಪ್ರದರ್ಶನವೂ ಅಗತ್ಯವಿಲ್ಲ. ಕೇವಲ ಅಭಿಮಾನಕ್ಕೋಸ್ಕರ ಮಾಡುತ್ತಿರುವುದು ಎಂದರು.

ಕರ್ನಾಟಕದಲ್ಲಿ ಹೋರಾಟಕ್ಕೆ ಮತ್ತೊಂದು ಹೆಸರು ಅಂದ್ರೆ ಬಿ.ಎಸ್.ಯಡಿಯೂರಪ್ಪ ಅವರು. ಪರಿಶ್ರಮಕ್ಕೆ ಮತ್ತೊಂದು ಹೆಸರು ಅಂದ್ರೆ ಬಿ.ಎಸ್.ಯಡಿಯೂರಪ್ಪ ಅವರು. ಹಾಗಾಗಿ ಕರ್ನಾಟಕದಲ್ಲಿ ಕಳೆದ 50 ವರ್ಷಗಳಿಂದ ಬಡವರ, ಶೋಷಿತ ವರ್ಗದವರ, ರೈತರ ಪರವಾದ ಧ್ವನಿಯಾಗಿ, ನಿರಂತರವಾಗಿ ದಣಿವರಿಯದೆ, ರಾಜ್ಯದ ಮೂಲೆಮೂಲೆಗಳಿಗೆ ಪ್ರವಾಸ ಮಾಡಿ, ರೈತರು ಎಲ್ಲಿಯೇ ಹೋರಾಟ ಮಾಡ್ತಾ ಇದ್ದರೆ ಅಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಇರುತ್ತಿದ್ದರು. ಅಂತಹ ಒಬ್ಬ ಹೋರಾಟಗಾರ, ಜನನಾಯಕನನ್ನು ಗೌರವಿಸಬೇಕು ಎಂಬ ಕಾರಣಕ್ಕೆ ಅಭಿಮಾನೋತ್ಸವವನ್ನು ಮಾಡಲಾಗುತ್ತಿದೆ ಎಂದರು. ಜನ ಸೇವೆಗಾಗಿಯೇ ತಮ್ಮ ಜೀವನನ್ನೇ ಮುಡುಪಾಗಿ ಇಟ್ಟಿದ್ದಾರೆ. ತಮ್ಮ ಅಧಿಕಾರದ ಅವಧಿಯಲ್ಲಿ ದಲಿತರು, ಪರಿಶಿಷ್ಟ ಜಾತಿ ಮತ್ತು ಪಂಗಡ, ಮಹಿಳೆಯರಿಗೆ ಧ್ವನಿಯಾಗಿ ಕೆಲಸವನ್ನು ಮಾಡಿದ್ದಾರೆ. ಬಿಎಸ್‌ವೈ ಎಂದರೆ ಹೋರಾಟ ಎಂಬ ಮನೋಭಾವ ಎಲ್ಲರಲ್ಲೂ ಸಹ ಮೂಡಿದೆ. ಛಲಕ್ಕೆ ಮತ್ತೊಂದು ಹೆಸರು ಯಡಿಯೂರಪ್ಪ ಎನ್ನಬಹುದಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯರಾದ ವೈ.ಎ.ನಾರಾಯಣಸ್ವಾಮಿ, ಮಾಜಿ ಶಾಸಕರಾದ ಜಿ.ಎಚ್.ತಿಪ್ಪಾರೆಡ್ಡಿ, ರಾಜ್ಯ ಕಾರ್ಯದರ್ಶಿ ತಥಮೇಶ್ ಗೌಡ್ರು, ಶರಣು ತಳ್ಳಿಕೇರೆ, ವಿಭಾಗ ಸಹಾ ಪ್ರಭಾರಿ ಎ.ಮುರಳಿ, ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಧುರಿ ಗೀರೀಶ್, ವೆಂಕಟೇಶ್ ಯಾದವ್, ಮೋಹನ್ ಕುಮಾರ್, ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಸಂಪತ್‌ಕುಮಾರ್, ಜಿಲ್ಲಾ ವಕ್ತಾರ ನಾಗರಾಜ್ ಬೇದ್ರೇ, ಸಹ ವಕ್ತಾರ ಚಾಲುಕ್ಯ ನವೀನ್, ಎಸ್.ಸಿ.ಮೋರ್ಚಾದ ಅಧ್ಯಕ್ಷ ಪರಶುರಾಮ್, ರಾಜ್ಯ ರೈತ ಮೋರ್ಚಾದ ಮಲ್ಲಿಕಾರ್ಜುನ್, ರಾಜ್ಯ ಯುವ ಮೋರ್ಚಾದ ಕಾರ್ಯದರ್ಶಿ ಭಾರ್ಗವಿ ದ್ರಾವಿಡ್, ಮೋಹನ್ ಸಿರಿಗೇರೆ, ಯಶವಂತ,ಗ್ರಾಮಾಂತರ ಅಧ್ಯಕ್ಷ ನಾಗರಾಜ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಚಿತ್ರದುರ್ಗ ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ಮೇ 9 ರಂದು ನಡೆಸಲು ಉದ್ದೇಶಿಸಿರುವ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪೆಂಡಾಲ್ ನಿರ್ಮಾಣ ಸ್ಥಳವನ್ನು ವೀಕ್ಷಿಸಿದರು.

> ನಾಡಿಗೆ ಯಡಿಯೂರಪ್ಪ ನೀಡಿದ ಕೊಡುಗೆಗೆ ಎಲ್ಲ ವರ್ಗದವರೂ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಇದಕ್ಕಾಗಿ ಅರ್ಥಪೂರ್ಣ ಭವ್ಯ ಕಾರ್ಯಕ್ರಮ ನಡೆಸುತ್ತಿದ್ದೇವೆ. ರಾಜ್ಯದ ಮೂಲೆ ಮೂಲೆಗಳಿಂದ ಅಭಿಮಾನಿಗಳು ಲಕ್ಷಾಂತರ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಬರಲಿದ್ದಾರೆ. ಒಂದು ಐತಿಹಾಸಿಕ ಕಾರ್ಯಕ್ರಮ ಇದಾಗಲಿದೆ.
>
> - ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕಾರ್ಯಕ್ರಮಕ್ಕೆ ಆಗಮಿಸಲು 4 ಸಾವಿರ ಬಸ್

ಮೇ 20ಕ್ಕೆ ತುಮಕೂರಿನಲ್ಲಿ ಫಲಾನುಭವಿಗಳ ಸಮಾವೇಶ

ತುಮಕೂರು: ಮೇ.20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರಕ್ಕೆ 3 ವರ್ಷ ತುಂಬಲಿದ್ದು, ತುಮಕೂರಿನಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಈ ಹಿನ್ನೆಲೆ ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಳ್ಳುವಂತೆ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಜತೆ ಶನಿವಾರ ಸಭೆ ನಡೆಸಿದ ಅವರು, ಮೇ.20ರಂದು ನಡೆಯುವ ಸಮಾವೇಶಕ್ಕೆ ರಾಜ್ಯದ ವಿವಿಧಡೆಯಿಂದ 2ಲಕ್ಷಕ್ಕೂ ಅಧಿಕ ಫಲಾನುಭವಿಗಳು ಭಾಗವಹಿಸಲಿದ್ದು, 4,000 ಬಸ್ಸುಗಳ ಸೌಲಭ್ಯ ಕಲ್ಪಿಸಲಾಗಿದೆ.

ಅಲ್ಲದೆ, ರಾಜ್ಯ ಸರಕಾರದ ಅಭೂತ ಪೂರ್ವ ಯಶಸ್ವಿ ಯೋಜನೆಗಳ ಅನುಷ್ಠಾನ ಮತ್ತಿತರ ಇಲಾಖೆಗಳ ಪ್ರಗತಿ ದರ್ಶನ ಕುರಿತ ವಸ್ತುಪ್ರದರ್ಶನ ನಡೆಯಲಿದೆ. ಫಲಾನುಭವಿಗಳಿಗೆ ಸವಲತ್ತುಗಳ ವಿತರಣೆ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಪ್ರಗತಿಯ ಪಟ್ಟಿ, ಶಂಕುಸ್ಥಾಪನೆ ಅಥವಾ ಉದ್ಘಾಟನೆಯಾಗಬೇಕಿರುವ ಮಾಹಿತಿ ಹಾಗೂ ಶಿಲಾನ್ಯಾಸ ಫಲಕಗಳ ಮಾಹಿತಿಯನ್ನು ಜಿಲ್ಲಾಡಳಿತಕ್ಕೆ ತಕ್ಷಣ ಒದಗಿಸಬೇಕು. ಆಸನ ವ್ಯವಸ್ಥೆ, ಊಟ, ಸಾರಿಗೆ, ಇತ್ಯಾದಿ ವ್ಯವಸ್ಥೆಗಳನ್ನು ಯಾವುದೇ ಲೋಪವಿಲ್ಲದಂತೆ ನಿಭಾಯಿಸಬೇಕಿದೆ. ಇದಕ್ಕಾಗಿ ಜಿಲ್ಲಾಡಳಿತ ಉಪಸಮಿತಿಗಳನ್ನು ರಚಿಸಿ, ಜವಾಬ್ದಾರಿಗಳನ್ನು ಹಂಚುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಅಪರ ಜಿಲ್ಲಾಧಿಕಾರಿ ಡಾ.ಎನ್. ತಿಪ್ಪೇಸ್ವಾಮಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

> ಸಮಾವೇಶಕ್ಕೆ ಎಲ್ಲ ಸಚಿವರು, ಶಾಸಕರು, ಸಂಸದರೂ ಆಗಮಿಸಲಿದ್ದು, ಸರಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲು ತಾತ್ಕಾಲಿಕವಾಗಿ ಚಿಂತನೆ ನಡೆಸಲಾಗಿದೆ. ಈ ಹಿನ್ನೆಲೆ ಸಮಾರಂಭದ ವೇದಿಕೆ, ಫಲಾನುಭವಿಗಳಿಗೆ ಊಟದ ವ್ಯವಸ್ಥೆ, ವಸ್ತುಪ್ರದರ್ಶನ ಹಾಗೂ ಹೆಲಿಪ್ಯಾಡ್ ಇತ್ಯಾದಿ ವಿಷಯಗಳ ಕುರಿತು ಜಿಲ್ಲಾಡಳಿತ ತುರ್ತಾಗಿ ಯೋಜನೆ ರೂಪಿಸಬೇಕಿದೆ.
>
> - ಡಾ.ಜಿ.ಪರಮೇಶ್ವರ್, ಸಚಿವ

ಇಂಗ್ಲಿಷ್ ಪದಗಳ ಅನುಕೂಲ, ಸಾಧ್ಯತೆ ಮತ್ತು ಡಾಗ್-ಇಯರಿಂಗ್

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಇಂಗ್ಲಿಷಿನ ಒಂದು ಸ್ವಾರಸ್ಯ ಅಂದ್ರೆ ಅದನ್ನು ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಳ್ಳುವ ಸಾಧ್ಯತೆ. ಅದರ ಅತ್ಯಂತ ದೊಡ್ಡ ಶಕ್ತಿ ಇರುವುದು ಅದರ ಸ್ಥಿತಿಸ್ಥಾಪಕತ್ವ (Flexibility) ಮತ್ತು ಬದಲಾವಣೆಗೆ ಒಗ್ಗಿಕೊಳ್ಳುವ ಗುಣದಲ್ಲಿ. ಇಂದು ಇಂಗ್ಲಿಷ್ ಕೇವಲ ಒಂದು ದೇಶದ ಭಾಷೆಯಾಗಿ ಉಳಿಯದೇ, ಜಾಗತಿಕ ಸಂವಹನದ ಮಾಧ್ಯಮವಾಗಿ ಬೆಳೆಯಲು ಅದರ ಈ ಅನುಕೂಲಕರ ಸ್ವಭಾವ'ವೇ ಪ್ರಮುಖ ಕಾರಣ. ಇಂಗ್ಲಿಷಿನಲ್ಲಿ ಒಂದು ನಾಮಪದವನ್ನು (Noun) ಸುಲಭವಾಗಿ ಕ್ರಿಯಾಪದವಾಗಿ (Verb) ಬಳಸಬಹುದು. ಇದು ಭಾಷೆಯ ಸಂಕ್ಷಿಪ್ತತೆ ಮತ್ತು ವೇಗವನ್ನು ಹೆಚ್ಚಿಸುತ್ತದೆ. ಉದಾಹರಣೆಗೆ, Google' ಎಂಬುದು ಒಂದು ಕಂಪನಿಯ ಹೆಸರು. ಆದರೆ ಇಂದು ನಾವು I will google it '(ನಾನು ಅದನ್ನು ಹುಡುಕುತ್ತೇನೆ) ಎನ್ನುತ್ತೇವೆ. ಇಲ್ಲಿ ನಾಮಪದವೇ ಕ್ರಿಯಾಪದವಾಗಿದೆ.

ಬೇರೆ ಭಾಷೆಗಳಿಂದ ಪದಗಳನ್ನು ಎರವಲು ಪಡೆಯುವುದರಲ್ಲಿ ಅಥವಾ ಎರಡು ಪದಗಳನ್ನು ಸೇರಿಸಿ ಹೊಸ ಅರ್ಥ ಕೊಡುವುದರಲ್ಲಿ ಇಂಗ್ಲಿಷ್ ಬಹಳ ಉದಾರ. ಉದಾಹರಣೆಗೆ, Breakfast + Lunch ಸೇರಿ 'Brunch' ಆಯಿತು. Smoke + Fog ಸೇರಿ "Smog' ಆಯಿತು. ಸಂಸ್ಕೃತದ 'ಅವತಾರ' ಪದ ಇಂಗ್ಲಿಷಿನಲ್ಲಿ 'Avatar' ಆಗಿ ಗೇಮಿಂಗ್ ಮತ್ತು ಸಿನಿಮಾ ಲೋಕದಲ್ಲಿ ಸ್ಥಿರವಾಯಿತು. ಈ ರೀತಿ ಜಗತ್ತಿನ ಯಾವುದೇ ಭಾಷೆಯ ಉತ್ತಮ ಪದಗಳನ್ನು ಅದು ತನ್ನದಾಗಿಸಿಕೊಳ್ಳುತ್ತದೆ.

ತಂತ್ರಜ್ಞಾನ ಬೆಳೆದಂತೆ ಹಳೆಯ ಪದಗಳಿಗೇ ಹೊಸ ಅರ್ಥಗಳನ್ನು ತುಂಬುವ ಚಾತುರ್ಯ ಇಂಗ್ಲಿಷಿಗಿದೆ. ಉದಾಹರಣೆಗೆ, 'Mouse' ಎಂದರೆ ಮೊದಲು ಕೇವಲ ಇಲಿ ಎಂದರ್ಥವಿತ್ತು, ಈಗ ಕಂಪ್ಯೂಟರ್ ಸಾಧನವಾಯಿತು. 'Cloud' ಎಂದರೆ ಮೋಡವಾಗಿತ್ತು, ಈಗ ದತ್ತಾಂಶ ಸಂಗ್ರಹಿಸುವ ತಾಣವಾಯಿತು (Cloud Storage).

ಸ್ಥಳೀಯ ಸಂಸ್ಕೃತಿಗೆ ತಕ್ಕಂತೆ ಇಂಗ್ಲಿಷ್ ರೂಪಾಂತರಗೊಳ್ಳುತ್ತದೆ. ಭಾರತದಲ್ಲಿ ನಾವು 'Pre-pone' ಎಂಬ ಪದವನ್ನು ಬಳಸುತ್ತೇವೆ (Postpone ಪದಕ್ಕೆ ವಿರುದ್ಧವಾಗಿ). ಇದು ಮೂಲ ಇಂಗ್ಲಿಷ್ ಶಬ್ದಕೋಶದಲ್ಲಿ ಇಲ್ಲದಿದ್ದರೂ, ನಮಗೆ ಅನುಕೂಲವಾದ ಕಾರಣ ಇಂದು ಜಾಗತಿಕವಾಗಿ ಮನ್ನಣೆ ಪಡೆಯುತ್ತಿದೆ.

ಇಂಗ್ಲಿಷ್ ಭಾಷೆಯು ಒಂದು ಹರಿಯುವ ನದಿಯಂತೆ. ಇದು ಕಟ್ಟುನಿಟ್ಟಾದ ವ್ಯಾಕರಣದ ಬೇಲಿಗಿಂತ ಹೆಚ್ಚಾಗಿ, ಸಂವಹನದ ಸುಲಭತೆಗೆ ಆದ್ಯತೆ ನೀಡುತ್ತದೆ. ಈ ಹೊಂದಾಣಿಕೆಯ ಗುಣವೇ ಅದನ್ನು ಜಗತ್ತಿನ ಅತಿ ಹೆಚ್ಚು ಜನರು ಬಳಸುವ ಮತ್ತು ಪ್ರೀತಿಸುವ ಭಾಷೆಯನ್ನಾಗಿ ಮಾಡಿದೆ. 'ಅಗತ್ಯವೇ ಆವಿಷ್ಕಾರದ ತಾಯಿ' ಎಂಬಂತೆ, ಇಂಗ್ಲಿಷ್ ತನ್ನ ಬಳಕೆದಾರರ ಅಗತ್ಯಕ್ಕೆ ತಕ್ಕಂತೆ ದಿನನಿತ್ಯ ಹೊಸ ರೂಪ ಪಡೆಯುತ್ತಿರುವುದು ಅದರ ಶ್ರೇಷ್ಠತೆಯಾಗಿದೆ.

ಇಷ್ಟೆಲ್ಲ ಪ್ರಸ್ತಾಪಿಸಿದ ಮೇಲೆ, ನಿಮಗೆ 'ಡಾಗ್-ಇಯರಿಂಗ್' (Dog-earing) ಬಗ್ಗೆ ಹೇಳಬೇಕು. ಒಂದು ಪದವನ್ನು ಯಾವ ರೀತಿ ಬೇಕಾದರೂ ಬಳಸಿಕೊಳ್ಳಬಹುದು ಎಂಬುದಕ್ಕೆ ಇದು ನಿದರ್ಶನ. ಪುಸ್ತಕಗಳನ್ನು ಪ್ರೀತಿಸುವವರಿಗೆ ಅದರ ಪ್ರತಿಯೊಂದು ಪುಟವೂ ಅಮೂಲ್ಯ. ಆದರೆ ಓದುವ ಭರದಲ್ಲಿ ಅಥವಾ ನಿಲ್ಲಿಸಿದ ಗುರುತಿಗಾಗಿ (ಬುಕ್ ಮಾರ್ಕ್) ನಾವು ಮಾಡುವ ಒಂದು ಸಣ್ಣ ಕೆಲಸವೇ ಈ 'ಡಾಗ್-ಇಯರಿಂಗ್'.

ಅಷ್ಟಕ್ಕೂ ಡಾಗ್-ಇಯರಿಂಗ್ ಎಂದರೇನು?

ಪುಸ್ತಕವನ್ನು ಓದುತ್ತಿರುವಾಗ, ನಾವು ಓದನ್ನು ಎಲ್ಲಿಗೆ ನಿಲ್ಲಿಸಿದ್ದೇವೆ ಎಂದು ಗುರುತು ಮಾಡಿಕೊಳ್ಳಲು ಅಥವಾ ಯಾವುದಾದರೂ ಮುಖ್ಯವಾದ ಪುಟವನ್ನು ನೆನಪಿಟ್ಟುಕೊಳ್ಳಲು ಆ ಪುಟದ ಮೂಲೆಯನ್ನು (Corner) ಮಡಚುವುದಕ್ಕೆ 'ಡಾಗ್-ಇಯರಿಂಗ್' ಎನ್ನಲಾಗುತ್ತದೆ. ಆ ಮಡಚಿದ ಭಾಗವು ನೋಡಲು ನಾಯಿಯ ಕಿವಿಯಂತೆ ಕಾಣುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಗ್ರಂಥಾಲಯದ ಶಿಸ್ತನ್ನು ಪಾಲಿಸುವವರು ಮತ್ತು ಪುಸ್ತಕಗಳನ್ನು ಅತ್ಯಂತ ಜಾಗರೂಕತೆಯಿಂದ ಇಟ್ಟುಕೊಳ್ಳುವವರು ಈ ಅಭ್ಯಾಸವನ್ನು ಇಷ್ಟಪಡುವುದಿಲ್ಲ. ಏಕೆಂದರೆ ಇದು ಪುಟದ ಮೇಲೆ ಕಾಯಂ ಆಗಿ ಗೆರೆಯನ್ನು ಮೂಡಿಸುತ್ತದೆ ಮತ್ತು ಕಾಗದದ ಗುಣಮಟ್ಟವನ್ನು ಹಾಳುಮಾಡುತ್ತದೆ.

ಪುಸ್ತಕದ ಪುಟಗಳನ್ನು ಹಾಳುಮಾಡಬಾರದು ಎಂದು ಬಯಸುವವರು ಬುಕ್ ಮಾರ್ಕ್ (Bookmark) ಅಥವಾ ಒಂದು ಸಣ್ಣ ಕಾಗದದ ತುಂಡನ್ನು ಬಳಸುತ್ತಾರೆ. ಇನ್ನು ಕೆಲವರು ಇದನ್ನು ಓದಿನ ಒಂದು ಭಾಗವೆಂದು ಭಾವಿಸುತ್ತಾರೆ. ತಾವು ಓದಿದ ಪುಸ್ತಕದ ಹಳೆಯ ನೆನಪುಗಳು ಆ ಮಡಿಕೆಗಳಲ್ಲಿ ಇರುತ್ತವೆ ಎಂಬುದು ಅವರ ವಾದ. ಪುಸ್ತಕಗಳನ್ನು ಬೈಂಡ್ ಮಾಡಿ, ಅತ್ಯಂತ ಶಿಸ್ತಿನಿಂದ ಕಾಪಾಡಿಕೊಳ್ಳುವವರಿಗೆ ಇದು ಖಂಡಿತವಾಗಿಯೂ ಒಪ್ಪಿಗೆಯಾಗದ ವಿಷಯ. ನೀವು ಪುಸ್ತಕದ ಪುಟಗಳನ್ನು ಮಡಚುವ ಬದಲು ಸುಂದರವಾದ ಬುಕ್‌ಮಾರ್ಕ್‌ಗಳನ್ನು ಬಳಸುವುದು ಪುಸ್ತಕದ ಆಯಸ್ಸನ್ನು ಹೆಚ್ಚಿಸಲು ಇರುವ ಅತ್ಯುತ್ತಮ ದಾರಿ.

ಪುಸ್ತಕದ ಪುಟಗಳ ಮೂಲೆಯನ್ನು ಮಡಚುವ ಈ 'ಡಾಗ್-ಇಯರಿಂಗ್' ಕೇವಲ ಒಂದು ಅಭ್ಯಾಸವಲ್ಲ, ಇದು ಓದುಗರ ಸಂಸ್ಕೃತಿಯಲ್ಲಿ ದಶಕಗಳಿಂದ ದೊಡ್ಡ ಚರ್ಚೆಗೆ ಗ್ರಾಸವಾಗಿರುವ ವಿಷಯ. 'ಡಾಗ್-ಇಯರ್' ಎಂಬ ಪದವು ಹದಿನೆಂಟನೇ ಶತಮಾನದಿಂದಲೇ ಬಳಕೆಯಲ್ಲಿದೆ. ನಾಯಿಗಳ ಕಿವಿಗಳು ಸಾಮಾನ್ಯವಾಗಿ ಕೆಳಕ್ಕೆ ಬಾಗಿರುವುದರಿಂದ, ಪುಸ್ತಕದ ಪುಟದ ಮಡಚಿದ ಭಾಗವು ಅದಕ್ಕೆ ಹೋಲಿಕೆಯಾಗುತ್ತದೆ ಎಂಬ ಕಾರಣಕ್ಕೆ ಈ ಹೆಸರು ಬಂದಿದೆ. ಅಂದಿನ ಕಾಲದ ಹಳೆಯ ಹಸ್ತಪ್ರತಿಗಳಲ್ಲಿಯೂ ಇಂಥ ಗುರುತುಗಳು ಕಂಡುಬಂದಿವೆ.



ಪುಸ್ತಕದ ಪುಟವನ್ನು ಪದೇ ಪದೆ ಮಡಚುವುದರಿಂದ ಕಾಗದದ ಫೈಬರ್‌ಗಳು (fibers) ಮುರಿಯುತ್ತವೆ. ಇದು ಕಾಲಾನಂತರದಲ್ಲಿ ಆ ಮೂಲೆಯು ಹರಿದು ಹೋಗಲು ಕಾರಣವಾಗಬಹುದು. ವಿಶೇಷವಾಗಿ ಹಳೆಯ ಅಥವಾ ಅಪರೂಪದ ಪುಸ್ತಕಗಳನ್ನು ಸಂಗ್ರಹಿಸುವವರು ಇದನ್ನು ಪುಸ್ತಕಕ್ಕೆ ಮಾಡುವ ಅಪರಾಧ' ಎಂದೇ ಪರಿಗಣಿಸುತ್ತಾರೆ.

ಡಾಗ್-ಇಯರಿಂಗ್ ನಲ್ಲೂ ವಿಧಗಳಿವೆ. ಮೊದಲನೆಯದು, ಸಿಂಗಲ್ ಫೋಲ್ಡ್. ಕೇವಲ ಪುಟದ ಮೇಲ್ಭಾಗದ ಮೂಲೆಯನ್ನು ಮಡಚುವುದು. ಎರಡನೆಯದು, ಡಬಲ್ ಫೋಲ್ಡ್. ಕೆಳಭಾಗವನ್ನೂ ಮಡಚುವುದು. ಇದು ಸಾಮಾನ್ಯವಾಗಿ ಅತ್ಯಂತ ಪ್ರಮುಖ ಪುಟಗಳನ್ನು ಗುರುತಿಸಲು ಬಳಸುತ್ತಾರೆ. ಮೂರನೆಯದು, ಇನ್-ಫೋಲ್ಡ್. ಪುಟದ ದೊಡ್ಡ ಭಾಗವನ್ನೇ ಒಳಗಡೆ ಮಡಚುವುದು.

ಈಗಿನ ಇ-ಬುಕ್ಸ್ (Kindle ನಂಥ ಸಾಧನಗಳಲ್ಲಿ) ಕೂಡ 'ಡಾಗ್-ಇಯರ್' ಮಾಡುವ ಆಯ್ಕೆ ಇರುತ್ತದೆ. ಅಲ್ಲಿ ಪುಟದ ಮೇಲೆ ಟ್ಯಾಪ್ ಮಾಡಿದರೆ ಸಾಕು, ಒಂದು ಡಿಜಿಟಲ್ ಮೂಲೆಯ ಗುರುತು ಮೂಡುತ್ತದೆ. ಇದು ಭೌತಿಕ ಪುಸ್ತಕದ ಈ ಹಳೆಯ ಸಂಪ್ರದಾಯವನ್ನು ಇಂದಿಗೂ ನೆನಪಿಸುತ್ತದೆ.

ಡಾಗ್-ಇಯರಿಂಗ್ ತಪ್ಪಿಸಲು ಬಂದಿದ್ದೇ ಬುಕ್ ಮಾರ್ಕ್‌ಗಳು. ಇಂದು ಇವು ಕೇವಲ ಕಾಗದದ ಚೂರುಗಳಾಗಿ ಉಳಿದಿಲ್ಲ. ಚರ್ಮದ ಬುಕ್ ಮಾರ್ಕ್‌ಗಳು, ಲೋಹದ ಕ್ಲಿಪ್‌ಗಳು, ಮತ್ತು ಕೈಯಿಂದ ಮಾಡಿದ ಚಿತ್ರಕಲೆಗಳಿರುವ ಬುಕ್ ಮಾರ್ಕ್‌ಗಳು ಪುಸ್ತಕದ ಅಂದವನ್ನು ಹೆಚ್ಚಿಸುತ್ತವೆ. ಪುಸ್ತಕಗಳನ್ನು ದೀರ್ಘಕಾಲ ಬಾಳಿಕೆ ಬರುವಂತೆ ನೋಡಿಕೊಳ್ಳುವ ಹವ್ಯಾಸ ನಿಮಗಿದ್ದರೆ, ಪುಟಗಳನ್ನು ಮಡಚುವ ಬದಲು ಆಕರ್ಷಕ ಬುಕ್ ಮಾರ್ಕ್‌ಗಳನ್ನು ಬಳಸುವುದು ಹೆಚ್ಚು ಸೂಕ್ತ.

ಡಾಗ್-ಇಯರಿಂಗ್ ಬಗ್ಗೆ ಇನ್ನೂ ಆಳವಾಗಿ ನೋಡುವುದಾದರೆ, ಇದು ಕೇವಲ ಪುಟ ಮಡಚುವ ಕ್ರಿಯೆಯಲ್ಲ, ಬದಲಿಗೆ ಒಬ್ಬ ಓದುಗ ತನ್ನ ಪುಸ್ತಕದೊಂದಿಗೆ ಬೆಳೆಸುವ ಒಂದು ರೀತಿಯ 'ಸಂವಹನ' ಎಂದೂ ಹೇಳಬಹುದು. ಕೆಲವು ಸಂಶೋಧಕರ ಪ್ರಕಾರ, ಒಬ್ಬ ಓದುಗ ತನ್ನ ಪುಸ್ತಕದ ಪುಟವನ್ನು ಮಡಚಿದಾಗ, ಆ ಪುಸ್ತಕವು ಕೇವಲ ಒಂದು ವಸ್ತುವಾಗಿ ಉಳಿಯದೆ ಆ ವ್ಯಕ್ತಿಯ ವೈಯಕ್ತಿಕ ಡೈರಿಯಂತಾಗುತ್ತದೆ. ನೀವು ಮಡಚಿದ ಪುಟವನ್ನು ದಶಕಗಳ ನಂತರ ನೋಡಿದಾಗ, ಅಂದು ನಾನು ಈ ಸಾಲನ್ನು ಓದಿದಾಗ ನನಗೆ ಹೀಗೆ ಅನ್ನಿಸಿತ್ತು' ಎಂಬ ಹಳೆಯ ನೆನಪುಗಳು ಮರುಕಳಿಸುತ್ತವೆ.

ಆದರೆ ಗ್ರಂಥಾಲಯದ ಪುಸ್ತಕಗಳನ್ನು ಡಾಗ್-ಇಯರ್ ಮಾಡುವುದನ್ನು 'ಪುಸ್ತಕ ವಿರೂಪಗೊಳಿಸುವಿಕೆ' (Vandalism) ಎಂದೇ ಪರಿಗಣಿಸಲಾಗುತ್ತದೆ. ಸಾರ್ವಜನಿಕ ಪುಸ್ತಕಗಳು ಎಲ್ಲರಿಗೂ ಸೇರಿದವುಗಳಾದ್ದರಿಂದ, ಒಬ್ಬರು ಮಾಡಿದ ಮಡಿಕೆ ಇನ್ನೊಬ್ಬರಿಗೆ ಕಿರಿಕಿರಿ ಉಂಟುಮಾಡಬಹುದು. ಅದಕ್ಕಾಗಿಯೇ ಲೈಬ್ರರಿಯವರು ಪುಸ್ತಕದ ಮೇಲೆ ಯಾವುದೇ ಗುರುತುಗಳನ್ನು ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡುತ್ತಾರೆ.

ಪುಸ್ತಕ ಪ್ರಕಾಶಕರು ಬಳಸುವ ಕಾಗದದ ಗುಣಮಟ್ಟ (GSM - Grams per Square Meter) ಎಷ್ಟು ಉತ್ತಮವಾಗಿದೆಯೋ, ಅಷ್ಟು ಸುಲಭವಾಗಿ ಪುಟದ ಮಡಿಕೆಗಳು ಮಾಯವಾಗುವುದಿಲ್ಲ. ತುಂಬಾ ತೆಳುವಾದ ಕಾಗದದಲ್ಲಿ ಡಾಗ್-ಇಯರಿಂಗ್ ಮಾಡಿದರೆ ಆ ಪುಟವು ಬೇಗನೆ ದುರ್ಬಲಗೊಳ್ಳುತ್ತದೆ. ಕೆಲವು ಪ್ರೀಮಿಯಂ ಹಾರ್ಡ್‌ಬೌಂಡ್ ಪುಸ್ತಕಗಳಲ್ಲಿ ಈ ಅಭ್ಯಾಸವು ಪುಸ್ತಕದ ಬೆನ್ನೆಲುಬಿನ (Spine) ಮೇಲೆಯೂ ಒತ್ತಡ ಹೇರುತ್ತದೆ.

ಜನರು ಡಾಗ್-ಇಯರಿಂಗ್ ಬದಲು, ಬೇರೆ ಏನೆಲ್ಲ ವಸ್ತುಗಳನ್ನು ಪುಸ್ತಕದ ನಡುವೆ ಇರಿಸುತ್ತಾರೆ ಎಂಬುದು ಕೂಡ ತಮಾಷೆಯಾಗಿರುತ್ತದೆ. ಬಸ್ಸಿನ ಹಳೆಯ ಟಿಕೆಟ್‌ಗಳು, ಉಪ್ಪಿನಕಾಯಿ ಅಥವಾ ಆಹಾರದ ಸಣ್ಣ ಸ್ಯಾಚೆಟ್‌ಗಳು (ಇದು ಪುಸ್ತಕದ ಕಾಗದವನ್ನು ಸಂಪೂರ್ಣ ಹಾಳು ಮಾಡುತ್ತದೆ), ಫೋಟೋಗಳು ಅಥವಾ ಒಣಗಿದ ಹೂವಿನ ಎಸಳುಗಳು, ಸಣ್ಣ ಮೊತ್ತದ ಹಣದ ನೋಟುಗಳು (ಮರೆತುಹೋದ ನಂತರ ಪುಸ್ತಕ ತೆರೆದಾಗ ಸಿಗುವ ಆ ಸಣ್ಣ ಮೊತ್ತವು ಓದುಗರಿಗೆ ದೊಡ್ಡ ಸಂತೋಷ ನೀಡುತ್ತದೆ!).

ಪುಸ್ತಕ ಪ್ರೇಮಿಗಳಲ್ಲಿ ಎರಡು ಗುಂಪುಗಳಿವೆ. ಪ್ಯೂರಿಸ್ಟ್ಸ್ (Purists)ಗಳು ಪುಸ್ತಕವನ್ನು ಕೊಂಡ ತಕ್ಷಣ ಅದನ್ನು ಬೈಂಡ್ ಮಾಡಿಸುತ್ತಾರೆ, ಧೂಳು ಸೋಕದಂತೆ ನೋಡಿಕೊಳ್ಳುತ್ತಾರೆ. ಇವರಿಗೆ ಪುಟ ಮಡಚುವುದು ಎಂದರೆ 'ಪಾಪ' ಮಾಡಿದಂತೆ. ಇನ್ನೊಬ್ಬರು ಫ್ರೀ ರೈಡರ್ಸ್ (Free Riders). ಇವರು ಪುಸ್ತಕವನ್ನು ಬಳಸಲು ಇರುವುದು ಎಂದು ನಂಬುತ್ತಾರೆ. ಇವರಿಗೆ ಡಾಗ್-ಇಯರಿಂಗ್ ಮಾಡುವುದು ಪುಸ್ತಕದೊಂದಿಗೆ ಬೆರೆಯುವ ಒಂದು ರೀತಿ.

ನೀವು ಪುಸ್ತಕಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ಆಸಕ್ತಿ ಹೊಂದಿದ್ದರೆ ಮತ್ತು ಅವುಗಳು ಮುಂದಿನ ತಲೆಮಾರಿಗೂ ಹೊಸತಾಗಿ ಕಾಣಬೇಕೆಂದು ಬಯಸಿದರೆ, ಡಾಗ್-ಇಯರಿಂಗ್ ಬದಲಿಗೆ ಫ್ರೆಡ್ ಬುಕ್ ಮಾರ್ಕ್‌ಗಳು ಅಥವಾ ಪುಸ್ತಕಕ್ಕೆ ಅಂಟಿಕೊಳ್ಳುವ ಸ್ಟಿಕ್ಕಿ ನೋಟ್ಸ್ ಬಳಸುವುದು ಜಾಣತನದ ಲಕ್ಷಣ.

'ಕರುಣಾಶರಧಿ'

ನಮ್ಮ ಪತ್ರಿಕೆಯ ಅಂಕಣಕಾರರಾದ ವಿನಾಯಕ ವೆಂ.ಭಟ್ ಅವರು ಬರೆದ 'ಕರುಣಾಶರಧಿ' ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮವಿತ್ತು. ಇದು ತಮ್ಮ ತಪಃಶಕ್ತಿಯಿಂದ ಜನಮಾನಸದ ಅಜ್ಞಾನವನ್ನು ಸರಿಸಿದ ಅಪರೂಪದ ಸಂತರಲ್ಲೊಬ್ಬರಾದ ಉತ್ತರಕನ್ನಡ ಜಿಲ್ಲೆಯ ದೀವಗಿಯ ಭಗವಾನ್ ಸದ್ಗುರು ಶ್ರೀ ಶ್ರೀ ರಾಮಾನಂದ ಅವಧೂತ ಮಹಾಸ್ವಾಮಿಗಳ ಜೀವನ ಮ್ಯಾಟ್ ಚಿಂತನೆಗಳನ್ನೊಳಗೊಂಡ ಕೃತಿ. ಲೌಕಿಕದ ಹಂಗು ತೊರೆದು, ಮೌನವನ್ನು ಧರಿಸಿ ದೀವಗಿಯ ಮಣ್ಣಿನಲ್ಲಿ ಮೌನದ ಸಾಮ್ರಾಜ್ಯ ಕಟ್ಟಿದ ಶ್ರೀ ರಾಮಾನಂದರ ಜೀವನವೇ ಒಂದು ಸಂದೇಶ. ಇಂಥ ಮನೋಜ್ಞ ಕೃತಿಗೆ ವಿನಾಯಕ ಭಟ್ ಅವರು ಅತ್ಯಂತ ಸೂಕ್ತವಾಗಿ 'ಕರುಣಾಶರಧಿ' ಎಂದು ಹೆಸರಿಟ್ಟಿದ್ದಾರೆ. ಈ ಕೃತಿಗೆ ಈ ಶೀರ್ಷಿಕೆ ಹೇಳಿ ಮಾಡಿಸಿದಂತಿದೆ.

ಕನ್ನಡ ಸಾಹಿತ್ಯ ಮತ್ತು ಭಕ್ತಿ ಪರಂಪರೆಯಲ್ಲಿ 'ಕರುಣಾಶರಧಿ' ಎಂಬ ಪದಕ್ಕೆ ಅತ್ಯಂತ ಪವಿತ್ರವಾದ ಹಾಗೂ ಭಾವಪೂರ್ಣವಾದ ಸ್ಥಾನವನ್ನು ಹೊಂದಿದೆ. ಈ ಪದವು ಕೇವಲ ಒಂದು ನಾಮಪದವಲ್ಲ; ಇದು ದೈವಿಕ ಗುಣದ ಪರಾಕಾಷ್ಠೆಯನ್ನು ಸೂಚಿಸುವ ಒಂದು ಅದ್ಭುತ ಸಂಕೇತ. 'ಕರುಣಾಶರಧಿ' ಎಂಬುದು ಸಂಸ್ಕೃತ ಮೂಲದ ಎರಡು ಪದಗಳ ಸಂಯೋಜನೆಯಿಂದಾದ ಸಂಧಿ ಪದ. ಕರುಣೆ ಅಂದರೆ ದಯೆ, ಅನುಕಂಪ, ಮರುಕ ಅಥವಾ ಇತರರ ಸಂಕಷ್ಟವನ್ನು ಕಂಡು ಮಿಡಿಯುವ ಮನೋಭಾವ.

'ಶರಧಿ' ಎಂದರೆ ಸಮುದ್ರ ಅಥವಾ ಸಾಗರ.ಆದ್ದರಿಂದ, 'ಕರುಣಾಶರಧಿ' ಎಂದರೆ 'ಕರುಣೆಯ ಸಾಗರ' ಎಂದರ್ಥ. ಶ್ರೀ ರಾಮಾನಂದರು ಎಲ್ಲ ಅರ್ಥಗಳಿಂದಲೂ 'ಕರುಣಾಶರಧಿ'ಯೇ. ಸಮುದ್ರಕ್ಕೆ ಹೇಗೆ ಅಂತ್ಯವಿಲ್ಲವೋ, ಹನಿ ಹನಿ ನೀರು ಸೇರಿ ಹೇಗೆ ಅದು ವಿಶಾಲವಾಗಿದೆಯೋ, ಹಾಗೆಯೇ ಯಾರಲ್ಲಿ ಕರುಣೆಯು ಅಳೆಯಲಾಗದಷ್ಟು ಅಪಾರವಾಗಿದೆಯೋ ಅವರನ್ನು 'ಕರುಣಾಶರಧಿ' ಎಂದು ಕರೆಯಲಾಗುತ್ತದೆ.

ಈ ಪದದ ವ್ಯಾಪ್ತಿಯನ್ನು ನಾವು ಮೂರು ಪ್ರಮುಖ ಆಯಾಮಗಳಲ್ಲಿ ಗಮನಿಸಬಹುದು. ಮೊದಲನೆಯದು, ದೈವಿಕ ವ್ಯಾಪ್ತಿ. ಭಾರತೀಯ ದರ್ಶನಗಳಲ್ಲಿ ದೇವರನ್ನು ವರ್ಣಿಸುವಾಗ 'ಕರುಣಾಶರಧಿ' ಎಂಬ ವಿಶೇಷಣವನ್ನು ಅತಿ ಹೆಚ್ಚಾಗಿ ಬಳಸಲಾಗುತ್ತದೆ. ಭಕ್ತನು ತನ್ನ ದೋಷಗಳನ್ನು ಅರಿತು ಅಸಹಾಯಕನಾದಾಗ, ಅವನನ್ನು ಉದ್ಧರಿಸುವ ಶಕ್ತಿ ದೇವರಿಗೆ ಮಾತ್ರ ಇದೆ ಎಂಬ ನಂಬಿಕೆ ಇದರ ಹಿಂದಿದೆ. ಎರಡನೆಯದು, ಪರಮಾತ್ಮನ ಗುಣ. ದೇವರು ಕೇವಲ ನ್ಯಾಯಾಧೀಶನಲ್ಲ, ಅವನು ಕರುಣಾಮಯಿ. ಸಮುದ್ರವು ಹೇಗೆ ತನ್ನಲ್ಲಿ ಬಂದು ಸೇರುವ ಕೊಳಕು ನದಿಗಳನ್ನೂ ಸ್ವೀಕರಿಸಿ ತನ್ನಂತೆಯೇ ಮಾಡಿಕೊಳ್ಳುತ್ತದೆಯೋ, ಹಾಗೆಯೇ ದೇವರು ಸಹ ಭಕ್ತನ ಪಾಪಗಳನ್ನು ಮನ್ನಿಸಿ ಆಶ್ರಯ ನೀಡುತ್ತಾನೆ.

ಮೂರನೆಯದು, ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ. ಪುರಂದರದಾಸರು, ಕನಕದಾಸರು ತಮ್ಮ ಕೀರ್ತನೆಗಳಲ್ಲಿ ವಿಠಲನನ್ನು, ಹರಿಯನ್ನು 'ಕರುಣಾಶರಧಿ' ಎಂದು ಪದೇ ಪದೆ ಸಂಬೋಧಿಸಿದ್ದಾರೆ. ನಿನಗಿಂತ ಕರುಣಾಳು ಯಾರಿಲ್ಲವಯ್ಯ' ಎಂಬ ಭಾವ ಈ ಪದದಲ್ಲಿ ಅಡಗಿದೆ.ಸಣ್ಣ ಸಣ್ಣ ಕೆರೆ-ಕುಂಟೆಗಳು ಬೇಗ ಬತ್ತಿ ಹೋಗುತ್ತವೆ. ಆದರೆ ಸಮುದ್ರ ಬತ್ತುವುದಿಲ್ಲ. ಹಾಗೆಯೇ, ಸಾಮಾನ್ಯ ಮನುಷ್ಯನ ಕರುಣೆ ಸಂದರ್ಭಕ್ಕೆ ತಕ್ಕಂತೆ ಬದಲಾಗಬಹುದು, ಆದರೆ ಕರುಣಾಶರಧಿಯ ಕರುಣೆಯು ಅಕ್ಷಯವಾದುದು.

ಭಕ್ತರು ಎಷ್ಟೇ ತಪ್ಪುಗಳನ್ನು ಮಾಡಿದರೂ, ಪಶ್ಚಾತ್ತಾಪದಿಂದ ಶರಣಾದಾಗ ಆ ದೇವರು ಸಮುದ್ರದಂತೆ ಎಲ್ಲವನ್ನೂ ಮನ್ನಿಸಿ ಸಲಹುತ್ತಾನೆ ಎಂಬ ನಂಬಿಕೆ ಇದರ ಹಿಂದಿದೆ. ಉದಾಹರಣೆಗೆ, 'ಕರುಣಾಶರಧಿ ಕಮಲಾನಯನ' ಎಂದು ವಿಷ್ಣುವನ್ನು ಸ್ತುತಿಸಲಾಗುತ್ತದೆ. ಸಮುದ್ರವು ಹೇಗೆ ವಿಶಾಲವೋ ಮತ್ತು ಗಂಭೀರವೋ, ಒಬ್ಬ ವ್ಯಕ್ತಿಯಲ್ಲಿರುವ ಕರುಣೆಯು ಕೂಡ ಅಷ್ಟೇ ಗಹನವಾಗಿರಬೇಕು ಎಂಬುದನ್ನು ಇದು ಸೂಚಿಸುತ್ತದೆ. ಸಣ್ಣಪುಟ್ಟ ದಯೆಯ ಕೆಲಸಗಳಿಗಿಂತ, ಬದುಕಿನ ಉದ್ದಕ್ಕೂ ಎಲ್ಲ ಜೀವಿಗಳ ಮೇಲೆ ತೋರುವ ಅಚಲವಾದ ಪ್ರೀತಿಯನ್ನು ಇದು ಪ್ರತಿನಿಧಿಸುತ್ತದೆ. ಸಮಾಜ ಸುಧಾರಕರು, ಮಹಾಪುರುಷರು ಮತ್ತು ಸಂತರು ತಮ್ಮ ಜೀವನದ ಮೂಲಕ ಈ 'ಕರುಣಾಶರಧಿ' ಎನಿಸಿಕೊಳ್ಳುತ್ತಾರೆ.

ಅಧ್ಯಾತ್ಮದಲ್ಲಿ, ನಮ್ಮ ಅಹಂಕಾರವನ್ನು ಕರಗಿಸಿ ಕರುಣೆಯಾಗಿ ಬದಲಾಗುವುದೇ ಜೀವನದ ಗುರಿ. ಒಬ್ಬ ಮನುಷ್ಯನು ಕರುಣಾಶರಧಿಯಾದಾಗ, ಅವನಲ್ಲಿ ದ್ವೇಷ, ಅಸೂಯೆ ಮತ್ತು ಕ್ರೋಧಕ್ಕೆ ಜಾಗವಿರುವುದಿಲ್ಲ. ಎಲ್ಲವನ್ನೂ ಒಳಗೊಳ್ಳುವ ಸಮುದ್ರದ ಗುಣದಂತೆ, ಅವನು ಪರಕೀಯರನ್ನೂ ತನ್ನವರೆಂದು ಭಾವಿಸುತ್ತಾನೆ. 'ಪಾಲಿಸು ಎನ್ನನು ಕರುಣಾಶರಧಿಯೇ' ಎಂದು ಬೇಡುವ ಮೂಲಕ ಭಕ್ತನು ತನ್ನ ಅಸಹಾಯಕತೆಯನ್ನು ಮತ್ತು ದೇವರ ಪರಮ ಕೃಪೆಯನ್ನು ಏಕಕಾಲದಲ್ಲಿ ವ್ಯಕ್ತಪಡಿಸುತ್ತಾನೆ.

'ಕರುಣಾಶರಧಿ' ಎನ್ನುವುದು ಕೇವಲ ಒಂದು ಗುಣವಲ್ಲ, ಅದೊಂದು ಜೀವನ ದರ್ಶನ, ಅದೊಂದು ಪರಮ ಸ್ಥಿತಿ. ಇದು ಪ್ರೀತಿ, ಕ್ಷಮೆ ಮತ್ತು ಔದಾರ್ಯದ ಸಮನ್ವಯ. ನಮ್ಮನ್ನು ಸಲಹುವ ಶಕ್ತಿಯು ಕರುಣೆಯ ಸಾಗರವಾಗಿದ್ದಾಗ, ನಾವು ಭಯಮುಕ್ತರಾಗಿ ಬದುಕಲು ಸಾಧ್ಯ ಎಂಬ ಭರವಸೆಯನ್ನು ಈ ಪದವು ನೀಡುತ್ತದೆ.

'ಸಾಗರದಂಥ ಕರುಣೆ ತುಂಬಿರುವ ಕರುಣಾಶರಧಿ'ಗೆ ಸಮವಾದ ಇಂಗ್ಲಿಷ್ ಪದ ಯಾವುದು ? ಇಂಗ್ಲಿಷಿನಲ್ಲಿ ಕರುಣೆಗೆ Compassion ಎಂಬ ಅರ್ಥವಿದೆ. ಕರುಣಾಶರಧಿಗೆ Ocean of Mercy ಅಥವಾ Ocean of Compassion ಎಂದು ಹೇಳಬಹುದು. ಆದರೆ ಈ ಪದಗಳು, 'ಕರುಣಾಶರಧಿ' ಮುಂದೆ ಸಣ್ಣ ತೊರೆಯಂತೆ.

ಇದು ಯೂಟ್ಯೂಬ್ ಜಮಾನ

ಯೂಟ್ಯೂಬ್ ಗಿಂತ ದೊಡ್ಡ ಗುರು ಇಲ್ಲ ಎನ್ನುವ ಜಮಾನದಲ್ಲಿದ್ದೇವೆ. ಪ್ರತಿ ಸಮಸ್ಯೆಗೂ ಯೂಟ್ಯೂಬ್ ನಲ್ಲಿ ಪರಿಹಾರವಿದೆ ಎನ್ನುವಂತಾಗಿದೆ. ಹಿಂದೆಲ್ಲ ಏನಾದರೂ ತಿಳಿಯದಿದ್ದರೆ ಅಜ್ಜನನ್ನೋ, ಅಜ್ಜಿಯನ್ನೋ ಅಥವಾ ಅನುಭವಸ್ಥರನ್ನೋ ಕೇಳುತ್ತಿದ್ದೆವು. ಆದರೆ ಈಗ ಕಾಲ ಬದಲಾಗಿದೆ. ನಮಗೆ 'ಯೂಟ್ಯೂಬ್ ಗುರು' ಸಿಕ್ಕಿದ್ದಾನೆ. ಬೆಳಗ್ಗೆ ಎದ್ದ ತಕ್ಷಣ ಹಲ್ಲುಜ್ಜುವುದು ಹೇಗೆ ಎನ್ನುವುದರಿಂದ ಹಿಡಿದು, ರಾತ್ರಿ ನಿದ್ದೆ ಮಾಡುವುದು ಹೇಗೆ ಎನ್ನುವವರೆಗೆ ಎಲ್ಲದಕ್ಕೂ ಯೂಟ್ಯೂಬ್ ನಲ್ಲಿ ಟ್ಯುಟೋರಿಯಲ್ ಇದೆ.

ಪರಿಸ್ಥಿತಿ ಹೇಗಿದೆಯೆಂದರೆ, ಯಾರಿಗಾದರೂ ಮದುವೆ ನಿಶ್ಚಯವಾದರೆ ಹುಡುಗನಿಗೆ ಸಂಸ್ಕಾರ ಇದೆಯೇ?' ಎಂದು ಕೇಳುವ ಬದಲು, ಹುಡುಗನಿಗೆ ಯೂಟ್ಯೂಬ್ನಲ್ಲಿ ಸರ್ಚ್ ಮಾಡೋ ಸಂಸ್ಕಾರ ಇದೆಯೇ?' ಎಂದು ಕೇಳುವಂತಾಗಿದೆ. ಅಡುಗೆ ಮನೆಯಲ್ಲಿ ಉಪ್ಪು ಹೆಚ್ಚಾದರೆ ಅದಕ್ಕೆ ಪರಿಹಾರ ಹುಡುಕಲು ಯೂಟ್ಯೂಬ್ ನೋಡುವ ಗೃಹಿಣಿಯರು, ವಿಡಿಯೋ ಮಧ್ಯೆ ಬರುವ 'ಆ್ಯಡ್' (ಜಾಹೀರಾತು) ನೋಡಿ ಅಡುಗೆಯನ್ನೇ ಮರೆತು ಆನ್‌ಲೈನ್ ಶಾಪಿಂಗ್ ಮಾಡಿದ ಉದಾಹರಣೆಗಳೂ ಇವೆ!

ಇನ್ನು ಕೆಲವು ಅತಿಮಾನುಷರು 'ಕಣ್ಣು ಮುಚ್ಚಿ ಕಾರು ಓಡಿಸುವುದು ಹೇಗೆ?' ಎಂದು ಯೂಟ್ಯೂಬ್ ನೋಡಿ ಕಲಿಯಲು ಹೋಗಿ, ಕೊನೆಗೆ 'ಆಸ್ಪತ್ರೆಯಲ್ಲಿ ಬೆಡ್ ಬುಕ್ ಮಾಡುವುದು ಹೇಗೆ?' ಎಂಬ ವಿಡಿಯೋ ನೋಡುವ ಸ್ಥಿತಿ ತುಲುಪಿದ್ದೂ ಇದೆ. ಒಟ್ಟಿನಲ್ಲಿ, ಗುರುವಿನ ಗುಲಾಮನಾಗುವ ಮುನ್ನ 'ಡೇಟಾ ಪ್ಯಾಕ್' ಗುಲಾಮನಾಗದಿದ್ದರೆ ಜ್ಞಾನೋದಯ ಅಸಾಧ್ಯ ಎನ್ನುವಂತಾಗಿದೆ ಈ ಡಿಜಿಟಲ್ ಜಮಾನ!

ಯೂಟ್ಯೂಬ್ ಮತ್ತು ಇಂದಿನ ಅತಿಯಾದ ಮೊಬೈಲ್ ವ್ಯಾಮೋಹದ ಬಗ್ಗೆ ಒಂದು ಮಜಾ ಪ್ರಸಂಗವನ್ನು ನಿಮಗೆ ಹೇಳಬೇಕು. ಒಬ್ಬ ವ್ಯಕ್ತಿ ಯೂಟ್ಯೂಬ್ನಲ್ಲಿ ಅಡುಗೆ ಚಾನೆಲ್ ನೋಡಿ, 'ಗುಲಾಬ್ ಜಾಮೂನ್ ಮಾಡುವುದು ಹೇಗೆ?' ಎಂದು ಕಲಿಯುತ್ತಿರುತ್ತಾನೆ. ವಿಡಿಯೋದಲ್ಲಿ ಯೂಟ್ಯೂಬರ್ ಹೇಳುತ್ತಾನೆ - ಸ್ನೇಹಿತರೇ, ಮೊದಲು ಹಿಟ್ಟನ್ನು ಚೆನ್ನಾಗಿ ಕಲಸಿಕೊಳ್ಳಿ, ಆಮೇಲೆ ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ...'

ಅಷ್ಟೊತ್ತಿಗೆ ಸರಿಯಾಗಿ ಮನೆಯಲ್ಲಿ ಕರೆಂಟ್ ಹೋಗಿ ವೈ-ಫೈ ಆಫ್ ಆಗುತ್ತದೆ. ವಿಡಿಯೋ ಲೋಡ್ ಆಗದೇ 'ಬಫರಿಂಗ್' ಆಗುತ್ತಾ ರೌಂಡ್ ಆಗಿ ಸುತ್ತಲು ಶುರುವಾಗುತ್ತದೆ. ಇವನಿಗೆ ಅರ್ಧಕ್ಕೆ ನಿಲ್ಲಿಸಲು ಇಷ್ಟವಿಲ್ಲದೇ, ಮೊಬೈಲ್ ಡೇಟಾ ಆನ್ ಮಾಡಿ ವಿಡಿಯೋ ಪ್ಲೇ ಮಾಡುತ್ತಾನೆ. ಆದರೆ ನೆಟ್‌ವರ್ಕ್ ಸಮಸ್ಯೆಯಿಂದಾಗಿ ವಿಡಿಯೋ ಸ್ವಲ್ಪ 'ಜಂಪ್' ಆಗಿ ಅಡುಗೆ ಚಾನೆಲ್ ಬದಲು, ಸಿಮೆಂಟ್‌ನಿಂದ ಕುಂಡ ತಯಾರಿಸುವುದು ಹೇಗೆ?' ಎಂಬ ರಿಯಲ್ ಎಸ್ಟೇಟ್ ಚಾನೆಲ್‌ಗೆ ಬದಲಾಗಿ ಬಿಡುತ್ತದೆ.

ಪಾಪ, ಈತ ಅಡುಗೆ ವಿಡಿಯೋ ಅಂದುಕೊಂಡು ಅದನ್ನೇ ಫಾಲೋ ಮಾಡುತ್ತಾನೆ. ಯೂಟ್ಯೂಬರ್ (ರಿಯಲ್ ಎಸ್ಟೇಟ್ ಚಾನೆಲ್) - ಈಗ ಇದಕ್ಕೆ ಸ್ವಲ್ಪ ಮರಳು ಮತ್ತು ನೀರು ಸೇರಿಸಿ ಗಟ್ಟಿಯಾಗಿ ಕಲಸಿಕೊಳ್ಳಿ, ಆಮೇಲೆ ಇದನ್ನು ಬಿಸಿಲಿನಲ್ಲಿ ಎರಡು ದಿನ ಒಣಗಲು ಬಿಡಿ...'

ಮರುದಿನ ಗಂಡ ಅಡುಗೆ ಮನೆಯಲ್ಲಿ ಮರಳು-ಸಿಮೆಂಟ್ ಮಿಕ್ಸ್ ಮಾಡುತ್ತಿರುವುದನ್ನು ನೋಡಿ ಹೆಂಡತಿ ಶಾಕ್ ಆಗಿ ಕೇಳುತ್ತಾಳೆ - 'ರೀ, ಇದೇನ್ ಮಾಡ್ತಿದ್ದೀರಿ?' ಗಂಡ ಗಂಭೀರವಾಗಿ ಹೇಳುತ್ತಾನೆ -'ಯೂಟ್ಯೂಬ್ ನೋಡಿ ಜಾಮೂನ್ ಮಾಡ್ತಿದ್ದೀನಿ ಕಣೆ. ವಿಡಿಯೋದಲ್ಲಿ ಹೇಳಿದಂತೆ, ಇದು ಇನ್ನೂ ಎರಡು ದಿನ ಒಣಗಬೇಕಂತೆ, ಆಮೇಲೆ ಕಲ್ಲಿನ ತರ ಗಟ್ಟಿಯಾಗುತ್ತದಂತೆ...'

ಅದನ್ನು ಕೇಳಿದ ಹೆಂಡತಿ ಸಿಟ್ಟಿನಿಂದ, 'ನಿಮ್ಮ ತಲೆ, ನೀವು ಮಾಡಿದ ಜಾಮೂನ್ ತಿನ್ನಲು ಜೆಸಿಬಿ ಬೇಕಾಗುತ್ತೆ!'

ನೀತಿ: ಯೂಟ್ಯೂಬ್ ನೋಡಿ ಅಡುಗೆ ಮಾಡುವಾಗ 'ಆ್ಯಡ್' (ಜಾಹೀರಾತು) ಬಂದರೆ ಪರವಾಗಿಲ್ಲ, ಆದ್ರೆ ಚಾನೆಲ್ ಬದಲಾದರೆ ಹಲ್ಲು ಉಳಿಯೋದು ಕಷ್ಟ!

ಲೈಕ್ಸ್ ಮತ್ತು ಸಬ್‌ಸ್ಕ್ರೈಬ್

ಒಬ್ಬ ವ್ಯಕ್ತಿ ವಿಮಾನದಿಂದ ಪ್ಯಾರಾಚೂಟ್ ಕಟ್ಟಿಕೊಂಡು ಜಿಗಿದ. ಗಾಳಿಯಲ್ಲಿ ಹೋಗುವಾಗ ಪ್ಯಾರಾಚೂಟ್ ಓಪನ್ ಆಗಲಿಲ್ಲ, ತಕ್ಷಣ ಮೊಬೈಲ್ ತೆಗೆದು ಸರ್ಚ್ ಮಾಡಿದ - 'How to open parachute in 5 seconds?'

ವಿಡಿಯೋ ಶುರುವಾಯ್ತು. 'ನಮಸ್ಕಾರ ಫ್ರೆಂಡ್ಸ್, ಇವತ್ತಿನ ವಿಡಿಯೋದಲ್ಲಿ ಪ್ಯಾರಾಚೂಟ್ ಹೇಗೆ ಓಪನ್ ಮಾಡೋದು ಅಂತ ನೋಡೋಣ. ಅದಕ್ಕಿಂತ ಮುಂಚೆ ನಮ್ಮ ಚಾನೆಲ್ ಗೆ ಸಬ್‌ಸ್ಕ್ರೈಬ್ ಆಗಿ...'

ಆ ವ್ಯಕ್ತಿ, 'ಲೋ ಈಡಿಯಟ್.. ನಾನು ಸಬ್‌ಸ್ಕ್ರೈಬ್ ಆಗುವಷ್ಟರಲ್ಲಿ ನೆಲಕ್ಕೆ ಬಿದ್ದು ನೆಗೆದು ಹೋಗಿರುತ್ತೇನೆ. ನಂತರ ಮೇಲೆ ಹೋಗಿ ಸಬ್‌ಸ್ಕ್ರೈಬ್,ಆಗಿ ನಿನ್ನ ಪಿಂಡಕ್ಕೆ 'ಲೈಕ್' ಕೊಡುತ್ತೇನೆ' ಎಂದ.

ಚರಣಶೃಂಗರಹಿತ ಸ್ತೋತ್ರವೂ ಪತಂಜಲಿಯ ಕಥೆಯೂ!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಗೆವ ಬುದ್ಧಿಗೆ ಅನಂತ ಅವಕಾಶ... ಹೊಳೆದದ್ದು ತಾರೆ, ಉಳಿದದ್ದು ಆಕಾಶ... ಹೆಕ್ಕಿದ್ದು ಮುತ್ತು, ಮಿಕ್ಕಿದ್ದು ಸಾಗರ... ಮಲ್ಲಿಗೆಕವಿ ಕೆ.ಎಸ್. ನರಸಿಂಹಸ್ವಾಮಿಯವರ ಈ ಪದಪುಂಜಗಳು ಬಲು ಅರ್ಥಗರ್ಭಿತ. ಭಾಷಣಗಳಲ್ಲಿ, ಬರವಣಿಗೆಯಲ್ಲಿ ಆಗಾಗ ಉದ್ಧೃತ. ಸಾಮಾನ್ಯವಾಗಿ ವ್ಯಕ್ತಿ-ವ್ಯಕ್ತಿತ್ವಗಳ ಪ್ರಶಂಸೆಯ ಸಂದರ್ಭದಲ್ಲಿ.

ಇವುಗಳನ್ನು ಬಳಸಲಾಗುತ್ತದಾದರೂ ಅದಕ್ಕಿಂತ ಮಿಗಿಲಾಗಿ ನಮ್ಮ ಸನಾತನ ಸಂಸ್ಕೃತಿ, ಧರ್ಮ, ಪರಂಪರೆ, ಆಚಾರ-ವಿಚಾರಗಳ ವೈಶಾಲ್ಯವನ್ನು, ಅಗಾಧತೆಯನ್ನು ಬಣ್ಣಿಸುವಾಗ ಇವು ಇನ್ನಷ್ಟು ಸೂಕ್ತವೆನಿಸುತ್ತವೆ. ವಿಪರ್ಯಾಸವೆಂದರೆ ನನ್ನಿಂದ ಮೊದಲ್ಗೊಂಡು ನಮ್ಮಲ್ಲಿ ಹೆಚ್ಚಿನವರಿಗೆ ಅಗೆವ ಬುದ್ಧಿಯೂ ಇರುವುದಿಲ್ಲ; ಬುದ್ಧಿ ಅಷ್ಟಿಷ್ಟು ಇದ್ದರೂ ಅಗೆಯುವುದಕ್ಕೆ ಸಮಯ, ವ್ಯವಧಾನಗಳು ಇರುವುದಿಲ್ಲ; ಒಂದುವೇಳೆ ಅವುಗಳನ್ನು ಹೇಗೋ ಹೊಂದಿಸಿಕೊಂಡರೂ ಬೇರೆ ಅಗತ್ಯವಾದ ಸಂಪನ್ಮೂಲಗಳ ಲಭ್ಯತೆ ಇರುವುದಿಲ್ಲ. ಹಾಗಾಗಿ ಬೌದ್ಧಿಕವಾಗಿ ಆರಕ್ಕೇರದ ಮೂರಕ್ಕಿಳಿಯದ ಯಥಾಸ್ಥಿತಿಯಲ್ಲಿ ಮುಂದುವರೆಯುವುದು ಅನಿವಾರ್ಯವಾಗುತ್ತದೆ. ಪರಂತು ಚೂರೇಚೂರು ಬುದ್ಧಿಯನ್ನು ಉಪಯೋಗಿಸಿ, ಸ್ವಲ್ಪೇಸ್ವಲ್ಪ ಸಮಯವನ್ನೂ ವ್ಯಯಿಸಿ, ಸೀಮಿತ ಸಂಪನ್ಮೂಲಗಳನ್ನೇ ಬಳಸಿಕೊಂಡು ಅಗೆದದ್ದೇ ಆದರೆ ಎಂತೆಂಥ ಸೋಜಿಗದ ಸಂಗತಿಗಳಅನಾವರಣವಾಗುತ್ತದೆ, ಥಳಥಳ ಹೊಳೆವ ಜ್ಞಾನನಿಧಿ ಸಿಗುತ್ತದೆ ಎಂಬುದಕ್ಕೆ ಒಂದು ಚಿಕ್ಕ ನಿದರ್ಶನವನ್ನು ಇಂದು ನಿಮ್ಮ ಮುಂದಿಡುವವನಿದ್ದೇನೆ. ಅದಾದದ್ದು ಹೀಗೆ. ಕಳೆದ ಶನಿವಾರ ಇಲ್ಲಿ ನಮ್ಮ ವಾಷಿಂಗ್ಟನ್ ಡಿಸಿ ಪ್ರದೇಶದ ಚಿನ್ಮಯ ಮಿಷನ್ ಸಭಾಂಗಣದಲ್ಲಿ ಸುಂದರವಾದೊಂದು ಭರತನಾಟ್ಯ ಪ್ರದರ್ಶನ ನಡೆಯಿತು. ಇಲ್ಲಿಯ 'ಸೃಷ್ಟಿ ಸ್ಕೂಲ್ ಆಫ್ ಡ್ಯಾನ್ಸ್‌ನ ನೃತ್ಯಗುರು ವಿದುಷಿ ವಾಣಿ ರಮೇಶ್ ಅವರಿಂದ ನೃತ್ಯ ಕಲಿತ ಶಿಲ್ಪಾ ಶ್ರೀಕಂಠ ಅವರ ಕಲಾಸಮರ್ಪಣ ಕಾರ್ಯಕ್ರಮವದು. ಸಾಂಪ್ರದಾಯಿಕ ರಂಗಪ್ರವೇಶದಂತೆಯೇ, ಆದರೆ ಲೈವ್ ಸಂಗೀತ ತಂಡ ಇರಲಿಲ್ಲ, ಧ್ವನಿಮುದ್ರಿತ ಆಡಿಯೊಟ್ರ್ಯಾಕ್ಸ್ ಅಷ್ಟೇ ವ್ಯತ್ಯಾಸ. ಗುರು-ಶಿಷ್ಯೆ ಇಬ್ಬರೂ ಮೈಸೂರು ಮೂಲದ ಕನ್ನಡಿತಿಯರು ಅಂದ ಮೇಲೆ ಒಂದು ಮಟ್ಟದ ವಿಶೇಷ ಸಾಂಸ್ಕೃತಿಕ ಸೌರಭ ಅಲ್ಲಿ ಮೇಳೈಸಿತ್ತೆಂದು ನೀವು ಸುಲಭವಾಗಿ ಊಹಿಸಬಹುದು. ಅಲ್ಲದೇ, ಶಿಲ್ಪಾ ಪೂರ್ಣಾವಧಿ ಐಟಿ ಉದ್ಯೋಗಿಯಾಗಿದ್ದು, ಎರಡು ಮಕ್ಕಳ ತಾಯಿಯಾದ ಮೇಲೆ ನೃತ್ಯಶಿಕ್ಷಣ ಪಡೆದು ಕಾರ್ಯಕ್ರಮ ನೀಡಿದರೆಂದರೆ ಅವರ ಅಪರಿಮಿತ ಹುಮ್ಮಸ್ಸನ್ನೂ ನೀವು ಊಹಿಸಬಹುದು. ಎರಡು ಗಂಟೆಗಳ ನೃತ್ಯಪ್ರದರ್ಶನದಲ್ಲಿ- ಕನಕದಾಸರ ಬಗೆಗೊಂದು ಪ್ರಸ್ತುತಿ, ಡಿವಿಜಿಯವರ ಅಂತಃಪುರ ಗೀತೆಗಳಿಂದ ಒಂದು, ಹೀಗೆ ವಿವಿಧ ಆಕರ್ಷಕ ಪ್ರಸ್ತುತಿಗಳಿದ್ದವು. ವಾಣಿಯವರ ವಿದ್ಯಾರ್ಥಿನಿಯರ ಕೆಲ ರಂಗಪ್ರವೇಶಗಳನ್ನು ಈ ಹಿಂದೆಯೂ ನೋಡಿದ್ದೇನಾದ್ದರಿಂದ ಕನ್ನಡ ಮತ್ತು ಸಂಸ್ಕೃತ ಕೃತಿಗಳಿಗೆ ಪ್ರಾಶಸ್ತ್ಯ, ಸದಭಿರುಚಿಯ ವೈವಿಧ್ಯ ಗೊತ್ತಿದ್ದದ್ದೇ. ಹಾಗೆ ಮೊನ್ನೆಯೂ ಒಂದು ಅನನ್ಯ ಪ್ರಸ್ತುತಿ ಇತ್ತು: ಚರಣಶೃಂಗರಹಿತ ನಟರಾಜ ಸ್ತೋತ್ರ! ಪ್ರೇಕ್ಷಕರಲ್ಲಿ ಕನ್ನಡೇತರರೂ ಸಾಕಷ್ಟು ಸಂಖ್ಯೆಯಲ್ಲಿದ್ದುದರಿಂದ ಕಾರ್ಯಕ್ರಮ ನಿರೂಪಣೆ ಇಂಗ್ಲಿಷ್‌ನಲ್ಲಿದ್ದದ್ದು. ವಾಣಿಯವರ ಪುತ್ರ ಭರತ್ ಅದನ್ನು ಚೆನ್ನಾಗಿ ನಿರ್ವಹಿಸಿದ್ದನು. ಸರಿ, ಈ ಚರಣಶೃಂಗರಹಿತ ಸ್ತೋತ್ರದ ನಿರೂಪಣೆಯೂ ಕುತೂಹಲಕರವಾಗಿತ್ತು. ಸ್ತೋತ್ರದ ವಿಶೇಷತೆ ಏನು, ಯಾವ ಸನ್ನಿವೇಶದಲ್ಲಿ ಪತಂಜಲಿ ಮಹರ್ಷಿ ಅದನ್ನು ರಚಿಸಿದ್ದು ಅಂತೆಲ್ಲ ವಿವರಣೆ. ಜತೆಗೆ ಒಂದು ಪುರಾಣಕಥೆ ಕೂಡ. ಆ ಕ್ಷಣದಲ್ಲಿ ಕಿವಿಗೆ ಬಿದ್ದದ್ದನ್ನಷ್ಟೇ ಕೇಳಿಸಿಕೊಂಡು ನೃತ್ಯವನ್ನು ವೀಕ್ಷಿಸಿದೆ. ''ಸದಂಚಿತ ಮುದಂಚಿತ ನಿಕುಂಚಿತ ಪದಂ ಝುಲಝುಲಂಚಲಿತ ಮಂಜುಕಟಕಮ್। ಪತಂಜಲಿ ದೃಗಂಜನ ಮನಂಜನ ಮಚಂಚಲಪದಂ ಜನನ ಭಂಜನಕರಮ್...'' ಅಂತ ಸ್ತೋತ್ರಸಾಹಿತ್ಯ, ಶಿವತಾಂಡವ ನೃತ್ಯಕ್ಕೆ ತಕ್ಕುದಾದ ಹಿನ್ನೆಲೆ ಸಂಗೀತದ ಅಬ್ಬರದಲ್ಲಿ ಅಷ್ಟೇನೂ ಅರ್ಥವಾಗಲಿಲ್ಲ. ಕಾರ್ಯಕ್ರಮ ಮುಗಿದ ಮೇಲೆ ವಾಣಿಯವರನ್ನು ಮಾತಾಡಿಸಿ, ''ಚರಣಶೃಂಗರಹಿತ ಸ್ತೋತ್ರ ಅಂತ ನಾನು ಈವತ್ತೇ ಮೊದಲಬಾರಿಗೆ ಕೇಳ್ತಿರೋದು. ಅದರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಕುತೂಹಲ ಮೂಡಿದೆ. ಭರತ್‌ನ ನಿರೂಪಣೆಯಿಂದ ಆ ಭಾಗವನ್ನಷ್ಟೇ ನನಗೆ ವಾಟ್ಸ್ಯಾಪ್‌ನಲ್ಲಿ ಕಳುಹಿಸುವಿರಾ?'' ಎಂದು ಕೇಳಿದೆ. ಇಂಥ ವಿಚಾರಗಳಲ್ಲಿ ನನ್ನ ಆಸಕ್ತಿ ಅವರಿಗೆ ಗೊತ್ತಿರುವುದರಿಂದ ಸಂತೋಷದಿಂದ ಒಪ್ಪಿ ಕಳುಹಿಸಿದರು. ಅದರ ಸಾರಾಂಶ ಕನ್ನಡದಲ್ಲಿ ಹೀಗೆ: ''ಚರಣಶೃಂಗರಹಿತ ನಟರಾಜ ಸ್ತೋತ್ರ ಅಥವಾ ಶಂಭುನಟನಂ ಎಂದು ಕರೆಯಲಾಗುವ ಈ ವಿಶಿಷ್ಟ ರಚನೆಯಲ್ಲಿ, ಶಿವಭಕ್ತನಾದ ಮಹರ್ಷಿ ಪತಂಜಲಿ, ಪರಮೇಶ್ವರನ ಆನಂದ ತಾಂಡವವನ್ನು ವರ್ಣಿಸುತ್ತಾನೆ. ಪತಂಜಲಿಯನ್ನು ಆದಿಶೇಷನ ಅವತಾರವೆಂದು ನಂಬಲಾಗುತ್ತದೆ. ಅವನಿಗೆ ಮನುಷ್ಯನ ಪರ್ವತಕ್ಕೆ ಮುಖವಿದ್ದು, ದೇಹದ ಕೆಳಭಾಗವು ಹಾವಿನಂತೆ ಇತ್ತು. ಶಿವತಾಂಡವ ನೃತ್ಯವನ್ನು ನೋಡಿ ಕಣ್ತುಂಬಿಕೊಳ್ಳಬೇಕೆಂಬ ಆಶಯದಿಂದ, ಪತಂಜಲಿ ಮಹರ್ಷಿ ಮತ್ತೊಬ್ಬ ಋಷಿಯಾದ ವ್ಯಾಘ್ರಪಾದನೊಂದಿಗೆ ಕೈಲಾಸ ಯಾತ್ರೆ ಕೈಗೊಂಡನು. ವ್ಯಾಘ್ರಪಾದನಿಗೆ ಹುಲಿಯ ಕಾಲುಗಳಿದ್ದವು. ಪತಂಜಲಿಗೆ ಕಾಲುಗಳಿಲ್ಲದ ಕಾರಣ, ನಿಧಾನವಾಗಿ ತೆವಳಿಕೊಂಡು ಹೋಗಬೇಕಾಯಿತು.

ಆದರೆ, ವ್ಯಾಘ್ರಪಾದ ಹುಲಿಯ ಕಾಲುಗಳಿಂ ದಾಗಿ ವೇಗವಾಗಿ ಕೈಲಾಸ ಶಿಖರ ತಲುಪಿದನು. ಅಲ್ಲಿ ನಂದಿ ಮತ್ತು ಭೃಂಗಿಯೂ ಸೇರಿ, ಪತಂಜಲಿಯನ್ನು ನಿಧಾನದವನೆಂದು ಹಾಸ್ಯ ಮಾಡಿದರು. 'ಸಂಜೆಯ ಪ್ರದೋಷ ಕಾಲಕ್ಕೆ ನಡೆಯುವ ಶಿವನ ದಿವ್ಯ ನೃತ್ಯವನ್ನು ನೀನು ನೋಡಲು ಸಾಧ್ಯವಾಗಲಿಕ್ಕಿಲ್ಲ. ನಿನಗೆ ಬಲವಾದ ಕಾಲುಗಳೂ ಇಲ್ಲ, ಕೊಂಬುಗಳೂ ಇಲ್ಲ; ವೇಗವಾಗಿ ಓಡಲಿಕ್ಕೂ ಆಗದು. ದಾರಿಯನ್ನು ತೋಡಿಕೊಂಡು ಹೋಗುತ್ತೇನೆಂದರೆ ಅದೂ ಸಾಧ್ಯ ವಾಗದು! ಎಂದು ಅವಮಾನಿಸಿದರು. ಇದರಿಂದ ಪತಂಜಲಿಗೆ ತುಂಬ ಬೇಸರವಾಯಿತು. ಕ್ರುದ್ಧನಾಗಿ ಅವನು ಈ ಸ್ತೋತ್ರವನ್ನು ರಚಿಸಿದನು. ಇದರಲ್ಲಿ ಯಾವುದೇ ದೀರ್ಘಸ್ವರಗಳು ಮತ್ತು ರ-ಕಾರ ಸಂಯುಕ್ತಾಕ್ಷರಗಳು ಇಲ್ಲದಿರುವುದು ಪತಂಜಲಿಗೂ ಕಾಲುಗಳು-ಕೊಂಬುಗಳು ಇಲ್ಲದಿದ್ದ ಸ್ಥಿತಿಯನ್ನು ಸೂಚಿಸುತ್ತದೆ. ಅಷ್ಟಾದರೂ ಅದ್ಭುತವಾದ ಈ ಸ್ತೋತ್ರದ ನಡೆ ಶಿವತಾಂಡವಕ್ಕೆ ಹೇಳಿಮಾಡಿಸಿದಂತಿದೆ!'' ಸ್ವಾರಸ್ಯ ಶುರುವಾಗುವುದು ಇಲ್ಲಿಂದಲೇ. ಇದನ್ನು ಸವಿಯಲಿಕ್ಕೆ ನಮಗೆ ದೇವನಾಗರಿ ಲಿಪಿಯ ಪರಿಚಯ ಬೇಕಾಗುತ್ತದೆ. ದೇವನಾಗರಿಯಲ್ಲಿ ಯಾವುದೇ ವ್ಯಂಜನಕ್ಕೆ ಆ, ಈ, ಏ, ಓ, ಔ ಮುಂತಾದ ದೀರ್ಘಸ್ವರ ಸೇರಿದರೆ ಆ ಅಕ್ಷರವನ್ನು ಬರೆಯುವಾಗ ಪ್ರಾಣಿಯ ಚಿತ್ರದಲ್ಲಿ ಕಾಲುಗಳಿದ್ದಂತೆ ಉದ್ದ ಗೀಟು, ಅಥವಾ ಪ್ರಾಣಿಯ ಕೊಂಬುಗಳಂತೆ ತಲೆಮೇಲೆ ಕೊಂಬು ಬರೆಯಬೇಕಾಗುತ್ತದೆ. ರ-ಕಾರ ಸಂಯುಕ್ತಾಕ್ಷರವಿದ್ದರೂ (ಸೂರ್ಯ, ಕರ್ಮ, ಸ್ವರ್ಗ ಮುಂತಾದುವುಗಳಲ್ಲಿರುವಂತೆ) ದೇವನಾಗರಿಯಲ್ಲಿ ಬರೆಯುವಾಗ ಬಲಕ್ಕೆ ಚಾಚಿದ ಕೊಂಬು ಬೇಕಾಗುತ್ತದೆ. ಈ ಸ್ತೋತ್ರದಲ್ಲಿ ಅಂಥ ಯಾವ ಅಕ್ಷರಗಳೂ ಬರುವುದಿಲ್ಲ. ಎಲ್ಲ ಹ್ರಸ್ವಾಕ್ಷರಗಳಿಂದಲೇ ಅರ್ಥಪೂರ್ಣವಾದ ಪದಲಾಲಿತ್ಯ. ತಾಂಡವನೃತ್ಯ ಮಾಡುತ್ತಿರುವ ಶಿವನ ಗೆಜ್ಜೆಗಳೇ ಘಲ್‌ಘಲ್ ಎನ್ನುತ್ತಿವೆಯೇನೋ ಅನಿಸುವಂಥ ಲಯ! ನಿಜ, ಸಂಸ್ಕೃತದಲ್ಲಿ ಈರೀತಿಯ ಅಕ್ಷರ ಚಮತ್ಕಾರಗಳಿಗೇನೂ ಬರವಿಲ್ಲ. ಇದಕ್ಕಿಂತ ಕಠಿಣ ರೀತಿಯವು- ಇಡೀ ಶ್ಲೋಕದಲ್ಲಿ ಒಂದೇ ವ್ಯಂಜನದ ಬಳಕೆ, ವರ್ಣಮಾಲೆಯ ಅಷ್ಟೂ ಅಕ್ಷರಗಳನ್ನು ಬಳಸಿದ ಶ್ಲೋಕ, ಉ-ಕಾರವನ್ನಷ್ಟೇ ಬಳಸಿದ ಶ್ಲೋಕ, ಬರೆದಾಗ ಅಕ್ಷರಗಳ ನಡೆಯು ನಿರ್ದಿಷ್ಟ ವಿನ್ಯಾಸವನ್ನು ತರುವಂಥವು ಅಂತೆಲ್ಲ ಹತ್ತುಹಲವು ಪ್ರಕಾರದವು ಇವೆ. ಆದರೂ ಕಾಲಿಲ್ಲ ಕೊಂಬಿಲ್ಲ ಎಂಬ ಮೂದಲಿಕೆಯನ್ನೇ ಸವಾಲಾಗಿ ಸ್ವೀಕರಿಸಿ ಸ್ತೋತ್ರ ರಚಿಸಿದ ಪತಂಜಲಿಯ ಪಾಂಡಿತ್ಯ ಬೆರಗಾಗುವಂಥದೇ. ಇದರಿಂದ ಪತಂಜಲಿಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಕುತೂಹಲವೂ ಮೂಡುತ್ತದೆ. ಅಲ್ಲದೇ ಆದಿಶೇಷನ ಅವತಾರವೆಂದು ನಂಬಲಾಗುತ್ತದೆ ಎಂದಿತ್ತಲ್ಲ, ಅದೇನು ಕಥೆ? ಬಹಳ ಸ್ವಾರಸ್ಯಕರವಾಗಿದೆ ಅದು ಕೂಡ! ವಿಷ್ಣುವು ಒಮ್ಮೆ ಕ್ಷೀರಸಾಗರದಲ್ಲಿ ಯಥಾಪ್ರಕಾರ ಆದಿಶೇಷನ ಮೇಲೆ ಮಲಗಿ ವಿಶ್ರಾಂತಿ ಪಡೆ ಯುತ್ತಿದ್ದನು. ಅದೇ- ''ಪರಮಪದದೊಳಗೆ ವಿಷಧರನ ತಲ್ಪದಲಿ ನೀ ಸಿರಿಸಹಿತ ಕ್ಷೀರವಾರಿಧಿಯೊಳಿರಲೂ...''



ಎಂದು ಕನಕದಾಸರು ಬಣ್ಣಿಸಿದ್ದಾರಲ್ಲಾ ಹಾಗೆ. ಆ ಸಮಯದಲ್ಲಿ ವಿಷ್ಣು ಅತೀವ ಆನಂದದಿಂದ ನಗುತಿರುವುದನ್ನು ನೋಡಿ, ದೇಹದ ಭಾರವೂ ಅತಿಯಾಗಿ ಹೆಚ್ಚಾಗಿದೆ ಎಂದು ಆದಿಶೇಷ ಗಮನಿಸಿದನು. ಆತ ತನ್ನ ಕಷ್ಟವನ್ನು ವಿಷ್ಣುವಿಗೆ ತಿಳಿಸಿ, ಏಕೆ ಇಷ್ಟು ಸಂತೋಷವಾಗಿದ್ದೀರಿ ಎಂದು ಕೇಳಿದನು. ವಿಷ್ಣು ಉತ್ತರಿಸುತ್ತ ''ಬಹಳ ವರ್ಷಗಳ ಹಿಂದೆ ದಾರುಕ ವನದಲ್ಲಿ ನಟರಾಜ ಶಿವನ ದರ್ಶನ ಪಡೆದ ಕ್ಷಣವನ್ನು ನೆನಪಿಸಿಕೊಂಡೆ. ಆ ಸಮಯದಲ್ಲಿ ನಾನು ಮೋಹಿನಿಯ ರೂಪ ತಾಳಿದ್ದೆ ಮತ್ತು ಭಿಕ್ಷಾಟನ ರೂಪದಲ್ಲಿದ್ದ ಶಿವನ ಜತೆ ಹೋಗಿದ್ದೆ. ದಾರುಕ ವನದ ಋಷಿಗಳು ಯಾಗಗಳಲ್ಲಿ ಮಾತ್ರ ತೊಡಗಿ, ಭಕ್ತಿ ಇಲ್ಲದೆ ಕರ್ಮವೇ ಮೋಕ್ಷ ಕೊಡುತ್ತದೆ ಎಂದು ತಪ್ಪಾಗಿ ಭಾವಿಸಿದ್ದರು. ಅವರಿಗೆ ವೇದಗಳ ನಿಜ ಅರ್ಥ ಮತ್ತು ಭಕ್ತಿಯ ಮಹತ್ತ್ವವನ್ನು ತಿಳಿಸಲು ಶಿವನು ಬಯಸಿದನು. ಋಷಿಗಳ ಅಜ್ಞಾನ ಮರೆಯಾದಮೇಲೆ, ಶಿವನು ನಟರಾಜನಾಗಿ ತನ್ನ ವಿಶ್ವರೂಪವನ್ನು ಅವರಿಗೆ ತೋರಿಸಿದನು. ನಾನು ಆ ನೃತ್ಯಕ್ಕೆ ಸಾಕ್ಷಿಯಾಗಿದ್ದೆ. ಆ ನೆನಪು ನನಗೆ ಅಪಾರ ಸಂತೋಷವನ್ನು ನೀಡಿತು'' ಎಂದನು. ಇದನ್ನು ಕೇಳಿದ ಆದಿಶೇಷನಿಗೆ ತಾನೂ ಒಮ್ಮೆ ನಟರಾಜನ ನೃತ್ಯವನ್ನು ನೋಡಬೇಕೆಂಬ ತೀವ್ರ ಆಸೆಯಾಯಿತು. ವಿಷ್ಣುವಿನ ಆಣತಿಯಂತೆ ಆತ ಭೂಲೋಕಕ್ಕೆ ಬಂದು ಕಠಿಣ ತಪಸ್ಸು ಮಾಡಲು ಹೊರಟನು. ತನ್ನ ಸ್ಥಾನದಲ್ಲಿ ವಿಷ್ಣುವಿಗೆ ಸೇವೆ ಮಾಡಲು ತನ್ನ ಮಗನನ್ನು ನೇಮಿಸಿ, ಆದಿಶೇಷ ಭೂಲೋಕಕ್ಕೆ ಬಂದನು. ಯಾವ ರೂಪದಲ್ಲಿ? ಗೋಣಿಕಾ ಎಂಬ ಋಷಿಪುತ್ರಿಯು ಸೂರ್ಯನಿಗೆ ಅರ್ಘ್ಯ ನೀಡುತ್ತಿದ್ದಾಗ, ಆದಿಶೇಷನು ಸಣ್ಣ ಹಾವಿನ ರೂಪ ತಾಳಿ ಆಕೆಯ ಬೊಗಸೆಯೊಳಗೆ ಬಿದ್ದನು. ಆಕೆಯ ಕೈಗಳಲ್ಲಿದ್ದ ನೀರಿನೊಂದಿಗೆ ಕೆಳಗೆ ಬಿದ್ದ ಕಾರಣ, 'ಪತಂಜಲಿ' (ಅಂಜಲಿ ಅಂದರೆ ಬೊಗಸೆ. ಅಂಜಲಿಯಿಂದ ಪತನನಾದವನು) ಎಂಬ ಹೆಸರು ಬಂದಿತು. ಅನಂತರ ಅವನು ಅರ್ಧಮಾನವ, ಅರ್ಧಸರ್ಪ ರೂಪದ ಬಾಲಕನಾಗಿ ಬದಲಾದನು. ಅರಣ್ಯಕ್ಕೆ ತೆರಳಿ ದೀರ್ಘಕಾಲ ತಪಸ್ಸು ಮಾಡಿದನು. ಬಳಿಕ ಶಿವನು ಬ್ರಹ್ಮನ ರೂಪದಲ್ಲಿ ಬಂದು ಅವನಿಗೆ ಮಹಾಸಿದ್ಧಿಗಳು ಮತ್ತು ವಿದ್ಯೆಗಳನ್ನು ಕರುಣಿಸಲು ಮುಂದಾದನು. ಆದರೆ ಪತಂಜಲಿ ಅವುಗಳನ್ನು ನಿರಾಕರಿಸಿ, ತನಗೆ ನಟರಾಜನ ದರ್ಶನವೇ ಬೇಕೆಂದು ಬೇಡಿಕೊಂಡನು. ಶಿವನು ಅವನಿಗೆ ಚಿದಂಬರಂಗೆ ಹೋಗುವಂತೆ ಹೇಳಿದನು. ಪತಂಜಲಿಯು ಭೂಮಿಯನ್ನು ಭೇದಿಸಿ ನಾಗಲೋಕಕ್ಕೆ ಹೋಗಿ, ಅಲ್ಲಿಂದ ಒಂದು ಬಿಲದ ದ್ವಾರದಿಂದ ಚಿದಂಬರಂಗೆ ಬಂದನು. ಅಲ್ಲಿನ ಪಶ್ಚಿಮ ಭಾಗದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಭಕ್ತಿಯಿಂದ ಪೂಜೆ ಮಾಡಿದನು. ಈ ದೇವರನ್ನು 'ಅನಂತೇಶ್ವರ' ಎಂದು ಕರೆಯಲಾಗುತ್ತದೆ ಮತ್ತು ಇಂದಿಗೂ ನಾಗಚೇರಿ ಕೆರೆಯ ಬಳಿಯ ದೇವಾಲಯದಲ್ಲಿ ಪೂಜಿಸಲಾಗುತ್ತಿದೆ. ಅದೇ ಸಮ ಯದಲ್ಲಿ ವ್ಯಾಘ್ರಪಾದ ಎಂಬ ಇನ್ನೊಬ್ಬ ಋಷಿಯೂ ನಟರಾಜನ ದರ್ಶನಕ್ಕಾಗಿ ತೀವ್ರವಾಗಿ ಪ್ರಾರ್ಥಿಸುತ್ತಿದ್ದನು. ಅವನೂ 'ಮೂಲನಾಥ' ಎಂಬ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಿದನು.

ಈ ದೇವಾಲಯವು ಚಿದಂಬರಂ ನಟರಾಜ ದೇವಸ್ಥಾನದ ಒಳಭಾಗದಲ್ಲಿದೆ. ವ್ಯಾಘ್ರಪಾದ (ಹುಲಿಯ ಪಾದಗಳನ್ನು ಹೊಂದಿದವನು) ಶಿವಪೂಜೆಗೆಂದು ಕತ್ತಲೆಯ ಲ್ಲಿಯೂ ಉತ್ತಮ ಹೂಗಳನ್ನು ಕೊಯ್ಯಲಿಕ್ಕಾಗುವಂತೆ ಶಿವನ ನ್ನು ಪ್ರಾರ್ಥಿಸಿ ಹುಲಿಯ ಪಾದಗಳು ಮತ್ತು ಜೇನುನೊಣದ ಕಣ್ಣು ಗಳನ್ನು ಪಡೆದಿದ್ದನು. ಅಂದರೆ ಜೇನುನೊಣಗಳೂ ಸ್ಪರ್ಶಿಸುವ ಮೊದಲೇ ಪರಿಶುದ್ಧ ಹೂಗಳನ್ನು ತಾನು ಶಿವನಿಗೆ ಅರ್ಪಿಸಬೇಕೆಂದು ಆತನ ಬಯಕೆ. ಅಷ್ಟೂ ಗಾಢವಾದ ಶಿವಭಕ್ತಿ. ಪತಂಜಲಿ ಮತ್ತು ವ್ಯಾಘ್ರಪಾದ ಇಬ್ಬರೂ ನಟರಾಜನ ದರ್ಶನಕ್ಕಾಗಿ ಘೋರ ತಪಸ್ಸು ಮಾಡಿದರು. ಆಗ ವಿಶ್ವಕರ್ಮನು ಬಂಗಾರದ ಸಭಾಮಂಟಪವನ್ನು ನಿರ್ಮಿಸಿದನು. ಪುಷ್ಯ ಮಾಸದಲ್ಲಿ ಪುಷ್ಯಾ ನಕ್ಷತ್ರದ ದಿನ, ಶಿವನು ಪಾರ್ವತಿಯೊಂದಿಗೆ ತನ್ನ ವಾಹನವಾದ ನಂದಿಯಿಂದ ಇಳಿದು, ವಿಷ್ಣುವಿನ ಕೈ ಹಿಡಿದು ಪ್ರತ್ಯಕ್ಷನಾದನು. ಇಬ್ಬರೂ ಋಷಿಗಳಿಗೆ ದಿವ್ಯದೃಷ್ಟಿ ನೀಡಿ, ನಟರಾ ಜನಾಗಿ ಆನಂದದಿಂದ ನೃತ್ಯ ಮಾಡಿದನು. ಇಬ್ಬರೂ ಋಷಿಗಳು ಶಿವ ನನ್ನು ಚಿದಂಬರಂನಲ್ಲಿ ಸದಾಕಾಲ ವಾಸಿಸಿ ಎಲ್ಲರಿಗೂ ದರ್ಶನ ನೀಡು ವಂತೆ ಪ್ರಾರ್ಥಿಸಿದರು. ಶಿವನು ಅದನ್ನು ಅಂಗೀಕರಿಸಿ ಅಲ್ಲಿ ಸ್ಥಿರನಾ ದನು. ಇದೇ ಸಂದರ್ಭದಲ್ಲಿ ನಟರಾಜನು ಪತಂಜಲಿಗೆ ಪಾಣಿನಿಯ 'ಅಷ್ಟಾಧ್ಯಾಯೀ' ವ್ಯಾಕರಣಗ್ರಂಥಕ್ಕೆ ಭಾಷ್ಯ (ವಿಶ್ಲೇಷಣೆ) ಬರೆಯು ವಂತೆ ಆದೇಶವಿತ್ತನು. ಚರಣಶೃಂಗರಹಿತ ಸ್ತೋತ್ರ ಪತಂಜಲಿಯಿಂದ ರಚನೆಯಾದದ್ದು ಕೈಲಾಸಪರ್ವತದಲ್ಲಿ ಅಲ್ಲ, ಚಿದಂಬರಂನಲ್ಲಿ ಎಂದು ಕೂಡ ಪ್ರತೀತಿಯಿದೆ. ಎಲ್ಲ ಹತ್ತು ಶ್ಲೋಕಗಳಲ್ಲೂ ಕೊನೆಯ ಪಾದದಲ್ಲಿ ''ಚಿದಂಬರನಟಂ ಹೃದಿ ಭಜ'' ಎಂದಿರುವುದು ಇದನ್ನು ಪುಷ್ಟೀಕರಿಸುತ್ತದೆ. ನಟರಾಜನ ದರ್ಶನಕ್ಕೆ ಅಡ್ಡಬಂದ ನಂದಿಯನ್ನು ಕೆಣಕಲೆಂದೇ- ನಂದಿಗಾದರೆ ಕಾಲುಗಳು ಮತ್ತು ಕೊಂಬುಗಳೇ ಆಯುಧ, ಅವುಗಳೇ ಇಲ್ಲದಂತೆ ಮಾಡುವೆ ನೆಂದು- ಪತಂಜಲಿ ಚರಣಶೃಂಗರಹಿತ ಸ್ತೋತ್ರ ರಚಿಸಿದ್ದಂತೆ. ಅದೇನೇ ಇರಲಿ, ಭರತನಾಟ್ಯ, ಮೋಹಿನಿಯಾಟ್ಟಂ ಮತ್ತಿತರ ನೃತ್ಯಕಲೆಗಳಲ್ಲಿ ಶಿವತಾಂಡವವನ್ನು ಪರಿಣಾಮಕಾರಿಯಾಗಿ ಬಿಂಬಿಸಲಿಕ್ಕೆ ಈ ಸ್ತೋತ್ರವನ್ನೇ ಆಯ್ದುಕೊಳ್ಳುತ್ತಾರೆ. ಪಾಣಿನಿಯ ಅಷ್ಟಾಧ್ಯಾಯೀಗೆ ವಿವರವಾದ ವಿಶ್ಲೇಷಣೆ ಬರೆಯುವ ಕೆಲಸವನ್ನು ನಟರಾಜನೇ ಪತಂಜಲಿಗೆ ಆದೇಶಿಸಿದ್ದನಷ್ಟೆ? ಅದೇ ಪತಂಜಲಿಯ 'ಮಹಾಭಾಷ್ಯ'. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿರುವ ಒಟ್ಟು 3959 ಸೂತ್ರಗಳಲ್ಲಿ 1228 ಸೂತ್ರಗಳಿಗಷ್ಟೇ ವಿಶ್ಲೇಷಣೆ ಬರೆಯುವುದು ಪತಂಜಲಿಗೆ ಸಾಧ್ಯವಾಯಿತು. ಇದನ್ನು 85 'ಆಹ್ನಿಕ'(ಅಧ್ಯಾಯ/ಭಾಗ)ಗಳಲ್ಲಿ ವಿಭಾಗಿಸಲಾಗಿದೆ. ಇದರ ಭಾಷೆ ಬಹಳ ಸುಂದರವಾಗಿದ್ದು, ಸಂಸ್ಕೃತ ಗದ್ಯಕ್ಕೆ ಮಾದರಿಯೆಂದು ಪರಿಗಣಿಸಲಾಗುತ್ತದೆ. ಪತಂಜಲಿಯಿಂ ದಾಗಿಯೇ ಭಾಷಾಶಾಸ್ತ್ರವು ಭಾರತದಲ್ಲಿ ಪೂರ್ಣರೂಪ ಪಡೆಯಿತು. ಈ ವ್ಯವಸ್ಥೆಯಲ್ಲಿ ಶಿಕ್ಷಾ (ಧ್ವನಿಶಾಸ್ತ್ರ, ಸ್ವರವರಸೆ) ಮತ್ತು ವ್ಯಾಕರಣ (ರೂಪಶಾಸ್ತ್ರ)ಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಸಂಸ್ಕೃತ ಭಾಷೆಯು ರೂಪಾಂತರ ಧರ್ಮಿಯಾದ್ದರಿಂದ ವಾಕ್ಯರಚನೆಗೆ ಪ್ರಾಮುಖ್ಯ ಕೊಟ್ಟಿಲ್ಲ. ಪದಗಳ ಮೂಲಾರ್ಥವನ್ನು ವಿವರವಾಗಿ ಚರ್ಚಿಸಲಾಗಿದೆ. ಅರ್ಥದ ವಿವರಣೆಗಳೂ ಇವೆ. ಒಟ್ಟಾರೆಯಾಗಿ ಪತಂಜಲಿಯ ಕೃತಿಯು ಪಾಣಿನಿಯ ಸೂತ್ರಗಳನ್ನು ರಕ್ಷಿಸುವ ಹಾಗೂ ವಿವರಿಸುವ ಮಹತ್ತರ ಕೆಲಸ ಮಾಡುತ್ತದೆ. ಮಹಾಭಾಷ್ಯ ಪೂರ್ಣಗೊಳಿಸಿದ ತರುವಾಯ ಪತಂಜಲಿಯು ಶಿಷ್ಯರಿಗೆ ಅದನ್ನು ಬೋಧಿಸಲು ನಿರ್ಧರಿಸಿದನು. ಚಿದಂಬರಂನಲ್ಲಿ ಸಾವಿರಾರು ವಿದ್ಯಾರ್ಥಿಗಳನ್ನು ಸೇರಿಸಿ, ತಾನು ಪರದೆಯ ಹಿಂದೆ ಕುಳಿತು ಪಾಠ ಮಾಡುತ್ತಿದ್ದನು. ಪಾಠದ ವೇಳೆ ಯಾರೂ ಪರದೆಯನ್ನೆತ್ತಿ ನೋಡಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತ್ಯೇಕವಾಗಿ ಸ್ಪಷ್ಟೀಕರಣ ನೀಡುವಷ್ಟು ಚಾಣಾಕ್ಷತೆ ಒಬ್ಬನೇ ಶಿಕ್ಷಕನಿಂದ ಹೇಗೆ ಸಾಧ್ಯ ಎಂಬ ಅನುಮಾನ ವಿದ್ಯಾರ್ಥಿಗಳಿಗೆ.

ಕುತೂಹಲದಿಂದ ಕೆಲವರು ಒಂದು ದಿನ ಪರದೆಯನ್ನು ತೆರೆದರು. ಒಡನೆಯೇ, ಸಾವಿರ ತಲೆಗಳ ಆದಿಶೇಷನ ವಿಷಶ್ವಾಸದಿಂದ ಅವರು ಬೂದಿಯಾದರು. ಅಂದರೆ ಆದಿಶೇಷನೇ ಸಾವಿರ ಬಾಯಿಗಳಿಂದ ಪಾಠ ಮಾಡುತ್ತಿದ್ದದ್ದು! ಒಬ್ಬ ವಿದ್ಯಾರ್ಥಿ ಮಾತ್ರ ಪ್ರಕೃತಿ ಕರೆಗೆಂದು ಹೊರಹೋಗಿದ್ದರಿಂದ ಉಳಿದನು. ಆದರೆ ಅವನು ಶಿಕ್ಷಕರ ಅನುಮತಿ ಇಲ್ಲದೆ ಹೊರಹೋಗಿದ್ದ ಕಾರಣ, ಪತಂಜಲಿ ಅವನಿಗೆ ಬ್ರಹ್ಮರಾಕ್ಷಸನಾಗುವಂತೆ ಶಾಪವಿತ್ತನು. ಆತ ಗೋಗರೆದಾಗ ಶಾಪವನ್ನು ಸ್ವಲ್ಪ ತಗ್ಗಿಸಿ, ಸಂಸ್ಕೃತ ವ್ಯಾಕರಣದ ಅತಿಕಠಿಣ ಪ್ರಶ್ನೆಗೆ ಉತ್ತರಿಸುವ ಶಿಷ್ಯನನ್ನು ಕಂಡರೆ ಶಾಪ ವಿಮೋಚನೆ ಆಗುತ್ತದೆಂದನು. ಬ್ರಹ್ಮರಾಕ್ಷಸ ವಿದ್ಯಾರ್ಥಿ ಉತ್ತರ ಭಾರತಕ್ಕೆ ಹೋಗಿ ಮರದ ಮೇಲೆ ಕುಳಿತು ಜನರನ್ನು ಪ್ರಶ್ನಿಸುತ್ತಿದ್ದನು. ಸರಿಯಾದ ಉತ್ತರ ಕೊಡದವರನ್ನು ತಿನ್ನುತ್ತಿದ್ದನು. ಹಲವು ವರ್ಷಗಳ ಬಳಿಕ, ಪತಂಜಲಿಯೇ 'ಚಂದ್ರ ಶರ್ಮ' ಎಂಬ ಹೆಸರಿನಲ್ಲಿ ಅವನನ್ನು ಭೇಟಿ ಮಾಡಿದನು. ಬ್ರಹ್ಮ ರಾಕ್ಷಸನು ''ಪಚ್ ಧಾತುವಿನ ಭೂತಕಾಲದ ರೂಪ ಯಾವುದು?'' ಎಂಬ ಪ್ರಶ್ನೆ ಕೇಳಿದನು. ಬೇರೆಯವರೆಲ್ಲ ತಪ್ಪಾಗಿ 'ಪಚಿತ' ಎಂದೇ ಉತ್ತರಿಸುತ್ತಿದ್ದರು, ಆದರೆ ಚಂದ್ರ ಶರ್ಮ ಸರಿಯಾಗಿ 'ಪಕ್ವ' ಎಂದು ಉತ್ತರಿಸಿದನು. ಬ್ರಹ್ಮರಾಕ್ಷಸ ಶಾಪಮುಕ್ತನಾದನು. ಬದರೀನಾಥಕ್ಕೆ ಹೋಗಿ ಅದ್ವೈತ ವೇದಾಂತದ ಮಹಾ ಗುರುಗಳಾದ ಗೌಡಪಾದ ನಾದನು. ಚಂದ್ರ ಶರ್ಮ (ಅದೇ ಪತಂಜಲಿ) ಗೋವಿಂದ ಭಗವತ್ಪಾದ ನಾಗಿ ಗೌಡಪಾದರ ಶಿಷ್ಯನಾದನು. ಮುಂದೆ ಗೋವಿಂದ ಭಗವತ್ಪಾದರು ಆದಿ ಶಂಕರಾಚಾರ್ಯರ ಗುರುಗಳಾದರು! ಈಗ ಹೇಳಿ. ಅಗೆವ ಬುದ್ಧಿ ಅಲ್ಪಸ್ವಲ್ಪವಾದರೂ ಇದ್ದರೆ ಎಷ್ಟೆಲ್ಲ ಅರಿವು ಆವರಿಸಿಕೊಳ್ಳುತ್ತದೆ ಅಲ್ಲವೇ?

ರಾಷ್ಟ್ರಋಣ ಸಂದಾಯದ ಪ್ರಶ್ನೆ: ಭಾರತದ ಇಂದಿನ ಅಗತ್ಯ

ಪ್ರಾಚೀನರು ಪ್ರಮುಖವಾಗಿ ಮೂರು ಋಣಗಳಿವೆ ಎಂದಿದ್ದಾರೆ. ಮೊದಲನೆಯದಾಗಿ ಪಿತೃಋಣ, ಎರಡನೆಯದಾಗಿ ಋಷಿಋಣ ಹಾಗೂ ಮೂರನೆಯದಾಗಿ ದೇವಋಣ. ಮನುಷ್ಯನಾಗಿ ಹುಟ್ಟಿದವನಿಗೆ ಈ ಮೂರು ಋಣಗಳ ನೆನಪು ಸದಾ ಇರಬೇಕು. ಈ ಮೂರು ಋಣಗಳ ಜತೆಗೆ, ಈ ಕಾಲಕ್ಕನುಗುಣವಾಗಿ ದೇಶಋಣವನ್ನೂ ಸೇರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

'ಋಣವೆಂಬ ಸೂತಕವು ಬಹುಬಾಧೆ ಪಡಿಸುತಿದೆ, ಗುಣನಿಧಿಯೆ ನೀ ಎನ್ನ ರುಣವ ಪರಿಹರಿಸೋ. ಹೆತ್ತ ಸೂತಕ ಹತ್ತು ದಿನಗಳಿಗೆ ಪರಿಹಾರ ಸತ್ತಸೂತಕವು ಹನ್ನೊಂದು ದಿನವೂ. ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರವು ಎತ್ತಹೋದರು ಬಿಡದು ಬೆನ್ಹತ್ತಿ ಬರುತಿಹುದೂ' ಎನ್ನುವ ಕೀರ್ತನೆಯನ್ನು ನೀವೆಲ್ಲ ಕೇಳಿಯೇ ಇರುತ್ತೀರಿ.

ಇಲ್ಲಿ ಪುರಂದರ ದಾಸರು 'ಋಣ' ಎನ್ನುವುದನ್ನು ಆರ್ಥಿಕ ಸಾಲಕ್ಕೆ ಹೋಲಿಸಿ ಬರೆದ ಸಾಲುಗಳಂತೆ ಕಂಡರೂ, ಸೂಕ್ಷ್ಮವಾಗಿ ನೋಡಿದಾಗ ಇನ್ನೂ ಗಹನವಾದ ಅರ್ಥಕಲ್ಪನೆ ಅವರ ಮನಸ್ಸಿನಲ್ಲಿತ್ತು ಎನ್ನುವುದು ತಿಳಿಯುತ್ತೆ. ಸಾಮಾನ್ಯವಾಗಿ ಮಾತನಾಡುವಾಗ, 'ನಾನು ನಿನಗೆ ಋಣಿ, ಅಥವಾ ಚಿರಋಣಿ, ನಿನ್ನ ಋಣದಲ್ಲಿ ಬೀಳುವುದು ನನಗಿಷ್ಟವಿಲ್ಲ, ಏನು ಮಾಡಿದರೂ ತಾಯಿಯ ಋಣವನ್ನು ತೀರಿಸಲಾಗದು' ಮುಂತಾಗಿ ಋಣದ ಕುರಿತು ಮಾತನಾಡುತ್ತೇವೆ. ಈ ವಾಕ್ಯಗಳನ್ನು ನೋಡುವಾಗ ಋಣ ಎನ್ನುವಂಥದ್ದಕ್ಕೆ ಕೇವಲ ಹಣಕಾಸಿನ ಸಾಲ ಎನ್ನುವ ಅರ್ಥವಷ್ಟೇ ಅಲ್ಲ, ಇನ್ನೂ ಹೆಚ್ಚಿನ ಅರ್ಥ ಚಿಂತನೆಯಿದೆ ಎನ್ನುವುದು ಗೊತ್ತಾಗುತ್ತದೆ.

ಇದು ಕೇವಲ ಹಣಕಾಸಿನ ಸಾಲವನ್ನಷ್ಟೇ ಅಲ್ಲದೆ, ನೈತಿಕ ಕೃತಜ್ಞತೆ ಅಥವಾ ಉಪಕಾರಗಳನ್ನು ತೀರಿಸಬೇಕಾದ ಸ್ಥಿತಿಯನ್ನೂ ಸೂಚಿಸುತ್ತದೆ. ಕೆಲವರಿಗೆ ಜೀವನ ಪರ್ಯಂತ ನಾವು ಋಣಿಯಾಗಿಯೇ ಇರಬೇಕಾಗುತ್ತದೆ, ಕಾರಣ ಅವರ ಋಣವನ್ನು ತೀರಿಸಿ ಮುಗಿಸಲಾಗುವುದೇ ಇಲ್ಲ. ಉದಾಹರಣೆಗೆ ತಂದೆ-ತಾಯಿಗಳ ಋಣ, ಅದು ಏನು ಮಾಡಿದರೂ ತೀರಿಸಿ ಮುಗಿಸುವಂಥದ್ದಲ್ಲ. ಇನ್ನು, ಈ ಕೆಲಸ ಮಾಡಿ ನಾನು ಆತನ ಋಣಮುಕ್ತನಾದೆನಪ್ಪಾ ಸಾಕೋ ಸಾಕು ಎನ್ನುವ ಸಂದರ್ಭವೂ ಇದೆ. ಒಟ್ಟಿನಲ್ಲಿ ಇದು ಕೇವಲ ಹಣಕಾಸಿನ ಸಾಲಕ್ಕೆ ಸೀಮಿತವಾದ ಪದವಲ್ಲ ಎನ್ನುವುದಕ್ಕೆ ಇಷ್ಟೆಲ್ಲಾ ಹೇಳಬೇಕಾಯಿತು. ಕೇವಲ ಹಣಕಾಸಿನ ಋಣವಾದರೆ ಇಎಂಐ ಕಟ್ಟುತ್ತಿರುವ ನಾವೆಲ್ಲರೂ ಋಣವಂತರೇ. ಹಾಗೆ ನೋಡಿದರೆ ಪ್ರತಿ ದೇಶದ ಆರ್ಥಿಕತೆಯೂ ಇಂದು ಋಣಭಾರದಿಂದ ತತ್ತರಿಸಿ ಹೋಗುತ್ತಿದೆ, ಜಾಗತಿಕ ಆರ್ಥಿಕತೆ ಇಂದು ನಿಂತಿರುವುದೇ ಋಣದ ಮೇಲೆ. ಆದರೆ, ಅದಕ್ಕಿಂತ ಮಿಗಿಲಾದ ಋಣಗಳು ನಮಗಿವೆ ಎನ್ನುವುದೇ ನಮಗೆ ತಿಳಿದಿಲ್ಲದಿರುವುದು ದುರದೃಷ್ಟಕರ. ಋಣವಿರುವುದೇ ನಮಗೆ ತಿಳಿದಿಲ್ಲದಿರುವಾಗ ಆ ಋಣವನ್ನು ತೀರಿಸುವತ್ತ ಯತ್ನ ಮಾಡುವುದಾದರೂ ಹೇಗೆ ಅಲ್ಲವೇ? ಋಣ ಸೂತಕವನ್ನು ತೀರಿಸದಿದ್ದರೆ ಎತ್ತಹೋದರೂ ಬಿಡದೆ ಬೆನ್ಹತ್ತಿ ಬರುತ್ತೆ ಎಂದು ದಾಸರು ಬೇರೆ ನಮಗೆ ಎಚ್ಚರಿಸಿದ್ದಾರೆ.

ಪ್ರಾಚೀನರು ಪ್ರಮುಖವಾಗಿ ಮೂರು ಋಣಗಳನ್ನು ಹೇಳುತ್ತಾರೆ. ಮೊದಲನೆಯದಾಗಿ ಪಿತೃಋಣ, ಎರಡನೆಯದಾಗಿ ಋಷಿಋಣ ಹಾಗೂ ಮೂರನೆಯದಾಗಿ ದೇವಋಣ. ನಮ್ಮನ್ನು ಹೊತ್ತು ಹೆತ್ತು ಶರೀರ ನೀಡಿ ನಾಮ ರೂಪಗಳಿಂದ ಕೂಡಿದ ಬದುಕನ್ನು ಕೊಟ್ಟ ತಂದೆ-ತಾಯಿಯರು ಹಾಗೂ ನಮ್ಮ ಪೂರ್ವಜರ ಋಣವನ್ನು ಪಿತೃ ಋಣವೆನ್ನುತ್ತಾರೆ. ಅದನ್ನು ತೀರಿಸುವುದು ಹೇಗೆ ಎಂದರೆ, ನಾವೂ ತಂದೆ-ತಾಯಿಯರಾಗಿ ಲೋಕಕ್ಕೆ ಒಳ್ಳೆಯ ಪ್ರಜೆಗಳನ್ನು ಕೊಡುವುದರಿಂದಲೇ ಆಗಿದೆ. ಇನ್ನು ಎರಡನೆಯದಾದ ಋಷಿಋಣ, ಋಷಿಗಳು ಎಂದರೆ ಪರಮ ಜ್ಞಾನಿಗಳು ಎಂದರ್ಥ, ಋಷಿಗಳು ಎಂದರೆ ಶೋಧಕರು, ತತ್ವಾನ್ವೇಷಿಗಳು ಎಂತಲೂ ಅರ್ಥ ಮಾಡಬಹುದು. ಪ್ರಾಚೀನ ಜ್ಞಾನ ರಾಶಿಗಳನ್ನು ಹುಡುಕಿ ತೆಗೆದು ಅದರ ಅರ್ಥಾನು ಸಂಧಾನಮಾಡಿ ನಮ್ಮವರೆಗೆ ತಂದು ಮುಟ್ಟಿಸಿದ ಋಣ ನಮ್ಮಮೇಲಿರುತ್ತದೆ. ಅವರುಗಳು ತೋರಿಸಿದ ಜ್ಞಾನವನ್ನು ಸರಿಯಾಗಿ ಅರಿತು, ಪಾಲಿಸಿ ಮುಂದಿನ ಜನಾಂಗಕ್ಕೆ ತಲುಪಿಸುವುದರ ಮೂಲಕ ಋಷಿಋಣವನ್ನು ಸ್ವಲ್ಪಮಟ್ಟಿಗಾದರೂ ತೀರಿಸಬಹುದಾಗಿದೆ. ಇನ್ನು ಕೊನೆಯದಾಗಿ ಉಳಿದಿರುವುದು ದೇವಋಣ, ಜೀವ ಜೀವನ, ಸರ್ವವೂ ದೇವರ ದಯೆಯಿಂದಲೇ ನಮಗೆ ದೊರೆತಿರುವುದರಿಂದ ಆ ಋಣವೂ ನಮ್ಮ ಮೇಲಿರುತ್ತದೆ. ಯಜ್ಞ ದಾನ ತಪಸ್ಸು ವೇದೋಕ್ತವಾದ ಸುಕರ್ಮಗಳನ್ನು ಮಾಡುವುದರ ಮೂಲಕ ಆ ಋಣವನ್ನು ಮನುಷ್ಯನಾದವನು ತೀರಿಸಿದಂತಾಗುತ್ತದೆಯಂತೆ. ಮನುಷ್ಯನಾಗಿ ಹುಟ್ಟಿದವನಿಗೆ ಈ ಮೂರು ಋಣಗಳ ಜ್ಞಪ್ತಿ ಸದಾ ಇರಬೇಕಾಗುತ್ತದೆ. ಪ್ರಾಚೀನರು ಗುರುತಿಸಿದ ಈ ಮೂರು ಋಣಗಳ ಜತೆಗೆ, ಈ ಕಾಲಕ್ಕನುಗುಣವಾಗಿ ದೇಶಋಣವನ್ನೂ ಸೇರಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ದಾರ್ಶನಿಕರಾದ ಸ್ವಾಮಿ ವಿವೇಕಾನಂದರಂಥ ಸನ್ಯಾಸಿಗಳು, ವಿರಕ್ತ ರಾಷ್ಟ್ರಕರಾದ ಡಿವಿಜಿ ಅಂಥವರು ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘ, ಆರ್ಯ ಸಮಾಜ ಮುಂತಾದ ಅನೇಕ ಸ್ವಯಂ ಸೇವಕ ಸಂಘಗಳು ಮನಗಂಡಿದ್ದವು.

ಭಾರತೀಯರದ್ದು ಮೊದಲಿನಿಂದಲೂ ದೇಶದ ಕುರಿತಾಗಿ ಒಂದು ಥರ "Taken for granted' ಮನೋಭಾವ. ದೇಶ ನಮಗೇನು ಮಾಡಿದೆ ಎನ್ನುವುದೇ ಸದಾ ನಮ್ಮ ಪ್ರಶ್ನೆಯಾಗಿರುತ್ತದೆ ವಿನಃ ನಾವು ದೇಶಕ್ಕೆ ಏನು ಮಾಡಬೇಕಿದೆ ಎನ್ನುವುದರ ಕುರಿತು ಲಕ್ಷ್ಯವೇ ಇರುವುದಿಲ್ಲ. ಹಾಗೆ ನೋಡಿದರೆ, ಇಂದು ದೇಶ ಸೇವೆಯೇ ಎಲ್ಲ ಧರ್ಮಗಳ ಪ್ರಮುಖ ಅಂಶವಾಗಬೇಕಾದ ಅಗತ್ಯವಿದೆ. ನಮ್ಮ ಪ್ರಧಾನ ಮಂತ್ರಿಗಳು ಪದೇ ಪದೆ ಹೇಳುವಂತೆ 'ದೇಶ ಸರ್ವಪ್ರಥಮ' ವಾಗಬೇಕಿದೆ. ಒಂದು ದೇಶವನ್ನು ಉಳಿಸುವ ಸಲುವಾಗಿ, ಅಥವಾ ಸದೃಢವಾಗಿ ಬೆಳೆಸುವ ಸಲುವಾಗಿ ಯಾವೆಲ್ಲ ತ್ಯಾಗಗಳನ್ನು ಆ ದೇಶದ ಸಣ್ಣ-ಸಣ್ಣ ಘಟಕಗಳು ಮಾಡಬೇಕಾದರೂ ಅದು ಒಪ್ಪಿತವೇ ಆಗಬೇಕು. ಒಂದು ಮನೆಯನ್ನು ಉಳಿಸಲು ಒಬ್ಬನ ಬಲಿದಾನ, ಒಂದು ಊರನ್ನು ಉಳಿಸಲು ಕೆಲವು ಮನೆಗಳನ್ನು ಕಳೆದುಕೊಳ್ಳಬೇಕಾಗಿ ಬಂದರೆ, ಅಥವಾ ಒಂದು ದೇಶದ ಉಳಿವಿಗಾಗಿ ಏನೆಲ್ಲಾ ತ್ಯಾಗ ಬಲಿದಾನಗಳು ಆಗಬೇಕಾದರೂ ಅದು ಸರಿಯೇ. ನಮ್ಮ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಇದನ್ನೇ ತಾನೆ ನಾವು ಕಂಡಿದ್ದು, ಮನೆ ಮಠಗಳನ್ನು ತ್ಯಾಗಮಾಡಿ ಇಡೀ ಜೀವನವನ್ನು ಹೋರಾಟದಲ್ಲಿ ಸವೆಸಿ ಹುತಾತ್ಮರಾದವರು ಲೆಕ್ಕವಿಲ್ಲದಷ್ಟು ಜನ. ದೇಶದ ಋಣ ತೀರಿಸುವ ಕರ್ತವ್ಯದಲ್ಲಿ ಪ್ರಾಣ ಹೆಚ್ಚಾಗಿ ಕಾಣಿಸಲೇ ಇಲ್ಲ ಅವರುಗಳಿಗೆ. ಜನತೆಗೆ ದೇಶಋಣದ ಕಲ್ಪನೆ ಇಲ್ಲದಿದ್ದ ಕಾಲದಲ್ಲೇ ನಮ್ಮ ದೇಶವನ್ನು ಪರಕೀಯರು ಸಾವಿರಾರು ವರ್ಷಗಳ ಕಾಲ ಆಳಿದ್ದಲ್ಲವೇ. ಕೆಲವು ಜನರಿಗೆ ದೇಶಕ್ಕಿಂತ ಸ್ವಾರ್ಥವೇ ಪ್ರಮುಖವಾದಾಗ ಪರಕೀಯರು ಅದರ ಲಾಭ ಪಡೆದದ್ದಲ್ಲವೇ? ರಾಷ್ಟ್ರ ಋಣ ಸಂದಾಯದ ವಿಷಯ ಬಂದಾಗ ಗ್ರೀಕ್ ತತ್ವಜ್ಞಾನಿಯಾಗಿದ್ದ ಸಾಕ್ರಟೀಸ್‌ನ ರಾಷ್ಟ್ರಕ ಪ್ರಜ್ಞೆಯ ಕುರಿತು ಹೇಳಬೇಕು, ಪಾಶ್ಚಾತ್ಯ ತತ್ವಶಾಸ್ತ್ರದ ಮೂಲ ಪುರುಷ ಎಂದು ಖ್ಯಾತಿ ಪಡೆದಿದ್ದ ಸಾಕ್ರಟೀಸ್ ನೈತಿಕತೆ, ಸದ್ಗುಣಗಳಿಗೆ ಒತ್ತುಕೊಡುತ್ತಾ ಜೀವನವನ್ನು ಸದಾ ಪರೀಕ್ಷಿಸುವುದರ ಮೇಲೆಯೇ ಆಯುಷ್ಯ ಸವೆಸಿದ್ದವ. ದೇಶದ ಸಾಂಪ್ರದಾಯಿಕ ದೇವರುಗಳನ್ನು ಗೌರವಿಸಲು ನಿರಾಕರಿಸಿದ್ದಕ್ಕಾಗಿ ಮತ್ತು ಯುವಕರನ್ನು ವೈಚಾರಿಕವಾಗಿ ಭ್ರಷ್ಟಗೊಳಿಸಿದ್ದಕ್ಕಾಗಿ ಅವರನ್ನು ವಿಚಾರಣೆಗೆ ಒಳಪಡಿಸಲಾಯಿತು, ವಿಚಾರಣೆಯ ಅವಧಿಯಲ್ಲಿ, ದಯಾಭಿಕ್ಷೆ ಬೇಡುವ ಅವಕಾಶ ವಿತ್ತಾದರೂ, ಕರುಣೆಗಾಗಿ ಮನವಿ ಮಾಡುವ ಬದಲು ಆತ ತನ್ನನ್ನು ತಾನು ಸಮರ್ಥಿಸಿಕೊಂಡ. ಅಧರ್ಮದ ನಡತೆ ಮತ್ತು ಅಥೆನ್ಸ್‌ನ ಯುವಕರನ್ನು ಭ್ರಷ್ಟಗೊಳಿಸಿದ ಆಪಾದನೆಯಲ್ಲಿ ತಪ್ಪಿತಸ್ಥ ನೆಂದು ಸಾಬೀತಾದ ನಂತರ ಅವರ 70ನೇ ವಯಸ್ಸಿನಲ್ಲಿ, 'ಹೆಮ್ಲಾಕ್' ಎನ್ನುವ ವಿಷ ಕುಡಿಸಿ ಅವನನ್ನು ಗಲ್ಲಿಗೇರಿಸಲಾಯಿತು.

ಯುವಕರನ್ನು ಭ್ರಷ್ಟಗೊಳಿಸುವುದು: ಅಧಿಕಾರ ಮತ್ತು ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವಂತೆ ಯುವಕರನ್ನು ಪ್ರೋತ್ಸಾಹಿಸುತ್ತಿದ್ದನೆಂದು ಅವನ ಮೇಲೆ ಆರೋಪ ಹೊರಿಸಲಾಯಿತು. ಅವರ ಪ್ರಶ್ನಿಸುವ ವಿಧಾನವು ಆಗಾಗ್ಗೆ ಪ್ರಮುಖ ನಾಗರಿಕರನ್ನು ಸಾರ್ವಜನಿಕವಾಗಿ ಮೂರ್ಖರಂತೆ ಕಾಣುವಂತೆ ಮಾಡಿತು, ಇದು ವ್ಯಾಪಕ ಅಸಮಾಧಾನಕ್ಕೆ ಕಾರಣವಾಯಿತು. ಸಾಕ್ರಟೀಸ್ ಪ್ರಜಾಪ್ರಭುತ್ವವನ್ನು ಬಹಿರಂಗವಾಗಿ ಟೀಕಿಸುತ್ತಿದ್ದರು, ಆಡಳಿತವನ್ನು ಬಹುಮತದ ಅಥವಾ ಲಾಟರಿಯಿಂದ ನಿರ್ಧರಿಸುವ ಬದಲು ನುರಿತ ತಜ್ಞರಿಗೆ ವಹಿಸಬೇಕು ಎಂದು ಅವರು ವಾದಿಸುತ್ತಿದ್ದರು. ಅಂತರ್ಯುದ್ಧದಿಂದ ಈಗತಾನೆ ಚೇತರಿಸಿಕೊಂಡ ದೇಶದಲ್ಲಿ, ಈ ದೃಷ್ಟಿಕೋನಗಳನ್ನು ಹೊಸದಾಗಿ ಪುನಃಸ್ಥಾಪಿಸಿದ ಪ್ರಜಾಪ್ರಭುತ್ವ ವ್ಯವಸ್ಥೆಗೆ ನೇರ ಬೆದರಿಕೆಯಾಗಿ ನೋಡ ಲಾಯಿತು. ಈ ನಿರಂತರ ಸಾಮಾಜಿಕ ವಿಮರ್ಶೆಯು ಅವರನ್ನು ಅಧಿಕಾರದಲ್ಲಿರುವವರಿಗೆ ಉಪದ್ರವವನ್ನಾಗಿ ಮಾಡಿತು.

ತೀರ್ಪುಗಾರರಿಂದ ತಪ್ಪಿತಸ್ಥರೆಂದು ಸಾಬೀತಾದ ನಂತರ, ಸಾಕ್ರಟೀಸ್‌ಗೆ ತನ್ನದೇ ಆದ ಶಿಕ್ಷೆಯನ್ನು ಆಯ್ಕೆ ಮಾಡಲು ಅವಕಾಶ ನೀಡಲಾಯಿತು. ತಾನು ಅಥೆನ್ಸ್‌ಗೆ ಮಾಡಿದ ಸೇವೆಗೆ ಬಹುಮಾನವಾಗಿ ಸರಕಾರದ ವೆಚ್ಚದಲ್ಲಿ ಜೀವನಪರ್ಯಂತ ಉಚಿತ ಊಟವನ್ನು ನೀಡಬೇಕೆಂದು ವ್ಯಂಗ್ಯವಾಗಿ ಪ್ರಸ್ತಾಪಿಸಿದರು. ಇದು ತೀರ್ಪುಗಾರರನ್ನು ಇನ್ನೂ ಕೆರಳಿಸಿ ಮರಣದಂಡನೆಯ ತೀರ್ಮಾನ ಮಾಡಲು ಕಾರಣವಾಯಿತು.

ಹೀಗೆ ಅವರು ಸೆರೆಮನೆಯಲ್ಲಿದ್ದ ಕಾಲದಲ್ಲಿ ಆತನ ಆಪ್ತ ಶಿಷ್ಯನೊಬ್ಬ ಸೆರೆಮನೆಯಿಂದ ತಪ್ಪಿಸಿಕೊಂಡು ಓಡಿಹೋಗುವ ಉಪಾಯವನ್ನು ಸೂಚಿಸುತ್ತಾನೆ. ತಾನು ಸೆರೆಮನೆಯ ಅಧಿಕಾರಿಗಳಿಗೆ ಲಂಚ ಕೊಟ್ಟು ಅವರು ನಿದ್ರೆಯಲ್ಲಿರುವಂತೆ ನೋಡಿಕೊಳ್ಳುತ್ತೇನೆ, ಆಗ ನೀವು ತಪ್ಪಿಸಿಕೊಂಡು ಓಡಿಹೋಗಿ ದೇಶಾಂತರಕ್ಕೆ ತೆರಳಿ ಜೀವ ಉಳಿಸಿಕೊಳ್ಳಬಹುದು ಎನ್ನುವುದು ಆತನ ವಿಚಾರವಾಗಿತ್ತು. ಜೀವ ಉಳಿಸಿಕೊಳ್ಳಬಹುದಾದ ಶಿಷ್ಯನ ಈ ಪ್ರಸ್ತಾವಕ್ಕೆ ಸಾಕ್ರಟೀಸ್ ನೀಡಿದ ಉತ್ತರ ಇಂದು ನಮಗೆ ಪ್ರಸ್ತುತವಾಗಿದೆ ಹಾಗೂ ಪ್ರೇರಕವೂ ಆಗಿದೆ.

"ಅಯ್ಯಾ, ನಾನು ಮಾತ್ರ ದ್ರೋಹಿಯಾಗಬೇಕು ಎಂದು ನೀನು ಹೇಳುತ್ತಿರುವುದೇನು? ನಾನು ಹುಟ್ಟಿದ ಜಾಗವಿದು, ನನಗೆ 'ಅಥೆನ್ಸ್' ತಾಯಿ ಇದ್ದಹಾಗೆ, ಈ ದೇಶದ ಸಂಸ್ಥೆಗಳಿಂದಲೇ ನಾನು ವಿದ್ಯೆ ಕಲಿತಿರುವುದು, ಇಲ್ಲಿನ ಸಾಮಾಜಿಕ ವ್ಯವಸ್ಥೆಗಳ ಅಡಿಯಲ್ಲೇ ಇಲ್ಲಿಯವರೆಗೆ ನನ್ನ ಪೋಷಣೆ-ರಕ್ಷಣೆಗಳಾಗಿರುವುದು, ಈ ದೇಶದ ಉಪಕಾ ರದಿಂದಲೇ ನಾನು ಲೋಕವಿಖ್ಯಾತನಾಗಿರುವುದು. ನನಗೆ ಸುಖಕರವಾಗುವಲ್ಲಿಯವರೆಗೆ ಈ ದೇಶದ ಪ್ರಯೋಜನ ಪಡೆದು, ಈಗ ಅದೇ ದೇಶದ ಕಾನೂನಿನ ಅಡಿಯಲ್ಲಿ ನನಗೆ ಶಿಕ್ಷೆ ವಿಧಿಸಿದರೆ ಹಿಂದಿನ ಉಪಕಾರಗಳನ್ನೆಲ್ಲ ಮರೆತು ಈಗ ದೇಶಕ್ಕೆ ವಂಚನೆ ಮಾಡು ಎನ್ನುವೆಯಾ? ದೇಶದಿಂದ ನಮಗೆ ಒದಗಿಬರುವ ಸೌಲಭ್ಯಗಳು, ರಕ್ಷಣೆ ಪೋಷಣೆಗಳು ಬೇಕು, ಶಿಕ್ಷೆಯ ವಿಷಯಬಂದಾಗ ಅದೇ ಮಾತೃ ಸ್ವರೂಪಿ ದೇಶಕ್ಕೆ ದ್ರೋಹ ಬಗೆಯುವುದೇ?'' ಎಂದು ಕೇಳಿ, ಶಿಷ್ಯನ ಉಪಾಯ ಸರಿಯಾದದ್ದಲ್ಲ ಎಂದು ತಳ್ಳಿಹಾಕಿಬಿಡುತ್ತಾನೆ.

ಆತನಿಗೆ ತನ್ನ ಪ್ರಾಣಕ್ಕಿಂತ ದೇಶದ ವ್ಯವಸ್ಥೆಯ ಉಳಿವು ಹೆಚ್ಚಾಗಿ ಕಂಡಿತು. ತಾನೊಬ್ಬ ಮರಣಹೊಂದಿದರೆ ಹೆಚ್ಚೇನೂ ವ್ಯತ್ಯಾಸವಾಗಲಿಕ್ಕಿಲ್ಲ, ಆದರೆ, ದೇಶದ ಆಡಳಿತ ವ್ಯವಸ್ಥೆಯನ್ನು ಧಿಕ್ಕರಿಸಬಾರದು, ಅದರಿಂದ ತಪ್ಪಿಸಿಕೊಂಡು ಹೋಗುವ ಆಲೋಚನೆ ಮಾಡಬಾರದು ಎನ್ನುವುದಕ್ಕ ಸಾಕ್ರಟೀಸ್ ನಿದರ್ಶನವಾಗಿದ್ದ. ದೇಶ ಸೇವೆಯೆಂದರೆ ಕೇವಲ ಸೈನ್ಯಕ್ಕೆ ಸೇರಿ, ಗಡಿಯಲ್ಲಿ ನಿಂತು ಗುಂಡು ಹಾರಿಸುವುದೊಂದೇ ಅಲ್ಲ, ನಮ್ಮ ನಮ್ಮ ಕೆಲಸಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡು ದೇಶದ ಉತ್ಪಾದಕತೆ, ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸುತ್ತಾ, ದೇಶದ ಕಾನೂನುಗಳನ್ನು ನಿಷ್ಠೆಯಿಂದ ಪಾಲಿಸುತ್ತಾ ಉತ್ತಮ ನಾಗರಿಕ ಪ್ರಜ್ಞೆಯಿಂದ ಬದುಕಿದರೆ ಅದೂ ದೇಶ ಸೇವೆಯೇ ಆಗುತ್ತದೆ.

ಹಾಗೆ ನೋಡಿದರೆ ಇವನ್ನೆಲ್ಲ ದೇಶ ಸೇವೆ ಎನ್ನುವುದೇ ತಪ್ಪಾದ ವ್ಯಾಖ್ಯಾನವಾಗುತ್ತದೆ. ಇದಾವುದೂ ನಾವು ಬಿಟ್ಟಿಯಾಗಿ ದೇಶಕ್ಕೆ ಮಾಡುವ ಉಪಕಾರವಲ್ಲ, ಕನಿಕರ ದಾಕ್ಷಿಣ್ಯವಲ್ಲ. ಅದು ಜನ್ಮಭೂಮಿಯ ಋಣಸಂದಾಯ ಮಾಡುವ ಪ್ರಯತ್ನವಷ್ಟೇ ಆಗುತ್ತದೆ. ದೇಶದಿಂದ ನಾವು ಪಡೆದದ್ದು ನೂರಾರು, ಅದರಲ್ಲಿ ಸಾಧ್ಯವಾದಷ್ಟನ್ನು ತಿರುಗಿ ಕೊಡೋಣ, ನಾವು ಪಡೆದದ್ದು ಮುಂದಿನ ತಲೆಮಾರಿಗೂ ದೊರಕುವಂತಾಗಲಿ ಎನ್ನುವ ಜವಾಬ್ದಾರಿಯುತ ಮನೋವೃತ್ತಿಯನ್ನು ಕೂಡ ರಾಷ್ಟ್ರಪ್ರೇಮ ಎನ್ನಬಹುದು. ಯಾರು ಸ್ವದೇಶದ ಋಣವನ್ನು ಅಂಗೀಕರಿಸುತ್ತಾನೋ ಅವನೇ ನಿಜವಾದ ರಾಷ್ಟ್ರಕ (ನಾಗರಿಕ) ಎನ್ನುತ್ತಾರೆ ಡಿವಿಜಿ. ನೌಕರರು ನಾನು ಮೂವತ್ತು ವರ್ಷಗಳ ಸೇವೆ ಸಲ್ಲಿಸಿ ನಿವೃತ್ತನಾಗುತ್ತಿದ್ದೇನೆ ಎನ್ನುತ್ತಾರೆ. ನನ್ನ ಇಡೀ ಕುಟುಂಬವೇ ದೇಶಸೇವೆಯಲ್ಲಿ ತೊಡಗಿಸಿಕೊಂಡಿದೆ ಎನ್ನುತ್ತಾರೆ ರಾಜಕಾ ರಣಿಗಳು. ಅದರರ್ಥ ಬೇರೇನಲ್ಲ, ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ ಎಂದರ್ಥ. ಅಧಿಕಾರಿಗಳು ಹಾಗೂ ಅಧಿಕಾರಸ್ಥ ರಾಜಕಾರಣಿಗಳು ಸರಕಾರದಿಂದ ಅಧಿಕೃತವಾಗಿ ಸಂಬಳ ಅಥವಾ ಗೌರವಧನ ಸ್ವೀಕರಿಸುತ್ತಾರೆ, ಕಮಿಶನ್ ಲೆಕ್ಕ ಬೇರೆಯದೇ ಇದೆ, ಆದರೆ ಅವರ ಪ್ರಕಾರ ಇದು ದೇಶದ ಅಥವಾ ಸಮಾಜದ ಸೇವೆಯಂತೆ. ವಾಸ್ತವಿಕವಾಗಿ ಸೇವೆಗೆ ಸಂಭಾವನೆ ಇರುವುದಿಲ್ಲ, ಸಂಭಾವನೆ ಪಡೆದರೆ ಅದು ಸೇವೆಯಾಗುವುದಿಲ್ಲ, ಸಂಭಾವನೆಯನ್ನು ಪಡೆದೂ ಸೇವೆ ಎನಿಸಿಕೊಳ್ಳಬಲ್ಲ ಕೆಲವು ಕರ್ಮಗಳಿವೆ. ಉದಾಹರಣೆಗೆ ವೈದ್ಯವೃತ್ತಿ, ಶುಶ್ರೂಷಕರ ವೃತ್ತಿ, ಶಿಕ್ಷಕ ವೃತ್ತಿ, ಸ್ವಚ್ಛತಾ ಕರ್ಮ ಹಾಗೂ ಸೈನಿಕರ ಕೆಲಸ. ಇವನ್ನು ಹೊರತುಪಡಿಸಿ 'ಸೇವಾ' ಎನ್ನುವ ಸಂಸ್ಕೃತ ಮೂಲದ ಪದದ ಅರ್ಥ 'ನಿಸ್ವಾರ್ಥ ಸೇವೆ' ಅಥವಾ ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ಮಾಡುವ ಕೆಲಸ. ಆದರೆ ಇಂದು ಈ ಪದದ ಬಳಕೆಯನ್ನು ಮಾತ್ರ ಬೇಕಾಬಿಟ್ಟಿಯಾಗಿ ಸಾರ್ವತ್ರಿಕಗೊಳಿಸಲಾಗಿದೆ.

ಇರಲಿ, ಸ್ವಾತಂತ್ರ್ಯ ಬಂದು 80 ವರ್ಷಗಳಾಗಿವೆ. ಆದರೆ, ಎಲ್ಲವೂ ಸರಿಹೋಗಿಲ್ಲ, ಅಭದ್ರತೆ ಇನ್ನೂ ಭಾರತವನ್ನು ಕಾಡುತ್ತಲೇ ಇದೆ. ಇಷ್ಟು ವರ್ಷ ಕಳೆದ ಮೇಲೂ ಮತ್ತೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಹೋರಾಟದಂಥಾ ಹೋರಾಟ ಬೇಕಾಗಿದೆ. ತ್ಯಾಗಬಲಿದಾನಗಳ ಅಗತ್ಯವಿದೆ ಎನಿಸುತ್ತಿದೆ. ಇಂದಿನ ಅಗತ್ಯ ಇಂಥ ರಾಷ್ಟ್ರಕ ಧರ್ಮದ್ದಾಗಿದೆ, ಇಂದು ನಮ್ಮ ದೇಶಕ್ಕೆ ಮತ್ತೆ ಅವಶ್ಯವಾಗಿ ಬೇಕಾಗಿರುವವರು ಸಂಕಲ್ಪ ಬದ್ಧರಾದ, ಸ್ವಾರ್ಥವಿರಹಿತರಾದ ರಾಷ್ಟ್ರ ಧುರಂಧರರು, ಸ್ವಯಂ ಸೇವಕರು, ಡಿವಿಜಿಯವರಂಥ ರಾಷ್ಟ್ರ ಚಿಂತನೆಯುಳ್ಳ ರಾಷ್ಟ್ರಕರು, ವೀರಸನ್ಯಾಸಿ ವಿವೇಕಾನಂದರಂಥವರು. ಪಟೇಲರಂಥಾ ದಕ್ಷ ಆಡಳಿತಗಾರರು, ಆಚಾರ್ಯ ವಿನೋಬಾ ಬಾವೆ ಯವರಂಥ ಸಮಾಜ ಸೇವಕರು ಹಾಗೂ ಅರವಿಂದರಂಥ ಆಧ್ಯಾತ್ಮಿಕರು.

ನಾವು ಈ ದೇಶದಿಂದ ಅಪರಿಮಿತ ಉಪಕಾರವನ್ನು ಪಡೆದಿದ್ದೇವೆ, ಆದ್ದರಿಂದ ಕಿಂಚಿತ್ತಾದರೂ ಆ ಋಣವನ್ನು ತೀರಿಸಬೇಕೆಂದಿರುವವರು. ಅವರು ಕಾರ್ಖಾನೆ ಕಚೇರಿ ಮಳಿಗೆಗಳಲ್ಲಿ ಕೆಲಸ ಮಾಡುವವರಾಗಿರಲಿ, ವೈದ್ಯ, ವಕೀಲರುಗಳಾಗಿರಲಿ. ಅವರು ಏನೇ ಆಗಲಿ, ದಿನದಲ್ಲಿ ಒಂದಿಷ್ಟು ಹೊತ್ತು ದೇಶಕ್ಷೇಮದ ಚಿಂತನೆಗೆ ಮುಡಿಪಿಡುವ ಸಾತ್ವಿಕರಾಗಿರಬೇಕು. ಈ ಮನೋವೃತ್ತಿಯ ಜನರನ್ನು ಒಂದೆಡೆ ಸೇರಿಸುವ ರಾಷ್ಟ್ರಪ್ರೇಮವನ್ನು ಜೀವಂತವಿರಿಸುವ ಸಂಘ ಸಂಸ್ಥೆಗಳೂ ಬೇಕು. ಈ ಸಂಘ ಸಂಸ್ಥೆಗಳ ಮೂಲಕ ದೇಶದ ಋಣ ಸಂದಾಯದ ಪ್ರಜ್ಞೆ ಪ್ರತಿ ನಾಗರಿಕರಲ್ಲೂ ವ್ಯಾಪಿಸಬೇಕು. ಕೇಳಲಿಕ್ಕೆ ಇವೆಲ್ಲ ಒಣ ಆದರ್ಶವಾದದಂತೆ ಕಾಣುವುದಾದರೂ, ರಾಷ್ಟ್ರಪ್ರೇಮ ಕೊರತೆ ದೇಶದಲ್ಲಿ ಇದ್ದೇ ಇದೆ. ಹಾಗಾಗಿ ಇಂದು ಭಾರತಕ್ಕೆ ಅತ್ಯಂತ ಅವಶ್ಯವಾಗಿ ಬೇಕಾಗಿರುವುದು ಇದೇ ರಾಷ್ಟ್ರಪ್ರೇಮವೇ ಆಗಿದೆ.

60ಎಂಎಲ್ ಕುಡಿಯುವವನು: ಸೀನಿಯರ್ ಸಿಟಿಜನ್

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಪ್ರೇಮ್ ನಿರ್ದೇಶನದ ಧ್ರುವ ಸರ್ಜಾ ಅಭಿನಯದ 'ಕೆಡಿ' ಸಿನಿಮಾ ರಿಲೀಸ್ ಆಗಿದೆ. ಸಿನಿಮಾ ನೋಡಿದ ಪ್ರೇಕ್ಷಕ ಧ್ರುವ ಸರ್ಜಾ ಚಿತ್ರದುದ್ದಕ್ಕೂ ಧ್ರುವ ನಕ್ಷತ್ರದಂತೆ ಮಿನುಗಿದ್ದಾರೆ ಅಂತಿದ್ದಾರೆ. ಅಲ್ಲಿಗೆ ಅವರು ತಮ್ಮ ಸ್ಟಾರ್ ಪಟ್ಟ ಉಳಿಸಿಕೊಂಡಿದ್ದಾರೆ ಎನ್ನಬಹು ದು. ಆದರೆ, ಪ್ರೇಮ್ ಅವರ ಕಥೆ ಏನು ಅಂತ ಕೇಳಿದರೆ ಅದಕ್ಕೂ ಪಾಸಿಟಿವ್ ಉತ್ತರ ಬರುತ್ತಿದೆ. ಬಹಳ ದಿನಗಳ ನಂತ ರ ಪ್ರೇಮ್ ಮತ್ತೆ ಲೈಮ್ ಲೈಟಿಗೆ ಬಂದಿ ದ್ದಾರೆ, ತಮ್ಮ ಫಾರ್ಮ್‌ಗೆ ಬಂದಿದ್ದಾರೆ, ತಮ್ಮ ಚಾರ್ಮ್ ಕಂಡುಕೊಂಡಿದ್ದಾರೆ ಅಂತಿದ್ದಾರೆ ಜನ. ಅಲ್ಲಿಗೆ ಕೆಡಿ ಸಿನಿಮಾ ಪ್ರೇಮ್ ಅವರ ಫ್ಲಾಪ್ ಚಿತ್ರಗಳ ಪಟ್ಟಿಗೆ ಸೇರಿಕೊಳ್ಳೋದು ತಪ್ಪಿದಂತಾಗಿದೆ. ಆದ ರೆ, ಕೆಲವರು ಮಾತ್ರ ಇನ್ನೂ ಪ್ರೇಮ್ ಅವರ ಕಾಲೆಳೆಯುವ ಕೆಲಸ ಮಾಡು ತ್ತಿದ್ದಾರೆ. ಕಾಲ್ ಎಳೆಯೋಕ್ ಬಂದೋ ರೆಲ್ಲ ಕಾಲ ಕೆಳಗೆ ಉಳಿದು ಹೋದ್ರಲ್ಲ ಅಂತ ಈ ಚಿತ್ರದಲ್ಲಿ ಪ್ರೇಮ್ ಹಾಡು ಬರೆದಿದ್ದರೂ ಕೆಲವರಿಗೆ ಪ್ರೇಮ್ ಅವರು ಸೋತಿದ್ದಾರೆ ಅಂತ ಹೇಳೋದ್ರಲ್ಲಿ ಅದೇನೋ ಖುಷಿ. ಅಂತಹ ಅತೃಪ್ತರನ್ನು ತೃಪ್ತಿ ಪಡಿಸೋದು ಕಷ್ಟ ಬಿಡಿ. ಆದರೆ, ಪ್ರೇಮ್ ಗೆದ್ದಿದ್ದಾರೆ ಅಂತ ಪ್ರೇಕ್ಷಕ ತೀರ್ಪು ಕೊಟ್ಟಿದ್ದಾನೆ. ಅಲ್ಲಿಗೆ ಇನ್ಯಾರು ಏನ್ ಹೇಳಿದರೂ ಅದಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಹಾಗಾಗಿ ಕೆಡಿ ಚಿತ್ರ ಯಶಸ್ಸಿನ ಕಿಡಿ ಹೊತ್ತಿಸಿದೆ ಎನ್ನಬಹುದು. ರಾಜ್ಯದಾದ್ಯಂತ ಎಲ್ಲ ಕಡೆ ಕೆಡಿ ಚಿತ್ರಕ್ಕೆ ಪಾಸಿಟಿವ್ ಅಭಿಪ್ರಾಯ ಬಂದಿದೆ. ಅಲ್ಲಿಗೆ ಪ್ರೇಮ್ ಗೆದಿದ್ದಾರೆ. ಕೆಡಿ ಚಿತ್ರದ ಎರಡನೇ ಭಾಗ ಮಾಡ್ತೀನಿ ಅಂತ ಹುಮ್ಮಸ್ಸಿನಿಂದ ರೆಡಿ ಆಗ್ತಿದ್ದಾರೆ ಪ್ರೇಮ್. ಈ ಚಿತ್ರದಲ್ಲಿ ತಮ್ಮ ಮಗನನ್ನು ಬೆಳ್ಳಿತೆರೆಗೆ ಪರಿಚಯಿಸುವ ಕೆಲಸವನ್ನೂ ಮಾಡಿದ್ದಾರೆ ಪ್ರೇಮ್. ಹಾಗಾಗಿ ಅವರ ಮಗನನ್ನು ಪ್ರೇಮ್ ಯಾವಾಗ ಹೀರೋ ಮಾಡ್ತಾರೆ ಅನ್ನೋ ಕುತೂಹಲವೂ ಈಗ ಸೃಷ್ಟಿ ಆಗಿದೆ. ಒಟ್ಟಿನಲ್ಲಿ ಭರವಸೆಯ ನಿರ್ದೇಶಕ ಭರವಸೆ ಉಳಿಸಿಕೊಂಡಿರೋದು ಚಿತ್ರರಂಗದ ಪಾಲಿಗೆ ಪಾಸಿಟಿವ್ ವಿಷಯ.

ಲೂಸ್ ಟಾಕ್

ಚೇತನ್ ಅಹಿಂಸಾ

- **ಅಲ್ರೀ, ಚೇತನ್ ಅಹಿಂಸಾ ಅಂತ ಹೆಸರಿಟ್ಕೊಂಡು, ಯಾವಾಗ್ಲೂ ಹಿಂಸೆಗೆ ದಾರಿ ಆಗೋ ಥರಾನೇ ಸ್ಟೇಟ್‌ಮೆಂಟ್ ಕೊಡ್ತಾ ಇರ್ತೀರಲ್ಲ?**
- ನಾನು ಮೊದ್ಲು 'ಸ್ಟೇಟ್ಸ್'ನಲ್ಲಿ ಇದ್ದೋನಲ್ವಾ, ಅದಕ್ಕೇ ಸ್ಟೇಟ್‌ಮೆಂಟ್ ಕೊಡೋದು ನನ್ನ ಹಾಬಿ
- **ನಿಮ್ಮ ಸ್ಟೇಟಸ್ ಏನೇ ಇರಬಹುದು, ಆದ್ರೆ, ನಮ್ಮ ಸ್ಟೇಟ್ ಕಂಡೀಷನ್ ನೋಡ್ಕೊಂಡ್ ಮಾತಾಡ್ಬೇಕಲ್ವಾ?**
- ನಂಗೆ ಹಿಂಗೆಲ್ಲಾ ಕಂಡೀಷನ್ ಹಾಕ್ಬಾರ್ದು, ನಾನ್ ಯಾವಾಗ್ಲೂ ಕಂಡೀಷನ್ ಆಗೇ ಮಾತಾಡ್ತೀನಿ.
- **ಏನ್ರೀ, ಇದು, ಅಮೆರಿಕ ಇಂಗ್ಲಿಷ್ ಬಿಟ್ಟು ನಮ್ಮ ಬಟ್ಲರ್ ಇಂಗ್ಲಿಷ್ ಶುರು ಮಾಡಿಬಿಟ್ರಿ, ಸರಿ, ಬರೀ ಇದೇ ಮಾಡ್ತೀರೋ ಇಲ್ಲಾ ಸಿನಿಮಾನೂ ಮಾಡ್ತೀರೋ? ನಿಮ್ಮ ಲಾಸ್ಟ್ ಸಿನಿಮಾ ಯಾವುದು ಅಂತ ನಿಮಗಾದ್ರೂ ನೆನಪಿದೆಯಾ?**
- ಅಲ್ರೀ, ಸಿನಿಮಾದಲ್ಲಿ ಆಕ್ಟ್ ಮಾಡೋಕೆ ಅವಕಾಶ ಸಿಕ್ಕಿದ್ದಿದ್ರೆ, ಇದೆಲ್ಲಾ ಯಾಕ್ ಮಾಡ್ತಿದ್ದೆ?
- **ಅದೂ ಸರಿನೇ..ಆದ್ರೆ ಮೊನ್ನೆ ಮಾತಾಡಿದ್ದೊಂದು, ಇವತ್ತು ಮಾತಾಡೋದೊಂದು ಅನ್ನೋ ಥರ ಆಡ್ತೀರಂತೆ ನೀವು?**
- ಮತ್ತೆ, 'ಆ ದಿನಗಳ'ಲ್ಲಿ ಮಾತಾಡಿದ್ದನ್ನ, ಮತ್ತೆ ಈ ದಿನಗಳಲ್ಲೂ ಮಾತಾಡೋಕಾಗುತ್ತಾ?
- **ಆಯ್ತಪ್ಪ, ಇಷ್ಟೆಲ್ಲಾ ಮಾತಾಡ್ತೀರಲ್ಲ, ನಿಮ್ಮ ಉದ್ದೇಶ ಏನು ಅಂತ ಅಟ್‌ಲೀಸ್ಟ್ ನಿಮಗಾದ್ರೂ ಸ್ಪಷ್ಟವಾಗಿ ಗೊತ್ತಿದೆಯಾ?**
- ಉದ್ದೇಶದ್ ಮನೆ ಹಾಳಾಯ್ತು, ನಂಗೆ ಸರಿಯಾಗಿ ನನ್ನ ದೇಶ ಯಾವ್ದು ಅಂತಾನೇ ಸರಿಯಾಗಿ ಗೊತ್ತಾಗ್ತಿಲ್ಲ.
- **ಓಹೋ, ನಿಮ್ಮನ್ನು ನೋಡಿನೇ, ಓ ನನ್ನ ಚೇತನಾ, ಆಗು ನೀ ಅನಿಕೇತನಾ ಅಂತ ಕುವೆಂಪು ಅವರು ಹಾಡು ಬರೆದಿದ್ದು ಅನ್ಸುತ್ತೆ**
- ಕುವೆಂಪುನಾ? ಅದ್ಯಾರು?
- **ನಿಮಗೆ ಪರ್ಮನೆಂಟ್ ದೇಶ ಇಲ್ಲ ಅನ್ನೋ ಕಾರಣಕ್ಕೆ, ನಿಮಗೆ ಕಾಲು ಒಂದ್ಕಡೆ ನಿಲ್ಲಲ್ಲ, ನೆಲದ ಮೇಲೆ ಕಾಲು ನಿಲ್ಲಲ್ಲ ಅಂತ ಜನ ಮಾತಾಡ್ಕೊತಾ ಇದ್ರು, ಈಗ ಹಿಂಗೆಲ್ಲಾ ಕೇಳೋದ್ ನೋಡಿದ್ರೆ, ಕುತ್ತಿಗೆ ಮೇಲೆ ತಲೆ ನಿಲ್ಲಲ್ಲ ಅನ್ಸುತ್ತೆ**
- ಇದೇನ್ ಪ್ರಶ್ನೆನೋ, ಪ್ರಬಂಧನೋ ಗೊತ್ತಾಗ್ತಿಲ್ಲ. ಆದ್ರೂ, ಈ ನಿಲ್ಲೋ ವಿಷಯ ಬಂದ್ರೆ ನನ್ನದು ಅಂತ ಒಂದ್ 'ಸ್ಟ್ಯಾಂಡ್' ಇರುತ್ತೆ. ಅದಕ್ಕೆ ತಕ್ಕಂಗೆ ಮಾತಾಡ್ತೀನಿ ಅಷ್ಟೇ.
- **ಬರೀ ಸ್ಟ್ಯಾಂಡ್ ಇದ್ರೆ ಸಾಲದು, ಒಂದ್ ಸ್ಟ್ಯಾಂಡರ್ಡ್ ಇರಬೇಕು, ಅದು ಜನಕ್ಕೆ ಅಂಡರ್ ಸ್ಟ್ಯಾಂಡ್ ಕೂಡಾ ಆಗಬೇಕು ಅಲ್ವಾ?**
- ಅವೆಲ್ಲಾ ಗೊತ್ತಿಲ್ರೀ, ಒಟ್ನಲ್ಲಿ ಈ ವಿಷಯದಲ್ಲಿ 'ಐ ಸ್ಟ್ಯಾಂಡ್ ವಿಥ್ ಮೈ ಸೆಲ್ಫ್' ಅಷ್ಟೇ.
- **ಅಯ್ಯೋ, ನೀವ್ ಎಲ್ಲಾದ್ರೂ ನಿಂತ್ಕೊಳಿ, ಈಗ ಸದ್ಯಕ್ಕೆ ಮಾತು ನಿಲ್ಲಿಸ್ರಪ್ಪಾ ಸಾಕು..**
- ಹಲೋ, ಜಾಸ್ತಿ ಮಾತಾಡ್ತಿರೋದ್ ನಾನಾ, ನೀವಾ? 5 ಪ್ರಶ್ನೆ ಅಂತ ಹೇಳಿ 10 ಪ್ರಶ್ನೆ ಆಯ್ತು. ಒಂದ್ ಉತ್ತರಕ್ಕೆ ಎಷ್ಟು ಮಾರ್ಕ್ಸ್ ಅಂತಾನೂ ಹೇಳಿಲ್ಲ. ನಿಮಗೆ ಮಾರ್ಕ್ಸ್‌ವಾದ ಗೊತ್ತಾ?

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮುಗೆ ಜಂಗಲ್ ಸಫಾರಿ ಮಾಡೋ ಆಸಕ್ತಿ ಜಾಸ್ತಿ. ಹಂಗಾಗಿ ಗೆಳೆಯರ ಜತೆ ಆಗಾಗ ಸಫಾರಿ ಹೋಗ್ತಾ ಇದ್ದ. ಅವನ ಈ ಜಂಗಲ್ ಸಫಾರಿಯಲ್ಲಿ ಸಾಕಷ್ಟು ಬಾರಿ ಅಪಾಯಕಾರಿ ಎನಿಸುವಂಥ ಘಟನೆಗಳು ನಡೆದಿದ್ದವು. ಆದರೆ, ಈ ಬಾರಿ ಅವನು ಸೋಮು ಜತೆಗೆ ಮೊದಲ ಬಾರಿ ಜಂಗಲ್ ಸಫಾರಿ ಹೊರಟಿದ್ದ. ಸೋಮು ಸ್ವಲ್ಪ ದಡ್ಡ. ಜತೆಗೆ, ಸ್ಲೋ ಕೂಡ ಆಗಿದ್ರಿಂದ, ಖೇಮು ಹೆಚ್ಚು ಹುಷಾರಾಗಿದ್ದು, ಕಾಡಿನಲ್ಲಿ ಸಿಗೋ ಪ್ರಾಣಿಗಳಿಂದ ಹೇಗೆ ತಪ್ಪಿಸಿಕೊಳ್ಳಬೇಕು ಅಂತ ಯೋಜನೆ ಹಾಕ್ಕೊಂಡು ಸೋಮುವನ್ನು ಕರ್ಕೊಂಡು ಹೊರಟ. ಇಬ್ಬರೂ ಜಂಗಲ್ ಸಫಾರಿ ಹೊರಟ್ರು. ಹೋಗುವಾಗ, ಖೇಮು, ನಾನು ಮುಂದೆ ಹೋಗ್ತೀನಿ, ನಂಗೆ ಯಾವುದಾದ್ರೂ ಪ್ರಾಣಿ ಕಾಣಿಸಿದ್ರೆ ಎಚ್ಚರಿಕೆ ಕೊಡ್ತೀನಿ ಅಂತ ಹೇಳಿದ. ಸರಿ ಅಂತ ಇಬ್ಬರೂ ಹೊರಟರು. ಈ ಬಾರಿ ಯಾಕೋ ಯಾವ ಕಾಡುಪ್ರಾಣಿಗಳೂ ಕಾಣಿಸಲಿಲ್ಲ. ಕಾಡಿನ ಒಳಗೆ ಸ್ವಲ್ಪ ದೂರ ಹೋದ ಮೇಲೆ, ಖೇಮುಗೆ ಇದ್ದಕ್ಕಿದ್ದಂತೆ ಸೈಡಿನ ಪೊದೆಯಿಂದ ಒಂದು ಚಿರತೆ ನುಗ್ಗಿ ಬರ್ತಾ ಇದ್ದಿದ್ದು ಕಾಣಿಸಿತು. ಕೂಡಲೇ, ಚಿರತೆ, 'ಓಡು' ಅಂತ ಕೂಗಿ ಓಡಿ ತಪ್ಪಿಸಿಕೊಂಡ ಖೇಮು. ಆದರೆ ಸೋಮು ಮಾತ್ರ ಅಲ್ಲೇ ನಿಂತಿದ್ದ. ಚಿರತೆ ಅವನ ಮೇಲೆ ಅಟ್ಯಾಕ್ ಮಾಡಿತು. ಅಷ್ಟರಲ್ಲಿ ಖೇಮು ವಾಪಸ್ ಬಂದು ತನ್ನ ಬಳಿ ಇದ್ದ ದೊಡ್ಡ ಕುಡುಗೋಲು ತೋರಿಸಿ ಚಿರತೆಯನ್ನು ಹೇಗೋ ಹೆದರಿಸಿ ಓಡಿಸಿದ. ಆಮೇಲೆ ಸೋಮು ಕಡೆ ನೋಡಿ, 'ನಿಂಗೇನ್ ಬುದ್ಧಿ ಇದ್ಯಾ? ಚಿರತೆ, ಓಡು ಅಂತ ನಾನು ಎಚ್ಚರಿಕೆ ಕೊಟ್ರೂ ನೀನ್ಯಾಕೆ ಇಲ್ಲೇ ನಿಂತಿದ್ದೆ, ಚಿರತೆ ಬಂದಿದ್ದು ಕಾಣಿಸಲಿಲ್ವಾ ನಿಂಗೆ?' ಅಂತ ಕೇಳಿದ ಖೇಮು. ಅದಕ್ಕೆ ಸೋಮು ಹೇಳಿದ ಚಿರತೆ ಏನೋ ಕಾಣಿಸ್ತು. ಆದ್ರೆ, ನೀನು ಚಿರತೆ, 'ಓಡು' ಅಂತ ಎಚ್ಚರಿಕೆ ಕೊಟ್ಟಿದ್ದು ಚಿರತೆಗೆ ಅಂದ್ಕೊಂಡು ಸುಮ್ನೆ ಇದ್ದೆ.

ಲೈನ್ ಮ್ಯಾನ್

- **ಬಾರ್‌ನಲ್ಲಿ ಕುಡಿದು ಗಲಾಟೆ ಮಾಡುವವರಿಗೆ ಒಂದು ಕಿವಿಮಾತು**
- ಎಣ್ಣೆ ಹೊಡೆದು ಎಗರಾಡದಿರಿ ಬಾರ್ ಬಂಧುಗಳೇ ಕುಡಿಯುವುದು ಎಗರಾಡಲಿಕ್ಕೆ ಅಲ್ಲ ದೇಹ ಹಗುರಾಗಲಿಕ್ಕೆ ಮನಸ್ಸು ಮಗುವಾಗಲಿಕ್ಕೆ
- **ಸಂಜೆ ಆದ ಕೂಡಲೇ ಕಾಡುವ ಕುಡಿತದ ತುಡಿತ**
- ಕಡಿತ
- **ಯಾರ ಹಂಗೂ ಇಲ್ಲದೆ ದಿನಾ ಕುಡಿಯುವವನ ಮಾತು**
- ಎಣ್ಣೇ ನಿನಗೇನು ಬಂಧನ?
- **ಕುಡಿದಾಗ ನಾನು ಸಾಯ್ತೀನಿ ಅಂತ ಸ್ನೇಹಿತರನ್ನು ಹೆದರಿಸೋದು**
- ಗಾಳಿಯಲ್ಲಿ ಗುಂಡು ಹೊಡೆದ ಹಾಗೆ
- **ಪ್ರತಿದಿನ 60 ಎಂಎಲ್ ಕುಡಿಯುವವನು**
- ಸೀನಿಯರ್ ಸಿಟಿಜನ್
- **ಎಣ್ಣೆ ಕುಡಿಯುವಾಗ ಮಿಕ್ಸ್ ಕುಡಿಯಬಾರದು. ಯಾಕೆ?**
- ಯಾಕಂದ್ರೆ, ಎಣ್ಣೆಗೆ ಎಣ್ಣೇನೇ ಶತ್ರು
- **ಕುಡಿದು ಪೇಂಟಿಂಗ್ ಮಾಡೋನು ಯಾವ ಚಿತ್ರ ಬರೀತಾನೆ?**
- 'ತೈಲ' ಚಿತ್ರ

ವಲಸಿಗರೆಲ್ಲಾ ಅಮೆರಿಕ ತೊರೆದರೆ ಏನಾಗುತ್ತದೆ?

ಭಾರತ ಮತ್ತು ಚೀನಾ ನರಕದ ಕೂಪಗಳು ಎಂಬ ಮೈಕಲ್ ಸಾವೇಜ್‌ನ ದ್ವೇಷಪೂರಿತ ಹೇಳಿಕೆಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶೇರ್ ಮಾಡಿದ್ದು ಏಕೆ? ಆ ಮಾತಿಗೆ ಜಾಗತಿಕ ಮಟ್ಟದಲ್ಲಿ ಅಷ್ಟೊಂದು ಪ್ರಾಮುಖ್ಯತೆ ಸಿಕ್ಕಿದ್ದು ಏಕೆ? ಇಂತಹ ಹೇಳಿಕೆಗಳು ಅವರ ಕುತ್ಸಿತ ಮನಸ್ಸು ಮತ್ತು ಅತಾರ್ಕಿಕ ಚಿಂತನೆಯನ್ನು ಎತ್ತಿ ತೋರಿಸುತ್ತದೆಯೇ ಹೊರತು ವಾಸ್ತವವನ್ನಲ್ಲ.

ಸಂಗತ
ಡಾ. ವಿಜಯ್ ದರಡಾ
vveditoped@gmail.com

ಅಮೆರಿಕದ ಲೇಖಕ ಮತ್ತು ರೇಡಿಯೋ ಆ್ಯಂಕರ್ ಮೈಕಲ್ ಸಾವೇಜ್ ಭಾರತದಲ್ಲಿ ಎಲ್ಲರಿಗೂ ಗೊತ್ತಿರುವ ವ್ಯಕ್ತಿಯೇನಲ್ಲ. ಆದರೆ, ಇತ್ತೀಚೆಗೆ ಅವರ ಹೆಸರು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ಸ್ವತಃ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೇ ಆ ವ್ಯಕ್ತಿಯನ್ನು ಪ್ರಸಿದ್ಧಿಗೆ ತಂದಿದ್ದಾರೆ. 'ಭಾರತ ಮತ್ತು ಚೀನಾ ನರಕದ ಕೂಪಗಳು' ಎಂದು ಮೈಕಲ್ ಸಾವೇಜ್ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದನ್ನು ಟ್ರಂಪ್ ಶೇರ್ ಮಾಡಿದ ಮೇಲೆ ಆತನ ಹೆಸರು ಎಲ್ಲೆಡೆ ಚರ್ಚೆಯಾಗುತ್ತಿದೆ.

ಮೈಕಲ್ ಸಾವೇಜ್ ಎಂತಹ ವ್ಯಕ್ತಿ ಮತ್ತು ಆತ ಹೇಗೆ ಯೋಚಿಸುತ್ತಾನೆಂಬುದನ್ನು ತಿಳಿದುಕೊಳ್ಳಲು 2003ರ ಒಂದು ಘಟನೆಯನ್ನು ನಿಮಗೆ ಹೇಳಬೇಕು. ಎಂಎಸ್‌ಎನ್‌ಬಿಸಿ (ಮೈಕ್ರೋಸಾಫ್ಟ್ ಅಂಡ್ ನ್ಯಾಷನಲ್ ಬ್ರಾಡ್‌ಕಾಸ್ಟಿಂಗ್ ಕಂಪನಿ) ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಫೋನ್ ಕರೆ ಮಾಡಿದ್ದ ವ್ಯಕ್ತಿಗೆ ಅವರು 'ನೀನು ಏಡ್ಸ್ ಬಂದು ಸಾಯಿ!' ಎಂದು ಹೇಳಿದ್ದರು. ನಂತರ ಅವರನ್ನು ಕೆಲಸದಿಂದಲೇ ಎಂಎಸ್‌ಎನ್‌ಬಿಸಿ ವಜಾಗೊಳಿಸಿತ್ತು. ವಲಸಿಗರ ಬಗ್ಗೆ ಆತ ಬಹಳ ಹಿಂದಿನಿಂದಲೂ ಉಲ್ಟಾಪಲ್ಟಾ ಮಾತನಾಡುತ್ತಲೇ ಬಂದಿದ್ದಾರೆ. ವಲಸಿಗರ ಬಗ್ಗೆ ಅವರಿಗಿರುವ ದ್ವೇಷ ಜನಜನಿತ. ಟ್ರಂಪ್ ಇತ್ತೀಚೆಗೆ ಶೇರ್ ಮಾಡಿದ ಮೈಕಲ್ ಸಾವೇಜ್‌ರ ಪೋಸ್ಟ್‌ನಲ್ಲಿ ಏನಿತ್ತು ಗೊತ್ತಾ? 'ನಮ್ಮಲ್ಲಿ ಹುಟ್ಟಿದ ಮಗು ಏಕಾಏಕಿ ಇಲ್ಲಿನ ಪ್ರಜೆ ಆಗಿಬಿಡುತ್ತದೆ. ನಂತರ ಚೀನಾ, ಭಾರತ ಅಥವಾ ಯಾವುದಾದರೂ ನರಕದ ಕೂಪದಿಂದ ತನ್ನ ಇಡೀ ಕುಟುಂಬವನ್ನೇ ಇಲ್ಲಿಗೆ ಕರೆತರುತ್ತದೆ. ನೀವೇನೂ ದೂರದಲ್ಲಿ ಇದನ್ನು ನೋಡಬೇಕಿಲ್ಲ, ನಿಮ್ಮ ಸುತ್ತಮುತ್ತಲಿನಲ್ಲೇ ಇದು ಕಾಣಿಸುತ್ತದೆ. ಈಗ ಯಾರೂ ಇಲ್ಲಿ ಇಂಗ್ಲಿಷ್ ಮಾತನಾಡುವುದಿಲ್ಲ.'

ಹಾಗಿದ್ದರೆ ಟ್ರಂಪ್ ಏಕೆ ಇಂತಹ ದ್ವೇಷದ ಮಾತುಗಳನ್ನು ರೀಪೋಸ್ಟ್ ಮಾಡಿದರು? ಉತ್ತರ ಹೇಳುವುದು ಕಷ್ಟ. ಟ್ರಂಪ್ ಮನಸ್ಸಿನಲ್ಲಿ ಏನು ನಡೆಯುತ್ತದೆ ಎಂಬುದು ಟ್ರಂಪ್‌ಗೆ ಮಾತ್ರ ಗೊತ್ತು. ಮುಂದೆ ಯಾವತ್ತಾದರೂ ಅವರೇ ಇದರ ಬಗ್ಗೆ ಮಾತನಾಡಿ, ನಾನೇಕೆ ಆ ಪೋಸ್ಟ್ ಶೇರ್ ಮಾಡಿದೆ ಎಂಬುದನ್ನು ಹೇಳಬಹುದು. ಆದರೆ, ಈಗಾಗಲೇ ಬಹಳ ಜನರು ಟ್ರಂಪ್ ಅವರ ಈ ನಿಲುವನ್ನು ವಿರೋಧಿಸಿದ್ದಾರೆ. ಆ ಪರಿ ದ್ವೇಷ ಕಾರುವ ಮೈಕಲ್ ಸಾವೇಜ್‌ರ ಹೇಳಿಕೆಯನ್ನು ಅಮೆರಿಕದ ಅಧ್ಯಕ್ಷರು ಅನುಮೋದಿಸಿ ಪ್ರಚುರಪಡಿಸುವ ಅಗತ್ಯವೇನಿತ್ತು ಎಂದು ಅವರು ಕೇಳುತ್ತಿದ್ದಾರೆ. ಸ್ವತಃ ಅಮೆರಿಕದಲ್ಲೇ ಈ ಹೇಳಿಕೆಗೆ ಸಾಕಷ್ಟು ಟೀಕೆಗಳು ಬಂದಿವೆ. ಅನೇಕ ಸಂಸದರು 'ಇದು ಅಧ್ಯಕ್ಷರ ಕಚೇರಿಯ ಘನತೆಗೆ ತಕ್ಕ ಹೇಳಿಕೆಯಲ್ಲ' ಎಂದು ಹೇಳಿದ್ದಾರೆ. ಇನ್ನೂ ಕೆಲ ಸಂಸದರು 'ಇದು ಜನಾಂಗೀಯ ನಿಂದನೆ' ಎಂದು ವಿರೋಧಿಸಿದ್ದಾರೆ.

ಅವೆಲ್ಲ ಹಾಗಿರಲಿ, ಟ್ರಂಪ್ ಅವರ ಅತ್ಯಾಪ್ತರು ಎಂದು ಕರೆಸಿಕೊಳ್ಳುವವರಲ್ಲೇ ಅನೇಕರು ಈ ಹೇಳಿಕೆಯನ್ನು ನೋಡಿ ದಂಗಾಗಿದ್ದಾರೆ. ಇನ್ನು ಕೆಲ ಆಪ್ತರು ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನಿಸಿದ್ದಾರೆ. ನವದೆಹಲಿಯಲ್ಲಿರುವ ಅಮೆರಿಕನ್ ದೂತಾವಾಸದ ವಕ್ತಾರರು, 'ಭಾರತ ಅದ್ಭುತವಾದ ದೇಶವೆಂದು ಟ್ರಂಪ್ ಹೇಳಿದ್ದಾರೆ. ಅವರ ಕೆಲ ಪರಮಾಪ್ತ ಸ್ನೇಹಿತರು ಇಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ ಎಂದು ಹೇಳಿದ್ದಾರೆ. 'ಪರಮಾಪ್ತ ಸ್ನೇಹಿತರು' ಎಂದು ಅವರು ಹೇಳಿರುವುದು ಪ್ರಧಾನಿ ನರೇಂದ್ರ ಮೋದಿಗೆ. ಆದರೆ, ಸ್ವತಃ ಟ್ರಂಪ್ ಹೀಗೆ ಹೇಳಿದ್ದಾರಾ? ಮೈಕಲ್ ಸಾವೇಜ್‌ರ ಪೋಸ್ಟನ್ನು ಶೇರ್ ಮಾಡಿದ ಬಳಿಕ ಟ್ರಂಪ್ ಖುದ್ದಾಗಿ ಸ್ಪಷ್ಟನೆ ನೀಡಿದ್ದಾರಾ ಎಂದು ಜನರು ಪ್ರಶ್ನಿಸುತ್ತಿದ್ದಾರೆ.

ಭಾರತ ಮತ್ತು ಚೀನಾವನ್ನು ನರಕದ ಕೂಪಗಳು ಎಂದು ಕರೆಯುವುದು ಸಹಜವಾಗಿಯೇ ವ್ಯಾಪಕ ಖಂಡನೆ ವ್ಯಕ್ತವಾಗುವಂತಹ ಹೇಳಿಕೆ. ಭಾರತದಲ್ಲಿ ವಿರೋಧ ಪಕ್ಷಗಳು 'ಟ್ರಂಪ್ ಅವರ ಈ ಹೇಳಿಕೆಗೆ ಕೇಂದ್ರ ಸರಕಾರ ಕಠಿಣವಾಗಿ ಪ್ರತಿಕ್ರಿಯಿಸಬೇಕು' ಎಂದು ಕೇಳುತ್ತಿವೆ. ಈ ಮಧ್ಯೆ, ಕೇಂದ್ರ ಸರಕಾರವೇ ಹೇಳಿಕೆ ಬಿಡುಗಡೆ ಮಾಡಿ, 'ಇಂತಹ ಮಾತುಗಳನ್ನಾಡುವುದು ಸರಿಯಲ್ಲ. ಭಾರತ-ಅಮೆರಿಕ ನಡುವಿನ ಸ್ನೇಹವನ್ನು ಈ ಮಾತುಗಳು ಪ್ರತಿನಿಧಿಸುವುದಿಲ್ಲ. ಪರಸ್ಪರ ಗೌರವ ಹಾಗೂ ಸಹಭಾಗಿತ್ವದ ಆಸಕ್ತಿಯ ಮೇಲೆ ಉಭಯ ದೇಶಗಳ ಮಧ್ಯೆ ಬಹಳ ವರ್ಷಗಳಿಂದ ದ್ವಿಪಕ್ಷೀಯ ಸಂಬಂಧವಿದೆ' ಎಂದು ಹೇಳಿದೆ. ನನ್ನ ಪ್ರಕಾರ ಭಾರತ ಸಾಕಷ್ಟು ಸೌಮ್ಯವಾಗಿಯೇ ಪ್ರತಿಕ್ರಿಯಿಸಿರುವುದು ಸರಿಯಾಗಿದೆ. ಬೇರೆಯವರಿಗೆ ಪ್ರತಿಕ್ರಿಯಿಸುವಾಗ ನಾವೇಕೆ ನಮ್ಮ ಘನತೆಯನ್ನು ಕಳೆದುಕೊಳ್ಳಬೇಕು. ಚೀನಾ ಕೂಡ ಇಂತಹುದೇ ನಿಲುವು ತಳೆದಿದೆ. ಭಾರತದಲ್ಲಿರುವ ಚೀನಾ ದೂತಾವಾಸದ ಪ್ರತಿನಿಧಿ ಯು ಜಿನ್ ಅವರು ಎಕ್ಸ್‌ನಲ್ಲಿ ಭಾರತ ಮತ್ತು ಚೀನಾದ ಧ್ವಜಗಳನ್ನು ಪೋಸ್ಟ್ ಮಾಡಿ, 'ವೈರಲ್ ಆದ ಪದಗಳು ಮರೆತುಹೋಗುತ್ತವೆ, ಆದರೆ ನಿಜವಾದ ಸಹಭಾಗಿತ್ವ ದೀರ್ಘಕಾಲ ಬಾಳಿಕೆ ಬರುತ್ತದೆ. ದ್ವಿಪಕ್ಷೀಯ ಸಂಬಂಧಗಳು ಪರಸ್ಪರ ಗೌರವದ ಮೇಲೆ ನಿರ್ಮಾಣವಾಗುತ್ತವೆಯೇ ಹೊರತು ಮಾತಿನಿಂದ ಅಲ್ಲ' ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಟ್ರಂಪ್ ಅವರ ಹೇಳಿಕೆಗೆ ಪ್ರತಿಕ್ರಿಯಿಸುವಾಗ ಭಾರತ ಮತ್ತು ಚೀನಾ ದೇಶಗಳು ಭಾಷೆಯ ಘನತೆಯನ್ನು ಕಾಪಾಡಿಕೊಂಡಿವೆ.

ಸುಮ್ಮನೆ ಯೋಚಿಸಿ ನೋಡಿ: ಮುಂದೊಂದು ದಿನ ಮೈಕಲ್ ಸಾವೇಜ್‌ರ ಕನಸು ನನಸಾಗಿ, ಅಮೆರಿಕದಲ್ಲಿ ಒಬ್ಬರೂ ವಲಸಿಗರು ಉಳಿಯದ ದಿನ ಬಂದರೆ ಏನಾದೀತು? ಅಂತಹ ದಿನ ಬರಲಾರದು, ಆದರೂ ಅಂತಹದ್ದೊಂದು ಕಲ್ಪನೆ ಮಾಡಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಅಮೆರಿಕದ ಜನಸಂಖ್ಯೆ ಅಜಮಾಸು 35 ಕೋಟಿ. ಅದರಲ್ಲಿ ಸುಮಾರು 5 ಕೋಟಿ ಜನರು ಬೇರೆ ದೇಶದಿಂದ ಬಂದ ವಲಸಿಗರು. ಅಂದರೆ ಅಮೆರಿಕದಲ್ಲಿರುವ ಪ್ರತಿ ಏಳು ಜನರಲ್ಲಿ ಒಬ್ಬರು ವಲಸಿಗರು. ಈ ವಲಸಿಗರಲ್ಲಿ ಒಂದು ಕೋಟಿಗೂ ಹೆಚ್ಚು ಜನರು ಮೆಕ್ಸಿಕನ್ನರು. 55 ಲಕ್ಷ ಜನರು ಭಾರತೀಯರು. ಚೀನಾದ ವಲಸಿಗರ ಸಂಖ್ಯೆ ಭಾರತೀಯರಿಗಿಂತ ಕೊಂಚ ಕಡಿಮೆಯಿದೆ. ವಲಸಿಗರನ್ನೆಲ್ಲ ಅಮೆರಿಕದಿಂದ ಸಂಪೂರ್ಣವಾಗಿ ತೆಗೆದುಹಾಕಿದರೆ ಅಲ್ಲಿನ ಜನಸಂಖ್ಯೆ 30 ಕೋಟಿಗೆ ಇಳಿಕೆಯಾಗುತ್ತದೆ. ಅಮೆರಿಕನ್ ಮೂಲನಿವಾಸಿಗಳಲ್ಲಿ ಫಲವಂತಿಕೆಯ ದರ (ಮಕ್ಕಳನ್ನು ಹೊಂದುವ ದರ) ಕಡಿಮೆಯಿದೆ. ಅಮೆರಿಕದ ಸಂಸತ್ತಿನ ಬಜೆಟ್ ಕಚೇರಿಯ ಅಧ್ಯಯನದ ಪ್ರಕಾರ ಅಮೆರಿಕನ್ನರಲ್ಲಿ ಜನನ ಪ್ರಮಾಣ ಕುಸಿಯುತ್ತಿದೆ ಮತ್ತು ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿದೆ. 2040ರ ವೇಳೆಗೆ ಪ್ರತಿ ವರ್ಷ ಅಮೆರಿಕನ್ನರಿಗೆ ಹುಟ್ಟುವ ಒಟ್ಟು ಮಕ್ಕಳಿಗಿಂತ ಹೆಚ್ಚಿನ ಅಮೆರಿಕನ್ ಮೂಲನಿವಾಸಿಗಳು ಸಾಯುತ್ತಾರೆ. ಇನ್ನು, ವಲಸಿಗರನ್ನು ಸಂಪೂರ್ಣವಾಗಿ ಹೊರಹಾಕಿದರೆ ಅಮೆರಿಕದ ಜಿಡಿಪಿ ತಲಾದಾಯ ಶೇ.10ರಷ್ಟು ಕುಸಿಯುತ್ತದೆ ಎಂಬ ವರದಿಗಳೂ ಇವೆ.

ಇನ್ನೂ ಕೆಲ ಅಂಕಿಅಂಶಗಳನ್ನು ನೋಡಿ: ಅಮೆರಿಕದ ನಾಗರಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ 3 ಕೋಟಿ ಜನರ ಪೈಕಿ ಶೇ.19ರಷ್ಟು ಜನರು ವಲಸಿಗರು. ಅಮೆರಿಕದ ಕೃಷಿ ಕ್ಷೇತ್ರವು ದೊಡ್ಡ ಪ್ರಮಾಣದಲ್ಲಿ ವಲಸಿಗ ಕಾರ್ಮಿಕರನ್ನು ಅವಲಂಬಿಸಿದೆ. ರಾಷ್ಟ್ರೀಯ ಕೃಷಿ ಕೆಲಸಗಾರರ ಸಮೀಕ್ಷೆಯ ಪ್ರಕಾರ ಶೇ.70ರಷ್ಟು ಕೃಷಿ ಕಾರ್ಮಿಕರು ವಲಸಿಗರು. ಅಮೆರಿಕದ ಹೆಗ್ಗುರುತಾಗಿರುವ ಸಿಲಿಕಾನ್ ವ್ಯಾಲಿ ಬೆಳೆದಿದ್ದೇ ಭಾರತೀಯ ವಲಸಿಗರ ಕಠಿಣ ಪರಿಶ್ರಮ ಮತ್ತು ಪ್ರತಿಭೆಯಿಂದ. ಅಮೆರಿಕದ ಅತ್ಯಂತ ಪ್ರತಿಷ್ಠಿತ ಆ್ಯಪಲ್ ಇಂಕ್ ಕಂಪನಿಯನ್ನು ಕಟ್ಟಿದ್ದು ಯಾರು ಗೊತ್ತಾ? ಸ್ಟೀವ್ ಜಾಬ್ಸ್. ಅವರು ಸಿರಿಯಾದ ವಲಸಿಗನೊಬ್ಬನ ಮಗ. ಅಮೆರಿಕದಲ್ಲಿರುವ 500 ಬೃಹತ್ ಕಂಪನಿಗಳ ಪೈಕಿ ಶೇ.45ರಷ್ಟು ಕಂಪನಿಗಳನ್ನು ಹುಟ್ಟುಹಾಕಿದವರು ವಲಸಿಗರು ಅಥವಾ ಅವರ ಮಕ್ಕಳು. ಅಮೆರಿಕದಲ್ಲಿ ಒಂದು ಬಿಲಿಯನ್ ಡಾಲರ್‌ಗಿಂತ ಹೆಚ್ಚು ವಾರ್ಷಿಕ ಆದಾಯ ಗಳಿಸುವ ಶೇ.55ರಷ್ಟು ಸ್ಟಾರ್ಟ್‌ಅಪ್ ಕಂಪನಿಗಳನ್ನು ಕಟ್ಟಿದವರು ವಲಸಿಗರು. ಟ್ರಂಪ್ ಮುಚ್ಚಿಡುವ ಇನ್ನೊಂದು ಸತ್ಯವೇನೆಂದರೆ, ಭಾರತೀಯ ಮೂಲದ ಅಮೆರಿಕನ್ನರು ಪ್ರತಿ ವರ್ಷ 250ರಿಂದ 300 ಬಿಲಿಯನ್ ಡಾಲರ್‌ಗಳಷ್ಟು ತೆರಿಗೆಯನ್ನು ಅಮೆರಿಕದ ಬೊಕ್ಕಸಕ್ಕೆ ಪಾವತಿಸುತ್ತಾರೆ. ಇದು ಅಮೆರಿಕದ ಒಟ್ಟು ತೆರಿಗೆ ಆದಾಯದ ಶೇ.5ರಿಂದ 6ರಷ್ಟಾಗುತ್ತದೆ.

ಹೀಗಾಗಿ ಮೈಕಲ್ ಸಾವೇಜ್‌ನಂತಹ ಸಣ್ಣ ಮನಸ್ಸಿನ ವ್ಯಕ್ತಿಗಳು ಯಾವುದೇ ನಾಚಿಕೆಯಿಲ್ಲದೆ ಭಾರತವನ್ನು ನರಕದ ಕೂಪವೆಂದು ಕರೆದರೆ ಅದನ್ನು ಸಾರಾಸಗಟಾಗಿ ತಳ್ಳಿಹಾಕುವುದಕ್ಕೆ ಕಿಂಚಿತ್ತೂ ಹಿಂದೆಮುಂದೆ ನೋಡಬೇಕಿಲ್ಲ. ಅಂತಹ ಹೇಳಿಕೆಗಳು ಅವರ ಕುತ್ಸಿತ ಮನಸ್ಸು ಮತ್ತು ಅತಾರ್ಕಿಕ ಚಿಂತನೆಯನ್ನು ಎತ್ತಿ ತೋರಿಸುತ್ತದೆಯೇ ಹೊರತು ವಾಸ್ತವವನ್ನಲ್ಲ. ತೀರಾ ತಪ್ಪು ದಾರಿಯಲ್ಲಿ ಹೋಗುತ್ತಿರುವ ವ್ಯಕ್ತಿಯೊಬ್ಬನ ದುಷ್ಟ ಮನಸ್ಥಿತಿಯದು. ಹಾಗೆ ನೋಡಿದರೆ, ಮೈಕಲ್ ಸಾವೇಜ್‌ನಂತಹ ದೃಷ್ಟಿಕೋನವನ್ನು ಹೊಂದಿರುವ ವ್ಯಕ್ತಿಗಳು ಅಮೆರಿಕಕ್ಕೆ ಮಾತ್ರ ಸೀಮಿತವಲ್ಲ; ಅಂತಹವರು ಎಲ್ಲ ದೇಶಗಳಲ್ಲೂ, ಜಗತ್ತಿನ ಎಲ್ಲ ಮೂಲೆಯಲ್ಲೂ ಸಿಗುತ್ತಾರೆ. ಅಂತಹವರಿಗೆ ಪ್ರಾಮುಖ್ಯತೆ ಕೊಡಬಾರದಷ್ಟೆ. ಅವರು ಏನು ಹೇಳಿದರೂ ಅದನ್ನು ಕಡೆಗಣಿಸಬೇಕು. ಹಾಗಿದ್ದರೆ ನೀವೇಕೆ ಸಾವೇಜ್‌ನ ಹೇಳಿಕೆಯ ಬಗ್ಗೆಯೇ ಒಂದಿಡೀ ಅಂಕಣವನ್ನೇ ಬರೆಯುತ್ತಿದ್ದೀರಿ ಎಂದು ನೀವು ಕೇಳಬಹುದು! ಅವರ ಹೇಳಿಕೆಯನ್ನು ಟ್ರಂಪ್ ರೀಪೋಸ್ಟ್ ಮಾಡಿ, ಅದು ಜಗತ್ತಿನಾದ್ಯಂತ ಮುಖ್ಯವಾಹಿನಿಯ ಜನರ ಗಮನ ಸೆಳೆದು, ದೊಡ್ಡ ಮಟ್ಟದಲ್ಲಿ ಪ್ರಚಾರ ಪಡೆದ ದೆಸೆಯಿಂದ ವಾಸ್ತವಾಂಶಗಳನ್ನು ಜನರ ಮುಂದಿಡಬೇಕು ಎಂಬ ಕಾರಣಕ್ಕಷ್ಟೇ ಇದನ್ನು ಬರೆದಿದ್ದೇನೆ.

ನಾವು ಭಾರತೀಯರು ವಿಶಾಲ ಮನಸ್ಸಿನ ಜನರು. ನಮ್ಮ ನಡೆ ಮತ್ತು ನುಡಿ ಉದಾರವಾದುದು. ನಮ್ಮದು ವಸುಧೈವ ಕುಟುಂಬಕಂ ಎಂಬ ಸಿದ್ಧಾಂತವನ್ನು ಜಪಿಸುವ ದೇಶ. ಇಡೀ ಜಗತ್ತು ಒಂದು ಕುಟುಂಬ ಎಂದು ನಾವು ಸದಾ ನಂಬುತ್ತೇವೆ. ಮೈಕಲ್ ಸಾವೇಜ್‌ನಂತಹ ವ್ಯಕ್ತಿ ಅದೇನೋ ಬಡಬಡಿಸಿದರೆ ನಾವು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ನಮ್ಮ ತಾಕತ್ತೇನು ಎಂಬುದು ನಮಗೆ ಗೊತ್ತು. ಅಮೆರಿಕಕ್ಕೆ ವಲಸಿಗರು ಮಾಡಿರುವ ಉಪಕಾರ ಇಡೀ ಜಗತ್ತಿಗೇ ಗೊತ್ತು. ಹೀಗಾಗಿ ನರಕದ ಕೂಪದಲ್ಲಿ ಕತ್ತು ಹಿಡಿದು ಮುಳುಗಿಸಬೇಕಾದ ಕೆಟ್ಟ ಮಾತನ್ನು ಇಲ್ಲಿಗೇ ಮರೆತು ಮುಂದೆ ಸಾಗೋಣ! ಬೇಕಿದ್ದರೆ ಮೈಕಲ್ ಮತ್ತು ಡೊನಾಲ್ಡ್ ನರಕದ ಜಪ ಮಾಡಲಿ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:107

ಸಮಾಚಾರ ಸಣ್ಣದಲ್ಲ

ಪಾಕ್‌ನಲ್ಲಿ ಹಿಜ್ಬುಲ್ ಕಮಾಂಡರ್‌ಗೆ ಗುಂಡು

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಉಗ್ರ ಸಂಘಟನೆಗಳ ಹಿರಿಯ ಕಮಾಂಡರ್‌ಗಳು, ಪ್ರಮುಖ ಉಗ್ರರು ಅಪರಿಚಿತರಿಂದ ಹತರಾಗುವುದು ಸರಣಿಯೋಪಾದಿಯಲ್ಲಿ ಮುಂದುವರಿದಿದೆ. ರಾಜಧಾನಿ ನಗರ ಇಸ್ಲಾಮಾಬಾದ್‌ನಲ್ಲಿ ಹಿಜ್ಬುಲ್ ಮುಜಾಹಿದ್ದೀನ್ ಉಗ್ರ ಸಂಘಟನೆಯ ಕಮಾಂಡರ್ ಸಜ್ಜದ್ ಅಹ್ಮದ್ ನಿಗೂಢವಾಗಿ ಹತನಾಗಿದ್ದಾನೆ. ಇಸ್ಲಾಮಾಬಾದ್‌ನಲ್ಲಿನ ಆತನ ಮನೆಯಲ್ಲಿ ಸಜ್ಜದ್ ಶವ ತುಸು ಕೊಳೆತ ಸ್ಥಿತಿಯಲ್ಲಿ ಕಂಡುಬಂದಿದೆ. ನೆರೆಮನೆಯವರು ಸಜ್ಜದ್ ಅಹ್ಮದ್ ಶವದ ಫೋಟೊ ಹಂಚಿಕೊಂಡಿದ್ದಾರೆ.

ನೇಪಾಳ: ಜೀಪ್ ಕಂದಕಕ್ಕೆ, 20 ಸಾವು

ಕಠ್ಮಂಡು: ನೇಪಾಳದ ರೋಲ್ಪಾದಲ್ಲಿ ಜಿಲ್ಲೆಯ ಗುಡ್ಡಗಾಡು ಪ್ರದೇಶದ ರಸ್ತೆಯಲ್ಲಿ ಸಂಚರಿಸುತ್ತಿದ್ದ ದೊಡ್ಡ ಜೀಪ್ ಪ್ರಪಾತಕ್ಕೆ ಉರುಳಿ ಬಿದ್ದಿದ್ದು 20 ಮಂದಿ ಸಾವನ್ನಪ್ಪಿದ್ದಾರೆ. ಉಳಿದವರನ್ನು ರಕ್ಷಿಸುವ ಪ್ರಯತ್ನಕ್ಕೆ ಧಾರಾಕಾರ ಮಳೆ ಸುರಿಯುತ್ತಿರುವು ದರಿಂದ ಅಡಚಣೆಯಾಗಿದೆ. ಶುಕ್ರವಾರ ಬೈಸಾಖ್ ಹುಣ್ಣಿಮೆ ಹಬ್ಬದಲ್ಲಿ ಭಾಗವಹಿಸಲು ಸ್ಥಳೀಯರು ಖಾಸಗಿ ಜೀಪನ್ನು ಬಾಡಿಗೆಗೆ ಪಡೆದು ಪ್ರಯಾಣಿಸುತ್ತಿದ್ದರು. ಜಲ್ಜಲಾ ಪ್ರದೇಶದಲ್ಲಿ ಮಳೆಯ ಕಾರಣದಿಂದ ರಸ್ತೆ ಕೆಸರುಮಯವಾಗಿದ್ದರಿಂದ ಜೀಪ್ ಜಾರಿಕೊಂಡು ಹೋಗಿ 700 ಮೀ. ಆಳದ ಕಂದಕಕ್ಕೆ ಉರುಳಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಅಪಘಾತವಾದಾಗ ಜೀಪ್‌ನಲ್ಲಿ ಎಷ್ಟು ಪ್ರಯಾಣಿಕರಿದ್ದರು ಎಂಬುದು ನಿಖರವಾಗಿ ತಿಳಿದುಬಂದಿಲ್ಲ.

ಬಲಗೈ ಕಡಿದುಹಾಕಿದ ಪ್ರಕರಣ ದೋಷಾರೋಪ

ಕೊಚ್ಚಿ: ಥೊಡುಪುಳದ ನ್ಯೂಮನ್ ಕಾಲೇಜಿನ ಪ್ರೊಫೆಸರ್ ಟಿ.ಜೆ. ಜೋಸೆಫ್ ಅವರ ಬಲಗೈಯನ್ನು ಮುವಟ್ಟುಪುಳ ಪಟ್ಟಣದಲ್ಲಿ 2010ರ ಜುಲೈನಲ್ಲಿ ಕತ್ತರಿಸಿ ಬಿಸಾಡಿದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯದ(ಪಿಎಫ್‌ಐ) ಕಾರ್ಯಕರ್ತರ ತಂಡದ ವಿರುದ್ಧದ ಅಪರಾಧ ಪ್ರಕರಣದ ವಿಚಾರಣೆಯನ್ನು ನಡೆಸುತ್ತಿರುವ ಎರ್ನಾಕುಲಂನಲ್ಲಿರುವ 'ರಾಷ್ಟ್ರೀಯ ತನಿಖಾ ಸಂಸ್ಥೆಯ'(ಎನ್‌ಐಎ) ವಿಶೇಷ ನ್ಯಾಯಾಲಯ, ದೋಷಾರೋಪ ಹೊರಿಸುವ ಪ್ರಕ್ರಿಯೆ ಪೂರ್ಣಗೊಳಿಸಿದೆ. ಪ್ರಾಸಿಕ್ಯೂಷನ್ ಪರ ವಕೀಲರು ಪ್ರಕರಣದ ಪ್ರಮುಖ ಆರೋಪಿ ವಿರುದ್ಧ ದೋಷಾರೋಪ ಹೊರಿಸಿದ ಬಳಿಕ ಆರೋಪಿಗಳಾದ ಸವಾದ್ ಮತ್ತು ಶಫೀರ್ ಪರ ವಕೀಲರು ಎನ್‌ಐಎ ವಿಶೇಷ ನ್ಯಾಯಾಲಯದಲ್ಲಿ ಏ.30ರಂದು ವಾದ ಮಂಡಿಸಿದರು. ಆ ಬಳಿಕ ನ್ಯಾಯಾಧೀಶ ಪಿ.ಕೆ.ಮೋಹನದಾಸ್ ಅವರು ದೋಷಾರೋಪ ನಿಗದಿಗೊಳಿಸಿದರು

1 ಕೇಂದ್ರಾಡಳಿತ, 4 ರಾಜ್ಯ ಮತ ಎಣಿಕೆ ನಾಳೆ

ದೆಹಲಿ: ಮೇ 2ರಂದು ಪಶ್ಚಿಮ ಬಂಗಾಳದ 2 ವಿಧಾನಸಭಾ ಕ್ಷೇತ್ರಗಳಲ್ಲಿನ 15 ಮತಗಟ್ಟೆಗಳಲ್ಲಿ ಮರು ಮತದಾನವಾಗುವುದರೊಂದಿಗೆ 4 ರಾಜ್ಯಗಳು, 1 ಕೇಂದ್ರಾಡಳಿತ ಪ್ರದೇಶದಲ್ಲಿನ ಚುನಾವಣೆ ಪ್ರಕ್ರಿಯೆಯ ಮಹತ್ವದ ಒಂದು ಘಟ್ಟ ಪೂರ್ಣಗೊಂಡಿದ್ದು, ಇನ್ನು ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆಗೆ ಇನ್ನೊಂದು ದಿನವಷ್ಟೇ ಬಾಕಿ ಇದೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶದಲ್ಲಿ ಮೇ 4ರ ಸೋಮವಾರ ಬೆಳಗ್ಗೆ ಮತ ಎಣಿಕೆ ಆರಂಭಗೊಳ್ಳಲಿದ್ದು, ಮಧ್ಯಾಹ್ನದ ವೇಳೆಗೆಲ್ಲಾ ಫಲಿತಾಂಶದ ಸ್ಪಷ್ಟ ಚಿತ್ರಣ ಲಭ್ಯವಾಗಲಿದೆ.

ಅಮೆರಿಕದ ಸ್ಪಿರಿಟ್ ಏರ್‌ಲೈನ್ಸ್‌ಗೆ ಬೀಗ

ವಾಷಿಂಗ್ಟನ್: ಅಮೆರಿಕದಲ್ಲಿ ಕಡಿಮೆ ದರದಲ್ಲಿ ವಿಮಾನಯಾನ ಸೇವೆ ಒದಗಿಸುತ್ತಿದ್ದ 'ಸ್ಪಿರಿಟ್ ಏರ್ ಲೈನ್ಸ್' ವಿಮಾನಯಾನ ಸಂಸ್ಥೆ ಕಾರ್ಯಾಚರಣೆ ಸ್ಥಗಿತಗೊಳಿಸಲು ನಿರ್ಧರಿಸಿದೆ. 50 ಕೋಟಿ ಡಾಲರ್ ಸಾಲ ಮನ್ನಾ ಮಾಡುವುದಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರಕಾರ ನಿರಾಕರಿಸಿದ ಹಿನ್ನೆಲೆಯಲ್ಲಿ ಹಣಕಾಸು ಮುಗ್ಗಟ್ಟಿಗೆ ಸಿಲುಕಿರುವ ಸ್ಪಿರಿಟ್ ಏರ್ ಲೈನ್ಸ್ ಸಂಸ್ಥೆಗೆ ಕಂಪನಿಯನ್ನು ತಕ್ಷಣದಿಂದಲೇ ಮುಚ್ಚುವುದು ಮಾತ್ರವೇ ಇರುವ ಏಕೈಕ ಮಾರ್ಗ ಎನ್ನಲಾಗಿದೆ. ಈ ಸಂಬಂಧ ಶನಿವಾರ ಸ್ಪಿರಿಟ್ ಏರ್ ಲೈನ್ಸ್ ತನ್ನ ವೆಬ್‌ಸೈಟ್‌ನಲ್ಲಿ ಕಂಪನಿ ದಿವಾಳಿ ಅಂಚಿನಲ್ಲಿರುವುದಾಗಿ ಪ್ರಕಟಿಸಿದೆ. ಕಾರ್ಯಾಚರಣೆ ಸ್ಥಗಿತಗೊಳಿಸುವ ಬಗ್ಗೆ ಪ್ರಕಟಣೆ ನೀಡಿದೆ ಎಂದು ವರದಿಯಾಗಿದೆ.

{ ಕೇಶವ್ ಪ್ರಸಾದ್ ಮೌರ್ಯ } ಉ.ಪ್ರ. ಡಿಸಿಎಂ

ಪಶ್ಚಿಮ ಬಂಗಾಳದ 2 ಕ್ಷೇತ್ರದ 15 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಚು.ಆಯೋಗದ ನಿರ್ಧಾರ ಸರಿಯಿದೆ. ಇದು ಟಿಎಂಸಿ ಸೋಲು ಖಚಿತಪಡಿಸಲಿದೆ. ಮೇ 4ರಂದು ದೀದಿ ಅಧಿಕಾರ ಬಿಡಲಿದ್ದಾರೆ. ಅವರೆಷ್ಟು ವಿಚಲಿತರೋ ಅಷ್ಟೇ ಪ್ರಮಾಣದಲ್ಲಿ ಆಧಾರರಹಿತ ಆರೋಪ ಮಾಡುತ್ತಾರೆ. ಇದು ಟಿಎಂಸಿಯ ಹೀನಾಯ ಸೋಲಿನ ಸ್ಪಷ್ಟ ಮುನ್ಸೂಚನೆ ಆಗಿದೆ.

ಎನ್‌ಡಿಎ ಸರಕಾರ ವಿರುದ್ಧ ಕಾಂಗ್ರೆಸ್, ಸಮಾಜವಾದಿ ಪಕ್ಷ, ಡಿಎಂಕೆ ಟೀಕಾಸ್ತ್ರ

ವಾಣಿಜ್ಯ ಎಲ್‌ಪಿಜಿ ತುಟ್ಟಿ-ಖಂಡನೆ

ದೆಹಲಿ: ದೇಶದಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ದರ ಏರಿಕೆಯಾಗಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಸರಕಾರದ ವಿರುದ್ಧ ಕಾಂಗ್ರೆಸ್, ಡಿಎಂಕೆ, ಸಮಾಜವಾದಿ ಪಕ್ಷ(ಎಸ್‌ಪಿ) ಮತ್ತು ಎಡಪಕ್ಷಗಳ 'ಇಂಡಿ' ಒಕ್ಕೂಟ ತೀವ್ರ ವಾಗ್ದಾಳಿ ನಡೆಸಿವೆ.

ಮೋದಿ ಸರಕಾರ ಶುಕ್ರವಾರ 19 ಕೆ.ಜಿ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಒಮ್ಮೆಲೇ 993 ರು.ಗಳಷ್ಟು ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿದೆ. ಇದು ಈವರೆಗೆ ಮಾಡಿರುವ ಎಲ್‌ಪಿಜಿ ದರದಲ್ಲೇ ಅತ್ಯಧಿಕ ಪ್ರಮಾಣದ ಬೆಲೆ ಏರಿಕೆ ಆಗಿದೆ. ಪಶ್ಚಿಮ ಏಷ್ಯಾ ಸಂಘರ್ಷ ಹಿನ್ನೆಲೆ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧ ಆರಂಭಿಸಿದಾಗಿನಿಂದ ಇಂಧನ ತೈಲ-ಅನಿಲ ದರ ಏರಿಕೆ 3ನೇ ಬಾರಿ ಏರಿಕೆಯಾಗಿದೆ ಎಂದು ಕಾಂಗ್ರೆಸ್ ಸೇರಿದಂತೆ ಎಲ್ಲಾ ಪ್ರತಿಪಕ್ಷಗಳೂ ವಾಗ್ದಾಳಿ ನಡೆಸಿವೆ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ ಫೆಬ್ರವರಿಯಿಂದಲೂ ನಿರಂತರ ಏರಿಕೆ ಆಗುತ್ತಿದೆ. ಒಟ್ಟು 1,380 ರು.ಗಳಷ್ಟು ಏರಿಕೆ ಆಗಿದೆ. ಅಂದರೆ ಕೇವಲ ಮೂರೇ ತಿಂಗಳಲ್ಲಿ ಶೇ.81ರಷ್ಟು ಬೆಲೆ ಹೆಚ್ಚಳವಾಗಿದೆ. ಚಹಾ ಅಂಗಡಿ, ಡಾಬಾ, ಹೋಟೆಲ್‌ಲ್, ಬೇಕರಿ, ಸಣ್ಣ ಅಂಗಡಿ, ಕ್ಯಾಟರಿಂಗ್ ಅಡುಗೆ ಮನೆಗಳಿಗೆ ಈ ದರ ಏರಿಕೆ ದೊಡ್ಡ ಹೊರೆಯಾಗಿದೆ. ಇದರ ಪರಿಣಾಮ ಬಡ ಜನರ ಊಟದ ವೆಚ್ಚದ ಮೇಲಾಗಲಿದೆ ಎಂದು ಪ್ರತಿಪಕ್ಷಗಳು ಕಿಡಿಕಾರಿವೆ.

ಏಪ್ರಿಲ್‌ನಲ್ಲಿ 19 ಕೆಜಿ ಎಲ್‌ಪಿಜಿ ಸಿಲಿಂಡರ್ ದರ ದೆಹಲಿಯಲ್ಲಿ 2078.50 ರು.ಗಳಷ್ಟಿದ್ದುದು ಈಗ ಮೇ 1ರ ವೇಳೆಗೆ 3071.50 ರು.ಗಳಿಗೆ ಏರಿಕೆಯಾಗಿದೆ. ಮೇ 1ರಂದು ಬೆಲೆ ಏರಿಸಿದ್ದರಿಂದ 19 ಕಿಲೊ ವಾಣಿಜ್ಯ ಬಳಕೆ ಸಿಲಿಂಡರ್ ದರ ಬೆಂಗಳೂರಿನಲ್ಲಿ 3152 ರು., ಮುಂಬೈನಲ್ಲಿ 3024, ಕೋಲ್ಕತ್ತದಲ್ಲಿ 3202 ರು.ಗಳಿಗೆ ಮುಟ್ಟಿದೆ. 5 ಕಿಲೊ ಅಡುಗೆ ಅನಿಲ ಸಿಲಿಂಡರ್ ದರವೂ ಇದೇ ಅವಧಿಯಲ್ಲಿ 261 ರು.ಗಳಷ್ಟು ಏರಿಕೆ ಕಂಡಿದೆ.

ವಾಣಿಜ್ಯ ಬಳಕೆ ಸಿಲಿಂಡರ್ ದರ ಏರಿಕೆ

2026 ಮೇ 1	ರು.993
2026 ಏಪ್ರಿಲ್	ರು.200
2026 ಮಾರ್ಚ್	ರು.100

ಆಹಾರ ಕದಿಯುವವರು

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಎಲ್‌ಪಿಜಿ ಬೆಲೆ ಏರಿಸುವ ಮೂಲಕ ಸಾಮಾನ್ಯ ಜನರಿಗೆ ಹೋಟೆಲ್ ಆಹಾರ ದುಬಾರಿಯಾಗುವಂತೆ ಮಾಡಿದೆ ಎಂದು ಸಮಾಜವಾದಿ ಪಕ್ಷದ(ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಕಿಡಿಕಾರಿದ್ದಾರೆ. ಜನಸಾಮಾನ್ಯರ ಆಹಾರ ದುಬಾರಿಯಾಗುತ್ತದೆ. ಅಹಾರಕ್ಕೆ ಹಣ ಕೊಟ್ಟು ತಿನ್ನುವವರಿಗೆ ಮಾತ್ರ ಅದರ ಕಷ್ಟ ಗೊತ್ತಾಗುತ್ತದೆ. ಬೇರೆಯವರ ಮನೆಗೆ ಹೋಗಿ ತಿನ್ನುವವರಿಗೆ ಅಥವಾ ಇತರರ ತಟ್ಟೆಯಿಂದ ಕದಿಯುವವರಿಗೆ ಗೊತ್ತಾಗುವುದಿಲ್ಲ ಎಂದು ಅಖಿಲೇಶ್ ವಾಗ್ದಾಳಿ ನಡೆಸಿದ್ದಾರೆ. ದರ ಏರಿಕೆ, ನಿರುದ್ಯೋಗ ಬಗ್ಗೆ ಬಿಜೆಪಿ ಯಾವಾಗ ಖಂಡನಾ ನಿರ್ಣಯ ತರುತ್ತದೆ ಎಂದೂ ಯಾದವ್ ಪ್ರಶ್ನಿಸಿದ್ದಾರೆ.

ಚುನಾವಣಾ ಬಿಲ್

'ಇದು ಎನ್‌ಡಿಎ ಆಡಳಿತದ ಚುನಾವಣಾ ಬಿಲ್' ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವ್ಯಂಗ್ಯವಾಡಿದ್ದು, 'ಸದ್ಯದಲ್ಲೇ ಪೆಟ್ರೋಲ್ ಮತ್ತು ಡೀಸೆಲ್ ದರವೂ ಏರಿಕೆ ಆಗಲಿದೆ' ಎಂದು ಎಚ್ಚರಿಸಿದ್ದಾರೆ. 4 ರಾಜ್ಯ ಮತ್ತು 1 ಕೇಂದ್ರಾಡಳಿತ ಪ್ರದೇಶದ ಚುನಾವಣೆ ಮುಗಿದ ನಂತರ ಬಿಜೆಪಿ ಸರಕಾರ ಇಂಧನ ತೈಲ-ಅನಿಲದ ದರ ಏರಿಕೆಯ ಪೆಟ್ಟು ಕೊಡಲಿದೆ ಎಂದು ತಾವು ಮುಂಚಿತವಾಗಿ ಎಚ್ಚರಿಸಿದ್ದೆ ಎಂಬುದನ್ನು ರಾಹುಲ್ ಈಗ ನೆನಪಿಸಿದ್ದಾರೆ. 'ಈಗ ವಾಣಿಜ್ಯ ಬಳಕೆ ಅಡುಗೆ ಅನಿಲ ಸಿಲಿಂಡರ್ ಮೇಲೆ ಹೊರೆ ಹಾಕಿದ್ದಾರೆ. ಮುಂದಿನದು ಪೆಟ್ರೋಲ್ ಮತ್ತು ಡೀಸೆಲ್, ಗೃಹ ಬಳಕೆ ಅನಿಲ ಸಿಲಿಂಡರ್‌ಗಳ ಸರದಿಯಾಗಲಿದೆ ನೋಡುತ್ತಿರಿ. ಸಾಮಾನ್ಯ ಜನರ ಕಷ್ಟಗಳ ಬಗ್ಗೆ ಆಡಳಿತ ಪಕ್ಷದ ಗಮನ ವೇನಿದ್ದರೂ ಅದು ಕೇವಲ ಚುನಾವಣಾ ಸ್ಟಂಟ್‌ಗಳಾಗಿದೆ. ಎನ್‌ಡಿಎ ಸರಕಾರ ಸಾಮಾನ್ಯ ಜನರ ಕಷ್ಟ ಕೇಳಲು ಸಿದ್ಧವಿಲ್ಲ ಎಂದು ರಾಹುಲ್ ಟೀಕಿಸಿದ್ದಾರೆ.

ಯುದ್ಧವೊಂದು ನೆಪವಷ್ಟೆ

ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ಕ್ರಮವನ್ನು ತಕ್ಷಣ ಹಿಂದಕ್ಕೆ ಪಡೆಯಬೇಕು. ಜನರ ಜೀವನೋಪಾಯ ರಕ್ಷಿಸಲು ಕ್ರಮ ಕೈಗೊಳ್ಳಬೇಕು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಒತ್ತಾಯಿಸಿದ್ದಾರೆ. ಕೇಂದ್ರ ಸರಕಾರ ಚುನಾವಣೆ ನಂತರ ಬೆಲೆ ಏರಿಕೆ ಮಾಡಲಿದೆ ಎಂದು ಮುನ್ನವೇ ಡಿಎಂಕೆ ಹೇಳಿತ್ತು. ಅದರಂತೆಯೇ ಚುನಾವಣೆ ಮುಗಿದ ತಕ್ಷಣ ಬಿಜೆಪಿ ನೇತೃತ್ವದ ಸರಕಾರ ಎಲ್‌ಪಿಜಿ ದರ ಹೆಚ್ಚಿಸಿದೆ. ಜಾಗತಿಕ ಮಟ್ಟದಲ್ಲಿ ಕಚ್ಚಾತೈಲದ ದರ ಇಳಿದಿರುವಾಗ ಅದರ ಲಾಭವನ್ನು ಎನ್‌ಡಿಎ ಸರಕಾರ ಜನರಿಗೆ ನೀಡಲಿಲ್ಲ. ಬದಲಾಗಿ ಈಗ ಪಶ್ಚಿಮ ಏಷ್ಯಾ ಯುದ್ಧವನ್ನು ಕಾರಣವಾಗಿಸಿಕೊಂಡು ವಾಣಿಜ್ಯ ಎಲ್‌ಪಿಜಿ ದರ ಹೆಚ್ಚಿಸಿದೆ ಎಂದು ಕೇಂದ್ರ ಸರಕಾರವನ್ನು ಸ್ಟಾಲಿನ್ ಟೀಕಿಸಿದ್ದಾರೆ.

ಚು.ಆಯೋಗದ ಕ್ರಮ ಪ್ರಶ್ನಿಸಿದ್ದ ಟಿಎಂಸಿಗೆ ಹಿನ್ನಡೆ

ಪ.ಬಂಗಾಳ ಮತ ಎಣಿಕೆಗೆ ಕೇಂದ್ರ ಸಿಬ್ಬಂದಿ ಬಳಕೆ ತಪ್ಪಿಲ್ಲ: ಸುಪ್ರೀಂ

ದೆಹಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿನ ಮತ ಎಣಿಕೆಗೆ ಕೇಂದ್ರ ಸರಕಾರದ ಸಿಬ್ಬಂದಿಗಳನ್ನು ನಿಯೋಜನೆ ಮಾಡಿರುವ ಚುನಾವಣಾ ಆಯೋಗದ ಕ್ರಮ ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿರುವ ಸುಪ್ರೀಂಕೋರ್ಟ್, ಚುನಾವಣಾ ಆಯೋಗದ ಕ್ರಮ ಸರಿಯಾಗಿಯೇ ಇದೆ. ಈ ವಿಚಾರದಲ್ಲಿ ಯಾವುದೇ ಹೊಸ ಆದೇಶ ಹೊರಡಿಸಬೇಕಾದ ಅಗತ್ಯವಿಲ್ಲ ಎಂದು ಶನಿವಾರ ಹೇಳಿದೆ.

ಮತ ಎಣಿಕೆಗಾಗಿ ಕೇಂದ್ರ ಸರಕಾರದ ಹಾಗೂ ಸಾರ್ವಜನಿಕ ವಲಯದ ಉದ್ಯಮ ಸಂಸ್ಥೆಗಳ ಸಿಬ್ಬಂದಿಗಳನ್ನು ನಿಯೋಜಿಸುವ ಕ್ರಮ ಸರಿಯಾಗಿಯೇ ಇದೆ. ಚುನಾವಣಾ ಆಯೋಗದ ಮಾರ್ಗಸೂಚಿಗಳು ನಿಯಮಗಳಿಗೆ ವಿರುದ್ಧವಾಗಿಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಮತ್ತು ನ್ಯಾ.ಜೋಯ್ ಮಲ್ಯ ಬಾಗ್ಚಿ ಅವರ ದ್ವಿಸದಸ್ಯ ಪೀಠ ಅಭಿಪ್ರಾಯಪಟ್ಟಿದೆ.

ರಾಜ್ಯ ಸರಕಾರದ ಉದ್ಯೋಗಿಯೇ ರಿಟರ್ನಿಂಗ್ ಆಫೀಸರ್ ಆಗಿದ್ದಾರೆ. ಅವರಿಗೆ ಮತಗಳ ಎಣಿಕೆ ಪ್ರಕ್ರಿಯೆಯಲ್ಲಿ ಹೆಚ್ಚಿನ ಅಧಿಕಾರವಿರುತ್ತದೆ. ಮತ ಎಣಿಕೆ ಕೇಂದ್ರಗಳಲ್ಲಿ ಕೇಂದ್ರ ಸರಕಾರದ ಸಿಬ್ಬಂದಿಗಳ ಪಾತ್ರದ ಬಗ್ಗೆ ಅರ್ಜಿದಾರರ(ಟಿಎಂಸಿ) ಆತಂಕಗಳು ತಪ್ಪಾಗಿವೆ ಎಂದೂ ದ್ವಿಸದಸ್ಯ ಪೀಠ ಹೇಳಿದೆ. ಮತ ಎಣಿಕೆ ಮಾಡುವಾಗ ಎಲ್ಲಾ ರಾಜಕೀಯ ಪಕ್ಷಗಳ ಏಜೆಂಟರೂ ಹಾಜರಿರುತ್ತಾರೆ ಎಂಬುದು ಇರುವಾಗ ಪಾರದರ್ಶಕತೆ ಕಾಪಾಡಲು ಹೆಚ್ಚುವರಿ ಮೇಲ್ವಿಚಾರಣೆಯೂ ಇದ್ದಂತೆ. ಮತಗಟ್ಟೆಯಲ್ಲಿನ ಎಲ್ಲಾ ಸಿಬ್ಬಂದಿಯೂ ಸರಕಾರದ ಉದ್ಯೋಗಿಗಳೇ ಆಗಿರುವುದರಿಂದ ಯಾವುದೇ ಪಕ್ಷಪಾತದ ಆತಂಕ ಬೇಕಿಲ್ಲ ಎಂದೂ ಪೀಠ ಹೇಳಿದೆ. ಇದರಿಂದಾಗಿ ಮೇ 4ರ ಮತ ಎಣಿಕೆ ಪ್ರಕ್ರಿಯೆ ಚುನಾವಣಾ ಆಯೋಗದ ಮಾರ್ಗಸೂಚಿಗಳಂತೆಯೇ ನಡೆಯಲಿದೆ.

ಕೋಲ್ಕತ್ತ ಹೈಕೋರ್ಟ್ ಕೂಡ ಟಿಎಂಸಿ ಅರ್ಜಿ ತಿರಸ್ಕರಿಸಿತ್ತು. ಚುನಾವಣಾ ಆಯೋಗಕ್ಕೆ ಸಿಬ್ಬಂದಿ ಆಯ್ಕೆಯ ಪೂರ್ಣ ಅಧಿಕಾರವಿದೆ ಎಂದೂ ಹೇಳಿತ್ತು ಎಂಬುದು ಉಲ್ಲೇಖಾರ್ಹ.

ವಕೀಲರುಗಳ ವಾದ-ಪ್ರತಿವಾದ

ರಾಜ್ಯ ಸರಕಾರದ ಸಿಬ್ಬಂದಿಗಳಿಗೆ ಮತ ಎಣಿಕೆ ಕೇಂದ್ರಗಳಲ್ಲಿ ಅವಕಾಶ ನೀಡಿಲ್ಲ. ಕೇಂದ್ರ ಸರಕಾರದ ಸಿಬ್ಬಂದಿಗಳನ್ನು ಮತ ಎಣಿಕೆಗೆ ಬಳಸಿಕೊಳ್ಳುವ ನಿರ್ಧಾರದ ಬಗ್ಗೆ ಚುನಾವಣಾ ಆಯೋಗ ತಡವಾಗಿ ಮಾಹಿತಿ ನೀಡಿದೆ ಟಿಎಂಸಿ ಪರ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿದರು. ಚುನಾವಣಾ ಆಯೋಗದ ಪರ ಹಾಜರಾಗಿದ್ದ ವಕೀಲ ಡಿ.ಡಿ.ಎಸ್.ನಾಯ್ಡು, ಆಯೋಗದ ಕ್ರಮ ನ್ಯಾಯಸಮ್ಮತವಾಗಿದೆ. ಮತ ಎಣಿಕೆ ಪ್ರಕ್ರಿಯೆ ನಿಯಮಾನುಸಾರವೇ ನಡೆಯುತ್ತಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಇಸ್ರೇಲ್ ದಾಳಿಗೆ ಲೆಬನಾನಲ್ಲಿ 12 ಸಾವು

ಟೆಲ್ ಅವಿವ್: ಅಮೆರಿಕ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಘೋಷಣೆ ಆಗಿದ್ದರೂ ಲೆಬನಾನ್-ಇಸ್ರೇಲ್ ನಡುವಿನ ಸಂಘರ್ಷ ಮತ್ತೆ ಮುಂದುವರೆದಿದೆ. ಲೆಬನಾನ್ ಮೇಲೆ ಶುಕ್ರವಾರ ಇಸ್ರೇಲ್ ಬಾಂಬ್‌ಗಳಿಂದ ದಾಳಿ ನಡೆಸಿದ್ದು, ಒಂದು ಮಗು ಸೇರಿದಂತೆ 12 ಮಂದಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ದಕ್ಷಿಣ ಲೆಬನಾನ್ ಭಾಗದ ಹಲವು ಪ್ರದೇಶಗಳನ್ನು ಗುರಿಯಾಗಿಸಿ ಇಸ್ರೇಲ್ ವಾಯುಪಡೆ ದಾಳಿ ನಡೆಸಿದೆ. ಹಬ್ಬೂಷ್, ಕಫರ್, ರುಮ್ಮಾನ್ ಮೊದಲಾದ ಗ್ರಾಮಗಳ ಮನೆಗಳು, ರಸ್ತೆ, ಮೂಲಸೌಕರ್ಯ ವ್ಯವಸ್ಥೆಗಳು ಹಾನಿಗೊಂಡಿವೆ. ಹಲ ವಾರು ಜನರು ಗಾಯಗೊಂಡಿದ್ದು, ವಿವಿದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಇನ್ನೊಂದೆಡೆ, ಇಸ್ರೇಲ್ ಮೇಲೆ ಹೆಜ್ಬೊಲ್ಲಾ ಉಗ್ರ ಸಂಘಟನೆ ಪ್ರತಿದಾಳಿಯೂ ತೀವ್ರಗೊಂಡಿದೆ. ಡ್ರೋನ್ ಮೂಲಕ ಇಸ್ರೇಲ್ ಮೇಲೆ ದಾಳಿ ನಡೆಸಿದೆ. ಇಸ್ರೇಲ್‌ನ ಇಬ್ಬರು ಯೋಧರು ಗಂಭೀರವಾಗಿ ಗಾಯಗೊಂಡಿದ್ದಾರೆ. ಹೆಜ್ಬೊಲ್ಲಾ ಬಳಸುತ್ತಿರುವ ಡ್ರೋನ್‌ಗಳು ಕಡಿಮೆ ಎತ್ತರದಲ್ಲಿ ಹಾರಾಡುವುದರಿಂದ ರಾಡಾರ್‌ಗಳಿಗೆ ಗೋಚರವಾಗುತ್ತಿಲ್ಲ. ಹಾಗಾಗಿ ಅವನ್ನು ಆಕಾಶದಲ್ಲೇ ನಾಶಪಡಿಸುವುದು ಇಸ್ರೇಲ್‌ಗೆ ಸವಾಲಾಗಿದೆ. ಈ ದಾಳಿಗಳಿಂದಾಗಿ ಕಳೆದ ವಾರವಷ್ಟೇ ಘೋಷಿಸಲಾಗಿದ್ದ ಕದನ ವಿರಾಮ ಒಪ್ಪಂದ ವಿಫಲವಾದಂತಾಗಿದೆ. ಗಡಿ ಪ್ರದೇಶಗಳಲ್ಲಿನ ಜನರು ಮನೆ ತೊರೆದು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಂಡಿದ್ದಾರೆ. 2026ರ ಮಾರ್ಚ್‌ನಲ್ಲಿ ಶುರುವಾದ ಇಸ್ರೇಲ್-ಲೆಬನಾನ್ ಸಂಘರ್ಷ ಲೆಬನಾನ್‌ನಲ್ಲಿ ಈವರೆಗೆ ಸಾವಿರಾರು ಮಂದಿ ಸಾವನ್ನಪ್ಪಿದ್ದಾರೆ ಮತ್ತು ಲಕ್ಷಾಂತರ ಮಂದಿ ಮನೆ, ಆಸ್ತಿಗಳನ್ನು ಕಳೆದುಕೊಂಡಿದ್ದಾರೆ.

ಲೆಬನಾನ್ ಮೇಲೆ ಬಾಂಬ್‌ಗಳಿಂದ ದಾಳಿ ನಡೆಸಿರುವ ಇಸ್ರೇಲ್.

ಜಮ್ಮು ಬಂಟ್ಲಾಬ್‌ನಲ್ಲಿ ಸೇತುವೆ ಕುಸಿತ, 7 ಸಾವು

ಶ್ರೀನಗರ: ಜಮ್ಮುವಿನ ಬಂಟ್ಲಾಬ್‌ನ ಥಾರ್ ಪ್ರದೇಶದಲ್ಲಿ ಶನಿವಾರ ದೊಡ್ಡ ಅಪಘಾತವಾಗಿದೆ. ಸೇತುವೆಯ ಅಗಲೀಕರಣ ಕಾಮಗಾರಿಯಲ್ಲಿ ತೊಡಗಿದ್ದ ಕಾರ್ಮಿಕರ ಮೇಲೆಯೇ ಸೇತುವೆಯ ಒಂದು ಭಾಗ ಕುಸಿದು ಬಿದ್ದಿದೆ. ಕುಸಿದ ಸೇತುವೆಯ ಅವಶೇಷಗಳಡಿ ಸಿಲುಕಿ 7 ಕಾರ್ಮಿಕರು ಮೃತಪಟ್ಟಿದ್ದಾರೆ. ಆ ತಕ್ಷಣವೇ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಆದರೆ, ಅವಶೇಷಗಳಡಿ ಸಿಲುಕಿದ್ದವರಲ್ಲಿ 7 ಕಾರ್ಮಿಕರು ಮೃತರಾಗಿದ್ದರು. ಜಮ್ಮು-ಕಾಶ್ಮೀರ ಪೊಲೀಸರು, ಎಸ್‌ಡಿಆರ್‌ಎಫ್, ಭಾರತೀಯ ಸೇನೆ ಮತ್ತು ಸ್ಥಳೀಯ ನಿವಾಸಿಗಳ ಸಹಾಯದಿಂದ ರಕ್ಷಣಾ ಕಾರ್ಯಾಚರಣೆ ನಡೆಸ ಲಾಗಿದೆ. ಕೆಲವು ಕಾರ್ಮಿಕರನ್ನು ರಕ್ಷಿಸಲಾಗಿದೆ.



ಆರ್‌ಬಿಐ ಹೊಸ ಉಪ ಗವರ್ನರ್ ರೋಹಿತ್ ಜೈನ್

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್‌ನ ಉಪ ಗವರ್ನರ್ ಆಗಿ ರೋಹಿತ್ ಜೈನ್ ಅವರನ್ನು ಕೇಂದ್ರ ಸರಕಾರ ಶನಿವಾರ ನೇಮಕ ಮಾಡಿದ್ದು, ಈ ಆದೇಶ ಮೇ 3 ಅಥವಾ ನಂತರದಲ್ಲಿ ಜಾರಿಗೆ ಬರಲಿದೆ. ಉನ್ನತ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿ ಸಚಿವ ಸಂಪುಟ ಸಮಿತಿ(ಎಸಿಸಿ) ರೋಹಿತ್ ಜೈನ್ ಅವರನ್ನು 3 ವರ್ಷಗಳ ಕಾಲ ಆರ್‌ಬಿಐ ಉಪ ಗವರ್ನರ್ ಆಗಿ ನೇಮಕ ಮಾಡಲು ಅನುಮೋದನೆ ನೀಡಿದೆ. ಆರ್‌ಬಿಐನ ಉಪ ಗವರ್ನರ್ ಆಗಿದ್ದ ಟಿ.ರವಿಶಂಕರ್ ಅವರ ಅಧಿಕಾರಾವಧಿ ಶನಿವಾರ ಕೊನೆಗೊಂಡಿದೆ. ವಾಣಿಜ್ಯ ಮತ್ತು ವ್ಯವಹಾರ ಆಡಳಿತ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾದ ರೋಹಿತ್ ಜೈನ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ 3 ದಶಕಗಳ ಅನುಭವ ಹೊಂದಿದ್ದಾರೆ. 2020ರ ಡಿಸೆಂಬರ್‌ನಲ್ಲಿ ಅವರು ಆರ್‌ಬಿಐ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕಗೊಂಡ ಅವರು ಮೇಲ್ವಿಚಾರಣೆ, ಮಾನವ ಸಂಪನ್ಮೂಲ ನಿರ್ವಹಣೆ, ಬ್ಯಾಂಕಿಂಗ್ ಮತ್ತಿತರೆ ಕ್ಷೇತ್ರಗಳ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ನಾಗರಿಕರನ್ನು ಬೆಚ್ಚಿಬೀಳಿಸಿದ ಕುಯ್ ಸದ್ದು

ದೆಹಲಿ: ಮೇ 2ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ದೇಶದಲ್ಲಿರುವ ನಾಗರಿಕರೆಲ್ಲರ ಮೊಬೈಲ್ ಫೋನ್‌ಗಳೂ ಒಂದರಣೆ ಕ್ಷಣ 'ಕುಯ್' ಎಂದು ಸದ್ದು ಮಾಡಿ ಜನರೆಲ್ಲಾ ಬೆಚ್ಚಿ ಬೀಳುವಂತೆ ಮಾಡಿದವು. ಮೊಬೈಲ್ ಫೋನ್ ತೆರೆದು ನೋಡಿದರೆ ಇಡೀ ಸ್ಕ್ರೀನ್ ಆವರಿಸಿಕೊಂಡಿದ್ದ ಇಂಗ್ಲಿಷ್ ಮತ್ತು ಸ್ಥಳೀಯ ಭಾಷೆಯಲ್ಲಿದ್ದ ಸಂದೇಶ ಕಂಡಿತು. ಸಂದೇಶದ ಮೇಲ್ಭಾಗದಲ್ಲಿ ಕೆಂಪು ತ್ರಿಕೋನಾಕೃತಿ. ಅದರ ಮಧ್ಯೆ ಆಶ್ಚರ್ಯ ಸೂಚಕ ಚಿಹ್ನೆ. ಆ ಚಿಹ್ನೆಯನ್ನು ನೋಡಿಯೇ ಹಲವರು ಆಘಾತಕ್ಕೊಳಗಾಗಿದ್ದಿದೆ. 'ಇದೆಂಥ ಮೆಸೇಜಪ್ಪಾ' ಎಂದು ಹಲವರು ಥಟ್ಟನೆ ಫೋನನ್ನು ದೂರ ಇಟ್ಟಿದ್ದೂ ನಡೆದಿದೆ. ಮೆಸೇಜ್ ಕಡೆ ಭಾಗದಲ್ಲಿ 'ಒಕೆ' ಎಂಬ ಕೆಂಪು ಅಕ್ಷರ. ಅದನ್ನು ಬೆರಳಿಂದ ಮುಟ್ಟುವುದಕ್ಕೂ ಹಲವರು ಹೆದರಿದ್ದಿದೆ. ಆ 'ಒಕೆ' ಮೆಸೇಜ್ ಅನ್ನು ಸ್ಪರ್ಶ ಮಾಡದೇ ಮೆಸೇಜ್ ರದ್ದಾಗುತ್ತಿಲ್ಲ ಎಂದು ಬೆಚ್ಚಿಬೆರಗಾದವರೂ ಇದ್ದಾರೆ. ಧೈರ್ಯ ಮಾಡಿ ಮೆಸೇಜನ್ನು ಓದಿದವರು ಸಮಾಧಾನಗೊಂಡು 'ಓ ಇಷ್ಟೇನಾ' ಎಂದು ಉದ್ಗಾರ ತೆಗೆದವರು ಹಲವರು.

ಭಾರತೀಯ ಟೆಲಿಕಾಂ ಸಚಿವಾಲಯ ಮತ್ತು ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರ(ಎನ್‌ಡಿಎಂಎ) ಜಂಟಿಯಾಗಿ ನಡೆಸಿದ ಪ್ರಯೋಗಿಕ ಪರೀಕ್ಷೆ ಇದಾಗಿತ್ತು. ಸುನಾಮಿ, ಪ್ರವಾಹ, ಭೂಕಂಪ ರೀತಿಯ ನೈಸರ್ಗಿಕ ಅಥವಾ ಪ್ರಾಕೃತಿಕ ವಿಕೋಪಗಳ ಸಂದರ್ಭ ಅಥವಾ ಮೊಬೈಲ್ ಸಂಪರ್ಕ ಸೇವೆಯಲ್ಲಿ ವ್ಯತ್ಯಯವಾದಾಗ ದೇಶದ ನಿಗದಿತ ಪ್ರದೇಶದ ಅಥವಾ ದೇಶಾದ್ಯಂತದ ಜನರಿಗೆ ಅವರ ಮೊಬೈಲ್ ಫೋನ್‌ಗೇ ನೇರವಾಗಿ ಪರೀಕ್ಷಾರ್ಥವಾಗಿ ರವಾನಿಸಲಾಗಿದ್ದ 'ಸಾಚೆಟ್'(ಸೆಲ್ ಬ್ರಾಡ್‌ಕಾಸ್ಟ್ ಬೇಸಡ್ ಅಲರ್ಟ್ ಸಿಸ್ಟಂ) 'ಇಕ್ಸ್‌ಟ್ರೀಮ್ಲಿ ಸಿವಿಯರ್ ಅಲರ್ಟ್' ಅಥವಾ 'ಸ್ಯಾಂಪಲ್ ಟೆಸ್ಟಿಂಗ್ ಮೆಸೇಜ್' ಹೇಳಿದ್ದಿಷ್ಟೆ... 'ದೇಶದ ನಾಗರಿಕರೆ ಇದೊಂದು ಪರೀಕ್ಷಾರ್ಥ ಪ್ರಯೋಗಿಕ ತುರ್ತು ಸಂದೇಶ. ಆತಂಕ ಪಡಬೇಕಿಲ್ಲ. ಯಾವುದೇ ಕ್ರಮ ಕೈಗೊಳ್ಳಬೇಕಿಲ್ಲ. ಇಂಥ ಪರೀಕ್ಷಾರ್ಥ ಸಂದೇಶ ಮತ್ತೆ ನಿಮ್ಮ ಮೊಬೈಲ್ ಫೋನ್‌ಗಳಿಗೆ ಬರಬಹುದು. ವಿಕೋಪದಂತಹ ತುರ್ತು ಸಂದರ್ಭಗಳಲ್ಲಿ ರವಾನಿಸಲಾಗುವ ಸಂದೇಶದ ಪರೀಕ್ಷೆ ಅಷ್ಟೆ'.

ಐಎನ್‌ಎಸ್ ಮಹೇಂದ್ರಗಿರಿ ಯುದ್ಧನೌಕೆ

- ಪ್ರಾಜೆಕ್ಟ್ 17ಎ ಅನ್ವಯ ಭಾರತೀಯ ನೌಕಾಪಡೆಗೆ ಸೇರ್ಪಡೆಯಾದ ನೀಲಗಿರೀಸ್ ಶ್ರೇಣಿಯ 6ನೇ ಅತ್ಯಾಧುನಿಕ ಯುದ್ಧನೌಕೆ
- 2026ರ ಏಪ್ರಿಲ್ 30ರಂದು ಮುಂಬೈ ಕರಾವಳಿಯಲ್ಲಿ ಭಾರತೀಯ ನೌಕಾಪಡೆಗೆ ಸೇರ್ಪಡೆ
- ಮಝಗಾಂವ್ ಡಾಕ್ ಷಿಪ್ ಬಿಲ್ಡರ್ಸ್ ಲಿ.(ಎಂಡಿಎಲ್)ನಿಂದ ದೇಶೀಯವಾಗಿಯೇ ನಿರ್ಮಾಣಗೊಂಡ ಅತ್ಯಾಧುನಿಕ ಸಮರ ನೌಕೆ
- ಭಾರತದಲ್ಲೇ ತಯಾರಾಗಿರುವ ಶೇ.75ರಷ್ಟು ಬಿಡಿಭಾಗಗಳನ್ನು ಬಳಸಿಕೊಂಡು ಆತ್ಮನಿರ್ಭರ ಭಾರತ ಪರಿಕಲ್ಪನೆಯಡಿ ಸಿದ್ಧವಾದ ನೌಕೆ
- ಪ್ರಾಜೆಕ್ಟ್ 17ಎ ಅಡಿಯಲ್ಲಿ 'ನೀಲಗಿರಿ' ಸಮರ ನೌಕೆ ಭಾರತೀಯ ನೌಕಾಪಡೆಗೆ 2025ರ ಜ.15ರಂದು ಸೇರಿದ ನಂತರದ 15ನೇ ತಿಂಗಳಲ್ಲಿ ಮಹೇಂದ್ರ ಗಿರಿ ಸೇರ್ಪಡೆ
- 'ವಾರ್ ಷಿಪ್ ಡಿಸೈನ್ ಬ್ಯೂರೊ'ದಲ್ಲಿ ವಿಶೇಷ ರೀತಿಯಲ್ಲಿ ವಿನ್ಯಾಸಗೊಂಡಿರುವ ಮಹೇಂದ್ರಗಿರಿ ಯುದ್ಧ ನೌಕೆಯಲ್ಲಿ ಅತ್ಯಾಧುನಿಕ ಸೆನ್ಸರ್ ವ್ಯವಸ್ಥೆ, ಬ್ರಹ್ಮೋಸ್ ಸೇರಿದಂತೆ ಬಲಿಷ್ಠ ಕ್ಷಿಪಣಿಗಳು, ಬರಾಕ್ 8 ಎಸ್‌ಎಎಂ, ಮತ್ತು ಸೋನಾರ್ ಸಿಸ್ಟಂಗಳ ಜೋಡಣೆ
- ಪ್ರಾಜೆಕ್ಟ್ 17ಎ ಅಡಿಯಲ್ಲಿ ನೀಲಗಿರೀಸ್ ಶ್ರೇಣಿಯ ಕಡೆಯ ಸಮರ ನೌಕೆ ಮಹೇಂದ್ರಗಿರಿ ಸೇರ್ಪಡೆಯಿಂದ ಭಾರತೀಯ ನೌಕಾಪಡೆಯ ಶಕ್ತಿ ಹಲವು ಪಟ್ಟು ವೃದ್ಧಿ.
- ಪ್ರಾಜೆಕ್ಟ್ 17ಎ ಅಡಿಯಲ್ಲಿ ನೀಲಗಿರಿ, ಉದಯಗಿರಿ, ತಾರಾಗಿರಿ, ಹಿಮಗಿರಿ, ದುನಗಿರಿ, ವಿಂಧ್ಯಗಿರಿ, ಮಹೇಂದ್ರಗಿರಿ.
- ದೇಶೀಯವಾಗಿಯೇ ಪ್ರಾಜೆಕ್ಟ್ 17ಎ ಅಡಿ 7 ಸಮರ ನೌಕೆಗಳ ನಿರ್ಮಾಣಕ್ಕೆ ಒಟ್ಟು 50 ಸಾವಿರ ಕೋಟಿ ರು. ಯೋಜನೆ. ಐಎನ್‌ಎಸ್ ಮಹೇಂದ್ರಗಿರಿ ಯುದ್ಧನೌಕೆಗೆ 3,600ರಿಂದ 4000 ಕೋಟಿ ರು. ವೆಚ್ಚದ ಅಂದಾಜು.
- ಐಎನ್‌ಎಸ್ ಮಹೇಂದ್ರಗಿರಿ ಯುದ್ಧ ನೌಕೆಯ ಉದ್ದ 149 ಮೀಟರ್, ಎತ್ತರ 9.9 ಮೀಟರ್, ಬೀಮ್ 17.8 ಮೀಟರ್, 6670 ಟನ್ ಸಾಗಣೆ ಸಾಮರ್ಥ್ಯ.
- ದುಪ್ಪಟ್ಟು ಸಾಮರ್ಥ್ಯದ ಎಂಎಎನ್ ಡೀಸೆಲ್ ಎಂಜಿನ್ ಮತ್ತು 2 ಪಟ್ಟು ಜನರಲ್ ಎಲೆಕ್ಟ್ರಿಕ್ ಎಲ್‌ಎಂ 500 ಸಾಮರ್ಥ್ಯದ ಸಿಒಡಿಎಜಿ ಪ್ರೊಪಲ್ಷನ್ ಎಂಜಿನ್ ಹೊಂದಿದ್ದು, ಗಂಟೆಗೆ 52 ಕಿಮೀ ವೇಗದಲ್ಲಿ ಚಲಿಸಬಲ್ಲದಾಗಿದೆ.
- ಟ್ರಿಪಲ್ ಟಾರ್ಪೆಡೊ ಟ್ಯೂಬ್‌ಗಳಿರುವ 2 ವರುಣಾಸ್ತ್ರ, ಶತ್ರುಪಡೆಯ ಜಲಾಂತರ್ಗಾಮಿ ಧ್ವಂಸಗೊಳಿಸಬಲ್ಲ ಎಕೆ-630 ಸಿಐಡಬ್ಲ್ಯುಎಸ್ ಶಸ್ತ್ರಾಸ್ತ್ರ 72 ರಾಕೆಟ್‌ಗಳಿರುವ ಆಂಟಿ ಸಬ್ ಮರೀನ್ ರಾಕೆಟ್ ಲಾಂಚರ್, 76 ಎಂಎಂ ನಾವಲ್ ಒಟಿಒ ಮೆಲಾರ ಗನ್, 2 ಎಕೆ 630 ಸಿಐಡಬ್ಲ್ಯುಎಸ್ ಗನ್‌ಗಳಿವೆ
- ಎಚ್‌ಎಎಲ್ ನಿರ್ಮಿಸಿದ ಎಚ್‌ಎಎಲ್ ಧ್ರುವ(ಸೀ ಕಿಂಗ್ ಎಂಕೆ) 42 ಬಿ ಶ್ರೇಣಿಯ ಎರಡು ಹೆಲಿಕಾಪ್ಟರ್‌ಗಳಿವೆ.

ಬುರ್ಕಾ ನಾರಿ ತಬ್ಬಿದ ಕಾಮುಕನಿಗೆ ಗುಂಡೇಟು

ಮೊರಾದಾಬಾದ್: ಉತ್ತರ ಪ್ರದೇಶದ ಮೊರಾದಾಬಾದ್ ನಗರದ ನಿರ್ಜನ ಕಿರುರಸ್ತೆಯಲ್ಲಿ ಒಂಟಿಯಾಗಿ ಹೋಗುತ್ತಿದ್ದ ಬುರ್ಖಾಧಾರಿ ಮಹಿಳೆಯನ್ನು ಹಿಂದಿನಿಂದ ತಬ್ಬಿ, ಆಕೆಯ ಸ್ತನ ಸ್ಪರ್ಶಿಸಿ ಲೈಂಗಿಕ ದೌರ್ಜನ್ಯವೆಸಗಿದ 45 ವರ್ಷದ ನೌಶಾದ್ ಎಂಬಾತನನ್ನು ಕಾಲಿಗೆ ಗುಂಡಿಕ್ಕಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಮೊಘಲ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ರಾಮಗಂಗಾ ನದಿದಡದಲ್ಲಿ ಆರೋಪಿ ಅಡಗಿದ್ದಾನೆ ಎಂಬ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಅಲ್ಲಿನ ಜಾಮಾ ಮಸೀದಿ ಬಳಿ ಗುರುವಾರ ರಾತ್ರಿ 11ರ ವೇಳೆ ಪೊಲೀಸರನ್ನು ಓಡಿಹೋಗಲೆತ್ನಿಸಿದ ನೌಶಾದ್ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಸೆರೆ ಹಿಡಿದಿದ್ದಾರೆ. ವೃತ್ತಿಯಲ್ಲಿ ಲೇಡೀಸ್ ಟೈಲರ್ ಆಗಿರುವ ಆರೋಪಿ ಅವಿವಾಹಿತ. ಘಟನೆ ನಡೆದ ಸ್ಥಳದಲ್ಲಿನ ಹಲವು ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ ಪೊಲೀಸರು ಆರೋಪಿಯನ್ನು ಗುರುತಿಸಿ ಬಂಧಿಸಿದರು. ಆರೋಪಿಯ ಎಡಕಾಲಿಗೆ ಪೊಲೀಸರು ಹಾರಿಸಿದ ಗುಂಡು ಹೊಕ್ಕಿದೆ. ಆರೋಪಿಯಿಂದ ಪೊಲೀಸರು ಒಂದು ಪಿಸ್ತೂಲ್ ಮತ್ತು 3 ಗುಂಡುಳನ್ನು ವಶಪಡಿಸಿಕೊಂಡಿದ್ದಾರೆ. ಬುರ್ಖಾ ಧರಿಸಿದ ಒಂಟಿ ಮಹಿಳೆ ರಸ್ತೆಯಲ್ಲಿ ನಡೆದು ಹೋಗುತ್ತಿರುವಾಗ ಹಿಂಬಾಲಿಸಿಕೊಂಡು ಬಂದ ಆರೋಪಿ ಹಿಂದಿನಿಂದ ಆಕೆಯನ್ನು ತಬ್ಬಿಕೊಂಡು ಎದೆಭಾಗಕ್ಕೆ ಕೈಹಾಕಿ ಲೈಂಗಿಕ ಕಿರುಕುಳ ನೀಡಿರುವುದು, ಮಹಿಳೆ ಕೂಗಿಕೊಂಡಾಗ ಆರೋಪಿ ಅಲ್ಲಿಂದ ಓಡಿಹೋಗಿದ್ದ.

ನಿರೀಕ್ಷೆ ಮೀರಿ 'ಎಲ್‌ನಿನೊ' ತೀವ್ರ ಸಾಧ್ಯತೆ

ದೆಹಲಿ: ದೇಶದಲ್ಲಿ ರಣ ಬಿಸಿಲಿಗೆ 'ಎಲ್ ನಿನೊ' ಚಂಡಮಾರುತ ಕಾರಣವಾಗಿದೆ. 'ಸೂಪರ್ ಎಲ್ ನಿನೊ' ಈ ಮೊದಲಿನ ನಿರೀಕ್ಷೆಗಳೆಲ್ಲವನ್ನೂ ಮೀರಿ ಬಲು ದೊಡ್ಡ ಮಟ್ಟದಲ್ಲಿ ಪೆಸಿಫಿಕ್ ಮಹಾಸಾಗರದಲ್ಲಿ ಪ್ರಬಲಗೊಳ್ಳುತ್ತಿದೆ. ಸೂಪರ್ ಎಲ್ ನಿನೊ ಪರಿಣಾಮದಿಂದಾಗಿ ಪೆಸಿಫಿಕ್ ಮಹಾಸಾಗರದ ಉಷ್ಣವಲಯದಲ್ಲಿ ಸಮುದ್ರದ ಮೇಲ್ಮೈ ನೀರು ಅಸಹಜ ರೀತಿಯಲ್ಲಿ ಬಿಸಿಯಾಗಿದೆ. ಇದು ಭಾರತದಲ್ಲಿನ ಅತಿಯಾದ ಉಷ್ಣಾಂಶಕ್ಕೆ, ಸುಡು ಬಿಸಿಲಿಗೆ ಕಾರಣವಾಗಿದೆ ಎಂದು ವಿದೇಶಿ ಹವಾಮಾನ ತಜ್ಞರು ಹೇಳಿದ್ದಾರೆ. ಹಾಗಾಗಿಯೇ ಪೆಸಿಫಿಕ್ ಮಹಾಸಾಗರದಲ್ಲಿನ ಹವಾಮಾನ ಪರಿಸ್ಥಿತಿ ಮೇಲೆ ಭಾರತದ ಹವಾಮಾನ ತಜ್ಞರೂ ಕಣ್ಣಿದ್ದಾರೆ.



ಈ ಬಾರಿಯ 'ಎಲ್-ನಿನೊ' ಕಳೆದೊಂದು ಶತಮಾನದಲ್ಲಿಯೇ ಅತ್ಯಂತ ಪ್ರಬಲವಾಗಿ ಹೊರಹೊಮ್ಮುವ ಆತಂಕ ಎದುರಾಗಿದೆ. ಗರಿಷ್ಠ ತಾಪಮಾನದ ಹೊಸ ದಾಖಲೆ ಸೃಷ್ಟಿಸಬಹುದು. ಭಾರತ ಸೇರಿ ಏಷ್ಯಾ ಖಂಡದ ದೇಶಗಳು ಇದರ ಹೊಡೆತಕ್ಕೆ ಸಿಲುಕಲಿವೆ ಎಂದು ಯುರೋಪಿಯನ್ ಸೆಂಟರ್ ಫಾರ್ ಮೀಡಿಯಂ ರೇಂಜ್ ವೆದರ್ ಫೋರ್‌ಕಾಸ್ಟ್ ಮುನ್ಸೂಚನೆ ನೀಡಿದೆ.

ವಿಶ್ವ ಹವಾಮಾನ ಸಂಸ್ಥೆ ಮತ್ತು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಕೆಲವು ಮಾಡೆಲ್‌ಗಳು ಇದನ್ನು 'ಸೂಪರ್' ಅಥವಾ 'ಗಾಡ್ಜಿಲ್ಲಾ' ಎಲ್ನಿನೋ ಎಂದು ವರ್ಣಿಸುತ್ತಿವೆ. 2026ರ ಮಧ್ಯದ ಅವಧಿಯಲ್ಲಿ ಎಲ್ ನಿನೊ ಭಾರತದ ಭಾಗದಲ್ಲಿ ಸಕ್ರಿಯವಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಇದಕ್ಕೂ ಮುನ್ನ 1982-83ರಲ್ಲಿ, 1977-78ರಲ್ಲಿ, 2015-16ರಲ್ಲಿ ಸೂಪರ್ ಎಲ್‌ನಿನೊ ಕಾಣಿಸಿಕೊಂಡಿತ್ತು. ಆಗ ಭಾರತ, ಆಸ್ಟ್ರೇಲಿಯ, ಇಂಡೋನೇಷ್ಯಾದಲ್ಲಿ ಮಾನ್ಸೂನ್ ಮಾರುತಗಳ ದುರ್ಬಲಗೊಂಡು ಮಳೆ ಕೊರತೆ ಉಂಟಾಗಿ ಬರಗಾಲ ಎದುರಾಗಿತ್ತು. ಇನ್ನೊಂದೆಡೆ ಪೆರು, ಅಮೆರಿಕ ಮತ್ತಿತರ ಪಶ್ಚಿಮ ದೇಶಗಳಲ್ಲಿ ಭಾರಿ ಮಳೆ ಸುರಿದು ಪ್ರವಾಹ ಪರಿಸ್ಥಿತಿ ಎದುರಾಗಿತ್ತು.

ಮೇನಲ್ಲೂ ಶಾಖದ ಅಲೆಗಳ ಪ್ರಭಾವ

ಪ್ರಸಕ್ತ ಮೇ ತಿಂಗಳಲ್ಲೂ ದೇಶದಲ್ಲಿ ಅತ್ಯಧಿಕ ಶಾಖದ ಅಲೆಗಳು ತಮ್ಮ ಪ್ರಭಾವ ತೋರಿಸಲಿವೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಮುನ್ಸೂಚನೆ ಪ್ರಕಟಿಸಿದೆ. ಹಿಮಾಲಯದ ತಪ್ಪಲಿನ ಕೆಲವು ಭಾಗಗಳು, ಪೂರ್ವದ ಕರಾವಳಿ ಪ್ರದೇಶ, ಗುಜರಾತ್, ಮಹಾರಾಷ್ಟ್ರದಲ್ಲಿ ಮೇ ಮಾಸದಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಉಷ್ಣಾಂಶವಿರಲಿದೆ. ಅತಿ ಶಾಖದ ಅಲೆಗಳು ಅಪ್ಪಳಿಸಲಿವೆ. ಮೇ 14-16ರ ನಡುವಿನ ಅವಧಿಯಲ್ಲಿ ನೈಋತ್ಯ ಮುಂಗಾರು ಮಾರುತಗಳು ಅಂಡಮಾನ್-ನಿಕೋಬಾರ್ ದ್ವೀಪ ಪ್ರದೇಶವನ್ನು ಪ್ರವೇಶಿಸಲಿವೆ ಎಂದು ಐಎಂಡಿ ಹೇಳಿದೆ.

ಮಣಿಪುರ: ಕುಕಿ ಉಗ್ರರ 23 ಬಂಕರ್‌ಗಳು ನಾಶ

ಇಂಫಾಲ: ಮಣಿಪುರದಲ್ಲಿ ಮೀಸಲಾತಿ ಸೌಲಭ್ಯದ ಹಂಚಿಕೆ ವಿಚಾರವಾಗಿ 2023ರ ಮೇ ತಿಂಗಳಲ್ಲಿ ಮೈಥೇಯಿ ಮತ್ತು ಕುಕಿ ಸಮುದಾಯಗಳ ಮಧ್ಯೆ ಶುರುವಾದ ಸಂಘರ್ಷಕ್ಕೆ ಈಗ ಭರ್ತಿ ಮೂರು ವರ್ಷಗಳಾಗಿವೆ. ಈಗಲೂ ಮಧ್ಯೆ ಮಧ್ಯೆ ರಾಜ್ಯದ ಕೆಲವೆಡೆ ಸಂಘರ್ಷಗಳು ಉಂಟಾಗಿ ಜೀವಹಾನಿ, ಆಸ್ತಿನಷ್ಟ ಆಗುವುದು ಮುಂದುವರಿದಿದೆ. ಸದ್ಯ ಶನಿವಾರ ಬೆಳಗ್ಗೆ ಕೇಂದ್ರದ ಅರೆಸೇನಾ ಪಡೆಗಳು ಸೇರಿದಂತೆ ಜಂಟಿ ಭದ್ರತಾ ಪಡೆಗಳು ರಾಜ್ಯದ ಉಖ್ರುಲ್ ಜಿಲ್ಲೆಯಲ್ಲಿ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಕುಕಿ ಉಗ್ರರು ಬೆಟ್ಟ ಪ್ರದೇಶವಾದ ಮೊಂಗ್‌ಕೊಟ್ ಛೇಪು, ಶೋಂಗ್‌ಫೆಲ್, ಮುಲ್ಲಂ, ಸಿರಾರಾಖೋಂಗ್ ಮತ್ತು ರಿಂಗ್ಯು ಗ್ರಾಮಗಳಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಬಂಕರ್‌ಗಳು ಪತ್ತೆಯಾಗಿವೆ. ಎಲ್ಲಾ 23 ಅಕ್ರಮ ಬಂಕರ್‌ಗಳನ್ನೂ ಭದ್ರತಾ ಪಡೆಗಳು ನಾಶಪಡಿಸಿವೆ. ಟೆಂಗ್‌ನೌಪಾಲ್ ಜಿಲ್ಲೆಯ ವಿವಿಧೆಡೆ ಕುಕಿ ಉಗ್ರರು ಅಡಗಿಸಿಟ್ಟಿದ್ದ 18 ಐಇಡಿಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿವೆ. ಇದಿಷ್ಟೇ ಅಲ್ಲದೇ ಪಾಯಿಂಟ್ 12 ಬೋರ್‌ನ ಪಂಪ್ ಆಕ್ಷನ್ ಗನ್, 17 ಕಾಟ್ರಿಡ್ಜ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಅನಾರೋಗ್ಯ: ಮಹಿಳಾ ಪೊಲೀಸ್ ಅಧಿಕಾರಿ ಸಾವು

ಬೆಂಗಳೂರು: ಬೆಸ್ಕಾಂ ಜಾಗೃತದಳದ ಎಸ್ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಮಹಿಳಾ ಅಧಿಕಾರಿ ಲಾವಣ್ಯ (39) ಅವರು ಶನಿವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಮೃತರು ಪತಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಮೂಲತಃ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ದೊಡ್ಡಗಂಜೂರು ಗ್ರಾಮದವರಾದ ಲಾವಣ್ಯ, 2023ರಲ್ಲಿ ಬೆಸ್ಕಾಂ ಜಾಗೃತ ದಳದ ಎಸ್ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಹಿಂದೆ, ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಇತ್ತೀಚೆಗೆ, ಅವರಲ್ಲಿ ಗಂಭೀರ ಕಾಯಿಲೆಯೊಂದು ಪತ್ತೆಯಾಗಿ ಅದಕ್ಕಾಗಿ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಇತ್ತೀಚೆಗೆ, ಕಾಯಿಲೆಯ ಸ್ವರೂಪ ಹೆಚ್ಚಾಗಿದ್ದರಿಂದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಅವರು ಸಾವಿಗೀಡಾಗಿದ್ದಾರೆ.

ಇಂದು ನೀಟ್ ಪರೀಕ್ಷೆ: ಎನ್‌ಟಿಎಯಿಂದ ಸಿದ್ಧತೆ

ದೆಹಲಿ: ವೈದ್ಯಕೀಯ ಸೀಟುಗಳಿಗಾಗಿ ದೇಶದ ಅತ್ಯಂತ ಪ್ರತಿಷ್ಠಿತ ಪ್ರವೇಶ ಪರೀಕ್ಷೆಯಾದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ ಇಂದು ನಡೆಯಲಿದ್ದು, 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲಿದ್ದಾರೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸುವ ಈ ಪರೀಕ್ಷೆಗೆ ಈ ಬಾರಿ 22,79,743 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ, ಆದರೆ ಲಭ್ಯವಿರುವ ಎಂಬಿಬಿಎಸ್ ಸೀಟುಗಳ ಸಂಖ್ಯೆ ಸುಮಾರು 1.30 ಲಕ್ಷ ಮಾತ್ರ. ಪ್ರತಿಯೊಂದು ಸೀಟಿಗಾಗಿ ಸುಮಾರು 17 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಸರಕಾರಿ ಕಾಲೇಜುಗಳಲ್ಲಿ ಈ ಪೈಪೋಟಿ ಇನ್ನೂ ಹೆಚ್ಚಿದ್ದು, ಪ್ರತಿ ಸೀಟ್‌ಗೆ 35ರಿಂದ 40 ಅಭ್ಯರ್ಥಿಗಳ ನಡುವೆ ಪೈಪೋಟಿ ಇದೆ. ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ಅಕ್ರಮಗಳನ್ನು ತಡೆಯಲು ಎನ್‌ಟಿಎ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ರೇಡಿಯೋ ಫ್ರೀಕ್ವೆನ್ಸಿ ಟ್ಯಾಗ್ ಮಾಡಲಾದ ಸೀಲ್ಡ್ ಕಂಟೈನರ್‌ಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಾಗಿಸಲಾಗುತ್ತಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು ಇರಲಿದೆ. ಮಹಿಳಾ ಅಭ್ಯರ್ಥಿಗಳೇ ಹೆಚ್ಚು: ಈ ಬಾರಿಯ ನೋಂದಣಿಯಲ್ಲಿ ಶೇಕಡಾ 58ರಷ್ಟು ಮಹಿಳಾ ಅಭ್ಯರ್ಥಿಗಳಿರುವುದು ವಿಶೇಷವಾಗಿದೆ.

ಕೃಷಿ ಇಲಾಖೆ ಹುದ್ದೆಗಳ ನೇಮಕಾತಿಗೆ ಸರಕಾರ ತಡೆ

ಬೆಂಗಳೂರು: ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನಡೆಯುತ್ತಿದ್ದ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಕ್ಷಣದಿಂದಲೇ ಜಾರಿಗೆ ಬರುವಂತೆ ಸ್ಥಗಿತಗೊಳಿಸಿದೆ. ಇತ್ತೀಚೆಗೆ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗೆ (ಎಸ್ಸಿ) ಶೇ. 15 ರಷ್ಟು ಮೀಸಲಾತಿ ನಿಗದಿಪಡಿಸಿ ಆದೇಶ ಹೊರಡಿಸಿದ್ದು, ಇದರಲ್ಲಿ ಒಳಮೀಸಲಾತಿಯ ಪ್ರಮಾಣವನ್ನೂ ಹಂಚಿಕೆ ಮಾಡಿದೆ. ಈ ಹೊಸ ಮೀಸಲಾತಿ ನಿಯಮಗಳನ್ನು ಪ್ರಸ್ತುತ ನೇಮಕಾತಿ ಅಧಿಸೂಚನೆಯಲ್ಲಿ ಅಳವಡಿಸಬೇಕಾಗಿರುವುದರಿಂದ, ಹಳೆಯ ಅಧಿಸೂಚನೆಯನ್ನು ಹಿಂಪಡೆಯಲು ಕೃಷಿ ಇಲಾಖೆ ನಿರ್ಧರಿಸಿದೆ.

ಮುಂದೇನು?: ಸರ್ಕಾರವು ಒಳಮೀಸಲಾತಿ ಅನ್ವಯ ಹೊಸ ವರ್ಗೀಕರಣದ ಪಟ್ಟಿಯನ್ನು ಸಿದ್ಧಪಡಿಸಿದ ನಂತರ ಕೃಷಿ ಇಲಾಖೆಯು ಪರಿಷ್ಕೃತ ಅಧಿಸೂಚನೆಯನ್ನು ಕೆಇಎಗೆ ಸಲ್ಲಿಸಲಿದೆ. ಹೊಸ ಅಧಿಸೂಚನೆ ಹೊರಬಿದ್ದ ನಂತರ ಅಭ್ಯರ್ಥಿಗಳಿಗೆ ಮತ್ತೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಇದರ ದಿನಾಂಕಗಳನ್ನು ಮುಂದಿನ ದಿನಗಳಲ್ಲಿ ಪ್ರಾಧಿಕಾರದ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಈ ದಿಢೀರ್ ಬೆಳವಣಿಗೆಯಿಂದಾಗಿ ಅರ್ಜಿ ಸಲ್ಲಿಸಲು ಸಿದ್ಧತೆ ನಡೆಸಿದ್ದ ಸಾವಿರಾರು ಆಕಾಂಕ್ಷಿಗಳು ಸದ್ಯ ಕಾಯುವಂತಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಹಿನ್ನೆಲೆ | ಕೇಂದ್ರದಿಂದ ಗಂಭೀರ ಚಿಂತನೆ

ಪೆಟ್ರೋಲ್, ಎಲ್‌ಪಿಜಿ ದರದಲ್ಲಿ ಹೆಚ್ಚಳ ಸಾಧ್ಯತೆ

ದೆಹಲಿ: ಪಶ್ಚಿಮ ಏಷ್ಯಾ ವಲಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗುತ್ತಿದ್ದು, ಇದರ ಬೆನ್ನಲ್ಲೇ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಸಿಲಿಂಡರ್ ದರಗಳು ಶೀಘ್ರದಲ್ಲೇ ಏರಿಕೆಯಾಗುವ ಸಾಧ್ಯತೆಯಿದೆ. ಮುಂದಿನ ಒಂದು ವಾರದೊಳಗೆ ಕೇಂದ್ರ ಸರಕಾರ ಈ ಕುರಿತಾಗಿ ಮಹತ್ವದ ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ.

- ತೈಲ ಕಂಪನಿಗಳ ಆರ್ಥಿಕ ಒತ್ತಡ ತಗ್ಗಿಸುವ ಉದ್ದೇಶ
- ಪ್ರತಿ ಲೀಟರ್‌ಗೆ ಕನಿಷ್ಠ 4 ರು. ಏರಿಕೆ ಸಾಧ್ಯತೆ
- ಎಲ್‌ಪಿಜಿ ರು.40ರಷ್ಟು ಏರಿಕೆ ಸಂಭವ

ವರದಿಗಳ ಪ್ರಕಾರ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ ಸುಮಾರು 4ರಿಂದ 5 ರುಪಾಯಿಗಳಷ್ಟು ಹೆಚ್ಚಾಗಬಹುದು. ಹಾಗೆಯೇ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಸುಮಾರು 40ರಿಂದ 50 ರುಪಾಯಿಯಷ್ಟು ಏರಿಕೆಯಾಗುವ ಸಾಧ್ಯತೆಯಿದೆ. ಒಂದು ವೇಳೆ ಸರಕಾರ ಈ ಪ್ರಸ್ತಾವನೆಗೆ ಅನುಮೋದನೆ ನೀಡಿದರೆ, ಇದು ಕಳೆದ 4 ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಕಂಡುಬರುವ ಮೊದಲ ಏರಿಕೆಯಾಗಲಿದೆ. ತೈಲ ಕಂಪನಿಗಳ ಮೇಲಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡುವುದು ಮತ್ತು ಹಣದುಬ್ಬರ ನಿಯಂತ್ರಣದಲ್ಲಿಟ್ಟು ಸಮತೋಲನ ಕಾಯ್ದುಕೊಳ್ಳಲು ಸರಕಾರ ಪ್ರಯತ್ನಿಸುತ್ತಿದೆ.

ಕಳೆದ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ಬೆಲೆ ಏರಿಕೆ ಬಗ್ಗೆ ವರದಿಗಳು ಬರುತ್ತಿದೆ. ಆದರೆ ಆ ವರದಿಗಳನ್ನು 'ಸುಳ್ಳು ಸುದ್ದಿ' ಎಂದು ತಳ್ಳಿಹಾಕಿದ್ದ ಪೆಟ್ರೋಲಿಯಂ ಸಚಿವಾಲಯವು, ಅಂತಹ ಯಾವುದೇ ಪ್ರಸ್ತಾವನೆ ಸರಕಾರದ ಮುಂದಿಲ್ಲ ಎಂದು ಹೇಳಿತ್ತು, ಆದರೆ ಪ್ರಸ್ತುತ ತೈಲ ಕಂಪನಿಗಳು ಪೆಟ್ರೋಲ್ ಮೇಲೆ ಪ್ರತಿ ಲೀಟರ್‌ಗೆ 20 ರುಪಾಯಿ ಹಾಗೂ ಡೀಸೆಲ್ ಮೇಲೆ ದೊಡ್ಡ ಮಟ್ಟದ ನಷ್ಟ ಅನುಭವಿಸುತ್ತಿವೆ.

ತೈಲ ಬೆಲೆ ಏರಿಕೆಯ ಹೊರೆ ನೇರವಾಗಿ ಗ್ರಾಹಕರ ಮೇಲೆ ಬೀಳದಂತೆ ಸರಕಾರ ಅಬಕಾರಿ ಸುಂಕ ಕಡಿತದಂತಹ ಕ್ರಮಗಳನ್ನು ಕೈಗೊಂಡಿದೆ, ಆದರೂ ಜಾಗತಿಕ ಮಾರುಕಟ್ಟೆಯ ಏರಿಳಿತಗಳು ಈಗ ಬೆಲೆ ಪರಿಷ್ಕರಣೆ ಅನಿವಾರ್ಯವಾಗುವಂತೆ ಮಾಡಿವೆ. ಪ್ರಸ್ತುತ ದೆಹಲಿಯಲ್ಲಿ ಪೆಟ್ರೋಲ್ ಬೆಲೆ 94.77 ರುಪಾಯಿ ಹಾಗೂ ಡೀಸೆಲ್ ಬೆಲೆ 87.67 ರುಪಾಯಿ ಇದೆ. ಬೆಲೆ ಏರಿಕೆಯ ಅಂತಿಮ ತೀರ್ಮಾನವು ಮುಂದಿನ ಒಂದು ವಾರದೊಳಗೆ ಹೊರ ಬೀಳಲಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವರು ಹೇಳಿದ್ದೇನು?

ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಮಾತನಾಡಿ, ಕಳೆದ ದಶಕದಲ್ಲಿ ಸರಕಾರ ಕೈಗೊಂಡ ಸಿದ್ಧತೆಗಳಿಂದಾಗಿ ಇಂಧನ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸಲಾಗುತ್ತಿದೆ. ತೈಲ ಆಮದು ಮಾಡಿಕೊಳ್ಳುವ ದೇಶಗಳ ಸಂಖ್ಯೆಯನ್ನು 27ರಿಂದ 41ಕ್ಕೆ ಹೆಚ್ಚಿಸಿದ್ದೇವೆ, ಅಲ್ಲದೆ ಅಮೆರಿಕ, ನಾರ್ವೆ ಮತ್ತು ಅಲ್ಜೀರಿಯಾ ಗಳಿಂದಲೂ ಎಲ್‌ಪಿಜಿ ಆಮದು ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳಿದ್ದಾರೆ.

ತಿರುಪತಿ ಲಡ್ಡು ಕಲಬೆರಕೆ: ಟಿಟಿಡಿ ಅಧಿಕಾರಿಗಳೇ ಹೊಣೆ

ಆಂಧ್ರ ಸರಕಾರದ ತನಿಖಾ ಸಮಿತಿ ವರದಿಯಲ್ಲಿ ಉಲ್ಲೇಖ

ಹೈದರಾಬಾದ್: ತಿರುಪತಿ ಲಡ್ಡು ಕಲಬೆರಕೆ ತುಪ್ಪ ಪ್ರಕರಣದಲ್ಲಿ ಆಡಳಿತ ಮಟ್ಟದಲ್ಲಿ ನಡೆದ ತಪ್ಪುಗಳು, ನಿಯಮ ಉಲ್ಲಂಘನೆಗಳು ಮತ್ತು ಮೇಲ್ವಿಚಾರಣೆಯ ಕೊರತೆಗಳ ಫಲವಾಗಿದ್ದು ಅದಕ್ಕೆ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಟ್ರಸ್ಟ್‌ನ ಅಧಿಕಾರಿಗಳೇ ಹೊಣೆ ಎಂದು ಆಂಧ್ರಪ್ರದೇಶ ಸರ್ಕಾರ ನೇಮಿಸಿದ್ದ ಏಕಸದಸ್ಯ ಸಮಿತಿಯ ವರದಿ ಹೇಳಿದೆ.

ಪ್ರಕರಣದ ಹಿನ್ನೆಲೆ: ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ನಿರ್ವಹಿಸುವ ತಿಮ್ಮಪ್ಪನ ದೇವಸ್ಥಾನದ, ಭಕ್ತರ ಪಾಲಿಗೆ ಅತಿ ಪವಿತ್ರವೆಂದು ಪರಿಗಣಿಸಲ್ಪಟ್ಟಿರುವ ಲಡ್ಡು ಪ್ರಸಾದಕ್ಕೆ ಬಳಕೆಯಾಗುವ ತುಪ್ಪದ ಗುಣಮಟ್ಟದ ಬಗ್ಗೆ ಗಂಭೀರ ಆರೋಪಗಳು ಕೇಳಿಬಂದಿದ್ದರಿಂದ ಆಂಧ್ರಪ್ರದೇಶ ಸರಕಾರ, ಅಲ್ಲಿನ ಸರಕಾರದ ಮುಖ್ಯಕಾರ್ಯದರ್ಶಿ ದಿನೇಶ್ ಕುಮಾರ್ ನೇತೃತ್ವದ ಏಕಸದಸ್ಯ ತನಿಖಾ ತಂಡ ರಚಿಸಿತ್ತು. ಇದೀಗ ಆ ತಂಡವು ತನ್ನ ವರದಿಯಲ್ಲಿ ಇದೆಲ್ಲಾ ಆಕಸ್ಮಿಕವಾಗಿ ನಡೆದ ತಪ್ಪುಗಳಲ್ಲ, ನಿರಂತರ ನಿರ್ಲಕ್ಷ್ಯ ಮತ್ತು ಅಧಿಕಾರ ದುರುಪಯೋಗದ ಪರಿಣಾಮ ಎಂದು ಹೇಳಲಾಗಿದೆ.

2022ರ ಆಗಸ್ಟ್‌ನಲ್ಲಿ ಕೇಂದ್ರ ಆಹಾರ ಮತ್ತು ಸಂಶೋಧನಾಲಯ (ಸಿಎಫ್‌ಟಿಆರ್‌ಐ) ತಿರುಪತಿ ಲಡ್ಡು ತಯಾರಿಕೆಗೆ ಬಳಕೆಯಾಗುತ್ತಿರುವ ತುಪ್ಪವು ಕಲಬೆರಕೆಯಾಗಿದೆ ಎಂದು ಹೇಳಿತ್ತು. ಆದರೂ, ಅದನ್ನು ನಿರ್ಲಕ್ಷಿಸಿ, 70 ಲಕ್ಷ ಕೆಜಿಗೂ ಹೆಚ್ಚು ತುಪ್ಪವನ್ನು ಅಗತ್ಯ ಪರೀಕ್ಷೆ ನಡೆಸದೇ ಲಡ್ಡು ತಯಾರಿಕೆಗೆ ಬಳಸಲಾಗಿತ್ತೆಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇಂಥ ತಪ್ಪು ಮಾಡಿದ ವ್ಯಕ್ತಿಗಳನ್ನು, ಕಲಬೆರಕೆ ತುಪ್ಪ ಸರಬರಾಜು ಮಾಡಿದ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸುವಂತೆ ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಯಾರ ವಿರುದ್ಧ ಆರೋಪ?: ವರದಿಯಲ್ಲಿ ಟಿಟಿಡಿಯ ಹಣಕಾಸು ಸಲಹೆಗಾರ ಹಾಗೂ ಮುಖ್ಯ ಲೆಕ್ಕಾಧಿಕಾರಿ ಒ. ಬಾಲಾಜಿ, ಆಗಿನ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ. ಧರ್ಮಾರೆಡ್ಡಿ ಮತ್ತು ಆಗಿನ ಕಾರ್ಯನಿರ್ವಾಹಕ ಅಧಿಕಾರಿ ಅನಿಲ್ ಕುಮಾರ್ ಸಿಂಘಾಲ್ ಅವರನ್ನು ಪ್ರಮುಖವಾಗಿ ಹೊಣೆಗಾರರ ಪಟ್ಟಿಗೆ ಸೇರಿಸಲಾಗಿದೆ. ಟೆಂಡರ್‌ನ ಷರತ್ತುಗಳನ್ನು ಯಾವುದೇ ವೈಜ್ಞಾನಿಕ ಅಧ್ಯಯನ, ತಜ್ಞರ ಸಲಹೆ ಅಥವಾ ಸಮರ್ಥನೆ ಇಲ್ಲದೆ ಸಡಿಲಿಸಿದ ಕ್ರಮಕ್ಕೆ ಇವರು ಅನುಮೋದನೆ ನೀಡಿದರೆಂದು ಎಸ್‌ಐಟಿ ಅಭಿಪ್ರಾಯಪಟ್ಟಿದೆ. ಟಿಟಿಡಿ ಖರೀದಿ ಸಮಿತಿಯಲ್ಲಿದ್ದ ಕೆಲ ಸದಸ್ಯರು ಈ ಸಡಿಲಿಕೆಗಳಿಗೆ ಶಿಫಾರಸು ನೀಡಿದ್ದು, ನಂತರ ಅವು ಬೋರ್ಡ್ ಅನುಮೋದನೆಯೂ ಪಡೆದಿದ್ದವು ಎಂದು ವರದಿ ಉಲ್ಲೇಖಿಸುತ್ತದೆ.

ನಿಯಮಗಳ ಸಡಿಲಿಕೆಯೇ ಅಕ್ರಮಕ್ಕೆ ಕಾರಣವಾದ ಅಂಶ

ಕಳಪೆ ತುಪ್ಪದಿಂದ ತಿರುಪತಿ ಲಡ್ಡುವಿನ ಗುಣಮಟ್ಟವನ್ನು ಹಾಳಾಯಿತು. ಭಕ್ತರ ನಂಬಿಕೆ ಮತ್ತು ಭಾವನೆಗಳಿಗೆ ಇದರಿಂದ ತೀವ್ರ ಧಕ್ಕೆಯಾಯಿತು. ತುಪ್ಪದಲ್ಲಿ ಪ್ರಮುಖವಾಗಿ ಪಾಮ್ ಆಯಿಲ್ ಸೇರಿದಂತೆ ಇತರ ಅಂಶಗಳ ಮಿಶ್ರಣಗಳಿದ್ದವು ಎಂದು ಹೇಳಲಾಗಿದೆ. ಅಷ್ಟೇ ಅಲ್ಲದೆ, ಕಳಪೆ ತುಪ್ಪ ಪೂರೈಕೆಯಾಗಿದ್ದು ಪತ್ತೆಯಾದ ನಂತರ ತುಪ್ಪ ಸರಬರಾಜು ಮಾಡಿದ್ದ ಸಂಸ್ಥೆಯನ್ನು ತುಪ್ಪ ಸರಬರಾಜು ಮಾಡದಂತೆ, ಈ ಒಪ್ಪಂದ ಮಾಡಿಕೊಂಡಿದ್ದ ಉತ್ತರಾಖಂಡದ ಭೋಲೆ ಬಾಬಾ ಆರ್ಗ್ಯಾನಿಕ್ ಡೇರಿ ಮಿಲ್ಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನು ಗುತ್ತಿಗೆ ಪಡೆದ ಕೆಲವೇ ತಿಂಗಳುಗಳಲ್ಲಿ (2021) ಅಮಾನತು ಮಾಡಲಾಗಿತ್ತು. ಆ ಕ್ರಮ ಜಾರಿಯಾದರೂ ಅದೇ ಸಂಸ್ಥೆಯಿಂದಲೇ ತುಪ್ಪವನ್ನು ತರಿಸಿಕೊಳ್ಳಲಾಗಿದೆ. ಎಂದು ಆರೋಪಿಸಲಾಗಿದೆ.

ರಾಜನಾಥ್ ಸಿಂಗ್ ಫೇಕ್ ವಿಡಿಯೊ ವೈರಲ್

ತಿಂಗಳಿಗೆ 15 ಲಕ್ಷ ರು. ಲಾಭದ ಹೂಡಿಕೆ ಬಗ್ಗೆ ರಕ್ಷಣಾ ಸಚಿವರ ಹೆಸರಲ್ಲಿ ಅಪ್ಲೋಡ್ ಆದ ವಿಡಿಯೊ ವೈರಲ್

ದೆಹಲಿ: ಕೇವಲ 22,000 ರುಪಾಯಿ ಹೂಡಿಕೆ ಮಾಡಿದರೆ ದಿನಕ್ಕೆ 80,000 ರುಪಾಯಿ ಹಾಗೂ ತಿಂಗಳಿಗೆ 15 ಲಕ್ಷ ರುಪಾಯಿವರೆಗೆ ಬೃಹತ್ ಲಾಭ ಸಿಗಲಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭರವಸೆ ನೀಡುತ್ತಿರುವಂತೆ ಬಿಂಬಿಸುವ ಕೃತಕ ಬುದ್ಧಿಮತೆ ಆಧಾರಿತ 'ಡೀಪ್‌ಫೇಕ್' ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಇದು ಸಾರ್ವಜನಿಕರನ್ನು ದಾರಿ ತಪ್ಪಿಸುವ ಸಂಚು ಎಂದು ಕೇಂದ್ರ ಸರಕಾರ ಎಚ್ಚರಿಸಿದೆ.



ಈ ವಂಚನೆಯ ವಿಡಿಯೊದಲ್ಲಿ ಸ್ವತಃ ರಾಜನಾಥ್ ಸಿಂಗ್ ಅವರೇ ಮಾತನಾಡುತ್ತಿರುವಂತೆ ಎಐ ತಂತ್ರಜ್ಞಾನವನ್ನು ಅತ್ಯಂತ ಚಾಣಾಕ್ಷತನದಿಂದ ಬಳಸಲಾಗಿದೆ. ವಿಡಿಯೊಗೆ ಹೆಚ್ಚಿನ ವಿಶ್ವಾಸಾರ್ಹತೆ ನೀಡುವ ಹಿನ್ನೆಲೆಯಲ್ಲಿ ಭಾರತದ ರಾಷ್ಟ್ರಧ್ವಜ ಮತ್ತು ರಾಷ್ಟ್ರೀಯ ಲಾಂಛನವನ್ನು ಅಕ್ರಮವಾಗಿ ಬಳಸಿಕೊಳ್ಳಲಾಗಿದೆ. ಈ ಬಗ್ಗೆ ಸಂಶೋಧನೆ ನಡೆಸಿ ಎಚ್ಚರಿಕೆ ನೀಡಿರುವ 'ಅಥೇನಿಯನ್ ಟೆಕ್' ಸಂಸ್ಥೆಯು, ವಿಡಿಯೊದ ಕೆಳಭಾಗದಲ್ಲಿ ಎಸ್‌ಬಿಐ, ಪಿಎನ್‌ಬಿ, ಎಚ್‌ಡಿಎಫ್‌ಸಿ, ಐಸಿಐಸಿಐ ಮತ್ತು ಇನ್ಫೋಸಿಸ್‌ನಂತಹ ಪ್ರಮುಖ ಬ್ಯಾಂಕ್ ಹಾಗೂ ಸಂಸ್ಥೆಗಳ ಲಾಂಛನಗಳನ್ನು ಅಧಿಕೃತ ಪಾಲುದಾರರು ಎಂಬಂತೆ ಬಿಂಬಿಸಲಾಗಿದೆ ಎಂದು ತಿಳಿಸಿದೆ. ಯಾವುದೇ ಅನುಮತಿಯಿಲ್ಲದೆ ಕೇವಲ ಜನರನ್ನು ನಂಬಿಸಲು ಇವುಗಳನ್ನು ಬಳಸಲಾಗಿದೆ.

ಸುಮಾರು ಎರಡು ನಿಮಿಷಗಳ ಈ ಸುಳ್ಳು ಮಾಹಿತಿ ನೀಡುವ ವಿಡಿಯೊ ಕ್ಲಿಪ್‌ನಲ್ಲಿ ಈ ಹೂಡಿಕೆ ಯೋಜನೆಯು ಭಾರತ ಸರಕಾರದಿಂದ ಅನುಮೋದಿಸಲ್ಪಟ್ಟಿದೆ ಮತ್ತು ಪ್ರಭಾವಿ ಬ್ಯಾಂಕ್‌ಗಳ ಬೆಂಬಲ ಹೊಂದಿದೆ ಎಂದು ವಂಚಕರು ಸುಳ್ಳು ಹೇಳಿಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಒಂದು ವೇಳೆ ನಿಮಗೆ ಭರವಸೆ ನೀಡಿದಷ್ಟು ಹಣ ಲಾಭವಾಗಿ ಬರದಿದ್ದರೆ, ನಾವು ವೈಯಕ್ತಿಕವಾಗಿ 10 ಲಕ್ಷ ರುಪಾಯಿ ಪರಿಹಾರ ನೀಡುತ್ತೇವೆ ಎಂದು ಸಿಂಗ್ ಅವರ ಧ್ವನಿಯಲ್ಲಿ ನಕಲಿ ಭರವಸೆ ನೀಡಲಾಗಿದೆ.

ಕೇಂದ್ರ ಸರಕಾರದ ಸ್ಪಷ್ಟನೆ

ಕೇಂದ್ರ ಸರಕಾರದ ಪ್ರೆಸ್ ಇನ್ಫಾರ್ಮೇಷನ್ ಬ್ಯೂರೋ (ಪಿಐಬಿ) ಫ್ಯಾಕ್ಟ್ ಚೆಕ್ ಘಟಕವು, 'ಈ ವಿಡಿಯೊ ಸಂಪೂರ್ಣ ನಕಲಿ ಮತ್ತು ಎಐ ನಿರ್ಮಿತ ಎಂದು ಖಚಿತಪಡಿಸಿದೆ. ರಕ್ಷಣಾ ಸಚಿವರಾಗಲಿ ಅಥವಾ ಭಾರತ ಸರಕಾರವಾಗಲಿ ಇಂತಹ ಯಾವುದೇ ಹೂಡಿಕೆ ಯೋಜನೆಯನ್ನು ಆರಂಭಿಸಿಲ್ಲ ಅಥವಾ ಅನುಮೋದಿಸಿಲ್ಲ. ಸಾರ್ವಜನಿಕರು ಇಂತಹ ಆಮಿಷಗಳಿಗೆ ಬಲಿಯಾಗಿ ತಮ್ಮ ಕಷ್ಟದ ಹಣವನ್ನು ಕಳೆದುಕೊಳ್ಳಬಾರದು. ಯಾವುದೇ ಹೂಡಿಕೆ ಮಾಡುವ ಮುನ್ನ ಅಧಿಕೃತ ಸರ್ಕಾರಿ ಮೂಲಗಳಿಂದ ಮಾಹಿತಿ ಪರಾಮರ್ಶಿಸುವುದು ಅತ್ಯಗತ್ಯ ಎಂದು ಪಿಐಬಿ ಎಚ್ಚರಿಸಿದೆ. ಇಂತಹ ಡಿಜಿಟಲ್ ವಂಚನೆಗಳ ಬಗ್ಗೆ ಜನಸಾಮಾನ್ಯರು ಜಾಗರೂಕರಾಗಿರಬೇಕು ಎಂದೂ ಕಿವಿ ಮಾತು ಹೇಳಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಧನುಷ್ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ನಮ್ಮ ಕರುನಾಡ ಕನ್ನಡ ಯುವ ಕಸ್ತೂರಿ ಬಳಗ(ರಿ.) ರಾಜ್ಯ ಪದಾಧಿಕಾರಿಗಳು ಸನ್ಮಾನಿಸಿದರು. ಬಳಗದ ರಾಜ್ಯಾಧ್ಯಕ್ಷ ಪ್ರೊ. ಚಿಕ್ಕಲಿಂಗಯ್ಯ ಜೆ.ಬಿ.ರಾಜ್ಯ ಉಪಾಧ್ಯಕ್ಷ ಡಾ.ಅನಿಲ್ ಕುಮಾರ್ ಕೆ.ವಿ, ಖಜಾಂಚಿ ನವೀನ್ ಕುಮಾರ್.ಬಿ, ಪ್ರಧಾನ ಕಾರ್ಯದರ್ಶಿ ಹನುಮಪ್ಪ ಜೆ.ಟಿ, ರಾಜ್ಯ ತಂತ್ರಿಕ ಸಂಯೋಜಕ ಶಶಾಂಕ್.ಸಿ ಹಾಜರಿದ್ದರು.

ಸಮುದ್ರದಾಳದಲ್ಲಿ ಅರಳಿದ ಭಾರತ ತ್ರಿವರ್ಣ ಧ್ವಜ

ದೆಹಲಿ: ಅಂಡಮಾನ್ ಮತ್ತು ನಿಕೋಬಾರ್ ದ್ವೀಪವು ಶನಿವಾರ ಒಂದು ಐತಿಹಾಸಿಕ ದಾಖಲೆಗೆ ಸಾಕ್ಷಿಯಾಯಿತು. ಸುಮಾರು 200 ಮಂದಿ ಸೇರಿ ಸಮುದ್ರದಾಳದಲ್ಲಿ ಭಾರಿ ಗಾತ್ರದ ಭಾರತ ಧ್ವಜವನ್ನು ಅರಳಿಸಿದರು. ಸ್ವರಾಜ್ ದ್ವೀಪದ ರಾಧಾನಗರ ಬೀಚ್ ಬಳಿ ಬೃಹತ್ ಗಾತ್ರದ ಧ್ವಜವನ್ನು ಅರಳಿಸಲಾಗಿದ್ದು, ಇದು ಗಿನ್ನೆಸ್ ವಿಶ್ವ ದಾಖಲೆಯನ್ನು ಬರೆದಿದೆ. ಇದರ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ಸಾಹಸ ಪ್ರವಾಸೋದ್ಯಮವನ್ನು ಉತ್ತೇಜಿಸಲು ಈ ಸಾಧನೆಯನ್ನು ನಡೆಸಲಾಗಿದೆ.

ಬೀಳುವ ಹಂತದ ಕಟ್ಟಡಗಳನ್ನು ತೆರವುಗೊಳಿಸಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಅಪಾಯಕಾರಿಯಾಗಿ ಶಿಥಿಲಾವಸ್ಥೆಯಲ್ಲಿರುವ ಗೋಡೆಗಳು ಹಾಗೂ ಕಟ್ಟಡಗಳನ್ನು ತ್ವರಿತವಾಗಿ ಗುರುತಿಸಿ ತೆರವುಗೊಳಿಸಲು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದ್ದಾರೆ.

ಕೇಂದ್ರ ನಗರ ಪಾಲಿಕೆಯ ಬಿನ್ನಿಮಿಲ್ ರಸ್ತೆಯಲ್ಲಿ ಶಿಥಿಲಾವಸ್ಥೆಯಲ್ಲಿದ್ದ 300 ಮೀಟರ್ ಉದ್ದದ 25 ಅಡಿ ಎತ್ತರದ ಗೋಡೆಯನ್ನು ನೆಲಸಮಗೊಳಿಸಲಾಯಿತು.

ಈ ಕುರಿತು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ಇತ್ತೀಚೆಗೆ ನಗರದಲ್ಲಿ ಸುರಿದ ಭಾರೀ ಮಳೆ, ಗಾಳಿ ಹಾಗೂ ಆಲಿಕಲ್ಲು ಮಳೆಯಿಂದ ಹಲವು ಪ್ರದೇಶಗಳಲ್ಲಿ ಮರಗಳು, ಕೊಂಬೆಗಳು ಹಾಗೂ ಗೋಡೆಗಳು ಕುಸಿದ ಘಟನೆಗಳು ವರದಿಯಾಗಿವೆ. ವಿಶೇಷವಾಗಿ ಬೋರಿಂಗ್ ಆಸ್ಪತ್ರೆಯ ಗೋಡೆ ಕುಸಿತದಿಂದ ಏಳು ಮಂದಿ ಮೃತಪಟ್ಟ ದುರಂತದ ಹಿನ್ನೆಲೆ, ನಗರಾದ್ಯಂತ ಮುಂಜಾಗ್ರತಾ ಕ್ರಮಗಳನ್ನು ಬಿಗಿಗೊಳಿಸಲು ಸರಕಾರ ಮುಂದಾಗಿದೆ.

ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಸೂಚನೆಯಂತೆ, ಅಪಾಯಕಾರಿಯಾದ ಮರಗಳು, ಕೊಂಬೆಗಳು, ಶಿಥಿಲಗೊಂಡ ಗೋಡೆಗಳು ಮತ್ತು ಕಟ್ಟಡಗಳನ್ನು ತಕ್ಷಣ ಗುರುತಿಸಿ ತೆರವುಗೊಳಿಸುವ ಕಾರ್ಯ ಆರಂಭಿಸಲಾಗಿದೆ. ಸಾರ್ವಜನಿಕರ ಸುರಕ್ಷತೆ ಮತ್ತು ಸಂಚಾರ ಸುಗಮತೆ ಕಾಪಾಡುವ ಉದ್ದೇಶದಿಂದ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ, ನಗರದ ಐದು ನಗರಪಾಲಿಕೆಗಳ ಆಯುಕ್ತರು ಹಾಗೂ ಅಪರ ಆಯುಕ್ತರಿಗೆ ವಿಶೇಷ ಸೂಚನೆ ನೀಡಲಾಗಿದ್ದು, ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ ಹಾಗೂ ನಗರಪಾಲಿಕೆ ಸಿಬ್ಬಂದಿಯನ್ನು ಒಳಗೊಂಡಂತೆ ವಿಶೇಷ ತಂಡಗಳನ್ನು ರಚಿಸಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಕೇಂದ್ರ ನಗರ ಪಾಲಿಕೆಯ ಬಿನ್ನಿಮಿಲ್ ರಸ್ತೆಯಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಸುಮಾರು 300 ಮೀಟರ್ ಉದ್ದದ 25 ಅಡಿ ಎತ್ತರದ ಗೋಡೆಯನ್ನು ನೆಲಸಮಗೊಳಿಸಲಾಗಿದ್ದು, ಇನ್ನೂ 100 ಮೀಟರ್ ಗೋಡೆಯ ತೆರವು ಕಾರ್ಯ ಪ್ರಗತಿಯಲ್ಲಿದೆ. ಇದೇ ವೇಳೆ, ಪಶ್ಚಿಮ ನಗರ ಪಾಲಿಕೆಯ ಮಲ್ಲೇಶ್ವರದ ಮೈಸೂರು ಲ್ಯಾಂಪ್ಸ್ ಆವರಣದಲ್ಲಿ 240 ಮೀಟರ್ ಉದ್ದದ ಕಾಂಪೌಂಡ್ ಗೋಡೆಯನ್ನು ಯಶಸ್ವಿಯಾಗಿ ತೆರವುಗೊಳಿಸಲಾಗಿದೆ. ನಗರದಲ್ಲಿ ಸಂಭವಿಸಬಹುದಾದ ಅನಾಹುತಗಳನ್ನು ತಪ್ಪಿಸಲು ಆಡಳಿತ ಯಂತ್ರ ತೀವ್ರ ಕ್ರಮ ಕೈಗೊಂಡಿದ್ದು, ಸಾರ್ವಜನಿಕರು ಸಹ ಎಚ್ಚರಿಕೆಯಿಂದ ವರ್ತಿಸುವಂತೆ ಮನವಿ ಮಾಡಲಾಗಿದೆ ಎಂದರು.

ನಿಮ್ಮ ಮೊಬೈಲಿನಲ್ಲಿ ಬೀಪ್ ಶಬ್ದ, ಮೆಸೇಜ್ ಬಂದಿದ್ದೇಕೆ?

ಏ. 5ರಂದು ಮಧ್ಯಾಹ್ನದ ಹೊತ್ತಿಗೆ ನಿಮ್ಮ ಮೊಬೈಲ್‌ನಲ್ಲಿ ಇದ್ದಕ್ಕಿದ್ದಂತೆ ಬೀಪ್ ಶಬ್ದ ಬಂದಿತ್ತಾ? ಬೀಪ್ ಶಬ್ದದ ಜೊತೆಗೆ ಒಂದು ಮೆಸೇಜ್ ಕೂಡ ಬಂದಿರಬೇಕಲ್ಲವಾ? ಅದರಲ್ಲಿ ಇದೊಂದು ತುರ್ತು ಎಚ್ಚರಿಕೆಯ ಬೀಪ್ ಶಬ್ದ. ಇದು ಎಲ್ಲರ ಮೊಬೈಲ್‌ಗಳಿಗೆ ಕಳಿಸಲಾಗಿದೆ ಎಂದು ಉಲ್ಲೇಖಿಸಲಾಗಿತ್ತು ಅಲ್ಲವಾ? ಇದು ಕೇಂದ್ರ ಸರಕಾರದ ಹೊಸ ಹೆಜ್ಜೆ. ಹೌದು. ತನ್ನ ಹೊಸ ಸೆಲ್ ಬ್ರಾಡ್‌ಕ್ಯಾಸ್ಟ್ ತುರ್ತು ಎಚ್ಚರಿಕೆ ವ್ಯವಸ್ಥೆಯನ್ನು ಸರಕಾರ ದೇಶವ್ಯಾಪಿ ಪರೀಕ್ಷೆ ನಡೆಸುತ್ತಿದೆ. ಇದು ಸ್ಥಳೀಯ ತಂತ್ರಜ್ಞಾನವನ್ನು ಬಳಸಿಕೊಂಡು ನಿರ್ದಿಷ್ಟ ಪ್ರದೇಶಗಳಲ್ಲಿ ಮೊಬೈಲ್ ಫೋನ್‌ಗಳಿಗೆ ತಕ್ಷಣ ಡಿಸಾಸ್ಟರ್ ಎಚ್ಚರಿಕೆಗಳನ್ನು ನೇರವಾಗಿ ರವಾನಿಸುತ್ತದೆ.

ಎಚ್ಚರಿಕೆ ಸಂದೇಶದ ಸಾರಾಂಶ

ಬೀಪ್ ಜೊತೆಗೆ ಬಂದ ಎಚ್ಚರಿಕೆ ಸಂದೇಶವನ್ನು ಎಷ್ಟು ಜನ ಪೂರ್ತಿ ಓದಿದ್ದಾರೋ ಗೊತ್ತಿಲ್ಲ. ಅದರಲ್ಲಿದ್ದಿದ್ದು ಹೀಗೆ. 'ಭಾರತ ಸ್ಥಳೀಯ ಮೊಬೈಲ್ ತಂತ್ರಜ್ಞಾನವನ್ನು ಬಳಸಿಕೊಂಡು ಸೆಲ್ ಬ್ರಾಡ್‌ಕ್ಯಾಸ್ಟ್ ಅಲರ್ಟ್ ಸೇವೆ ಆರಂಭಿಸಿದೆ. ಇದು ನಾಗರಿಕರಿಗೆ ತಕ್ಷಣ ಡಿಸ್‌ಚಾರ್ಜ್ ಮಾದರಿಯ ಎಚ್ಚರಿಕೆ ಸೇವೆಯನ್ನು ನೀಡುತ್ತದೆ. ಇದನ್ನು ಓದಿ ಇತರ ನಾಗರಿಕರನ್ನು ಎಚ್ಚರಿಸಿ, ರಾಷ್ಟ್ರವನ್ನು ಸುರಕ್ಷಿತಗೊಳಿಸಿ. ಈ ಸಂದೇಶವನ್ನು ಪಡೆದ ನಾಗರಿಕರು ಯಾವುದೇ ಕ್ರಿಯೆ ಕೈಗೊಳ್ಳುವ ಅವಶ್ಯಕತೆ ಇಲ್ಲ. ಇದು ಪರೀಕ್ಷಾ ಸಂದೇಶ. - ಭಾರತ ಸರ್ಕಾರ.' ಆಂಗ್ಲಭಾಷೆಯಲ್ಲಿ ಹಾಗೂ ಸ್ಥಳೀಯ ಭಾಷೆಯಲ್ಲಿ ಈ ಸಂದೇಶವನ್ನು ನೀಡಲಾಗಿತ್ತು.

ಸಚೇತ್ ಅಡಿಯಲ್ಲಿ ಸಂದೇಶ ರವಾನೆ

ತುರ್ತು ಸಂದರ್ಭಗಳಲ್ಲಿ ರಾಷ್ಟ್ರದ ಜನತೆಯನ್ನು ಎಚ್ಚರಿಸಲು ತಂತ್ರಜ್ಞಾನ ಇಲಾಖೆ (ಡಿಒಟಿ) ರಾಷ್ಟ್ರೀಯ ವಿಪತ್ತು ನಿರ್ವಹಣೆ ಪ್ರಾಧಿಕಾರದೊಂದಿಗೆ (ಎನ್‌ಡಿಎಂಎ) ನಡೆಸಲಾಗುತ್ತಿದೆ. ಈ ವ್ಯವಸ್ಥೆಯನ್ನು ತಂತ್ರಜ್ಞಾನ ಅಭಿವೃದ್ಧಿ ಕೇಂದ್ರ (ಸಿ-ಡಿಒಟಿ) ಅಭಿವೃದ್ಧಿಪಡಿಸಿದ 'ಸಚೇತ್' ಎಂಬ ಮುನ್ನೆಚ್ಚರಿಕೆಯ ಸಾಫ್ಟ್‌ವೇರ್ ಅಡಿಯಲ್ಲಿ ಕೆಲಸ ಮಾಡುವಂತೆ ಸಂಯೋಜಿಸಲಾಗಿದೆ.

ಅಸಲಿಗೆ ಏನಿದು?

ಇದು ಸಾಮಾನ್ಯ ಎಸ್‌ಎಂಎಸ್ ಅಲ್ಲ. ಇದೊಂದು ಎಚ್ಚರಿಕೆಯ ಸಂದೇಶದಂತಿರಬೇಕು ಎಂಬ ಉದ್ದೇಶದಿಂದಲೇ ಇದನ್ನು ಬೀಪ್ ಶಬ್ದದೊಂದಿಗೆ ಸಮ್ಮಿಳಿತಗೊಳಿಸಿ ನಿಮ್ಮ ಮೊಬೈಲುಗಳಿಗೆ ರವಾನಿಸುತ್ತದೆ. ಇದು ನಿಮ್ಮ ಮೊಬೈಲಿಗೆ ಬರುತ್ತಲೇ ಬೀಪ್ ಶಬ್ದದೊಂದಿಗೆ ಸ್ವಯಂಚಾಲಿತವಾಗಿ ತೆರಯಲ್ಪಟ್ಟು ಅದರಲ್ಲಿನ ಸಂದೇಶ ನಿಮ್ಮ ಮೊಬೈಲಿನ ಸ್ಕ್ರೀನ್ ಮೇಲೆ ಡಿಸ್‌ಪ್ಲೇ ಆಗುತ್ತದೆ. ಇದು ಸುನಾಮಿ, ಭೂಕಂಪ, ಭೂಕುಸಿತ, ಸಿಡಿಲು ಹೆಚ್ಚು ಬೀಳುವ ಸಂಭವ, ಗ್ಯಾಸ್ ಲೀಕ್, ರಾಸಾಯನಿಕಗಳು ಪರಿಸರದಲ್ಲಿ ಹರಿಡಿದಾಗ, ರಾಸಾಯನಿಕ ಅಪಾಯಗಳಂತಹ ಮಾನವ ನಿರ್ಮಿತ ತುರ್ತು ಸಂದರ್ಭಗಳಲ್ಲಿ ಏಕಕಾಲಕ್ಕೆ ಲಕ್ಷಾಂತರಜನರನ್ನು ಎಚ್ಚರಿಸಲು ಇಂಥದ್ದೊಂದು ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಲಾಗಿದೆ.

ಕೇಂದ್ರ ಸರಕಾರ ಬಿಡುಗಡೆ ಮಾಡಿರುವ ಹವಾಮಾನ ವೈಪರೀತ್ಯ ಅಪ್ಲಿಕೇಷನ್ಸ್



ಈವರೆಗೆ ಕೇಂದ್ರ ಸರಕಾರ, ಪ್ರಾಕೃತಿಕ ವಿಕೋಪಗಳ ಸಂದರ್ಭಗಳಲ್ಲಿ ಸಾರ್ವಜನಿಕರನ್ನು ಎಚ್ಚರಿಸುವ ಉದ್ದೇಶದಿಂದ ಕೆಲವಾರು ಆ್ಯಪ್‌ಗಳನ್ನು ತಯಾರಿಸಿ ಬಿಡುಗಡೆ ಮಾಡಿದೆ. ಅವುಗಳ ಸಂಕ್ಷಿಪ್ತ ವಿವರಣೆ ಇಲ್ಲಿದೆ.

ದಾಮಿನಿ ಆ್ಯಪ್

ಇದರ ಪೂರ್ಣ ಹೆಸರು ದಾಮಿನಿ ಲೈಟ್ನಿಂಗ್ ಅಲರ್ಟ್ ಆ್ಯಪ್. ಇದನ್ನು ಪುಣೆಯ ಐಐಟಿ ಅಭಿವೃದ್ಧಿಪಡಿಸಿದೆ. ಇದನ್ನು ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಮಾಡಿ ಬಳಸಬಹುದು. ಈ ಮೂಲಕ ವ್ಯಕ್ತಿಯು ಆತನಿರುವ ಸ್ಥಳದಿಂದ 30ರಿಂದ 40 ಕಿ.ಮೀ ದೂರದಲ್ಲಿ ಸಿಡಿಲು ಹೊಡೆಯುವ ಸ್ಥಳಗಳನ್ನು ಗುರುತಿಸಬಹುದಾಗಿದೆ. ಸಿಡಿಲು ಹೊಡೆಯುವ 40 ನಿಮಿಷಗಳ ಮುಂಚೆಯೇ ಅಲರ್ಟ್ ಪಡೆಯಬಹುದಾಗಿದೆ.

ಮೌಸಮ್ ಆ್ಯಪ್

ಭಾರತ ಹವಾಮಾನ ಇಲಾಖೆ (ಐಎಂಡಿ) ಅಭಿವೃದ್ಧಿಪಡಿಸಿರುವ ಇದು ಸಾರ್ವಜನಿಕರಿಗಾಗಿ ಬಿಡುಗಡೆ ಮಾಡಲಾಗಿರುವ ಅಪ್ಲಿಕೇಶನ್ ಆಗಿದೆ. ಇದು ರಿಯಲ್ ಟೈಂನಲ್ಲಿ ನಿರ್ದಿಷ್ಟ ಪ್ರಾಂತ್ಯದಲ್ಲಿ ಸಂಭವಿಸುವ ಹವಾಮಾನ ಬದಲಾವಣೆಗಳ ಬಗ್ಗೆ ಉಪಗ್ರಹಗಳ ರಾಡಾರ್ ಚಿತ್ರಗಳ ಸಹಾಯದಿಂದ ಮುನ್ಸೂಚನೆ ನೀಡುತ್ತದೆ. ಮಳೆ, ಮಳೆ ಸಹಿತ ಬಿರುಗಾಳಿ, ಚಂಡಮಾರುತ ಬರಲಿರುವ ಪ್ರದೇಶಗಳನ್ನು ಕೆಂಪು, ಕಿತ್ತಳೆ, ಹಳದಿ ಬಣ್ಣಗಳ ಮೂಲಕ ಗುರುತಿಸಿ ತಿಳಿಸುತ್ತದೆ.

ಮೇಘದೂತ್ ಆ್ಯಪ್

ಇದು ರೈತರು ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡಲು ಸ್ಥಳೀಯ ಭಾಷೆಗಳಲ್ಲಿ ಹೆಚ್ಚಿನ ರೆಸಲ್ಯೂಶನ್, ಸ್ಥಳ-ನಿರ್ದಿಷ್ಟ ಹವಾಮಾನ ಮುನ್ಸೂಚನೆಗಳು ಮತ್ತು ಎರಡು ವಾರಗಳಿಗೊಮ್ಮೆ ಕೃಷಿ-ಸಲಹೆಗಳನ್ನು ನೀಡುತ್ತದೆ.

ಇಂಡಿಯಾ ಕ್ವೇಕ್ ಆ್ಯಪ್

ಈ ಅಪ್ಲಿಕೇಶನ್ ನಾಗರಿಕರ ಸ್ಮಾರ್ಟ್ ಫೋನ್‌ಗಳಿಗೆ ನೇರವಾಗಿ ಭೂಕಂಪದ ಕಂಪನಗಳ ಬಗ್ಗೆ ನೈಜ ಸಮಯಾಧಾರಿತ ಎಚ್ಚರಿಕೆಗಳನ್ನು ರವಾನಿಸುತ್ತದೆ.

ಸಾಗರ್ ವಾಣಿ ಆ್ಯಪ್

ಭೂ ವಿಜ್ಞಾನ ಸಚಿವಾಲಯದ ಅಡಿಯಲ್ಲಿ ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಇದನ್ನು ಕರಾವಳಿ ಭಾಗಗಳಲ್ಲಿ ವಾಸಿಸುವ ಜನರು ಮತ್ತು ಮೀನುಗಾರರಿಗೆ ನೇರವಾಗಿ ಎಚ್ಚರಿಕೆ ಸಂದೇಶಗಳನ್ನು ಪಡೆಯಬಹುದು. ಸಮುದ್ರ ದಲ್ಲಿ ಉಂಟಾಗುವ ದೈತ್ಯ ಅಲೆಗಳು, ಚಂಡಮಾರುತ, ಸುನಾಮಿ, ಸಮುದ್ರದೊಳಗೆ ಆಗುವಂಥ ಭೂಕಂಪಗಳ ಬಗ್ಗೆ ಎಚ್ಚರಿಕೆಯ ಸಂದೇಶವನ್ನು ರವಾನಿಸುವುದರ ಜೊತೆಗೆ ಜನರು ತಕ್ಷಣಕ್ಕೆ ಕೈಗೊಳ್ಳಬಹುದಾದ ಸುರಕ್ಷತಾ ಕ್ರಮಗಳು, ಸುರಕ್ಷಿತ ಮೀನುಗಾರಿಕೆ ನಡೆಸಬಹುದಾದ ವಲಯಗಳ ಬಗ್ಗೆ ಮಾಹಿತಿ ಪಡೆಯಬಹುದು.

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್ ಕೆ.ಎಲ್.ರಾಹುಲ್ ಡೆಲ್ಲಿ

ಪರ್ಪಲ್ ಕ್ಯಾಪ್ ಭುವನೇಶ್ವರ್ ಕುಮಾರ್ ಬೆಂಗಳೂರು

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	8	6	1	13
ಬೆಂಗಳೂರು	9	6	3	12
ಹೈದರಾಬಾದ್	9	6	3	12
ರಾಜಸ್ಥಾನ್	10	6	4	12
ಗುಜರಾತ್	9	5	4	10
ಚೆನ್ನೈ	9	4	5	8
ಡೆಲ್ಲಿ	9	4	5	8
ಕೋಲ್ಕತಾ	8	2	5	5
ಲಖನೌ	8	2	6	4
ಮುಂಬೈ	9	2	7	4

ಸಮಾಚಾರ ಸಣ್ಣದಲ್ಲ

ಐಪಿಎಲ್: ರಾಹುಲ್ 200 ಸಿಕ್ಸರ್ ದಾಖಲೆ

ಜೈಪುರ: ಐಪಿಎಲ್ ಟೂರ್ನಿಯಲ್ಲಿ ಭಾರತದ ಓಪನರ್ ಆಟಗಾರನಾಗಿ 200 ಸಿಕ್ಸರ್‌ಗಳನ್ನು ಬಾರಿಸಿದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಕೆಎಲ್ ರಾಹುಲ್ ಪಾತ್ರರಾಗಿದ್ದು, ಅವರ ಸಿಕ್ಸರ್‌ಗಳ ಸಂಖ್ಯೆ ಈಗ 203ಕ್ಕೆ ತಲುಪಿದೆ. ಶುಕ್ರವಾರ ರಾಜಸ್ಥಾನದ ವಿರುದ್ಧದ ಪಂದ್ಯದ ಮೂಲಕ ಅವರು ಆ ದಾಖಲೆಗೆ ಪಾತ್ರರಾದರು. ಐಪಿಎಲ್ ಟೂರ್ನಿಯಲ್ಲಿ ಓಪನರ್ ಬ್ಯಾಟ್ಸ್‌ಮನ್ ಆಗಿ ರಾಹುಲ್ ಇದುವರೆಗೆ 112 ಇನ್ನಿಂಗ್ಸ್‌ಗಳನ್ನು ಆಡಿದ್ದು, 50ರ ಸರಾಸರಿಯಲ್ಲಿ 4,851 ರನ್‌ಗಳನ್ನು ಗಳಿಸಿದ್ದಾರೆ. ಆರಂಭಿಕ ಬ್ಯಾಟ್ಸ್‌ಮನ್ ಆಗಿ ವಿರಾಟ್ ಕೊಹ್ಲಿ 192 ಸಿಕ್ಸರ್‌ಗಳನ್ನು ಬಾರಿಸಿದ್ದರೆ, ರೋಹಿತ್ ಶರ್ಮಾ 148 ಸಿಕ್ಸರ್‌ಗಳನ್ನು ಗಳಿಸಿದ್ದಾರೆ. 143 ಸಿಕ್ಸರ್‌ಗಳೊಂದಿಗೆ ಶಿಖರ್ ಧವನ್ ಭಾರತೀಯ ಆರಂಭಿಕ ಆಟಗಾರರಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ಇದರ ನಡುವೆ ಐಪಿಎಲ್ ಟೂರ್ನಿಯಲ್ಲಿ ಆರಂಭಿಕ ಆಟಗಾರನಾಗಿ ಅತೀ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಆಟಗಾರರ ಒಟ್ಟಾರೆ ಪಟ್ಟಿಯಲ್ಲಿ ರಾಹುಲ್ 3ನೇ ಸ್ಥಾನದಲ್ಲಿದ್ದಾರೆ.

ಸದ್ಯಕ್ಕೆ ಆಕಾಶ್ ದೀಪ್, ಹರ್ಷಿತ್ ರಾಣಾ ಅಲಭ್ಯ



ದೆಹಲಿ: ಮುಂಬರುವ ಅಫಘಾನಿಸ್ತಾನದ ವಿರುದ್ಧದ ತವರು ಸರಣಿ ಮತ್ತು ಇಂಗ್ಲೆಂಡ್ ಪ್ರವಾಸದ ವೈಟ್‌ಬಾಲ್ ಸರಣಿಗಳಿಗೆ ಭಾರತ ತಂಡದ ಯುವ ವೇಗಿಗಳಾದ ಆಕಾಶ್ ದೀಪ್ ಹಾಗೂ ಹರ್ಷಿತ್ ರಾಣಾ ಅಲಭ್ಯರಾಗುವ ಸಾಧ್ಯತೆ ಇದೆ. ಅವರು ಸಂಪೂರ್ಣ ಫಿಟ್ನೆಸ್‌ಗೆ ಮರಳಲು ಇನ್ನೂ ಹೆಚ್ಚಿನ ಸಮಯ ತೆಗೆದುಕೊಳ್ಳುವುದರಿಂದ ಆಯ್ಕೆಗೆ ಪರಿಗಣಿಸಲಾಗದೆಂದು ಬಿಸಿಸಿಐ ಮೂಲಗಳು ತಿಳಿಸಿವೆ. ಆಕಾಶ್ ದೀಪ್ ಪ್ರಸ್ತುತ ಬೆನ್ನಿನ ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ, ಆದರೆ ರಾಣಾ ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಭಾರತ - ಶ್ರೀಲಂಕಾ ಜಂಟಿ ಆತಿಥ್ಯದ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ಹರ್ಷಿತ್ ಗಾಯಕ್ಕೆ ತುತ್ತಾಗಿದ್ದರು. ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಜೊತೆ ಒಪ್ಪಂದ ಮಾಡಿಕೊಂಡಿರುವ ಇಬ್ಬರೂ ಆಟಗಾರರು ಇದೀಗ ನಡೆಯುತ್ತಿರುವ ಐಪಿಎಲ್‌ನಲ್ಲಿ ಭಾಗವಹಿಸುತ್ತಿಲ್ಲ. ಆಗಸ್ಟ್‌ನಲ್ಲಿ ಹಿರಿಯ ಪುರುಷರ ದೇಶಿ ಋತುವಿನ ಆರಂಭವಾಗಲಿದ್ದು, ದುಲೀಪ್ ಟ್ರೋಫಿ ಮೂಲಕ ಇಬ್ಬರೂ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಬಹುದೆಂದು ನಿರೀಕ್ಷೆ ಮಾಡಲಾಗುತ್ತಿದೆ.

ಋತುರಾಜ್ ಗಾಯಕ್ವಾಡ್ ಸ್ಫೋಟಕ ಬ್ಯಾಟಿಂಗ್ ಅನ್ಶುಲ್ ಕಾಂಬೋಜ್ ಮಾರಕ ಬೌಲಿಂಗ್ ದಾಳಿ

ಪ್ಲೇಆಫ್‌ನಿಂದ ಮುಂಬೈ ಬಹುತೇಕ ಹೊರಕ್ಕೆ

ಚೆನ್ನೈ: ಅನ್ಶುಲ್ ಕಾಂಬೋಜ್ ಅವರ ಮಾರಕ ಬೌಲಿಂಗ್ ಹಾಗೂ ನಾಯಕ ಋತುರಾಜ್ ಗಾಯಕ್ವಾಡ್ ಹಾಗೂ ಕಾರ್ತಿಕ್ ಶರ್ಮಾ ಅರ್ಧಶತಕಗಳ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಶನಿವಾರ ಮುಂಬೈ ಇಂಡಿಯನ್ಸ್ ವಿರುದ್ಧ 8 ವಿಕೆಟ್‌ಗಳ ಗೆಲುವು ದಾಖಲಿಸಿತು. ತನ್ನ ನಾಲ್ಕನೇ ಗೆಲುವಿನ ಮೂಲಕ ಅಂಕಪಟ್ಟಿಯಲ್ಲಿ 8 ಅಂಕಗಳನ್ನು ಕಲೆ ಹಾಕಿರುವ ಚೆನ್ನೈ 6ನೇ ಸ್ಥಾನಕ್ಕೆ ಲಗ್ಗೆ ಇಟ್ಟಿತು. ಏಳನೇ ಸೋಲು ಅನುಭವಿಸಿದ ಮುಂಬೈ ತಂಡಕ್ಕೆ ನಾಕೌಟ್ ಹಾದಿ ಅತ್ಯಂತ ಕಠಿಣವಾಗಿದೆ.

ಇಲ್ಲಿನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ಮುಂಬೈ ನೀಡಿದ್ದ 160 ರನ್‌ಗಳ ಸ್ಪರ್ಧಾತ್ಮಕ ಗುರಿಯನ್ನು ಹಿಂಬಾಲಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡ, ಋತುರಾಜ್ ಗಾಯಕ್ವಾಡ್ ಹಾಗೂ ಕಾರ್ತಿಕ್ ಶರ್ಮಾ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಬಲದಿಂದ 18.1 ಓವರ್‌ಗಳಿಗೆ 2 ವಿಕೆಟ್ ನಷ್ಟಕ್ಕೆ ಗೆದ್ದು ಬೀಗಿತು. ಗಾಯಕ್ವಾಡ್ ಅದ್ಭುತ ಬ್ಯಾಟಿಂಗ್ ಪ್ರದರ್ಶನವನ್ನು ತೋರಿಸಿ 48 ಎಸೆತಗಳಲ್ಲಿ 2 ಸಿಕ್ಸರ್ ಹಾಗೂ 5 ಬೌಂಡರಿಗಳೊಂದಿಗೆ ಅಜೇಯ 67 ರನ್ ಗಳಿಸಿ ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು.

ಇನಿಂಗ್ಸ್ ಆರಂಭಿಸಿದ ಸಂಜು ಸ್ಯಾಮ್ಸನ್ (11 ರನ್) ಬೇಗ ಔಟ್ ಆದರು. ಆದರೆ ಊರ್ವಿಲ್ ಪಟೇಲ್ ಅವರು ನಾಯಕ ಗಾಯಕ್ವಾಡ್ ಜತೆಗೆ 49 ರನ್‌ಗಳ ಜತೆಯಾಟವಾಡಿದರು. 3ನೇ ವಿಕೆಟ್‌ಗೆ ಕಾರ್ತಿಕ್ ಶರ್ಮಾ ಹಾಗೂ ಗಾಯಕ್ವಾಡ್ 98 ರನ್‌ಗಳ ಗೆಲುವಿನ ಜತೆಯಾಟವನ್ನು ಆಡಿದರು. ಕಾರ್ತಿಕ್ ಶರ್ಮಾ 40 ಎಸೆತಗಳಲ್ಲಿ ಅಜೇಯ 54 ರನ್‌ಗಳನ್ನು ಗಳಿಸಿ ತಮ್ಮ ತಂಡದ ಗೆಲುವಿಗೆ ನೆರವಾದರು.

ಮುಂಬೈ ಅಲ್ಪಮೊತ್ತು: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದ ಮುಂಬೈ ತಂಡ ರಯಾನ್ ರಿಕೆಲ್ಟನ್ ಹಾಗೂ ನಮನ್ ಧೀರ್ ಅವರ ಬ್ಯಾಟಿಂಗ್ ಹೊರತಾಗಿಯೂ ಇತರೆ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ತನ್ನ ಪಾಲಿನ 20 ಓವರ್‌ಗಳಿಗೆ 7 ವಿಕೆಟ್‌ಗಳ ನಷ್ಟಕೆ 159 ರನ್‌ಗಳನ್ನು ಕಲೆ ಹಾಕಿತ್ತು. ಮುಂಬೈ ಪರ 37 ಎಸೆತಗಳಲ್ಲಿ 57 ರನ್ ಗಳಿಸಿದ ನಮನ್ ಧೀರ್ ವೈಯಕ್ತಿಕ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ರಿಕೆಲ್ಟನ್ ಅವರ ಜೊತೆ ಇನಿಂಗ್ಸ್ ಆರಂಭಿಸಿದ ವಿಲ್ ಜ್ಯಾಕ್ಸ್ ಅವರನ್ನು ಅನ್ಶುಲ್ ಕಾಂಬೋಜ್ ಅವರು 2ನೇ ಓವರ್‌ನಲ್ಲಿಯೇ ಔಟ್ ಮಾಡಿದರು. ಬಳಿಕ ಜತೆಯಾದ ರಿಕೆಲ್ಟನ್ ಹಾಗೂ ನಮನ್ ಧಿರ್ 32 ಎಸೆತಗಳಲ್ಲಿ 58 ರನ್‌ಗಳನ್ನು ಗಳಿಸಿದರು. 12 ಎಸೆತಗಳಲ್ಲಿ 27 ರನ್ ಸಿಡಿಸಿ ಉತ್ತಮ ಆರಂಭ ಪಡೆದಿದ್ದ ಸೂರ್ಯಕುಮಾರ್ ಯಾದವ್, ವೇಗಿ ರಾಮಕೃಷ್ಣ ಘೋಷ್ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಕೈ ಹಾಕಿ ಡೆವಾಲ್ಡ್ ಬ್ರೆವಿಸ್‌ಗೆ ಕ್ಯಾಚ್ ಕೊಟ್ಟರು. ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಮಾಡುತ್ತಿದ್ದ ನಮನ್ ಧಿರ್ 37 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 57 ರನ್ ಸಿಡಿಸಿ ಮುಂಬೈ ಮೊತ್ತ 150ರ ಸನಿಹಕ್ಕೆ ತಲುಪಿಸಿದರು.

ಗಾಯಕ್ವಾಡ್ ಸ್ಫೋಟಕ ಬ್ಯಾಟಿಂಗ್.

ಬೆಂಗಳೂರಿನಲ್ಲಿ ಕ್ವಾಲಿಫೈಯರ್ ಪಂದ್ಯ?

ಆರಂಭದಲ್ಲಿ ಘೋಷಿಸಲಾದ ದಿನಾಂಕಗಳ ಪ್ರಕಾರ, ಈ ಐಪಿಎಲ್ ಆವೃತ್ತಿಯು ಮೇ 31ರಂದು ಕೊನೆಗೊಳ್ಳಲಿದೆ. ಹಾಗಾಗಿ ಕ್ವಾಲಿಫೈಯರ್-1 ಪಂದ್ಯಗಳು ಮೇ 26ರಂದು, ಎಲಿಮಿನೇಟರ್ ಪಂದ್ಯ ಮೇ 27ರಂದು ಮತ್ತು ಕ್ವಾಲಿಫೈಯರ್-2 ಪಂದ್ಯ ಮೇ 29ರಂದು ನಡೆಯುವ ಸಾಧ್ಯತೆಯಿದೆ. ಈ ಹಿಂದೆ ನಿಗದಿಯಂತೆ ಫೈನಲ್ ಪಂದ್ಯ ಮೇ 31ರಂದು ನಡೆಯಲಿದೆ. ಕ್ವಾಲಿಫೈಯರ್ ಅಧಿಕೃತ ವೇಳಾಪಟ್ಟಿ ಘೋಷಣೆ ಬಾಕಿ ಇದ್ದರೂ, ಎಂ. ಚಿನ್ನಸ್ವಾಮಿ ಕ್ರೀಡಾಂಗಣ (ಬೆಂಗಳೂರು) ಮತ್ತು ನರೇಂದ್ರ ಮೋದಿ ಕ್ರೀಡಾಂಗಣ (ಅಹಮದಾಬಾದ್) ಆತಿಥ್ಯ ವಹಿಸುವ ನಿರೀಕ್ಷೆಯಿದೆ.

ಸ್ಕೋರ್ ಬೋರ್ಡ್

ಮುಂಬೈ 159/7 20 ಓವರ್

		ರನ್	ಎಸೆತ	4s	6s
ವಿಲ್ ಜ್ಯಾಕ್ಸ್	ಸಿ ಘೋಷ್, ಬಿ ಕಾಂಬೋಜ್	1	5	0	0
ರಿಕೆಲ್ಟನ್	ಸಿ ಪಟೇಲ್, ಬಿ ಅಹ್ಮದ್	37	24	0	5
ನಮನ್ ಧೀರ್	ಸಿ ಸರ್ಫರಾಜ್, ಬಿ ಓವರ್ಟನ್	55	37	4	3
ಸೂರ್ಯಕುಮಾರ್	ಸಿ ಬ್ರೆವಿಸ್, ಬಿ ಘೋಷ್	21	12	3	1
ತಿಲಕ್	ಸಿ ಗಾಯಕ್ವಾಡ್, ಬಿ ಅಹ್ಮದ್	5	8	0	0
ಪಾಂಡ್ಯ	ಸಿ ಬ್ರೆವಿಸ್, ಬಿ ಕಾಂಬೋಜ್	18	23	2	0
ರಾಬಿನ್	ಬಿ ಕಾಂಬೋಜ್	5	3	1	0
ಕ್ರಿಶ್	ನಾಟ್ ಔಟ್	3	6	0	0
ಬೌಲ್ಟ್	ನಾಟ್ ಔಟ್	7	2	0	1

ಬೌಲಿಂಗ್ ಚೆನ್ನೈ

	ಓವರ್	ಮೆಡನ್	ರನ್	ವಿಕೆಟ್
ಮುಖೇಶ್	3	0	25	0
ಕಾಂಬೋಜ್	4	0	32	3
ಪ್ರಶಾಂತ್	2	0	25	0
ಅಹ್ಮದ್	4	0	26	2
ಘೋಷ್	3	0	24	1
ಓವರ್ಟನ್	4	0	23	1

ವಿಕೆಟ್ ಪತನ : 1/1, 2/59, 3/99, 4/109, 5/134, 6/139, 7/151

ಚೆನ್ನೈ 160/2 18.1 ಓವರ್

		ರನ್	ಎಸೆತ	4s	6s
ಸಂಜು	ಸಿ ರಿಕೆಲ್ಟನ್, ಬಿ ಬುಮ್ರಾ	11	9	2	0
ಗಾಯಕ್ವಾಡ್	ನಾಟ್ ಔಟ್	67	48	4	2
ಉರ್ವಿಲ್	ಬಿ ಗಜನ್‌ಫರ್	24	12	2	2
ಕಾರ್ತಿಕ್	ನಾಟ್ ಔಟ್	54	40	5	3

ಬೌಲಿಂಗ್ ಮುಂಬೈ

	ಓವರ್	ಮೆಡನ್	ರನ್	ವಿಕೆಟ್
ಬೌಲ್ಟ್	3.1	0	37	0
ಬುಮ್ರಾ	3	0	20	1
ಕ್ರಿಶ್	2	0	22	0
ಗಜನ್‌ಫರ್	4	0	40	1
ರಘು	4	0	24	0
ಪಾಂಡ್ಯ	2	0	17	0

ವಿಕೆಟ್ ಪತನ : 1/13, 2/62

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ಗಾಯಕ್ವಾಡ್ (ಚೆನ್ನೈ)

ಜೇಮಿಸನ್‌ಗೆ ಡೀಮೆರಿಟ್

ಜೈಪುರ: ಶನಿವಾರದಂದು ಇಲ್ಲಿ ನಡೆದ ರಾಜಸ್ಥಾನ್ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ ವಿಕೆಟ್ ಪಡೆದು ಅತಿರೇಕದ ಸಂಭ್ರಮಾಚರಣೆ ಮಾಡಿದ್ದಕ್ಕಾಗಿ ಡೆಲ್ಲಿ ಕ್ಯಾಪಿಟಲ್ಸ್ ವೇಗಿ ಕೈಲ್ ಜೇಮಿಸನ್‌ಗೆ ಎಚ್ಚರಿಕೆ ಮತ್ತು ಒಂದು ಡೀಮೆರಿಟ್ ಪಾಯಿಂಟ್ ನೀಡಲಾಗಿದೆ.

ಮಹಿಳಾ ಟಿ20 ವಿಶ್ವಕಪ್: ಭಾರತ ತಂಡ ಪ್ರಕಟ

ಮುಂಬೈ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೆ 15 ಸದಸ್ಯರ ಭಾರತ ತಂಡವನ್ನು ಪ್ರಕಟಿಸಿದೆ. ನಿರೀಕ್ಷೆಯಂತೆ ಹರ್ಮನ್‌ಪ್ರೀತ್ ಕೌರ್ ತಂಡದ ನಾಯಕಿಯಾಗಿ ನೇಮಕಗೊಂಡಿದ್ದು, ಸ್ಮೃತಿ ಮಂಧಾನಾ ಉಪನಾಯಕಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಜೆಮಿಮಾ ರೋಡ್ರಿಗಸ್, ಶಫಾಲಿ ವರ್ಮಾ ಮತ್ತು ರಿಚಾ ಘೋಷ್ ಸೇರಿದಂತೆ ಅನೇಕ ಸ್ಟಾರ್ ಆಟಗಾರ್ತಿಯರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಬ್ಯಾಟರ್‌ಗಳಾದ ಪ್ರತಿಕಾ ರಾವಲ್ ಮತ್ತು ಹರ್ಲೀನ್ ಡಿಯೋಲ್ ಹಾಗೂ ಸ್ಪಿನ್ ಬೌಲರ್-ಆಲ್‌ರೌಂಡರ್ ಸ್ನೇಹ್ ರಾಣಾ ಕೂಡ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದಾರೆ.

ಭಾರತ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನಾ (ಉಪ ನಾಯಕಿ), ಶಫಾಲಿ ವರ್ಮಾ, ಜೆಮಿಮಾ ರೋಡ್ರಿಗಸ್, ಭಾರತಿ ಫುಲ್ಮಾಲಿ, ದೀಪ್ತಿ ಶರ್ಮಾ, ರಿಚಾ ಘೋಷ್ (ಕೀಪರ್), ಶ್ರೀಚರಣಿ, ಯಾಸ್ತಿಕಾ ಭಾಟಿಯಾ (ಕೀಪರ್), ನಂದಾನಿ ಶರ್ಮಾ, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್, ಕ್ರಾಂತಿ ಗೌಡ್, ಶ್ರೇಯಾಂಕಾ ಪಾಟೀಲ್, ರಾಧಾ ಯಾದವ್.

ಮುಂಬೈ ಲೀಗ್: ಅರ್ಜುನ್‌ಗೆ ಅವಕಾಶ



ದೆಹಲಿ: ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಲಖನೌ ಸೂಪರ್ ಜಯಂಟ್ಸ್ ತಂಡದ ಪರ ಇನ್ನೂ ಒಂದೂ ಪಂದ್ಯವನ್ನು ಆಡದ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್‌ಗೆ ಬೇರೊಂದು ಟೂರ್ನಿಯಲ್ಲಿ ಆಡಲು ಅವಕಾಶ ಸಿಕ್ಕಿದೆ. ಮಾರ್ಚ್ 2ರಂದು ನಡೆದಿದ್ದ ಟಿ20 ಮುಂಬೈ ಲೀಗ್ ಟೂರ್ನಿಯ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಅವರನ್ನು ಎಆರ್‌ಸಿಎಸ್ ಅಂಧೇರಿ ತಂಡ 10 ಲಕ್ಷ ರು.ಗಳಿಗೆ ಖರೀದಿಸಿದೆ. ಅವರು ಗೋವಾ ಪರ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡಿದರೂ ಆಲ್‌ರೌಂಡರ್‌ಗೆ ಮುಂಬೈ ಲೀಗ್‌ನಲ್ಲಿ ಆಡಲು ಅವಕಾಶವನ್ನು ಕಲ್ಪಿಸಲಾಗಿದೆ. ಐಪಿಎಲ್ ಟೂರ್ನಿಯಲ್ಲಿ ಲಖನೌ ತಂಡದಲ್ಲಿ ಅರ್ಜುನ್ ತೆಂಡೂಲ್ಕರ್ ಅವರು ಪಡೆಯುವ ಮೊತ್ತದಲ್ಲಿ ಶೇ.33ರಷ್ಟು ಹಣವನ್ನು ಟಿ20 ಮುಂಬೈ ಲೀಗ್‌ನಲ್ಲಿ ಪಡೆಯಲಿದ್ದಾರೆ. ಲಖನೌ ಫ್ರಾಂಚೈಸಿಯು ಟ್ರೇಡ್ ಡೀಲ್ ಮೂಲಕ ಮುಂಬೈ ತಂಡದಿಂದ ಅರ್ಜುನ್ ತೆಂಡೂಲ್ಕರ್ ಅವರನ್ನು ಖರೀದಿಸಿತ್ತು.

ತವರಿನಲ್ಲಿ ಗೆಲುವಿನ ನಿರೀಕ್ಷೆಯಲ್ಲಿರುವ ಸನ್‌ರೈಸರ್ಸ್ ತಂಡ

ಹೈದರಾಬಾದ್‌ಗಿಂದು ಕೋಲ್ಕತಾ ಎದುರಾಳಿ

ಹೈದರಾಬಾದ್: ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್‌ನ 45ನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವು ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧ ಸೆಣಸಲಿದೆ.

ಎಸ್‌ಆರ್‌ಎಚ್ ಒಟ್ಟು ಆಡಿರುವ 9 ಪಂದ್ಯಗಳಿಂದ 6 ಗೆಲುವುಗಳನ್ನು ಗಳಿಸಿ ಪ್ರಸ್ತುತ ಪಾಯಿಂಟ್ಸ್ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ. ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್ ಮತ್ತು ಇಶಾನ್ ಕಿಶನ್ ಅವರಂತಹ ಆಟಗಾರರು ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಪ್ಯಾಟ್ ಕಮ್ಮಿನ್ಸ್ ಅವರ ಲಭ್ಯತೆಯು ತಂಡಕ್ಕೆ ಬೌಲಿಂಗ್‌ನಲ್ಲಿ ಸ್ಥಿರತೆ ಒದಗಿಸಿದೆ.

ಮತ್ತೊಂದೆಡೆ ಆಡಿರುವ ಎಂಟು ಪಂದ್ಯಗಳಲ್ಲಿ ಕೇವಲ ಎರಡು ಗೆಲುವುಗಳೊಂದಿಗೆ ಅಜಿಂಕ್ಯಾ ರಹಾನೆ ನಾಯಕತ್ವದ ಕೋಲ್ಕತ್ತಾ ತಂಡವು ಎಂಟನೇ ಸ್ಥಾನದಲ್ಲಿದೆ. ಕಳೆದ ಪಂದ್ಯದ ಸೂಪರ್ ಓವರ್ ಗೆಲುವು ತಂಡದ ಮನೋಸ್ಥೈರ್ಯವನ್ನು ಹೆಚ್ಚಿಸಿದೆ.

ಇಂದಿನ ಪಂದ್ಯ

ಹೈದರಾಬಾದ್ vs ಕೋಲ್ಕತಾ

ಸ್ಥಳ	: ರಾಜೀವ್‌ಗಾಂಧಿ ಸ್ಟೇಡಿಯಂ, ಹೈದರಾಬಾದ್
ಸಮಯ	: ಅಪರಾಹ್ನ 3.30
ನೇರಪ್ರಸಾರ	: ಸ್ಟಾರ್‌ಸ್ಪೋರ್ಟ್ಸ್
ಲೈವ್‌ಸ್ಟ್ರೀಮ್	: ಜಿಯೋ ಹಾಟ್‌ಸ್ಟಾರ್



ಮುಖಾಮುಖಿ

ಹೈದರಾಬಾದ್ ಮತ್ತು ಕೋಲ್ಕತಾ ತಂಡಗಳು ಒಟ್ಟು 32 ಪಂದ್ಯಗಳನ್ನು ಆಡಿವೆ. ಆ ಪೈಕಿ ಹೈದರಾಬಾದ್ 11 ಪಂದ್ಯಗಳಲ್ಲಿ ಜಯ ಪಡೆದರೆ, ಕೋಲ್ಕತಾ 19 ಗೆಲುವುಗಳನ್ನು ಕಂಡಿದ್ದು, ಒಂದು ಪಂದ್ಯ ಟೈ ಆಗಿದೆ.

ಶುಭ್‌ಮನ್ ಗಿಲ್ ಪಡೆಗೆ ತವರಿನಲ್ಲಿ ಗೆಲ್ಲುವ ಅನಿವಾರ್ಯತೆ

ಇಂದು ಗುಜರಾತ್-ಪಂಜಾಬ್ ಹಣಾಹಣಿ

ಅಹಮದಾಬಾದ್: ಇಲ್ಲಿನ ಮೋದಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಗುಜರಾತ್ ತಂಡವು ಪಂಜಾಬ್ ಕಿಂಗ್ಸ್ ತಂಡ ವನ್ನು ಎದುರಿಸಲಿದೆ.

ಈಗಾಗಲೇ 9 ಪಂದ್ಯಗಳನ್ನು ಆಡಿರುವ ಗಿಲ್ ನಾಯಕತ್ವದ ಗುಜರಾತ್ ತಂಡವು 5ರಲ್ಲಿ ಗೆದ್ದು, 4ರಲ್ಲಿ ಸೋತು 10 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 5ನೇ ಸ್ಥಾನದಲ್ಲಿದ್ದರೆ, 8 ಪಂದ್ಯಗಳನ್ನು ಆಡಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಕೇವಲ 1 ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ.

ಈ ಆವೃತ್ತಿಯಲ್ಲಿ ಗುಜರಾತ್ ತಂಡವು ಡೆಲ್ಲಿ, ಲಖನೌ, ಕೋಲ್ಕತಾ, ಚೆನ್ನೈ ತಂಡಗಳ ವಿರುದ್ಧ ಗೆದ್ದರೆ ಪಂಜಾಬ್, ರಾಜಸ್ಥಾನ, ಮುಂಬೈ ಆರ್‌ಸಿಬಿ ವಿರುದ್ಧ ಸೋತಿದೆ. ಹಾಗೆಯೇ ಆರ್‌ಸಿಬಿ ವಿರುದ್ಧ ಒಮ್ಮೆ ಸೋತು ಮತ್ತೊಂದು ಪಂದ್ಯದಲ್ಲಿ ಗುಜರಾತ್ ಗೆದ್ದಿದೆ. ಪಂಜಾಬ್ ತಂಡವು ಗುಜರಾತ್, ಚೆನ್ನೈ, ಹೈದರಾಬಾದ್, ಮುಂಬೈ, ಲಖನೌ, ಡೆಲ್ಲಿ ತಂಡಗಳ ವಿರುದ್ಧ ಜಯ ಗಳಿಸಿದರೆ, ರಾಜಸ್ಥಾನದ ವಿರುದ್ಧ ಮಾತ್ರ ಗೆದ್ದಿದೆ. ಕೋಲ್ಕತಾ ವಿರುದ್ಧದ ಪಂದ್ಯವು ಮಳೆಯಿಂದಾಗಿ ರದ್ದುಗೊಂಡ ಕಾರಣ ಆ ಪಂದ್ಯದ ಮೂಲಕ ಕೇವಲ 1 ಅಂಕ ಮಾತ್ರ ಪಂಜಾಬ್‌ಗೆ ದೊರೆತಿತ್ತು.

ಇಂದಿನ ಪಂದ್ಯ

ಗುಜರಾತ್ vs ಪಂಜಾಬ್

ಸ್ಥಳ	: ಮೋದಿ ಸ್ಟೇಡಿಯಂ, ಅಹಮದಾಬಾದ್
ಸಮಯ	: ರಾತ್ರಿ 7.30
ನೇರಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್‌ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ವಿಟಾಕೀಸ್

ಕೆವಿಎನ್ ಜತೆಗೆ ರಾಜ್ ಶೆಟ್ಟಿ ಚಿತ್ರ

ಕೆವಿಎನ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾದ ಕೆಡಿ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಈ ಚಿತ್ರದ ಬಳಿಕ ಕೆವಿಎನ್ ನಿರ್ಮಾಣ ಮಾಡಿರುವ ಜನನಾಯಕನ್ ಚಿತ್ರ ಬಿಡುಗಡೆಯಾಗಲಿದೆ. ಆ ನಂತರ ಟಾಕ್ಸಿಕ್ ಕೂಡ ರಿಲೀಸ್ ಆಗಲಿದೆ. ಈ ಎರಡೂ ಸಿನಿಮಾಗಳು ಅದ್ದೂರಿ ವೆಚ್ಚದ ಚಿತ್ರಗಳಾಗಿದ್ದು, ಬಾಕ್ಸ್ ಆಫೀಸ್‌ನಲ್ಲಿ ದಾಖಲೆ ಬರೆಯುವುದು ಖಚಿತವಾಗಿದೆ. ಈ ನಡುವೆಯೇ ಶಿವಣ್ಣ ಅಭಿನಯದ ಹೊಸ ಚಿತ್ರವನ್ನು ನಿರ್ಮಾಣ ಮಾಡಲು ಕೆವಿಎನ್ ನಿರ್ಮಾಣ ಸಂಸ್ಥೆ ಸಿದ್ಧತೆ ನಡೆಸಿದೆ. ಹೀಗಿರುವಾಗಲೇ ರಾಜ್ ಶೆಟ್ಟಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಚಿತ್ರಕ್ಕೂ ಕೆವಿಎನ್ ಪ್ರೊಡಕ್ಷನ್ಸ್ ಬಂಡವಾಳ ಹೂಡಿದೆ ಎಂಬ ಸುದ್ದಿಯೂ ಇದೆ. ಈಗಾಗಲೇ ಈ ಚಿತ್ರ ಸೆಟ್ಟೇರಿದ್ದು, ಸದ್ದಿಲ್ಲದೆ ಶೂಟಿಂಗ್ ನಡೆಯುತ್ತಿದೆಯಂತೆ. ಹಾರರ್ ಕಾಮಿಡಿ ಡ್ರಾಮಾ ಜಾನರ್ ಚಿತ್ರ ಇದಾಗಿದ್ದು, ಸು ಫ್ರಮ್ ಸೋ ಸಿನಿಮಾದ ಬಳಿಕ ಅಂತಹದ್ದೇ ಮತ್ತೊಂದು ಸಿನಿಮಾ ನಿರ್ಮಾಣವಾಗಲಿದೆ ಎಂಬ ನಿರೀಕ್ಷೆ ಇದೆ. ರಾಜ್ ಬಿ ಶೆಟ್ಟಿ ಜತೆಗೆ ದೊಡ್ಡ ತಾರಬಳಗವೇ ಚಿತ್ರದಲ್ಲಿದೆ. ಇದು ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದೆ.

ರೆಟ್ರೋ ಶೈಲಿಯಲ್ಲಿ ಡ್ರೀಮ್ ಥಿಯೇಟರ್

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ಡಾಲಿ ಧನಂಜಯ ಒಟ್ಟಿಗೆ ಅಭಿನಯಿಸುತ್ತಿರುವ 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರ ಪೋಸ್ಟರ್ ಮೂಲಕವೇ ಕುತೂಹಲ ಮೂಡಿಸಿದೆ. ಸಪ್ತ ಸಾಗರದಾಚೆ ಎಲ್ಲೋ ಸಿನಿಮಾ ಯಶಸ್ಸಿನ ಬಳಿಕ ಹೇಮಂತ್ ರಾವ್ ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ಬಹುಭಾಷಾ ನಟಿ ಪ್ರಿಯಾಂಕಾ ಮೋಹನ್, ಅದಿತಿ ಬಾಲನ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರದ ಹಾಡಿನ ಚಿತ್ರೀಕರಣಕ್ಕಾಗಿ ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಅದ್ದೂರಿ ಸೆಟ್ ಹಾಕಲಾಗಿದೆ. ರೆಟ್ರೋ ಹಾರ್ಟ್-ಡಿಸ್ಕೋ ಸೋಲ್ ಎಂದು ಹೇಮಂತ್ ರಾವ್ ಬರೆದುಕೊಂಡಿದ್ದಾರೆ.

666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾದ ಈ ಹಾಡಿಗೆ ಇಮ್ರಾನ್ ಸರ್ದಾರಿಯಾ ನೃತ್ಯ ಸಂಯೋಜನೆ ಮಾಡಿದ್ದಾರೆ. ಕಲಾ ನಿರ್ದೇಶಕ ವಿಶ್ವಾಸ್ ಕಶ್ಯಪ್ ಈ ಹಾಡಿಗಾಗಿ ಅದ್ದೂರಿ ಸೆಟ್ ಹಾಕಿದ್ದಾರೆ. ನಿರ್ದೇಶಕ ಹೇಮಂತ್ ಎಂ ರಾವ್ ಅವರೊಂದಿಗೆ ಮೊದಲ ಬಾರಿಗೆ ಕೆಲಸ ಮಾಡುತ್ತಿದ್ದೇನೆ. ಹೇಮಂತ್ ರಾವ್ ಹೆಣೆಯುವ ಕಥೆ, ಸೃಷ್ಟಿಸುವ ಪಾತ್ರಗಳು ಎಲ್ಲವೂ ಅದ್ಭುತವಾಗಿರುತ್ತವೆ. ಈ ಚಿತ್ರದ ಹಾಡು ವಿಭಿನ್ನವಾಗಿ ಮೂಡಿಬರುತ್ತಿದೆ.ಈ ಹಾಡಿನ ಭಾಗವಾಗಲು ನನಗೆ ಸಂತೋಷ ತಂದಿದೆ. ಇದು ಕೇವಲ ಹಾಡಲ್ಲ. ಆದರೆ ಚಿತ್ರದ ನಿರೂಪಣೆಯಲ್ಲಿ ಒಂದು ಅವಿಭಾಜ್ಯ ತುಣುಕು. ಚರಣ್ ರಾಜ್ ಮತ್ತು ಹೇಮಂತ್ ಅದ್ಭುತ ಜೋಡಿ ಎಂದು ಪರಿಗಣಿಸಿ ಅವರ ಸಂಗೀತಕ್ಕೆ ನೃತ್ಯ ಸಂಯೋಜನೆ ಮಾಡುವುದು ನಿಜವಾಗಿಯೂ ಚಾಲೆಂಗ್ ಎಂದು ಇಮ್ರಾನ್ ಸರ್ದಾರಿಯ ಹೇಳಿದ್ದಾರೆ. ಈ ಚಿತ್ರಕ್ಕಾಗಿ ಇಲ್ಲಿಯವರೆಗೆ ಒಂಬತ್ತು ಬೃಹತ್ ಸೆಟ್‌ಗಳನ್ನು ನಿರ್ಮಿಸಿದ್ದೇವೆ. ಇದು ಚಿತ್ರದ ನಿರೂಪಣೆಯಲ್ಲಿ ಆಧಾರ ಸ್ಥಳವಾಗಿದೆ. ಈ ಸೆಟ್ ರೆಟ್ರೋ ಯುಗಕ್ಕೆ ಒಂದು ಸಂಕೇತವಾಗಿದೆ ಎಂದು ಕಲಾ ನಿರ್ದೇಶಕ ವಿಶ್ವಾಸ್ ಕಶ್ಯಪ್ ತಿಳಿಸಿದರು.

ನನ್ನ ಹಿಂದಿನ ಚಿತ್ರಗಳಲ್ಲಿ ನಾನು ಈ ರೀತಿಯ ಹಾಡನ್ನು ಎಂದಿಗೂ ಚಿತ್ರೀಕರಿಸಿಲ್ಲ. ಹೈಪರ್-ಕೊರಿಯೋಗ್ರಾಫ್ ಮಾಡಿದ ಅನುಕ್ರಮಕ್ಕಾಗಿ ನಾವು ಒಂದು ದೊಡ್ಡ ಸೆಟ್ ಅನ್ನು ನಿರ್ಮಿಸಿದ್ದೇವೆ ಮತ್ತು ಇದು ಅದ್ಭುತ ಅನುಭವವಾಗಿದೆ ಎಂದು ನಿರ್ದೇಶಕ ಹೇಮಂತ್ ರಾವ್ ಹೇಳಿದರು.

666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾವನ್ನು ವೈಶಾಕ್ ಜೆ ಫಿಲಂಸ್‌ನಲ್ಲಿ ವೈಶಾಕ್ ಜೆ ಗೌಡ ನಿರ್ಮಾಣ ಮಾಡುತ್ತಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಕನ್ನಡ ಹಾಗೂ ತೆಲುಗಿನಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ.

ತೆರೆಗೆ ಸಿದ್ಧವಾದ ಕಾಟಾಳನ್

ಮಾರ್ಕೋ ಚಿತ್ರದ ಯಶಸ್ಸಿನ ಬಳಿಕ, ಎ ಕ್ಯೂಬ್ಸ್ ಇಂಟರ್‌ನ್ಯಾಷನಲ್ ಕಾಟಾಳನ್ ಚಿತ್ರವನ್ನು ನಿರ್ಮಾಣ ಮಾಡಿದೆ. ಇದು ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಮೇ 28ರಂದು ತೆರೆಗೆ ಬರಲಿದೆ. ಕಾಟಳನ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಮಲೆಯಾಳಂ, ತಮಿಳು, ತೆಲುಗು ಸೇರಿದಂತೆ ಹಲವು ಪಂಚ ಭಾಷೆಗಳಲ್ಲಿ ತೆರೆಗೆ ಬರಲಿದೆ. ಸದ್ಯ ಬಿಡುಗಡೆಯಾಗಿರುವ ಟ್ರೇಲರ್ ಸಿನಿಪ್ರಿಯರನ್ನು ಸೆಳೆದಿದೆ. ಸಾಹಸ ಪ್ರಧಾನ ಕಥೆಯ ಈ ಚಿತ್ರದಲ್ಲಿ ಥ್ರಿಲ್ಲರ್ ಅಂಶಗಳು ಬೆರೆತಿವೆ. ಪೌಲ್ ಜಾರ್ಜ್ ನಿರ್ದೇಶಿಸಿರುವ ಕಟಾಳನ್ ಚಿತ್ರವನ್ನು, ಶರೀಫ್ ಮುಹಮ್ಮದ್ ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ಆಂಟನಿ ವರ್ಗೀಸ್, ಸುನೀಲ್, ದುಶಾರಾ ವಿಜಯನ್, ಕಬೀರ್ ದುಹಾನ್ ಸಿಂಗ್ ಹಾಗೂ ಪಾರ್ಥ್ ತಿವಾರಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಕನ್ನಡಿಗ ರವಿ ಬಸ್ರೂರು ಸಂಗೀತ ಸಂಯೋಜಿಸಿರುವುದು ವಿಶೇಷ.

ಶೂಟಿಂಗ್ ಮುಗಿಸಿದ ಬುಲ್‌ಡಾಗ್

ದಿಯಾ ಖ್ಯಾತಿಯ ನಟ ಪೃಥ್ವಿ ಅಂಬಾರ್ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಪೃಥ್ವಿ ಬುಲ್‌ಡಾಗ್ ಶೀರ್ಷಿಕೆಯ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ.

ಡಾರ್ಕ್ ಹ್ಯೂಮರ್ ಜಾನರ್‌ನಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಪೃಥ್ವಿ ಅಂಬಾರ್ ನಾಯಕನಾಗಿ ನಟಿಸಿದ್ದಾರೆ. ಬುಲ್‌ಡಾಗ್ ಒಂದೂರಿನ ನಾಲ್ವರು ಹುಡುಗರ ಕಥೆ. ಈ ನಾಲ್ವರು ಯಾವುದೋ ಕಾರಣಕ್ಕೆ ಬೆಂಗಳೂರಿಗೆ ಬರುತ್ತಾರೆ. ಎರಡು ತಿಂಗಳ ಅಂತರದಲ್ಲಿ ನಡೆಯುವ ಈ ಕಥೆಯಲ್ಲಿ ಬೆಂಗಳೂರಿಗೆ ಬಂದವರು ಮಾಡುವ ಎಡವಟ್ಟುಗಳು ಮತ್ತು ಅವರು ವಾಪಸ್ ಊರಿಗೆ ಹೋಗುವವರೆಗೆ ನಡೆಯುವ ಘಟನೆಗಳೇ ಈ ಸಿನಿಮಾದ ಕಥಾಹಂದರ. ವಿಶೇಷವೆಂದರೆ ಚಿತ್ರದಲ್ಲಿ ಕನ್ನಡ ಮತ್ತು ತುಳು ಎರಡೂ ಭಾಷೆಗಳನ್ನು ಬಳಸಲಾಗಿದೆ. ಚಿತ್ರದ ಪಾತ್ರಗಳು ಬೆಂಗಳೂರಿನಲ್ಲಿದ್ದಾಗ ಕನ್ನಡದಲ್ಲಿ ಮತ್ತು ಊರಿನಲ್ಲಿದ್ದಾಗ ತುಳುವಿನಲ್ಲಿ ಮಾತನಾಡುತ್ತವೆ.

ಹಾಗಾಗಿ ಇದನ್ನು ಕೇವಲ ತುಳು ಅಥವಾ ಕನ್ನಡ ಸಿನಿಮಾ ಎಂದು ಪ್ರತ್ಯೇಕಿಸಲು ಸಾಧ್ಯವಿಲ್ಲ, ಈ ಚಿತ್ರದ ಎರಡೂ ಭಾಷೆಗಳಿಗೆ ಇಂಗ್ಲೀಷ್ ಸಬ್ ಟೈಟಲ್ ಬಳಸುವ ವಿಭಿನ್ನ ಪ್ರಯೋಗವನ್ನು ನಿರ್ದೇಶಕ ಪೃಥ್ವಿ ಅಂಬಾರ್ ಮಾಡುತ್ತಿದ್ದಾರೆ. ಆರಾಧನಾ ಭಟ್, ಪ್ರಜ್ವಲ್ ಪೈ,

ನವೀನ್ ಡಿ ಪಡೀಲ್, ಅರವಿಂದ ಬೋಳಾರ್, ಭೋಜರಾಜ ವಾಮಂಜೂರು, ಪ್ರಕಾಶ್ ತುಮ್ಮಿನಾಡ್ ಪ್ರಮುಖ ಪಾತ್ರದಲ್ಲಿದ್ದಾರೆ.

ಸು ಫ್ರಮ್ ಸೋ ಸೇರಿದಂತೆ ಕನ್ನಡ, ತುಳು ಹಾಗೂ ಮಲೆಯಾಳಂನ ಹಲವಾರು ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಮೊದಲಿನಿಂದಲೂ ನನಗೆ ಸಿನಿಮಾ ಮಾಡುವ ಆಸೆ ಇತ್ತು. ಹಾಗಾಗಿ ನಾನೇ ಒಂದು ತಂಡ ಕಟ್ಟಿ ಕೆಲಸ ಆರಂಭಿಸಿದೆ. ಇಲ್ಲಿ ಹಾಸ್ಯದ ಜತೆಗೆ ಡಾರ್ಕ್ ಹ್ಯೂಮರ್ ಕಥೆಯೂ ಇದೆ. ನೈಜ ಘಟನೆಗಳು ಹಾಗೂ ನಾನು ಹುಟ್ಟಿ ಬೆಳೆದ ಪರಿಸರದ ವ್ಯಕ್ತಿಗಳೇ ಈ ಕಥೆ ಮತ್ತು ಪಾತ್ರಗಳಿಗೆ ಸ್ಫೂರ್ತಿ ಎಂದು ನಿರ್ದೇಶಕ ಪೃಥ್ವಿ ಅಂಬಾರ್ ತಿಳಿಸಿದರು.

ಭಾರತೀಯ ಸಂತರ ಪರಂಪರೆಯಲ್ಲಿ ‘ಅವಧೂತ’ ಸ್ಥಿತಿಗೆ ಅತ್ಯುನ್ನತ ಸ್ಥಾನವಿದೆ. ದೇಹದ ಅರಿವಿಲ್ಲದೇ, ಲೌಕಿಕದ ಹಂಗಿಲ್ಲದೇ, ಕೇವಲ ಪರಮಾತ್ಮನ ಚಿಂತನೆಯಲ್ಲಿ ಲೀನರಾಗಿರುವ ಅವಧೂತರ ಬದುಕು ಸಾಮಾನ್ಯ ಜನರಿಗೆ ಒಂದು ಸೋಜಿಗ ಮತ್ತು ದಿವ್ಯಸ್ಫೂರ್ತಿ. ತಮ್ಮ ತಪಃಶಕ್ತಿಯಿಂದ ಜನಮಾನಸದ ಅಜ್ಞಾನವನ್ನು ಬೆಳಗಿದ ಅಪರೂಪದ ಸಂತರಲ್ಲೊಬ್ಬರಾದ ಉತ್ತರ ಕನ್ನಡ ಜಿಲ್ಲೆಯ ದೀವಗಿಯ ಭಗವಾನ್ ಸದ್ಗುರು ಶ್ರೀ ಶ್ರೀ ರಾಮಾನಂದ ಅವಧೂತ ಮಹಾಸ್ವಾಮಿಗಳದು ಆಡಂಬರವಿಲ್ಲದ ಬದುಕು, ಅಹಂಕಾರವಿಲ್ಲದ ನಡಿಗೆ, ಭಕ್ತರ ಕಷ್ಟಗಳಿಗೆ ಸ್ಪಂದಿಸುವ ಕರುಣಾಳು ವ್ಯಕ್ತಿತ್ವ, ಮೊದಲ ನೋಟದಲ್ಲಿಯೇ ಅವರದು ಭಕ್ತರಿಗೆ ಪರಿಹಾರ ಸೂಚಿಸುವ ಹಾಗೂ ನಿರುಮ್ಮಳ ಸಂದೇಶ ನೀಡುವ ಮುಗ್ಧ, ವಾತ್ಸಲ್ಯಮಯಿಭಾವ. ಅವಧೂತರೆಂದರೆ ಹಾಗೆಯೇ; ಇವರು ನಮ್ಮ ನಡುವೆಯೇ ಇದ್ದು ನಮಗೆ ದಕ್ಕದವರು. ಅವರು ಉಪದೇಶ ನೀಡಲಿಲ್ಲ, ಪ್ರವಚನ ಕೊಡಲಿಲ್ಲ, ಅವರ ಮೌನ ಇರುವಿಕೆಯೇ ಒಂದು ಅದ್ಭುತ ಸಂದೇಶವಾಗಿತ್ತು. ಲೋಕದ ಯಾವ ಗದ್ದಲಕ್ಕೂ ಅಲುಗದ ಆ ಸ್ಥಿತಪ್ರಜ್ಞತೆಯಲ್ಲಿ ನಮಗೆ ಬೇಕಾದ ಉತ್ತರ ಪ್ರಾಪ್ತವಾಗುತ್ತಿತ್ತು. ಸುಮಾರು ಏಳು ದಶಕಗಳ ಕಾಲ, ಲೌಕಿಕ ಜಗತ್ತಿನ ಸುಖ-ದುಃಖಗಳಿಗೆ ಅತೀತವಾಗಿ ನಿಂತು, ಸದಾ ಪರಮಾತ್ಮನ ಚಿಂತನೆಯಲ್ಲಿ ಲೀನರಾಗಿದ್ದ ಅವರ ಅವಧೂತತ್ವದಿಂದ ಪುನೀತರಾದವರು ಲೆಕ್ಕವಿಲ್ಲದಷ್ಟು. ಇಂಥ ಅಪರೂಪದ ಅವಧೂತರ ವ್ಯಕ್ತಿತ್ವವನ್ನು ವಿನಾಯಕ ವೆಂ. ಭಟ್ ಅವರು ಸವಿಸ್ತಾರವಾಗಿ, ಮನೋಜ್ಞವಾಗಿ ‘ಕರುಣಾಶರಧಿ’ ಗ್ರಂಥದಲ್ಲಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಶ್ರೀಗಳು ಕೇವಲ ಒಬ್ಬ ದೇವಮಾನವರಾಗಿ ಕಾಣಿಸುವುದಿಲ್ಲ, ಬದಲಿಗೆ ನಾವು ಕಳೆದುಕೊಂಡಿರುವ ನಮ್ಮದೇ ‘ಸರಳ’ತೆಯ ಪ್ರತಿಬಿಂಬವಾಗಿ ಕಾಣುತ್ತಾರೆ. ಬದುಕಿನ ಸಾರ್ಥಕತೆಯನ್ನು ಹುಡುಕುತ್ತಿರುವವರಿಗೆ, ಮಾನಸಿಕ ಶಾಂತಿಯನ್ನು ಹಂಬಲಿಸುವವರಿಗೆ ಮತ್ತು ಅವಧೂತ ಪರಂಪರೆಯ ಬಗ್ಗೆ ಆಸಕ್ತಿ ಉಳ್ಳವರಿಗೆ ಈ ಪುಸ್ತಕವು ಒಂದು ಅಪೂರ್ವ ಕಾಣಿಕೆ. ಇತ್ತೀಚೆಗೆ ಲೋಕಾರ್ಪಣೆಗೊಂಡ ಈ ಪುಸ್ತಕದ ಆಯ್ದ ಭಾಗಗಳನ್ನು ವಿಶ್ವವಾಣಿಯ ಓದುಗರಿಗಾಗಿ ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಕರುಣಾಶರಧಿ ಶ್ರೀ ರಾಮಾನಂದ ಅವಧೂತರು



» ವಿನಾಯಕ ವೆಂ. ಭಟ್

**ಚೈತನ್ಯಂ ಶಾಶ್ವತಂ ಶಾಂತಂ ವ್ಯೋಮಾತೀತಂ ನಿರಂಜನಮ್
ನಾದಬಿಂದು ಕಲಾತೀತಂ ತಸ್ಮೈ ಶ್ರೀಗುರವೇನಮಃ**

ಶ್ರೀ ರಾಮಾನಂದ ಅವಧೂತರ (ನಮ್ಮ ಗುರುಗಳ) ಗುಣರಾಶಿಗಳಲ್ಲಿ ಕೆಲವನ್ನಾದರೂ ನಾವು ಇಲ್ಲಿ ಅನುಭವಿಸುವ ಪ್ರಯತ್ನ ಮಾಡೋಣ. ನಮ್ಮ ಗುರುಗಳ ಗುಣಗಳ ಕುರಿತು ಹೊಸದಾಗಿ ನಾನು ಹೇಳುವುದೇನೂ ಇಲ್ಲ, ನಮ್ಮ ಗುರುಗಳನ್ನು ಸಂದರ್ಶಿಸಿದ ಯಾರಿಗಾದರೂ ನನ್ನ ಗುರು ಗುಣ ವರ್ಣನೆ ಎನ್ನುವುದು ಅನುಭವಕ್ಕೆ ಬಂದಿರುವುದೇ ಆಗಿರುತ್ತದೆ. ಆದರೂ, ನಮ್ಮ ಗುರುಗಳ ಗುಣಕ್ಕೇ ಮೀಸಲಿಟ್ಟು ಸ್ತುತಿಪೂರ್ವಕವಾಗಿ ನಾಲ್ಕು ಅಕ್ಷರಗಳನ್ನು ಈ ಅಧ್ಯಾಯದಲ್ಲಿ ಬರೆಯುವ ಪ್ರಯತ್ನ ಮಾಡುತ್ತೇನೆ.

ನಮ್ಮ ಗುರುಗಳ ಗುಣಗಡಣಗಳಲ್ಲಿ ಮೊದಲನೆಯದಾಗಿ ಹೇಳುವುದಾದರೆ ಅದು ಅವರ ಏಕ ಪ್ರಿಯದರ್ಶನತ್ವ. ದರ್ಶನ ಸಂದ ಸರ್ವರಿಗೂ ಯಾವುದೇ ಕಾಲದಲ್ಲೂ ಸಂತೋಷವನ್ನು ಉಂಟುಮಾಡುವ, ಇನ್ನೊಮ್ಮೆ ಕಣ್ತುಂಬಿಕೊಳ್ಳಬೇಕೆನ್ನುವ ವ್ಯಕ್ತಿತ್ವವನ್ನು ‘ಏಕ ಪ್ರಿಯದರ್ಶನತ್ವ’ ಎನ್ನುತ್ತಾರೆ. ನಮ್ಮ ಗುರುಗಳ ಅಲೌಕಿಕ ದಿವ್ಯ ಸೌಂದರ್ಯವನ್ನು ವರ್ಣಿಸಲು ಸುಲಭವಾಗುವ ಕಾರಣಕ್ಕೆ ಸುಂದರ ಎಂದಷ್ಟೇ ಹೇಳಿದರೆ ಅದು ಅತ್ಯಂತ ಕಡಿಮೆಯಾಗಿ ಬಿಡಬಹುದು. ಆಸೇಚನಕವಾದ ರೂಪವಾಗಿತ್ತು ಎಂದರೆ ಒಂದುಮಟ್ಟಿಗಾಗಬಹುದೇನೋ!. ತದಾಸೇಚನಕಂತೃಪ್ತೇ ನಾಸ್ತ್ಯಂತೋ ಯಸ್ಯದರ್ಶನಾತ್. ಅಂದರೆ, ನಾವು ಯಾರನ್ನು ಅಥವಾ ಯಾವುದನ್ನು ನೋಡುತ್ತಿದ್ದೇವೋ, ಅಲ್ಲಿಂದ ಕಣ್ಣು ಕೀಳಲಾಗದಷ್ಟು ಅಂದರೆ, ಸದಾ ನೋಡುತ್ತಲೇ ಇರಬೇಕು ಎಂದೆನಿಸುವ ಅಲೌಕಿಕ ಸೌಂದರ್ಯವನ್ನು ಸಂಸ್ಕೃತದಲ್ಲಿ ಆಸೇಚನಕ ಎನ್ನುವ ಶಬ್ಧದಿಂದ ಹೇಳುತ್ತಾರೆ. ಅಂತಹಾ ಆಸೇಚನಕವಾದ ಸೌಂದರ್ಯ ನಮ್ಮಗುರುಗಳದ್ದಾಗಿತ್ತು.

ಇನ್ನು, ಸರ್ವಸತ್ವಮನೋಹರಃ ಎನ್ನುವುದು ಎರಡನೆಯ ಗುಣ. ಇದು ಶ್ರೀ ರಾಮನಿಗೆ ಆರೋಪಿತವಾದ ಗುಣ. ಮನೋಹರತ್ವ ಎನ್ನುವುದು ಶ್ರೀ ರಾಮಾನಂದರ ಗುಣವೂ ಹೌದು. ಎಲ್ಲ ಪ್ರಾಣಿಗಳ ಕಣ್ಣಿಗೂ ಅಷ್ಟೇ ಮನೋಹರವಾಗಿ ಕಾಣುವ ಸಾತ್ವಿಕ ಸೌಂದರ್ಯ ಅಂತ ಅದರ ಅರ್ಥ. ದರ್ಶನ ಮಾತ್ರದಿಂದ ಸಕಲಭೂತಗಳ ಮನಸ್ಸನ್ನು ನಿಮಿಷಾರ್ಧದಲ್ಲಿ ತನ್ನತ್ತ ಸೆಳೆದುಕೊಳ್ಳುವ ಸಂಕರ್ಷಣತ್ವ. ಒಮ್ಮೆ ನಮ್ಮ ಗುರುಗಳ ಸಂದರ್ಶನವಾದರೂ ಸಾಕು, ಅವರ ಆ ಕ್ಷಣಮಾತ್ರದ ಕರುಣಾರ್ದ್ರವಾದ ದೃಷ್ಟಿಪಾತವೆನ್ನುವುದು ಭಕ್ತರನ್ನು ಶಾಶ್ವತವಾಗಿ ತನ್ನಲ್ಲಿ ಹಿಡಿದಿಡಲು ಶಕ್ತವಾಗಿರುತ್ತಿತ್ತು. ಅತ್ಯಂತ ನಾಸ್ತಿಕನಾದರೂ, ನಮ್ಮ ಗುರುಗಳ ಒಂದು ಬಾರಿಯ ದರ್ಶನ ಮಾತ್ರದಿಂದ ಪರಮ ಆಸ್ತಿಕನಾಗುವುದು ಶತ:ಸ್ಸಿದ್ಧವಾಗಿತ್ತು. ಅಂತಹ ಸತ್ವಪೂರ್ಣವಾದ ಮನೋಹರತ್ವ ನಮ್ಮ ಗುರುಗಳದ್ದು.

ಆಬಾಲವೃದ್ಧರಿಗೂ ಸುಲಭವಾಗಿ ಒದಗಿಬರುವ ಸೌಲಭ್ಯ ಪರಿಪೂರ್ಣತ್ವ ಎನ್ನುವುದು ನಮ್ಮ ಗುರುಗಳ ಮತ್ತೊಂದು ಗುಣಾತಿಶಯ. ಈಗ ತಾನೆ ಮಾತು-ಕಾಲು ಬಂದ ಹಸುಳೆಗಳ ಜೊತೆಗೂ ತನ್ಮಯರಾಗಿ ತಾಸುಗಟ್ಟಲೇ ಸಂಭಾಷಿಸುವ ಮುಗ್ಧ ಮನಸ್ಸು ಅವರದ್ದು. ಆದರೆ, ದುರ್ಮತಿಗಳಿಗೆ ಅಷ್ಟೇ ದುರ್ಗಮ್ಯವಾದ ಕಠಿಣ ಅಂತಃಸ್ಸತ್ವ. ಸಜ್ಜನರಲ್ಲಿ ಅತ್ಯಂತ ಸರಳ ಹಾಗೂ ಮೃದುತಮವಾದ ವರ್ತನೆ. ತಾತ್ವಿಕ ವಿಚಾರ ಬಂದಾಗ ಹೊಂದಾಣಿಕೆಗೆ ಅವಕಾಶವಿಲ್ಲದ, ವಜ್ರಕ್ಕೂ ಮಿಗಿಲಾದ ಕಾಠಿಣ್ಯದ ವರ್ತನೆ. ಹೃದಯ ಶುದ್ಧವಿರುವ, ಅಂದರೆ ಮಕ್ಕಳ ಹೃದಯ ಇರುವವರು ಮಾತ್ರ ನಮ್ಮ ಗುರುಗಳ ಕಣ್ಣಲ್ಲಿ ಕಣ್ಣಿಟ್ಟು ಸಂಭಾಷಣೆ ಮಾಡಲು ಸಾಧ್ಯವಿತ್ತು. ಅದಲ್ಲದಿದ್ದರೆ, ಅವರ ಕಟಾಕ್ಷದ ಪ್ರಖರ ತೇಜಸ್ಸಿನ ಮುಂದೆ ನತಮಸ್ತಕನಾಗದೇ ಅನ್ಯ ಮಾರ್ಗವೇ ಇರುತ್ತಿರಲಿಲ್ಲಾ.

ರಾಗಾದಿದೋಷರಹಿತಂ ಸ್ವಜನಾನುರಾಗಂ ಎನ್ನುವ ಮಾತಿನಂತೆ, ಸ್ವಜನಾನುರಾಗ ಎನ್ನುವುದು ನಮ್ಮ ಗುರುಗಳ ಮತ್ತೊಂದು ಗುಣ. ತನ್ನಲ್ಲಿ ಪ್ರಪತ್ತಿಮಾಡಿದ ಶರಣಾಗತನನ್ನು ತನ್ನವನೆಂಬ ವಾಲ್ಲಭ್ಯ ಭಾವದಿಂದ, ಅನುರಾಗದಿಂದ (ರಾಗ ಹಾಗೂ ಅನುರಾಗ ಎಂಬ ಶಬ್ಧಗಳಲ್ಲಿ ಅರ್ಥಭೇದವಿದೆ) ಸರ್ವಥಾ ಕಾಪಿಡುವ ವೃತಿಯಾಗಿದ್ದವರು ನಮ್ಮ ಗುರುಗಳು.

ಸಕೃದೇವಪ್ರಪನ್ನಾಯ ತವಾಸ್ಮೀತೀ ಚ ಯಾಚತೇ, ಅಭಯಂ ಸರ್ವಭೂತೇಭ್ಯೋ ದದಾಮ್ಯೇತತ್ ವೃತಂ ಮಮ ಎನ್ನುವುದು, ರಾಮಾಯಣದ ಯುದ್ಧಕಾಂಡದಲ್ಲಿ ಶ್ರೀ ರಾಮನಾಡಿದ ಮಾತು. ಒಂದಾವರ್ತಿಯಾದರೂ ಸರಿ, ‘‘ನಾನು ನಿನ್ನವನೆಂದುಕೊಂಡು ರಕ್ಷಿಸು’’ ಎಂದು ಶರಣು ಬಂದವನನ್ನು, ಪಶು-ಪಕ್ಷಿ, ಪ್ರಾಣಿ ಮತ್ತು ರಾಕ್ಷಸಾದಿಗಳಿಂದಲಾದರೂ ಅಥವಾ ಹಾಗೆ ಶರಣು ಬಂದವರು ಪಶು, ಪಕ್ಷಿ, ಪ್ರಾಣಿ ಮತ್ತು ರಾಕ್ಷಸಾದಿಗಳಾಗಿದ್ದರೂ ಅವರನ್ನು ರಕ್ಷಿಸುವುದು ನನಗೆ ವೃತವಾಗಿದೆ ಎನ್ನುವುದು ಈ ಮಾತಿನ ಅರ್ಥ.

ಶ್ರೀರಾಮಚಂದ್ರ ವನವಾಸದಲ್ಲಿದ್ದಾಗ ಬರಿಗಾಲಿನಿಂದ ಸಂಚರಿಸುತ್ತಿದ್ದನಲ್ಲಾ! ಸ್ವಾಭಾವಿಕವಾಗಿ ಮುಳ್ಳುಗಳು ಅವನ ಪಾದಕ್ಕೆ ಒತ್ತಿಕೊಳ್ಳುತ್ತಿದ್ದವು, ಅವುಗಳನ್ನು ಲಕ್ಷ್ಮಣ ತೆಗೆಯ ಹೋದರೆ, ‘‘ಬೇಡ, ಆ ಮುಳ್ಳುಗಳನ್ನು ನನ್ನ ಪಾದಗಳಿಂದ ತೆಗೆದು ಎಸೆಯಬೇಡ, ಅವು ಜಡವಾಗಿದ್ದರೂ, ಆಸರೆಯನ್ನು ಬಯಸಿ ನನ್ನ ಚರಣವನ್ನಾಶ್ರಯಿಸಿ ಬಂದಿರುವಂತಹವು, ನನಗೆ ನೋವಾದರೂ ಅವುಗಳನ್ನು ರಕ್ಷಿಸುವುದು ನನ್ನ ವೃತವೇ ಆಗಿದೆ. ಹಾಗಾಗಿ ಅವುಗಳನ್ನು ದೂರೀಕರಿಸಲಾರೆ’’ ಎನ್ನುತ್ತಿದ್ದನಂತೆ ಶ್ರೀ ರಾಮ. ಹೀಗೆ ಜಡ ಚೇತನಗಳೆಂದು ಭೇದ ಮಾಡದೇ, ಶರಣಾಗತಿಯನ್ನು ಮಾತ್ರ ಪುರಸ್ಕರಿಸುತ್ತಿದ್ದ ರಾಮನ ಗುಣದಂತೆ, ಆಶ್ರಿತರನ್ನು ಸದಾ ರಕ್ಷಿಸುವ ಸ್ವಭಾವ ನಮ್ಮ ಗುರುಗಳದ್ದಾಗಿದೆ.

ಹಾಗೆ, ತನ್ನಲ್ಲಿ ಪ್ರಪತ್ತಿ ಮಾಡಿದ ಪಾಮರರ ದುಶ್ಚರಿತಗಳನ್ನು ಕ್ಷಮಿಸಿ, ತಿದ್ದಿ, ಅವರುಗಳನ್ನು ಉನ್ನತ ಮಾರ್ಗದಲ್ಲಿ ತೊಡಗಿಸಿ, ಅಭಯ ನೀಡಿ ಕಾಪಿಡುವ ಧೀರತ್ವ ನಮ್ಮ ಗುರುಗಳದ್ದಾಗಿತ್ತು. ತಮ್ಮ ದಿವ್ಯ ಉಪಸ್ಥಿತಿ ಮಾತ್ರದಿಂದ ಅಲ್ಲಿ ಅತಿಶಯವಾದ ಆನಂದದ ವಾತಾವರಣವನ್ನು ಪಸರಿಸಿಬಿಡುವ ಮಹತ್ತು ಅವರದ್ದು. ತನ್ನ ಸ್ವಜನರಲ್ಲಿ ಸದಾ ಮಾತೃಸಮಾನ ವಾತ್ಸಲ್ಯ ಭಾವವಿರುತ್ತಿತ್ತು ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅದು ಒಂದಲ್ಲಾ ಒಂದು ಸಂದರ್ಭದಲ್ಲಿ ನಮಗೆಲ್ಲಾ ಅನುಭವಕ್ಕೆ ಬಂದ ಸಂಗತಿಯೇ ಆಗಿದೆ. ಪ್ರಾಕೃತ ಲೋಕದಲ್ಲಿ ಅವತರಿಸುವ ಸಂದರ್ಭಗಳಲ್ಲಿ, ತನ್ನ ನಿತ್ಯ ಸೂರಿಗಳನ್ನು ಕ್ಷಣವೂ ಬಿಟ್ಟಿರಲಾರದೇ, ತನ್ನೊಡನೆ ತನ್ನ ನಿತ್ಯ ಸೂರಿಗಳನ್ನೂ ಬೇರೆ ಬೇರೆ ಉಪಾಧಿಯಿಂದ ತನ್ನೊಡನೆ ಧರೆಗಿಳಿಸಿಕೊಂಡು ಬಂದು, ಅವರನ್ನು ತನ್ನ ಲೀಲೆಯಾಟದ ಭಾಗವಾಗಿಸುವ ಭಗವಂತನಂತೆ, ನಮ್ಮೆಲ್ಲರನ್ನು ತಮ್ಮ ಅವತಾರ ಕಾಲದಲ್ಲಿರುವಂತೆ ನೋಡಿ ಕೊಂಡು ಉದ್ಧಾರಮಾಡಿದ ಅನುರಾಗಿಗಳು ನಮ್ಮ ಗುರುಗಳು.

ಶ್ರೀ ರಾಮನ ಗುಣ

ಅಷ್ಟೇ ಅಲ್ಲದೇ, ಅವರ ಸರ್ವಭೂತದಯೆ ಅಥವಾ ಸರ್ವಭೂತಹಿತ ಅವಶ್ಯಕವಾಗಿ ಹೇಳಬೇಕಾದ ಇನ್ನೊಂದು ಗುಣ. ಸರ್ವಭೂತೇಷು ಕೋ ಹಿತಃ? ಅಂತ ಈ ಕಾಲದಲ್ಲಿ ನಮ್ಮನ್ನು ಯಾರಾದರೂ ಕೇಳಿದರೆ, ನಮ್ಮ ಗುರುಗಳದ್ದು ಅಗ್ರ ಪಂಕ್ತಿಯ ಸ್ಥಾನವೆಂದೇ ಹೇಳಬೇಕು. ಇದೂ ಶ್ರೀ ರಾಮನ ಗುಣವೇ ಆಗಿದೆ. ಲೋಕದಲ್ಲಿ ಒಬ್ಬರಿಗೆ ಹಿತವಾಗಿ ನಡೆದುಕೊಳ್ಳುವುದಾದರೆ ಮತ್ತೊಬ್ಬನಲ್ಲಿ ಅಹಿತವಾಗಿ ತೋರುವ ಮನುಜರು ಸುಲಭ-ಸ್ವಾಭಾವಿಕವಾಗಿ ನಮಗೆ ದೊರಕುವುದುಂಟು. ಆದರೆ, ಎಲ್ಲರಲ್ಲೂ ಏಕ ಪ್ರಕಾರವಾದ ಪ್ರೀತಿ ವಾತ್ಸಲ್ಯಗಳನ್ನು ಹೊಂದುವುದು ಎಂದರೆ ಅದು ಪರಿಪೂರ್ಣರಾದವರಿಗೆ ಮಾತ್ರ ಸಾಧ್ಯವಲ್ಲದೇ ಸಾಮಾನ್ಯರಿಗೆ ದುಃಸ್ಸಾಧ್ಯವಾದ ಗುಣ. ಕೇವಲ ಮನುಷ್ಯರಿಗೆ ಮಾತ್ರವಲ್ಲದೇ, ಪ್ರಾಣವುಳ್ಳ ಎಲ್ಲ ಜೀವಿಗಳ ಬಗೆಗೂ ಸದಾ ಸರ್ವದಾ ಹಿತವನ್ನೇ ಬಯಸುವ ಭಗವತ್ಸ್ವಭಾವ ಜನ್ಮಜಾತವಾಗಿ ಬಂದಿತ್ತೋ ಅಥವಾ ನಮ್ಮ ಗುರುಗಳು ಅದನ್ನು ಸಾಧಿಸಿಕೊಂಡಿದ್ದರೋ ಎನ್ನುವುದು ನಮ್ಮಂತವರಿಗೆ ತಿಳಿಯದ ವಿಷಯ.



ಕರುಣಾಶರಧಿ
ಲೇ:ವಿನಾಯಕ ವೆಂ. ಭಟ್
ಪ್ರ: ಶ್ರೀ ಪಾದುಕಾ ಪ್ರಕಾಶನ ಮೈಸೂರು
9916140360
ಬೆಲೆ ರು. 400/-

ಗೀತೆಯಲ್ಲಿ ಹೇಳಿರುವಂತೆ ಸಮೋನಹಂ ಸರ್ವಭೂತೇಷು ನಮೇ ದ್ವೇಷ್ಯೋಸ್ತಿ ನ ಪ್ರಿಯಃ ಎಂದಂತೆ, ಎಲ್ಲರಲ್ಲೂ ಪಕ್ಷಪಾತವಿಲ್ಲದ ಸಮಭಾವ ಹೊಂದಿರುವ, ರಾಗವೂ ಇಲ್ಲದ ದ್ವೇಷವೂ ಇಲ್ಲದ ಸರ್ವಭೂತಗಳಲ್ಲೂ ಅನುರಾಗವನ್ನು ಮಾತ್ರ ಹೊಂದಿರುವ ಭಗವತ್ಸ್ವಭಾವವಂತರಾಗಿದ್ದರು ನಮ್ಮ ಗುರುಗಳು. ತನ್ನ ಭಕ್ತರ ಕುರಿತಾದ ಔದಾರ್ಯ ಗುಣವಂತೂ ಹೃದಯೈಕ ವೇದ್ಯವಾದ ವಿಷಯ. ಶ್ರುತಿಯು ಭಗವಂತನನ್ನು ಕುರಿತು ಆತ್ಮದಾಃ ಎಂದು ವರ್ಣಿಸಿದಂತೆ, ತನ್ನ ಪದಪಂಕಜಗಳಲ್ಲಿ ಶರಣಾದ ಭಕ್ತಜನರಿಗೆ ತನ್ನನ್ನೇ ತಾನು ದಾನಮಾಡಿಕೊಳ್ಳುವ ಸ್ವಭಾವ ನಮ್ಮ ಗುರುಗಳದ್ದು. ಜ್ಞಾನಿಭ್ಯೋಪಿ ಮತೋಧಿಕಃ ಎನ್ನುವ ಭಗವದ್ಗೀತಾ ವಾಕ್ಯದಲ್ಲಿ ಹೇಳಿರುವ ಯೋಗಿತ್ವ ಹಾಗೂ ಮಾನುಷಂ ವಪುರುಥ್ಥಾಯ ಲೋಕಾನಾಂ ಹಿತಕಾಮ್ಯಯಾ ಎಂಬ ರಾಮಾಯಣದ ಮಾತಿನಂತೆ, ಲೀಲಾಮಾನುಷರಾಗಿದ್ದುಕೊಂಡು, ಸರ್ವದಾ ಲೋಕಹಿತವನ್ನೇ ಕಾಮನೆಯಾಗುಳ್ಳವರಾಗಿದ್ದವರು ನಮ್ಮ ಗುರುಗಳು.

ಸಾಯಣಾಚಾರ್ಯರು ಭಗ ಶಬ್ಧಕ್ಕೆ ಭಜನೀಯಂ ಭಜಿಸಲು ಯೋಗ್ಯವಾದ ಎನ್ನುವ ಅರ್ಥವನ್ನೂ ಹೇಳಿದ್ದಾರೆ. ಭಕ್ತಿ ಎನ್ನುವ ಶಬ್ದವೂ ಇದೇ ಧಾತುವಿನಿಂದ ಉತ್ಪನ್ನವಾದದ್ದಾಗಿದೆ. ನಾವು ಯಾವ ಶಕ್ತಿಯನ್ನು ಕುರಿತು ಭಕ್ತಿಮಾಡಿದರೆ ನಮಗೆ ಒಳ್ಳೆಯದಾದೀತೋ, ಆ ವಸ್ತುವೇ ಭಗ; ಯಾವ ಮಹಾಚೈತನ್ಯವನ್ನು ನಾವು ಸೇವಿಸಿದರೆ ನಮಗೆ ಸರ್ವಶ್ರೇಷ್ಠವಾದ ಫಲ ದೊರೆತೀತೋ, ಆ ಚೈತನ್ಯವೇ ಭಗವಾನ್ ಅಥವಾ ಭಗವಂತ ಎಂದು ತಿಳಿಯಬಹುದು.

ಶ್ರೀಮದ್ವಿಷ್ಣು ಪುರಾಣದ ಸಂಭರ್ತೇತಿ ತಥಾಭರ್ತಾ ಭಕಾರೋರ್ಥದ್ವಯಾನ್ವಿತಃ ನೇತಾ ಗಮಯಿತಾ ಸೃಷ್ಟಾ ಗಕಾರಾರ್ಥಃಸ್ತಥಾ ಮುನೇಃ ಎನ್ನುವ ಶ್ಲೋಕವೂ, ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಹೀಗೆ, ಭಗವಚ್ಛಬ್ಧಕ್ಕಿರುವ ಅರ್ಥ ವಿವರಣೆಗಳನ್ನು ನೋಡಿದಾಗ, ಶ್ರೀ ಶ್ರೀಧರಸ್ವಾಮಿಗಳಿಂದ ಪ್ರಾರಂಭವಾಗಿ ನಮ್ಮ ಗುರುಗಳ ವರೆಗೆ, ನಮ್ಮ ಪರಂಪರೆಯ ಎಲ್ಲ ಗುರುಗಳಿಗೆ ಭಗವಾನ್ ಎನ್ನುವ ಶಬ್ಧದಿಂದಲೇ ಪ್ರಾರಂಭಿಸಿ ನಾವುಗಳು ಜಯಕಾರವೆಸಗುತ್ತಿರುವುದು ಅತ್ಯಂತ ವಿಶೇಷವೂ, ಸಮಂಜಸವೂ ಆಗಿದೆ ಎನ್ನುವುದು ಮನನವಾಗುತ್ತದೆ.

ಸಂತಃ ಚಾರಿತ್ರ್ಯ ಭೂಷಣಾಃ ಎನ್ನುವಂತೆ, ಯೋಗಿಕುಲಕ್ಕೇ ಮಾದರಿಯಾದಂತ ಚಾರಿತ್ರ್ಯ ಭೂಷಿತರು ನಮ್ಮ ಗುರುಗಳು. ಎಲ್ಲಕ್ಕೂ ಮಿಗಿಲಾಗಿ, ಪರಮಹಂಸಾಶ್ರಮಿಗೆ ಭೂಷಣವಾದ ಆಡಂಬರವಿಲ್ಲದ ಪರಮ ಸಾರಳ್ಯ ಹಾಗೂ ಅತ್ಯಂತ ಪಾರದರ್ಶಕವಾದ ಅವರ ನಿತ್ಯ ಜೀವನಕ್ರಮ ಕಿರಿಯ ಸಾಧಕರಿಗೆ ಮಾದರಿಯಾಗುವಂಥಾದ್ದು.

ಅವರ ಮಿತವಾದ, ಆದರೆ ಅಷ್ಟೇ ಹಿತವಾದ ಮತ್ತು ಮೃದು ಮಧುರವಾದ ವಾಣಿಯಂತೂ ಎಷ್ಟು ಕೇಳಿದರೂ ಕರ್ಣಾನಂದಕರವೇ ಆಗಿರುತ್ತಿತ್ತು. ನೋಡುವುದಕ್ಕೆ ನಮ್ಮ ಗುರುಗಳ ವಾಣಿ ಶ್ರೀ ಮುಖದಿಂದ ಅಭಿವ್ಯಕ್ತವಾದಂತೆ ಕಂಡರೂ, ಅದು ಹೃದಯದಿಂದುದಿಸಿ ಇನ್ನೊಂದು ಹೃದಯವನ್ನು ಮಾತ್ರ ಮುಟ್ಟುವ ಮಾತಾಗಿರುತ್ತಿತ್ತು. ತುರೀಯಂವಾಚೋ ಮನುಷ್ಯಾಃ ವದಂತಿ ಎನ್ನುವ ವೇದವಾಕ್ಯದಂತೆ, ಸಾಮಾನ್ಯ ಮನುಷ್ಯರಂತೆ ಕೇವಲ ಬಾಯಿಂದಾಡುವ ಮಾತಾಗಿರುತ್ತಿರಲಿಲ್ಲಾ. ಅವರ ವಾಣಿಯನ್ನು ಕೇಳಿಸಿಕೊಂಡವನ ಕಷ್ಟಗಳೆಲ್ಲಾ ಕಳೆದು, ತಾನು ಹೇಳಿಕೊಳ್ಳಬೇಕು ಎಂದುಕೊಂಡು ಬಂದ ಸಮಸ್ಯೆಗಳೆಲ್ಲಾ ಮರೆತು, ದಿವ್ಯ ಅನುಭೂತಿಯನ್ನು ಹೊಂದುವಂತಾದ್ದು. ‘‘ಏನ? ಎಲ್ಲಾ ಆರಾಮನ? ಊಟ / ಆಸ್ರಿಗೆ?’’ ಎನ್ನುವ ಅವರ ಕುಶಲೋಪರಿಯ ಮಾತಷ್ಟೇ ಅವನ ಮನಃಸ್ಸಮಾಧಾನಕ್ಕೆ ಸಾಕಾಗಿಬಿಡುತ್ತಿತ್ತು.

ಶ್ರೀ ರಾಮನ ಗುಣವನ್ನು ಗುರುತಿಸುವಾಗ, ವಾಲ್ಮೀಕಿಗಳು ಅವನನ್ನು ಸ್ಮಿತ ಪೂರ್ವಾಭಿಭಾಷಿ ಎನ್ನುತ್ತಾರೆ. ಅಂದರೆ, ಆತ ಮಾತನಾಡುವಾಗ ಮಂದಸ್ಮಿತನಾಗಿ ನಗು ಮುಖದಿಂದಲೇ ಮಾತನಾಡುತ್ತಿದ್ದನಂತೆ. ಜೊತೆಗೆ ಆತ ಪೂರ್ವಾಭಿಭಾಷಿ ಕೂಡಾ, ನಾಲ್ಕು ಜನವಿರುವಾಗ, ಬೇರೆಯವರು ಮೊದಲು ನನ್ನನ್ನು ಮಾತನಾಡಿಸಲಿ ಎಂದು ಕಾಯದೇ ತಾನೇ ಮಾತಿಗೆ ಮೊದಲ್ಗೊಳ್ಳುತ್ತಿದ್ದನಂತೆ. ಶ್ರೀ ರಾಮನ ಈ ಗುಣವನ್ನು ನಮ್ಮ ಗುರುಗಳಲ್ಲೂ ನಾವು ಕಾಣಬಹುದಾಗಿತ್ತು, ಮಂದಹಾಸದಿಂದಲೇ ಅವರು ಸದಾ ಮಾತನಾಡುತ್ತಿದ್ದರು. ತಾವೇ ಮೊದಲ್ಗೊಂಡು ಮಾತನಾಡದವರನ್ನೂ ಮಾತನಾಡಿಸುತ್ತಿದ್ದರು.

ಹೃದಯಾಂತರಾಳದ ಮಾತುಗಳು

ನಮ್ಮ ಗುರುಗಳ ಮಾತೂ ಹಾಗೆಯೇ, ಅವರ ಯಾವ ಮಾತೂ ಕೇವಲ ಶ್ರೀ ಮುಖದಿಂದ ಬರುತ್ತಿರಲಿಲ್ಲ, ಬದಲಾಗಿ ಹೃದಯಾಂತರಾಳದಿಂದಲೇ ಹೊರಡುತ್ತಿತ್ತು. ಹಾಗಾಗಿ ಅದು ನಮ್ಮ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತಿತ್ತು. ಲಾಲಿತ್ಯ, ಮಾಧುರ್ಯ ಎನ್ನುವುದು ಅವರ ನುಡಿಯಲ್ಲಿ ಮಾತ್ರವಲ್ಲದೇ, ಅಂತರಂಗದಲ್ಲೂ ಇರುತ್ತಿತ್ತು. ಹಾಗಾಗಿಯೇ ಅವರ ಅಂತರಂಗದಿಂದ ಹೊರಡುವ ನುಡಿಗಳು, ನೇರವಾಗಿ ಎದುರಿಗಿರುವವನ ಅಂತರಂಗವನ್ನು ತಟ್ಟುತ್ತಿತ್ತು, ಮಕ್ಕಳ ಮುಗ್ಧ ಮನಸ್ಸನ್ನೂ ಮುಟ್ಟುತ್ತಿತ್ತು.

ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋನುಧಾವತಿಎಂಬುದು ಏಳನೇ ಶತಮಾನದ ಸಂಸ್ಕೃತ ಕವಿ ಭವಭೂತಿಯ ಉತ್ತರರಾಮಚರಿತ ನಾಟಕದ ಪ್ರಸಿದ್ಧ ಶ್ಲೋಕವಾಗಿದೆ. ಇದರ ಅರ್ಥ, ಋಷಿಗಳ, ಸಿದ್ಧ ಅವಧೂತರ ಮಾತನ್ನು ಅರ್ಥವೇ ಧಾವಿಸಿ ಬಂದು ಸೇರಿಕೊಳ್ಳುತ್ತವೆ. ಅಂದರೆ, ಅವರು ನುಡಿದ ಮಾತುಗಳು ಸತ್ಯವಾಗುತ್ತದೆ ಎಂದರ್ಥ. ಇಂಥ ಮಹನೀಯರುಗಳನ್ನು ವಾಕ್ ಸಿದ್ಧಿಯನ್ನು ಪಡೆದವರು ಎನ್ನುತ್ತಾರೆ. ಹೀಗೆ ಯಾಕೆ ಎಂದು ನೋಡುವುದಾದರೆ, ಭಗವಂತ ಭಾಗವತ ಜನರ ಮಾತನ್ನು ಸುಳ್ಳಾಗಲು ಬಿಡುವುದಿಲ್ಲ ಎನ್ನುವುದು ಒಂದು ಉತ್ತರವಾದರೆ, ನಮ್ಮ ಗುರುಗಳಂಥಾ ನಾಮನಿಷ್ಠ ಅವಧೂತರಲ್ಲಿ ಭಗವಂತನೇ ಓತಪ್ರೋತವಾಗಿ ವ್ಯಾಪಿಸಿರುವುದರಿಂದ, ಅವರ ಶ್ರೀ ಮುಖದಿಂದ ನಿವೃತ್ತವಾದ ವಾಣಿಗೂ ಭಗವಂತನ ವಾಣಿಗೂ ಅಬೇಧವಾಗುತ್ತದೆಯಲ್ಲವೆ? ಹಾಗಾಗಿ ನಮ್ಮ ಗುರುಗಳಾಡುವ ಮಾತುಗಳು ಅತ್ಯಂತ ಪ್ರಭಾವಶಾಲಿಯಾಗಿರುತ್ತಿತ್ತು, ಅವರಾಡಿದಂತೆ ಆಗುತ್ತಿತ್ತು, ಅರ್ಥವೆನ್ನುವುದು ಅವರ ಮಾತನ್ನು ಹಿಂಬಾಲಿಸಿ ಬರುತ್ತಿತ್ತು.

ಇನ್ನು, ಅವರ (ಮೇಧಾ) ಜ್ಞಾಪಕ ಶಕ್ತಿಯಂತೂ ಅತ್ಯಂತ ಅಗಾಧವಾಗಿತ್ತು. ಬರುವ ಭಕ್ತ ಜನರನ್ನು ಅವರು ಹೆಸರು ಹೇಳದೇ ಮಾತನಾಡಿಸಿದ್ದೇ ಇಲ್ಲ. ಕನಿಷ್ಟ ಪಕ್ಷ, ‘‘ಏನ! ವಾಜ್ಗದ್ದೆ ಹೆಗ್ಡೆ ಅಲ್ದನಾ’’ ಎಂದು ಅವನ ಊರಿನ ಹೆಸರು ಹೇಳುವ ಮುಖಾಂತರ ವಾಗಿಯಾದರೂ ಸಂಬೋಧಿಸುತ್ತಿದ್ದರು. ಅವರ 97ನೇ ವಯಸ್ಸಿನಲ್ಲೂ ಬಾಲ್ಯದ ಘಟನೆಗಳೆಲ್ಲಾ ಅತ್ಯಂತ ಹಸಿರಾಗಿ ಅವರ ಚಿತ್ತ ವೃತ್ತಿಯಲ್ಲಿತ್ತು.

ಏಕ ಪ್ರಿಯದರ್ಶನತ್ವ, ಸರ್ವ ಸತ್ವ ಮನೋಹರತ್ವ, ಸಮತ್ವ, ಸರಳತೆ, ಸೌಲಭ್ಯ ಪರಿಪೂರ್ಣತೆ, ಚಾರಿತ್ರ್ಯ ಭೂಷಣತೆ, ಆಸೇಚನಕವಾದ ಅಲೌಕಿಕ ಸೌಂದರ್ಯ, ಕರುಣಾಕರತ್ವ, ಹೃದಯಾಂತರಾಳದಿಂದ ಹೊರಡುವ ಪ್ರಿಯವಾಕ್ಯಗಳು, ಶರಣಾಗತ ರಕ್ಷಣ ದಾಕ್ಷಿಣ್ಯತ್ವ, ಸರ್ವ ಭೂತ ದಯೆ, ಭಗವತ್ಸತ್ವ, ಸ್ವಜನಾನುರಾಗ ಹಾಗೂ ಅವರ ಅಗಾಧ ಮೇಧಾ ಶಕ್ತಿ ಹೀಗೆ ನಮ್ಮ ಗುರುಗಳ ಕೆಲವು ಗುಣವಿಶೇಷಗಳನ್ನು ಈ ಅಧ್ಯಾಯದಲ್ಲಿ ನಾವು ಅನುಸಂಧಾನ ಮಾಡಿದ ಹಾಗಾಯಿತು. ಹೇಳುತ್ತಾ ಹೋದರೆ ನಮ್ಮ ಗುರುಗಳ ಗುಣ ವರ್ಣನವನ್ನು ಬಹುವಾಗಿ ಕೊಂಡಾಡಬಹುದು, ಆದರೆ ನನ್ನ ಮಿತಿಯೊಳಗೆ ಸಾಧ್ಯವಾದದ್ದನ್ನು ತೋರಿಸುವ ಪ್ರಯತ್ನ ಮಾಡಿದ್ದೇನೆ.

ನಿಜಾರ್ಥದ ಭಗವಾನ್ ಆಗಿದ್ದರು!

ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಃ ಶ್ರಿಯಃ ವೈರಾಗ್ಯಸ್ಯಾಥ ಮೋಕ್ಷಶ್ಚ ಷಣ್ಣಾಂ ಭಗ ಇತೀಂ ಗನಾಂ ಎನ್ನುವ ಶ್ರೀಮದ್ವಿಷ್ಣು ಪುರಾಣದ ವಾಕ್ಯದಂತೆ, ಸಂಪತ್ತು, ಸಮಗ್ರವಾದ ಧರ್ಮ, ಯಶಸ್ಸು, ಶ್ರೀ, ವೈರಾಗ್ಯ ಮತ್ತು ಮೋಕ್ಷ ಈ ಆರನ್ನೂ ಸೇರಿದ ಭಗ ವನ್ನು ಹೊಂದಿದವರಾಗಿದ್ದ ಕಾರಣಕ್ಕೆ, ನಮ್ಮ ಗುರುಗಳು ನಿಜಾರ್ಥದಲ್ಲಿ ಭಗವಾನ್ ಆಗಿದ್ದವರು.

ಭಗವಂತ ಎಂದರೆ ಅರ್ಥವೇನು?

ಭಗವತ್ ಅಥವಾ ಭಗವಂತ ಎನ್ನುವ ಶಬ್ದವನ್ನು ದಿನನಿತ್ಯ ನಾವು ಬಳಸುತ್ತೇವೆ. ಗೀತೆಯಲ್ಲೂ ಈ ಶಬ್ದ ಬಹಳ ಸಾರಿ ಬಳಕೆಯಾಗಿದೆ, ಹಾಗಾದರೆ ಅದರ ಅರ್ಥವೇನು ಎನ್ನುವುದನ್ನು ಇಲ್ಲಿ ಸ್ವಲ್ಪ ಅರಿಯೋಣ. ಭಗವಚ್ಛಬ್ಧಕ್ಕೆ ಸಾಯಣಾಚಾರ್ಯರ ರುದ್ರ ಭಾಷ್ಯದಲ್ಲಿ ಉದಾಹೃತವಾದ ಅರ್ಥವಿವರಣೆಯನ್ನು ನೋಡುವುದಾದರೆ, ಉತ್ಪತ್ತಿಂಚ ವಿನಾಶಂಚ ಭೂತಾನಾಮಾಗತಿಂ ಗತಿಮ್, ವೇತ್ತಿ ವಿದ್ಯಾಮವಿದ್ಯಾಂಚ ಸ ವಾಚ್ಯೋ ಭಗವಾನಿತಿ. ಜೀವಜಂತುಗಳ ಹುಟ್ಟು ಸಾವುಗಳನ್ನೂ, ಬಾಳಿನ ಏಳು ಬೀಳುಗಳನ್ನೂ ಮತ್ತು ಅವರ ಜ್ಞಾನಾಜ್ಞಾನದ ಸ್ವರೂಪಗಳನ್ನೂ ಯಾವಾತನು ಬಲ್ಲನೋ, ಅವನಿಗೆ ಭಗವಾನ್ ಎನ್ನುವ ಶಬ್ದ ಸಲ್ಲುತ್ತದೆ ಎನ್ನುವುದು ಈ ಮಾತಿನ ತಾತ್ಪರ್ಯ.

ಪುಸ್ತಕ ವಿಮಾನ

ಮೇ 1, 2 ಮತ್ತು 3 ರಂದು ಅಮೆರಿಕದ ಟೆಕ್ಸಾಸ್‌ನಲ್ಲಿ 'ವಸಂತ ಸಾಹಿತ್ಯೋತ್ಸವ' ನಡೆಯುತ್ತಿದ್ದು, ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಿದ್ದಾರೆ. ಯು.ಎಸ್.ನ ಕನ್ನಡ ಸಾಹಿತ್ಯ ರಂಗ ನಡೆಸುತ್ತಿರುವ ಈ ಸಾಹಿತ್ಯೋತ್ಸವದ ಸಂದರ್ಭದಲ್ಲಿ, ಸಾಹಿತ್ಯ ಮತ್ತು ಚಲನಚಿತ್ರಗಳ ನಡುವಿನ ಸಂಬಂಧವನ್ನು ಬಿಂಬಿಸುವ 36 ಬರಹಗಳ ಸಂಗ್ರಹ 'ಬರಹ ಬಿಂಬ' ಬಿಡುಗಡೆಯಾಗಿದೆ. ಆ ಪುಸ್ತಕದ ಒಂದು ಬರಹದ ಆಯ್ದ ಭಾಗ ಇಲ್ಲಿದೆ.

ಚಲನಚಿತ್ರ ಮತ್ತು ಸಾಹಿತ್ಯದ ಸಂಬಂಧ

» ಉಮಾ ವೆಂಕಟೇಶ್

ಅನೇಕ ಸಂದರ್ಭಗಳಲ್ಲಿ, ಚಲನಚಿತ್ರಗಳ ರೂಪಾಂತರಗಳಲ್ಲಿ, ಮೂಲಕಥೆ ಮತ್ತು ಪಾತ್ರಗಳ ಅಳವಡಿಕೆಯಲ್ಲಿ ವ್ಯತ್ಯಾಸವಾಗಿ, ಪುಸ್ತಕದ ಲೇಖಕರು ಸಿಟ್ಟಿಗೆದ್ದು ತೋರುವ ಪ್ರತಿಕ್ರಿಯೆಗಳು ಪ್ರೇಕ್ಷಕರನ್ನು ಪುಸ್ತಕಗಳತ್ತ ಸೆಳೆದ ಅನೇಕ ನಿದರ್ಶನಗಳಿವೆ. ದೇವಾನಂದ್ ಮತ್ತು ವಹೀದಾ ರೆಹಮಾನ್ ನಟಿಸಿದ್ದ 1965ರ ಜನಪ್ರಿಯ 'ಗೈಡ್' ಹಿಂದಿ ಚಿತ್ರವು, ಪ್ರಸಿದ್ಧ ಲೇಖಕ ಆರ್. ಕೆ. ನಾರಾಯಣ್ ಅವರ 'ದಿ ಗೈಡ್' ಪುಸ್ತಕವನ್ನಾಧರಿಸಿದೆ. ಪ್ರೇಕ್ಷಕರಿಗೆ ಪ್ರಿಯವಾದರೂ, ಈ ಚಲನಚಿತ್ರದ ರೂಪಾಂತರವನ್ನು ಪುಸ್ತಕದ ಲೇಖಕರು ಒಪ್ಪಿರಲಿಲ್ಲ. ಚಲನಚಿತ್ರವನ್ನು ನೋಡಿದ ಬಳಿಕ, ಆರ್. ಕೆ. ನಾರಾಯಣ್, 'ದ ಮಿಸ್‌ಗೈಡೆಡ್ ಗೈಡ್' ಎನ್ನುವ ಲೇಖನ ಬರೆದು ತಮ್ಮ ಹತಾಶೆಯನ್ನು ವ್ಯಕ್ತಪಡಿಸಿದ್ದರು. ಕಾಲೇಜಿನಲ್ಲಿ ನನಗೆ ಪಠ್ಯಪುಸ್ತಕವಾಗಿದ್ದ ಇದರ ಕಥೆಯನ್ನು ಸಂಪೂರ್ಣವಾಗಿ ಓದಿ, ಅದರ ಬಗ್ಗೆ ನಮ್ಮ ಉಪನ್ಯಾಸಕರ ವಿವರಣೆ, ಉತ್ತಮವಾದ ವಿಶ್ಲೇಷಣೆಯನ್ನು ಕೇಳಿದ್ದ ನನಗೆ, ಈ ಚಿತ್ರವನ್ನು ನೋಡಿದಾಗ ಲೇಖಕರಂತೆಯೇ ನಿರಾಶೆಯಾಗಿತ್ತು. ಕಾದಂಬರಿಯ ಮುಖ್ಯ ವಿಷಯದಿಂದ ದೂರವಾಗಿ, ಭಾವಾವೇಶ, ವ್ಯಾಪಾರೀಕರಣದ ಅಂಶಗಳಿಗೆ ಪ್ರಾಮುಖ್ಯತೆ ನೀಡಿ, ಮೂಲಕಥೆಯ ಅಂತ್ಯವನ್ನೇ ಬದಲಾಯಿಸಿ, ಕಥೆಯ ಮುಖ್ಯ ಪಾತ್ರ ರಾಜುವನ್ನು ವೈಭವೀಕರಿಸಿ ಅಂತ್ಯವನ್ನು ಅಸ್ಪಷ್ಟಗೊಳಿಸಿದ್ದಾರೆ ಎನ್ನಿಸಿತು. ಈ ಪುಸ್ತಕವನ್ನು ಓದಿದ್ದವರು ಆಸಕ್ತಿಯಿಂದ ಚಲನಚಿತ್ರದ ಕಡೆಗೆ ಆಕರ್ಷಿತರಾಗಿದ್ದರೆ, ಕೇವಲ ಸಿನೆಮಾ ನೋಡಿದ್ದ ಪ್ರೇಕ್ಷಕರು, ಲೇಖಕರ ಸಿಟ್ಟಿನ ಪ್ರತಿಕ್ರಿಯೆ ನೋಡಿ, ಪುಸ್ತಕವನ್ನು ಓದಲು ಮುಂದಾಗಿದ್ದರು.

ನಾಗರಹಾವಿನ ರಾಮಾಚಾರಿ: ಇಂತಹುದೇ ಇನ್ನೊಂದು ಉದಾಹರಣೆ ಕನ್ನಡ ಚಲನಚಿತ್ರ, 'ನಾಗರಹಾವು', 1972ರಲ್ಲಿ ಬಿಡುಗಡೆಯಾಗಿದ್ದ ಈ ಚಲನಚಿತ್ರ, ಪ್ರಸಿದ್ಧ ಕನ್ನಡ ಲೇಖಕ ತರಾಸು ಅವರ 'ನಾಗರಹಾವು, ಒಂದು ಗಂಡು ಎರಡು ಹೆಣ್ಣು, ಸರ್ಪ ಮತ್ಸರ' ಎನ್ನುವ ಮೂರು ಭಾಗಗಳ ಕಾದಂಬರಿಯನ್ನಾಧರಿಸಿತ್ತು. ಕನ್ನಡ ಪ್ರೇಕ್ಷಕವರ್ಗಕ್ಕೆ ಮೆಚ್ಚುಗೆಯಾಗಿದ್ದ ಪುಟ್ಟಣ್ಣ ಕಣಗಾಲ್ ನಿರ್ದೇಶಿತ ಚಿತ್ರವನ್ನು ಲೇಖಕ ತರಾಸು ನೋಡಿ, 'ಇದು ನನ್ನ ನಾಗರಹಾವಲ್ಲ, ಕೇರೆಹಾವು' ಎಂದು ಸಿಟ್ಟಿಗೆದ್ದಿದ್ದರು. ವಿಮರ್ಶಕ ಮತ್ತು ಲೇಖಕರ ಪ್ರತಿಕ್ರಿಯೆಯನ್ನು ಸುದ್ದಿಪತ್ರಿಕೆಯಲ್ಲಿ ಓದಿದ್ದ ಜನ ಈ ಪುಸ್ತಕವನ್ನು ಓದಲು ಮುಂದಾಗಿದ್ದರು. ಲೈಬ್ರರಿಗಳಲ್ಲಿ ಈ ಪುಸ್ತಕ ಎರವಲು ಪಡೆಯಲು ಹೋದಾಗ ತಿಂಗಳುಗಟ್ಟಲೆ ಕಾದಿದ್ದ ನೆನಪಿದೆ. ಕಡೆಗೊಮ್ಮೆ ಪುಸ್ತಕ ನಮ್ಮ ಕೈಗೆ ಸಿಕ್ಕಿ ಅದನ್ನು ಓದಿದಾಗ, 1940-50ರ ದಶಕದಲ್ಲಿ ಬರೆದಿದ್ದ ಈ ಪುಸ್ತಕದ ನಾಯಕ ರಾಮಾಚಾರಿಯ ಪಾತ್ರವನ್ನು ಪುಸ್ತಕದಲ್ಲಿರುವಂತೆಯೇ ಚಿತ್ರೀಕರಿಸಿದ್ದರೆ 1972ರ ಪ್ರೇಕ್ಷಕವರ್ಗ ಒಪ್ಪುವ ಸಾಧ್ಯತೆ ಕಡಿಮೆ ಇತ್ತು ಎಂದು ನನಗನ್ನಿಸಿತ್ತು.

ಪ್ರಸಿದ್ಧ ಬಂಗಾಳಿ ಲೇಖಕ ಶರಶ್ಚಂದ್ರ ಚಟ್ಟೋಪಾಧ್ಯಾಯ ವಿರಚಿತ 1914ರ 'ಪರಿಣೀತಾ' ಪುಸ್ತಕವನ್ನು ಎರಡು ಬಾರಿ ಹಿಂದಿ ಚಲನಚಿತ್ರಗಳಿಗೆ ರೂಪಾಂತರಿಸಲಾಗಿದೆ. ಮೊದಲ ಬಾರಿಗೆ 1952ರಲ್ಲಿ ಬಿಡುಗಡೆಯಾಗಿದ್ದ ರೂಪಾಂತರವು, ಮೂಲ ಕಥೆಗೆ ಹೆಚ್ಚಿನ ನ್ಯಾಯ ದೊರಕಿಸಿತ್ತು ಎನ್ನುವುದು ವಿಮರ್ಶಕರ ಅಭಿಪ್ರಾಯವಾಗಿತ್ತು. ಮತ್ತೊಮ್ಮೆ 2005ರಲ್ಲಿ ಬಿಡುಗಡೆಯಾದ ಅದೇ ಕಥೆಯ ರೂಪಾಂತರವನ್ನು, ನಿರ್ದೇಶಕ ವಿಧು ವಿನೋದ್ ಚೋಪ್ರಾ, 1960ರ ಸಾಮಾಜಿಕ ಪರಿಸರಕ್ಕೆ ಅಳವಡಿಸಿ ನಿರ್ಮಿಸಿದ್ದರು. ಆಧುನಿಕ ಪ್ರೇಕ್ಷಕರಿಗಾಗಿ ಕಥೆಯನ್ನು ನವೀಕರಿಸಿ, ಹೊಸ ಪಾತ್ರಗಳನ್ನು ಸೇರಿಸಿ, ಕಥಾ-ವಸ್ತುವಿನ ಅಂಶಗಳನ್ನು ಮಾರ್ಪಡಿಸಿರುವುದನ್ನು ಒಪ್ಪಿಕೊಂಡಿರುವ ನಿರ್ದೇಶಕರ ಮಾತನ್ನು ಕಟ್ಟಾ ಸಾಹಿತ್ಯಪ್ರಿಯರು ಅಷ್ಟೇನೂ ಗೌರವಿಸಿರಲಿಲ್ಲ. ಆದರೆ, ಭಾರತದ ಆಧುನಿಕ ಪೀಳಿಗೆ ಈ ಚಿತ್ರ ಬಿಡುಗಡೆಯಾದ ನಂತರ, ಮೂಲ ಕಥೆಯ ಬಗ್ಗೆ ಹೆಚ್ಚು ತಿಳಿಯುವ ಪ್ರಯತ್ನವನ್ನಂತೂ ಮಾಡಿದ್ದರು. ಪೆಂಗ್ವಿನ್ ಇಂಡಿಯಾ ಪ್ರಕಾಶಕರು, ಚಿತ್ರ ಬಿಡುಗಡೆಯಾದ ನಂತರ, ಸುಮಾರು 10,000ಕ್ಕೂ ಹೆಚ್ಚಿನ ಸಂಖ್ಯೆಯ ಪುಸ್ತಕಗಳನ್ನು ಮಾರಾಟ ಮಾಡಿದ್ದರಂತೆ. ಪುಸ್ತಕದ ಜನಪ್ರಿಯತೆಯನ್ನು ಹೆಚ್ಚಿಸಲು, ಚಲನಚಿತ್ರದಲ್ಲಿದ್ದ ನಟ-ನಟಿಯರ ಚಿತ್ರಗಳನ್ನು ಪುಸ್ತಕದ ಮುಖಪುಟದ ಮೇಲೆ ಮುದ್ರಿಸಿದ್ದರೆಂದು ಸುದ್ದಿಯಾಗಿತ್ತು. ಈ ಸಂದರ್ಭದಲ್ಲಿ, ಸಂಪ್ರದಾಯಸ್ಥ ಸಾಹಿತ್ಯಪ್ರಿಯರಿಗೆ, ನೂತನ ರೂಪಾಂತರ ಹಿಡಿಸದಿದ್ದರೂ, ಹೊಸ ಪೀಳಿಗೆಯವರಲ್ಲಿ, ಈ ಪುಸ್ತಕ ಓದುವ ಆಸಕ್ತಿ ಕೆರಳಿದ್ದು ಗಮನಾರ್ಹವಾದ ಅಂಶ.

ಬಂಗಾರದ ಮನುಷ್ಯ: ಕನ್ನಡ ಮತ್ತೊಂದು ದಂತಕಥೆಯೆನಿಸಿದ ಚಲನಚಿತ್ರ 'ಬಂಗಾರದ ಮನುಷ್ಯ' ಕನ್ನಡಪ್ರಭ ಪತ್ರಿಕೆಯಲ್ಲಿ ದೈನಿಕ ಧಾರಾವಾಹಿಯಾಗಿ ಬರುತ್ತಿದ್ದಾಗಲೇ ಓದುಗರ ಮನಸೆಳೆದಿದ್ದ ಕಥೆ. ದಿ. ಟಿ. ಕೆ. ರಾಮರಾವ್ ಅವರ ಏಕೈಕ ಸಾಮಾಜಿಕ ಕಾದಂಬರಿ ಚಲನಚಿತ್ರವಾಗಿ ರೂಪಾಂತರವಾಗಿ, 1972ರಲ್ಲಿ ಬಿಡುಗಡೆಯಾದಾಗ, ಅದು ಕಂಡ ಅಭೂತಪೂರ್ವ ಯಶಸ್ಸು ಮತ್ತೊಮ್ಮೆ ಪ್ರೇಕ್ಷಕರನ್ನು ಮೂಲ ಕಥೆ ಓದಲು ಉತ್ತೇಜಿಸಿತ್ತು. ನಾವಿನ್ನೂ ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ಬಿಡುಗಡೆಯಾಗಿದ್ದ ಚಿತ್ರವನ್ನು ನೋಡಿದ್ದ ನಮಗೆ ಮುಂದೆ ಹೈಸ್ಕೂಲ್ ತಲುಪಿದಾಗ ಈ ಪುಸ್ತಕವನ್ನೋದುವ ಅವಕಾಶ ಸಿಕ್ಕಿತ್ತು. ಮೂಲ ಕಥೆಗೆ ಅಷ್ಟೇನೂ ಅನ್ಯಾಯವಾಗದ ಹಾಗೆ ರೂಪಾಂತರಗೊಂಡ ಈ ಚಲನಚಿತ್ರದ ಅಪೂರ್ವ ಯಶಸ್ಸಿನಲ್ಲಿ ಮಿಂದ ಕನ್ನಡ ಚಲನಚಿತ್ರರಂಗ ಒಂದು ಇತಿಹಾಸವನ್ನೇ ನಿರ್ಮಿಸಿತಲ್ಲದೇ, ರಾಜೀವನ ಪಾತ್ರದಲ್ಲಿ ನಟಿಸಿದ್ದ ಡಾ. ರಾಜಕುಮಾರ್ ಅವರ ನಟನೆಗೆ ಮಾರುಹೋದ ಕನ್ನಡದ ಅನೇಕ ವಿದ್ಯಾವಂತ ಯುವಕರು, ಹಳ್ಳಿಗಳಿಗೆ ಹಿಂತಿರುಗಿ ವ್ಯವಸಾಯ ಮಾಡುವ ನಿರ್ಧಾರ ಕೈಗೊಂಡ ಸಂಗತಿ ಒಂದು ಸಾಮಾಜಿಕ ಕ್ರಾಂತಿಯೆನ್ನಬಹುದು. ಈ ಚಲನಚಿತ್ರ ಕರ್ನಾಟಕದ ಸಮಾಜದ ಮೇಲೆ ಗಹನವಾದ ಪ್ರಭಾವ ಬೀರಿ, ನಮ್ಮ ಗ್ರಾಮಗಳ ಅಭಿವೃದ್ಧಿಗೆ ಸಹಾಯಕವಾಗಿತ್ತೆನ್ನುವುದು ನಿಜವಾಗಿಯೂ ಪ್ರಶಂಸನೀಯವಾದ ಸಂಗತಿ. ಈ ಕಾದಂಬರಿ ಮತ್ತು ಅದರ ಪರಿಣಾಮಕಾರಿ ಚಲನಚಿತ್ರ ರೂಪಾಂತರವೆರಡೂ ಕನ್ನಡಿಗರ ಮನೆಮನಗಳಲ್ಲಿ ಒಂದು ಶಾಶ್ವತವಾದ ಸ್ಥಾನವನ್ನು ಗಳಿಸಿದೆ.

ಹೀಗೆ ಚಲನಚಿತ್ರ ರೂಪಾಂತರಗಳು ಮೂಲ ಕಾದಂಬರಿಗಳ ಜನಪ್ರಿಯತೆ ಮತ್ತು ಮಾರಾಟವನ್ನು ಹೆಚ್ಚಿಸುತ್ತದೆ ಎನ್ನುವ ಅಂಶವನ್ನು ಅನೇಕ ಅಧ್ಯಯನಗಳು ಎತ್ತಿ ಹಿಡಿದಿವೆ. ಅದೇ ರೀತಿ, ಸಾಹಿತ್ಯಾಸಕ್ತರು ಚಲನಚಿತ್ರಗಳ ರೂಪಾಂತರಗಳನ್ನು ನೋಡಲು ಆಸಕ್ತಿ ತೋರುವುದೂ ಸಹಜ. ಈ ರೀತಿಯಲ್ಲಿ ಇಬ್ಬರನ್ನೂ ಸಮಾನವಾಗಿ ಆಕರ್ಷಿಸಿ, ಇಬ್ಬರ ಮನಗಳಲ್ಲೂ ತಲತಲಾಂತರದಿಂದ ಶಾಶ್ವತ ಸ್ಥಾನ ಗಳಿಸಿರುವ 'ದ ಪ್ರೈಡ್ ಅಂಡ್ ಪ್ರಜ್ಯುಡಿಸ್' ಪುಸ್ತಕದ ಲೇಖಕಿ ಜೇನ್ ಆಸ್ಟಿನ್ ಈ ಪುಸ್ತಕವನ್ನು ತನ್ನ 20ರ ಹರೆಯದಲ್ಲಿ ಬರೆದಿದ್ದಳು. 1813ರಲ್ಲಿ ಪ್ರಕಟವಾದ ಈ ಪುಸ್ತಕ, ಇಂಗ್ಲಿಷ್ ಸಾಹಿತ್ಯದ ಅತ್ಯಂತ ಜನಪ್ರಿಯ ಕಾದಂಬರಿಗಳಲ್ಲಿ ಅಗ್ರಸ್ಥಾನ ಪಡೆದಿದೆ. ಇಲ್ಲಿಯವರೆಗೆ ಸುಮಾರು 20 ಮಿಲಿಯನ್ ಪ್ರತಿಗಳು ಮಾರಾಟವಾಗಿದ್ದು, ಆಧುನಿಕ ಸಾಹಿತ್ಯದಲ್ಲಿ ಅನೇಕ ಉತ್ಪನ್ನಗಳು, ನಾಟಕೀಯ ಮತ್ತು ಚಲನಚಿತ್ರ ರೂಪಾಂತರಗಳು, ಅನಧಿಕೃತ ಉತ್ತರಭಾಗಗಳು, ಟಿವಿ ಆವೃತ್ತಿಗಳಿಗೆ ಒಂದು ಶತಮಾನಕ್ಕೂ ಹೆಚ್ಚು ಕಾಲ ಸ್ಫೂರ್ತಿ ನೀಡಿರುವ ಈ ಕಾದಂಬರಿಯ ಪಾತ್ರಗಳನ್ನು ಪರದೆಯ ಮೇಲೆ ತಮ್ಮ ಅಭಿನಯದಿಂದ ಪ್ರೇಕ್ಷಕರ ಮನಸೂರೆಗೊಂಡಿರುವ ಅನೇಕ ಪೀಳಿಗೆಯ ನಟವರ್ಗ, ಈ ಕಥೆಯನ್ನು ಜನಮನಸ್ಸಿನಲ್ಲಿ ಸ್ಮರಣೀಯವಾಗುವಂತೆ ಮಾಡಿವೆ. ಈ ಪುಸ್ತಕದ ರೂಪಾಂತರಗಳು ಇಂದಿಗೂ ನಮ್ಮ ಆಧುನಿಕ ತಂತ್ರಜ್ಞಾನ ಕೇಂದ್ರಿತ ಯುವ ಪೀಳಿಗೆಯವರನ್ನು ಆಕರ್ಷಿಸುತ್ತಿದೆಯೆಂದರೆ, ಆ ಕಥೆಯ ಪ್ರಭಾವದ ಅರಿವಾಗುತ್ತದೆ. 2013ರಲ್ಲಿ ಈ ಪುಸ್ತಕದ 200ನೆಯ ವಾರ್ಷಿಕೋತ್ಸವವನ್ನು ಪ್ರಪಂಚದಾದ್ಯಂತ ಆಚರಿಸಲಾಯಿತು. 2012ರಲ್ಲಿ, ಬಿಬಿಸಿ ನಡೆಸಿದ ಸಮೀಕ್ಷೆಯೊಂದರ ಪ್ರಕಾರ, ಇದು ಶ್ರೇಷ್ಠ ಪುಸ್ತಕಗಳಲ್ಲಿ ಎರಡನೆಯ ಸ್ಥಾನದಲ್ಲಿರುವ ಪುಸ್ತಕವೆಂದು ತಿಳಿದುಬಂದಿದೆ.

ಪ್ರೈಡ್ ಅಂಡ್ ಪ್ರಿಜುಡೀಸ್: ಜನಪ್ರಿಯ ಪುಸ್ತಕಗಳನ್ನು ಚಲನಚಿತ್ರಗಳಾಗಿ ರೂಪಾಂತರಗೊಳಿಸುವುದು ಒಂದು ದೊಡ್ಡ ಸವಾಲೆನ್ನಬಹುದು. ಚಿತ್ರದ ನಿರ್ದೇಶಕನಿಗೆ, ಪುಸ್ತಕದ ಮೂಲ ಕಥೆಯ ಸಾರ, ಅದರ ಪಾತ್ರಗಳಿಗೆ ತೋರುವ ನಿಷ್ಠೆ, ರೂಪಾಂತರದಲ್ಲಿ ಮಾಡಬೇಕಾಗುವ ಬದಲಾವಣೆಗಳು, ಚಿತ್ರಕಥೆಯ ತಯಾರಿಕೆ. ಛಾಯಾಗ್ರಹಣ, ಉತ್ತಮ ತಾರಾಗಣ, ನಟನೆಯ ಪರಿಣತಿ ಇವೆಲ್ಲದರ ಮೂಲಕ ಕಥೆಯನ್ನು ಜೀವಂತಗೊಳಿಸಬಹುದಾದ ಉತ್ತಮ ಅವಕಾಶಗಳಿರುತ್ತದೆ. ಪುಸ್ತಕವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲು ಚಿತ್ರದ ನಿರ್ಮಾಪಕರು ಮೂಲ ವಿಷಯವನ್ನು ಬೇರೆ ಮಾಧ್ಯಮಕ್ಕೆ ಭಾಷಾಂತರಿಸಬೇಕಾಗುತ್ತದೆ. ದೃಶ್ಯಕಥೆ ಹೇಳುವಿಕೆಗೆ ಮಾಡಬೇಕಾದ ಸೂಕ್ತವಾದ ಬದಲಾವಣೆಗಳು ಪುಸ್ತಕದಿಂದ ವಿಮುಖವಾಗಿದ್ದರೂ ಸಹ, ಇದು ವಿಮರ್ಶಕ ಮತ್ತು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಬಹುದು. ಪುಸ್ತಕವನ್ನು ಓದದ ವಿಶಾಲವಾದ ಪ್ರೇಕ್ಷಕವರ್ಗವನ್ನು ಪುಸ್ತಕ ಓದುವಂತೆ ಪ್ರೇರೇಪಿಸುವ ಸುವರ್ಣಾವಕಾಶ ವಿರುತ್ತದೆ. ಇವೆಲ್ಲಾ ಸಕಾರಾತ್ಮಕ ಪ್ರಭಾವಗಳು.

ಆದರೆ, ಮೂಲ ಕಥಾವಸ್ತುವಿಗೆ ಹೆಚ್ಚು ವಿಮುಖವಾಗಿ ಸಾಹಿತ್ಯಾಭಿಮಾನಿಗಳ ನಿರೀಕ್ಷೆಗಳನ್ನು ಪೂರೈಸುವಲ್ಲಿ ವಿಫಲವಾದ ಅನೇಕ ಚಲನಚಿತ್ರ ರೂಪಾಂತರಗಳು ಗಮನಾರ್ಹವಾದ ಪ್ರತಿಕ್ರಿಯೆಯನ್ನು ಎದುರಿಸಿರುವ ಉದಾಹರಣೆಗಳು ಬಹಳಷ್ಟಿವೆ. ಪ್ರಸಿದ್ಧ ಅಮೆರಿಕನ್ ಲೇಖಕ ಫ್ರಾನ್ಸಿಸ್ ಫಿಟ್ಸ್ ಜೆರಾಲ್ಡರ 'ದ ಗ್ರೇಟ್ ಗ್ಯಾಸ್ಬಿ' ಡಾನ್ ಬ್ರೌನನ 'ದ ಡ ವಿನ್ಸಿ ಕೋಡ್' ನಟಾನಿಯಲ್ ಹಾಥಾರ್ನನ 'ದ ಸ್ಕಾರ್ಲೆಟ್ ಲೆಟರ್' ಪುಸ್ತಕಗಳ ಚಲನಚಿತ್ರ ರೂಪಾಂತರಗಳು ಓದುಗರನ್ನು ನಿರಾಶೆಗೊಳಿಸಿದ್ದಲ್ಲದೇ, ಲೇಖಕರಿಂದಲೂ ಟೀಕೆಗಳನ್ನೆದುರಿಸಿದ್ದವು.

ನೂರಾರು ಪುಟಗಳನ್ನು, 2-3 ಗಂಟೆಗಳ-ಚಿತ್ರಕಥೆಯಾಗಿ ಸಂಕ್ಷೇಪಿಸಿ, ಅದನ್ನು ದೃಶ್ಯ ಮಾಧ್ಯಮಕ್ಕೆ ಅಳವಡಿಸುವಾಗ, ಸಾಹಿತ್ಯ ಮತ್ತು ಸಿನೆಮಾಗಳ ನಡುವೆ ಅನೇಕ ಅಂತರ್ಗತ ವ್ಯತ್ಯಾಸಗಳು ಸೃಷ್ಟಿಯಾಗುತ್ತವೆ. ಇದಕ್ಕೆ ವಿರುದ್ಧವಾಗಿ ನಿರ್ಮಾಪಕರು ಮೂಲಕಥೆಗೆ ತುಂಬಾ ಹತ್ತಿರವಾಗಿ ಚಿತ್ರ ತಯಾರಿಸಿದಲ್ಲಿ ಆ ಚಿತ್ರವು ಹಲವೊಮ್ಮೆ ಮಂದ ಮತ್ತು ಅತೃಪ್ತಿಕರ ಚಲನಚಿತ್ರ ರೂಪಾಂತರಕ್ಕೆ ಕಾರಣವಾಗಿರುವ ಅನೇಕ ನಿದರ್ಶನಗಳಿವೆ. ಕನ್ನಡ ಚಲನಚಿತ್ರ 'ವಂಶವೃಕ್ಷ' ಕೂಡಾ ಇದೇ ವಿಷಯಕ್ಕೆ ಪ್ರೇಕ್ಷಕ ಮತ್ತು ಸಾಹಿತ್ಯಾಭಿಮಾನಿಗಳಿಬ್ಬರ ಕಟುವಾದ ಟೀಕೆಯನ್ನೆದುರಿಸಿದ ನೆನಪಿದೆ. (ಸಶೇಷ)



ಬರಹ ಬಿಂಬ
ಸಂ: ಉಮಾ ವೆಂಕಟೇಶ್, ಜ್ಯೋತಿ ವೆಂಕಟಸುಬ್ರಹ್ಮಣ್ಯ
ಪ್ರ: ಕನ್ನಡ ಸಾಹಿತ್ಯ ರಂಗ ಯು.ಎಸ್.ಎ.
ಪುಟ : 376
ಬೆಲೆ ರು.400/-

ರಾಜಕಾರಣಿಗಳ ನಡುವೆ ಅಧಿಕಾರಿ!

» ಶ.ಹಾ.

ವೃತ್ತಿಜೀವನದ ಒಟ್ಟು 35 ವರ್ಷಗಳಲ್ಲಿ, 27 ಬಾರಿ ವರ್ಗಾವಣೆಗೆ ಒಳಗಾದ, ಹಿರಿಯ ಐಎಎಸ್ ಅಧಿಕಾರಿ ಐ.ಎಂ.ವಿಠ್ಠಲಮೂರ್ತಿ ಅವರ ಬದುಕಿನ ಅನುಭವಗಳನ್ನು ಪ್ರಸ್ತುತ ಪಡಿಸುವ ಈ ಪುಸ್ತಕವು, ಹಲವು ಕಾರಣಗಳಿಂದಾಗಿ ಕುತೂಹಲದಿಂದ ಓದಿಸಿಕೊಳ್ಳುತ್ತದೆ. ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಂತಹ ವಿಭಾಗಗಳಲ್ಲಿ ಹಲವು ಬಾರಿ ವೃತ್ತಿ ನಿರ್ವಹಿಸಿದ ಇವರು, ಆ ಮೂಲಕ ನಮ್ಮ ರಾಜ್ಯದ ಕಲೆ, ಸಂಸ್ಕೃತಿಗೆ ಉತ್ತಮ ಕೊಡುಗೆ ನೀಡಿದ್ದಾರೆ. ಇದೇ ಸಮಯದಲ್ಲಿ, ಬೇರೆ ವಿಭಾಗಗಳಲ್ಲಿ, ಅದರಲ್ಲೂ ಜಿಲ್ಲೆಯ ಪ್ರಮುಖ ಆಡಳಿತ ಹುದ್ದೆಗಳಲ್ಲಿ ವೃತ್ತಿನಿರ್ವಹಿಸುವಾಗ, ಪ್ರಬಲ ರಾಜಕೀಯ ನಾಯಕರುಗಳ ಮತ್ತು ಮಂತ್ರಿಗಳ ಕೆಂಗಣ್ಣಿಗೆ ಗುರಿಯಾಗಿ, ರಾತ್ರೋರಾತ್ರಿ ವರ್ಗಾವಣೆಯಾದದ್ದೂ ಇದೆ! ಇವರ ಸಾಂಸ್ಕೃತಿಕ ಪರ ಎನ್ನಬಹುದಾದ ಕಾಳಜಿಯಿಂದಾಗಿ, ಹಲವು ಗಮನಾರ್ಹ ಕೊಡುಗೆಗಳನ್ನು ನೀಡಲು ಇವರಿಂದ ಸಾಧ್ಯವಾಯಿತು: ಅದಕ್ಕೆ ಒಂದು ಉದಾಹರಣೆ ಎಂದರೆ, ಸರಕಾರದ ಒಡೆತನದಲ್ಲಿದ್ದ ಎಂಎಸ್‌ಐಎಲ್ ಸಂಸ್ಥೆಯ ಮೂಲಕ, ಮೈಸೂರು ಅನಂತ ಸ್ವಾಮಿಯವರಂತಹ ಹಲವು ಕಲಾವಿದರು ಹಾಡಿದ ಸುಗಮ ಸಂಗೀತದ ಹಾಡುಗಳು, ಧ್ವನಿಸುರುಳಿಯ ಮೂಲಕ ನಾಡಿನ ಮೂಲೆ ಮೂಲೆಗಳಿಗೆ ತಲುಪುವಂತಾಯಿತು ಮತ್ತು ಸುಗಮ ಸಂಗೀತ ಕ್ಷೇತ್ರದಲ್ಲಿ ಸಣ್ಣ ಕ್ರಾಂತಿಯನ್ನೇ ಮಾಡಿದಂತಾಯಿತು ಮತ್ತು ಹೀಗಾಗಲು ಇವರ ಕೊಡುಗೆ ಇದೆ. ನರಗುಂದ, ನವಲಗುಂದ ಪ್ರದೇಶಗಳಲ್ಲಿ ರೈತ ಚಳವಳಿ ನಡೆಯುವಾಗ ರೈತರ ಮೇಲೆ ಪೊಲೀಸರು ಗುಂಡು ಹಾರಿಸಿದಾಗ ಎದುರಾದಂತಹ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿಭಾಯಿಸಿದ ಇವರು, ತಮ್ಮ ವೃತ್ತಿಜೀನವದುದ್ದಕ್ಕೂ ರೈತರ ಪರವಾದ ಹಲವು ನಿರ್ಧಾರಗಳನ್ನು ಸರಕಾರ ತೆಗೆದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದರು. 27 ಅಧ್ಯಾಯಗಳಲ್ಲಿ ಮೂಡಿಬಂದಿರುವ ವಿಠ್ಠಲಮೂರ್ತಿಯವರ ಅನುಭವಗಳನ್ನು ಓದುವುದೇ ಒಂದು ವಿಭಿನ್ನ ಅನುಭವ; ಆ ಓದಿನಲ್ಲಿ ನಮ್ಮ ರಾಜ್ಯದ ಆಡಳಿತ ವ್ಯವಸ್ಥೆಯ ಕುರಿತಾದ ವಿಶಿಷ್ಟ ಒಳನೋಟವು ಓದುಗರಿಗೆ ದೊರಕುತ್ತದೆ. ''ಕರ್ನಾಟಕ ಕಂಡ ದಕ್ಷ ಐಎಎಸ್ ಅಧಿಕಾರಿಗಳಲ್ಲಿ ಒಬ್ಬರಾದ ಐ ಎಂ. ವಿಠ್ಠಲಮೂರ್ತಿ ಅವರು ತಮ್ಮ ಸುದೀರ್ಘ ಆಡಳಿತದ ಅವಧಿಯಲ್ಲಿ ಸರಕಾರದ ಹೃದಯ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಅನುಭವಿಸಿದ, ಅವಲೋಕಿಸಿದ, ನಿರ್ವಹಿಸಿದ ಕೆಲವು ಘಟನೆಗಳ ಮರುನಿರೂಪಣೆ ಈ ಕೃತಿ. ಕನ್ನಡ ಸಾಂಸ್ಕೃತಿಕ ಲೋಕದೊಂದಿಗೆ ನಿಕಟ ಸಂಬಂಧ ಇಟ್ಟುಕೊಂಡಿರುವ ಕೆಲವೇ ಸರಕಾರಿ ಅಧಿಕಾರಿಗಳಲ್ಲಿ ವಿಠ್ಠಲಮೂರ್ತಿಯವರೂ ಒಬ್ಬರು. ಈ ಕೃತಿಯಲ್ಲಿ ಗಟ್ಟಿಯಾದ ಒಳೋಟಗಳಿವೆ. ಇದು ಕೇವಲ ನೆನಪುಗಳ ಸಂಕಲನವಾಗಿರದೆ, ಅನುಭವದಿಂದ ಅರಿವು, ಅರಿವಿನಿಂದ ಮಾರ್ಗದರ್ಶನ ನೀಡುವ ಜೀವನ ಪಾಠಗಳ ಸಂಗ್ರಹವಾಗಿದೆ.'' (ಬೆನ್ನುಡಿಯಲ್ಲಿ ಗಿರೀಶ ಕಾಸರವಳ್ಳಿ)



ಬದುಕು ಜಟಕಾ ಬಂಡಿ ನಾನಾದರ ಸಾಹೇಬ..
ಲೇ: ಐ. ಎಂ. ವಿಠ್ಠಲಮೂರ್ತಿ
ಪ್ರ: ಬಹುರೂಪಿ ಪ್ರಕಾಶನ ಬೆಂಗಳೂರು
ಬೆಲೆ ರು.300/-

ನಟ ಸಾಮ್ರಾಟನ ನೆನಪು ನಿತ್ಯನೂತನ

» ಪ್ರೊ. ಜಿ. ಎನ್.ಉಪಾಧ್ಯ, ಮುಂಬೈ

ಕರ್ನಾಟಕದ ಪ್ರಾತ:ಸ್ಮರಣೀಯ ಅಪೂರ್ವ ಸಾಧಕರಲ್ಲಿ ರಾಜಕುಮಾರ್ ಅವರೂ ಒಬ್ಬರು. ರಾಜ್ ಅವರ ಸಿನಿಮಾಗಳು ನಾಡಿನ ಜನಮಾನಸವನ್ನು ಇನ್ನಿಲ್ಲದಂತೆ ತಟ್ಟಿ ಮುಟ್ಟಿ ಪ್ರಭಾವಿಸಿವೆ. ರಾಜಕುಮಾರ್ ಬದುಕಿದ್ದಾಗಲೇ ದಂತಕಥೆಯಾದಂತಹ ಮೇರುನಟ. ಅವರ ನೆನಪು ನಿತ್ಯನೂತನ. ಒಬ್ಬ ಸಿನಿಮಾ ನಟ ಒಂದು ನಾಡಿನ ಜನ ಸಮುದಾಯವನ್ನು ಹೇಗೆಲ್ಲ ಪ್ರಭಾವಿಸಿದರು ಎಂಬುದರ ಚಿತ್ರಣದ ಜೊತೆಗೆ ರಾಜಕುಮಾರ್ ಕನ್ನಡದ ಸಾಂಸ್ಕೃತಿಕ ಪ್ರಜ್ಞೆಯ ಭಾಗವೆಂದು ಇಲ್ಲಿ ಪರಿಭಾವಿಸಲಾಗಿರುವುದು ವಿಶೇಷ. ರಾಜಕುಮಾರ್ ಎನ್ನುವ ಹೆಸರು ಕನ್ನಡ ಕರ್ನಾಟಕದ ಸಂದರ್ಭಕ್ಕೆ ಒಂದು ವಿಶಿಷ್ಟವಾದ ರೂಪಕದಂತೆ ಎಂಬುದನ್ನು ಮನೋಜ್ಞವಾಗಿ ಈ ಪುಸ್ತಕದಲ್ಲಿ ಅನಾವರಣಗೊಳಿಸಲಾಗಿದೆ.

ಹಂಪಿ ವಿಶ್ವವಿದ್ಯಾಲಯ ಪ್ರಕಟಿಸಿರುವ ಈ ಪುಸ್ತಕವು, ಮೇರುನಟ ಡಾ. ರಾಜ್‌ಕುಮಾರ್ ಅವರ ಜೀವನ, ಸಾಧನೆಯನ್ನು ಪರಿಚಯಿಸುವ ಹೊತ್ತಿನಲ್ಲೇ, ಹೇಗೆ ರಾಜ್ ಕುಮಾರ್ ಅವರು ಸಕಾರಾತ್ಮಕ ಸಾಮಾಜಿಕ ಬದಲಾವಣೆಗಳಿಗೆ ನಾಂದಿ ಹಾಡಿದರು ಎಂಬುದನ್ನೂ ತಿಳಿಸುತ್ತದೆ.

ವರನಟ ರಾಜಕುಮಾರ್ ಅವರು ಕನ್ನಡ ಚಿತ್ರರಂಗವನ್ನು ರೂಪಿಸಿದ ಮಹಾನ್ ಚೇತನ. ಅವರು 'ಬೇಡರ ಕಣ್ಣಪ್ಪ'ದ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು. 200ಕ್ಕೂ ಹೆಚ್ಚು ಯಶಸ್ವಿ ಚಿತ್ರಗಳನ್ನು ನೀಡಿದ ಅವರು ರಿಮೇಕ್‌ಗಿಂತ ಕಾದಂಬರಿ ಆಧಾರಿತ ಚಿತ್ರಗಳಿಗೆ ಒತ್ತು ನೀಡಿ, ಕನ್ನಡ ಸಾಹಿತ್ಯಕ್ಕೆ ವೇದಿಕೆ ಕಲ್ಪಿಸಿದರು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಸೇರಿದಂತೆ ಎಲ್ಲ ರೀತಿಯ ಪಾತ್ರಗಳಲ್ಲಿ ಮಿಂಚಿದ ಡಾ. ರಾಜ್ ಯಶಸ್ಸಿನ ಉತ್ತುಂಗದಲ್ಲೂ ತಮ್ಮ ಸರಳತೆಯನ್ನು ಕಾಯ್ದುಕೊಂಡು ನಾಡಿಗೆ ಅಭಿಮಾನಿಗಳಿಗೆ ಮಾದರಿಯಾದವರು. ಭಾರತದಲ್ಲಿ ಹೀಗೆ ಏಕಕಾಲದಲ್ಲಿ ನಟನೆ ಮತ್ತು ಗಾಯನದಿಂದ ಉನ್ನತಿಯನ್ನು ಕಂಡ ಮತ್ತೊಬ್ಬ ಕಲಾವಿದನಿಲ್ಲ ಎಂಬುದು ಕನ್ನಡದ ಹೆಮ್ಮೆಯೂ ಹೌದು. ಹೀಗೆ ಸಮಷ್ಟಿ ನೆಲೆಯಿಂದ ಜನಪದ ನಾಯಕರಾಗಿ ರೂಪುಗೊಂಡ ವ್ಯಕ್ತಿತ್ವ ರಾಜ್ ಅವರದು ಎಂಬುದನ್ನು ಈ ಕೃತಿಯಲ್ಲಿ ಸರಳವಾಗಿ ಸುಂದರವಾಗಿ ಲೋಕಸಮ್ಮುಖ ಗೊಳಿಸಲಾಗಿದೆ.

ಕನ್ನಡತನ ಕನ್ನಡ ಚಲನಚಿತ್ರ ಮತ್ತು ಕನ್ನಡ ಸಮಾಜದ ಜೊತೆ ಜೊತೆಗೆ ಪರಸ್ಪರ ಎಂಬರ್ಥದಲ್ಲಿ ರಾಜಕುಮಾರ್ ಬೆಳೆದು ಬದುಕಿದ್ದು ಒಂದು ವಿಶಿಷ್ಟ ಸಾಂಸ್ಕೃತಿಕ ಕಥನ. ತನ್ಮೂಲಕ ಕನ್ನಡದ ಸಂದರ್ಭಕ್ಕೆ ರಾಜಕುಮಾರ್ ಕಲಾವಿದನಾಗಿ, ಸಿನಿಮಾ ಎಂಬ ಮಾಯಲೋಕವನ್ನು ಮೀರಿ ಹತ್ತಾರು ಭಾವಗಳಿಗೆ, ಅರ್ಥಗಳಿಗೆ, ರೂಪಗಳಿಗೆ ಪರ್ಯಾಯವಾಗಿ ದಂತಕತೆಯಾಗಿ ಐತಿಹ್ಯವಾಗಿ ಸಾಂಸ್ಕೃತಿಕ ನಾಯಕನ ಸ್ಥಾನ ಪಡೆದವರು ಎಂಬ ಕುತೂಹಲಕರ ಚಿಂತನ ಮಂಥನ ಹಾಗೂ ಅವರ ಸಾರ್ಥಕ ಬದುಕಿನ ವೃತ್ತಾಂತ ಈ ಕೃತಿಯಲ್ಲಿ ಆಪ್ತ ನೆಲೆಯಲ್ಲಿ ಚಿತ್ರಣಗೊಂಡಿದೆ. ಒಬ್ಬ ಸಿನಿಮಾ ನಟ ತನ್ನ ಅಭಿನಯ, ವ್ಯಕ್ತಿತ್ವ, ಬದುಕು, ಬದ್ಧತೆಯ ಕಾರಣದಿಂದ ಎಷ್ಟು ಎತ್ತರಕ್ಕೆ ತಲುಪಬಹುದು ಮತ್ತು ಸಮುದಾಯದ ಆಸ್ತಿಯಾಗಬಹುದು ಎನ್ನುವುದಕ್ಕೆ ಸಾಕ್ಷಿಯಾಗಿದ್ದ ರಾಜ್ ಅವರು ಧೀಮಂತ ವ್ಯಕ್ತಿತ್ವದ ವಿವಿಧ ಆಯಾಮಗಳ ವಿಶಿಷ್ಟ ಚರಿತ್ರೆಯೂ ಇಲ್ಲಿದೆ.

ಹದಿಮೂರು ಅಧ್ಯಾಯ ಹಾಗೂ ಅನೇಕ ಉಪ ಅಧ್ಯಾಯಗಳಲ್ಲಿ ರಾಜ್ ಬದುಕಿನ ಹಾದಿ, ಮುತ್ತುರಾಜ ರಾಜಕುಮಾರ್ ಆದದ್ದು, ಚಿತ್ರರಂಗದಲ್ಲಿ ತಮ್ಮ ನಟನೆ, ಗಾಯನಗಳ ಮೂಲಕ ಅವರು ಹೊಸ ಸಂಚಲನವನ್ನು ಉಂಟು ಮಾಡಿದ್ದು, ಅವರ ಸಿನಿಮಾಗಳ ಗುಣಾತಿಶಯ, ರಾಜ್ ಮತ್ತು ಕುಟುಂಬ, ರಾಜ್ ಪುತ್ರರು ಮತ್ತು ಕನ್ನಡ ಚಿತ್ರರಂಗ, ಕನ್ನಡದ ಕರ್ನಾಟಕದ ಕನ್ನಡ ಸಿನಿಮಾರಂಗದ ಅತ್ಯಮೂಲ್ಯ ಆಸ್ತಿಯಾಗಿ ರಾಷ್ಟ್ರಮಟ್ಟದಲ್ಲಿ ಅವರು ಹೆಸರು ಮಾಡಿದ್ದು, ರಾಜಕುಮಾರ ಅವರು ತಮ್ಮ ಪಾತ್ರಗಳ ಮೂಲಕ ತಾವು ಬೆಳೆಯುತ್ತಲೇ ಕನ್ನಡ ಕರ್ನಾಟಕದ ಸಮಾಜವನ್ನು ನಿರಂತರ ಅನುಸಂಧಾನ ಮಾಡಿದ ಬಗೆ ಇಲ್ಲಿ ಸೊಗಸಾಗಿ ದಾಖಲಾಗಿದೆ. ರಾಜಕುಮಾರ್ ಹೀಗೊಂದು ರಮ್ಯ ನೆನಪಾಗಿ, ಅದ್ಭುತಗಾನವಾಗಿ, ಅನನ್ಯಭಾವವಾಗಿ, ಸಾಮುದಾಯಿಕ ಶಕ್ತಿಯಾಗಿ ರೂಪುಗೊಳ್ಳುತ್ತಲೇ ಇದ್ದಾರೆ. ಅಭಿನಯ, ಮಾತು ಕೃತಿಗಳ ಮೂಲಕ ಕರ್ನಾಟಕ ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಿದ ಶ್ರೇಯಸ್ಸು ಸಹ ಅವರಿಗೆ ಸಲ್ಲುತ್ತದೆ. ಗೋಕಾಕ್ ಚಳುವಳಿ, ಡಬ್ಬಿಂಗ್ ವಿರೋಧಿ ಹೋರಾಟ, ಕಾವೇರಿ ನದಿ ನೀರಿನ ಚಳುವಳಿಗಳಲ್ಲಿ ರಾಜಕುಮಾರ್ ನಿರ್ಭಿಡೆಯಿಂದ ಮುಂಚೂಣಿಯಲ್ಲಿ ನಿಂತು ಕನ್ನಡಿಗರ ಹಿತ ಕಾಯುವ ಕೆಲಸವನ್ನು ಮಾಡಿದ ಪುಣ್ಯಪುರುಷ.

ಕನ್ನಡ, ಕರ್ನಾಟಕ, ಕನ್ನಡಿಗ ಎನ್ನುವುದಕ್ಕೆ ರಾಜಕುಮಾರ್ ತಣ್ಣಗೆ ಎನ್ನುವಂತೆ, ತನ್ನನ್ನೇ ಮೀರಿದಂತೆ ಅಸ್ಮಿತೆಯನ್ನು ಒದಗಿಸಿದ್ದು ವಿಶಿಷ್ಟ ಸಂಗತಿ ಮತ್ತು ಚಾರಿತ್ರಿಕವಾದದ್ದು. ಸಿನಿಮಾಗಳ ಪಾತ್ರವಾಗುತ್ತಲೇ ಬಹುಜನರ ಬದುಕಿಗೆ ಮಾದರಿಯಾದದ್ದು, ಎಲ್ಲರ ಮನೆಯ ಸದಸ್ಯನಂತಾದದ್ದು ಅಸಾಮಾನ್ಯ ಸಂಗತಿಯೇ ಹೌದು. ಇದು ಸುಮ್ಮನೇ ಘಟಿಸಿದ್ದಂತಲ್ಲ; ಕಾಕತಾಳೀಯವೂ ಅಲ್ಲ. ರಾಜಕುಮಾರ್ ದೇವತಾ ಮನುಷ್ಯನಾಗಿ ಆದರ್ಶ ಪುರುಷನಾಗಿ ಅಪಾರ ಅಭಿಮಾನಿಗಳ ಪ್ರೀತ್ಯಾದರಗಳಿಗೆ ಪಾತ್ರರಾಗಲು ಕಾರಣವೇನು ಎಂಬುದರ ಹುಡುಕಾಟವೂ ಇಲ್ಲಿದೆ.

ಈ ಕೃತಿಯಲ್ಲಿ ರಾಜಕುಮಾರ್ ಅವರ ಒಟ್ಟು ಸಿನಿಮಾಗಳಲ್ಲಿನ ಪಾತ್ರಗಳನ್ನು ಕೇಂದ್ರವಾಗಿಟ್ಟು ಕೊಂಡು ಕೆಲವು ಮುಖ್ಯವಾದ ಸಂಗತಿಗಳನ್ನು ಅರಿಯುವ ಪ್ರಯತ್ನವಿದೆ. ತಾವು ನಿರ್ವಹಿಸಿದ ಪಾತ್ರಗಳ ಜೊತೆಗೆ ರಾಜ್ ಅವರ ವ್ಯಕ್ತಿತ್ವ ಹೇಗೆ ಅನುಸಂಧಾನ ಮಾಡಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ರಾಜಕುಮಾರ್ ಅವರು ಈ ನೆಲದ ತಿಳುವಳಿಕೆಯ ಮತ್ತು ಬಹುತ್ವದ ಪ್ರತಿಕವೇ ಆಗಿದ್ದುದನ್ನು ರಾಜಕುಮಾರ್ ಅವರ ಪಾತ್ರಗಳ ವೈವಿಧ್ಯತೆಗಳನ್ನು ಇಲ್ಲಿ ಹೃದ್ಯವಾಗಿ ಕಟ್ಟಿಕೊಡಲಾಗಿದೆ.

ಸಾಧನೆಯ ಮಹಾಮಾರ್ಗ: ರಾಜಕುಮಾರ್ ಅವರು ಐದು ದಶಕಗಳ ಕಾಲ ಒಂದಲ್ಲ ಒಂದು ಕಾರಣಕ್ಕೆ ಕನ್ನಡ ಸಿನಿಮಾ ರಂಗವನ್ನು ಪ್ರಭಾವಿಸಿದ್ದು ಚಾರಿತ್ರಿಕ ಸಂಗತಿಯೇ ಆಗಿದೆ. ನಟರಾಗಿ, ನಾಯಕರಾಗಿ ನಾಡಿನ ಭಾಷೆಯ ಅಭಿಮಾನಿಯಾಗಿ, ಹೋರಾಟಗಾರರಾಗಿ, ಕಲಾವಿದನಾಗಿ, ಯೋಗಪಟುವಾಗಿ ಎಲ್ಲಕ್ಕೂ ಕಳಸವಿಟ್ಟಂತೆ, ಕನ್ನಡದ ಬಹು ಜನರ 'ಅಣ್ಣಾವ್ರು 'ಹಾಗೆ ಬೆಳೆದದ್ದು ಉಳಿದಿದ್ದು ಖಂಡಿತವಾಗಿ ಆಕಸ್ಮಿಕವಲ್ಲ. ಅದೊಂದು ಸಾಧನೆಯ ಮಹಾಮಾರ್ಗವೇ ಹೌದು ಎಂಬುದನ್ನು ಇಲ್ಲಿ ಸವಿವರವಾಗಿ ನಿರೂಪಿಸಲಾಗಿದೆ.

ರಾಜಕುಮಾರ್ ಅವರು ಒಬ್ಬ ವ್ಯಕ್ತಿ 'ಹೀಗೆ' ಬದುಕಬೇಕು ಎಂಬ ಮಾದರಿಯೊಂದನ್ನು ಸೃಷ್ಟಿಸಿದರು. ಈ ಕಾರಣಕ್ಕಾಗಿ ರಾಜಕುಮಾರ್ ಅವರದು ನಿರ್ದಿಷ್ಟ ಚೌಕಟ್ಟಿಗೆ ಮಾತ್ರ ಸೀಮಿತವಾಗುವ ವ್ಯಕ್ತಿತ್ವವಲ್ಲ. ಡಾ. ರಾಜಕುಮಾರ್ ಅವರು ಶ್ರೇಣೀಕೃತ ಸಮಾಜದ ಅಂಚಿನಲ್ಲಿರುವ ತಳ ಸಮುದಾಯ ವೊಂದರಲ್ಲಿ ಜನಿಸಿದವರು. ಯಾವ ಪ್ರಭಾವಿ ಹಿನ್ನೆಲೆಗಳಿಲ್ಲದಿದ್ದರೂ ಕೇವಲ ತಮ್ಮ ಸ್ವಪ್ರತಿಭೆಯೊಂದರಿಂದಲೇ ಅಗಾಧವಾಗಿ ಬೆಳೆದು ನಿಂತವರು. ಅಭಿನಯವನ್ನು ಧ್ಯಾನಿಸಿ ಕಲಾಜಗತ್ತಿಗೆ ಅಮೂಲ್ಯ ಕೊಡುಗೆಗಳನ್ನು ನೀಡಿ ಕನ್ನಡ ಜನ ಮಾನಸದಲ್ಲಿ ಚಿರಸ್ಥಾಯಿಯಾದವರು. ಅವರ ಜೀವನಯಾನದ ಏಳುಬೀಳುಗಳು, ಅವರು ತಮಗೆ ತಾವೇ ಒಂದು ಅಪೂರ್ವ ಕಲಾಕೃತಿಯಾಗಿ ಬೆಳೆದು ನಿಂತ ಪರಿಯನ್ನು ಇಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಕನ್ನಡದಲ್ಲಿ ರಾಜಕುಮಾರ್ ಅವರ ಕುರಿತು ಸಾಕಷ್ಟು ಕೃತಿಗಳು ಬಂದಿವೆ. ಆದರೂ ಭಿನ್ನ ವಿಭಿನ್ನವಾಗಿ ಮೂಡಿ ಬಂದಿರುವ ಈ ಕೃತಿ ನಮ್ಮ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಇದೊಂದು ಸಂಗ್ರಹಯೋಗ್ಯ ಪುಸ್ತಕ.



ಡಾ.ರಾಜಕುಮಾರ್ ಬಹುತ್ವದ ಪ್ರಜ್ಞೆ
ಲೇ: ಡಾ.ಜಿ.ಪ್ರಶಾಂತ ನಾಯಕ್
ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಶ್ವವಾಣಿ ಅಂಕಿತ ಟಾಪ್ ಟೆನ್



1 ಅಜಿತ್ ದೋವಲ್
(ಭಾರತದ ಭದ್ರತಾ ಸಲಹೆಗಾರರೊಬ್ಬರು ವಿದೇಶಾಂಗ ನೀತಿಗೆ ಹೊಸ ಭಾಷ್ಯ ಬರೆದ ವಿವರಗಳು ಇಲ್ಲಿವೆ.)
ಲೇ: ರವೀಂದ್ರ ಜೋಶಿ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ: ರೂ 150/-



2 ಕಾರಂತರ ಸುಳಿಯಲ್ಲಿ
(ಶಿವರಾಮ ಕಾರಂತರನ್ನು ಕುರಿತು ಅವರ ಮಕ್ಕಳು ಬರೆದ ಕಾರಂತರ ಕಥೆ)
ಲೇ: ಉಲ್ಲಾಸಕಾರಂತ, ಮಾಲವಿಕಾ ಕಪೂರ, ಕ್ಷಮಾರಾವ್
ಕನ್ನಡಕ್ಕೆ: ವಿಶ್ವೇಶ್ವರಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 395/-



3 ಶ್ರೇಷ್ಠತೆಯ ಸೊಕ್ಕು
(ಬರಗೂರು ಅವರ ಪ್ರಮುಖ ಲೇಖನಗಳು, ವ್ಯಕ್ತಿಚಿತ್ರಗಳು, ಪುಸ್ತಕಾವಲೋಕನ ಮೂರು ಭಾಗಗಳಲ್ಲಿ ಪ್ರಕಟವಾಗಿವೆ)
ಲೇ: ಬರಗೂರು ರಾಮಚಂದ್ರಪ್ಪ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 550/-



4 ರೂಮಿಯ ಮಗಳು
(ಈಗಾಗಲೇ 21 ಕೃತಿಗಳನ್ನು ಪ್ರಕಟಿಸಿರುವ ಚೇತನಾ ಅವರ ಹೊಸ ಐತಿಹಾಸಿಕ ಕಾಲ್ಪನಿಕ ಕಾದಂಬರಿ)
ಲೇ: ಚೇತನಾ ತೀರ್ಥಹಳ್ಳಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ: ರೂ 200/-



5 ಅರ್ಥವಾಗದ ಲೋಕ
(41 ಕೃತಿಗಳ ಲೇಖಕ, ದಿಟ್ಟ ಪತ್ರಕರ್ತ, ಜಾಣಗೆರೆ ಅವರ ಆತ್ಮಕಥನ)
ಲೇ: ಜಾಣಗೆರೆ ವೆಂಕಟರಾಮಯ್ಯ
ಪ್ರ: ಜಾಣಗೆರೆ ಪ್ರಕಾಶನ, ಬೆಂಗಳೂರು
ಬೆಲೆ: ರೂ 400/-



6 ಆರ್ಟಿಫೀಶಿಯಲ್ ಇಂಟೆಲಿಜೆನ್ಸ್
(ಜಗತ್ತಿನಾದ್ಯಂತ ಆತಂಕ ಸೃಷ್ಟಿಸಿರುವ ಎಐ ತಂತ್ರಜ್ಞಾನ - ಸರಳಗನ್ನಡದಲ್ಲಿ)
ಲೇ: ಮಧು ವೈ.ಎನ್
ಪ್ರ: ನೆಲಮುಗಿಲು ಪ್ರಕಾಶನ, ಬೆಂಗಳೂರು
ಬೆಲೆ: ರೂ 170/-



7 ಬದುಕು ಜಟಕಾ ಬಂಡಿ ನಾನದರ ಸಾಹೇಬ...
(ಕರ್ನಾಟಕದ ಐಎಎಸ್ ಅಧಿಕಾರಿ ವಿಠ್ಠಲಮೂರ್ತಿ ಅವರ ಆತ್ಮಕಥನ)
ಲೇ: ಐ ಎಂ ವಿಠ್ಠಲಮೂರ್ತಿ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ: ರೂ 300/-



8 ಅನನ್ಯ ಅಲ್ಲಮ
(ಅಲ್ಲಮನ ಅನನ್ಯ ಪದ ಪ್ರಯೋಗಗಳ 75 ವಚನಗಳು)
ಲೇ: ಹರಿಹರ ಶಿವಕುಮಾರ
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ: ರೂ 180/-



9 ಕಿತ್ತೂರು ಹುಲಿ ಸಂಗೊಳ್ಳಿ ರಾಯಣ್ಣ
(ರಾಣಿ ಚೆನ್ನಮ್ಮನ ಆಪ್ತ, ಸ್ವಾತಂತ್ರ ಹೋರಾಟಗಾರ ಸಂಗೊಳ್ಳಿರಾಯಣ್ಣನ ಕುರಿತ ಐತಿಹಾಸಿಕ ಕಾದಂಬರಿ)
ಲೇ: ಡಾ। ಲಕ್ಷ್ಮಣ ಕೌಂಟೆ
ವೀರಲೋಕ, ಬೆಂಗಳೂರು
ಬೆಲೆ: ರೂ 575/-



10 ಆಳಿದ ಮಹಾಸ್ವಾಮಿಯವರು
(ಕಿರಿಯ ವಯಸ್ಸಿನಲ್ಲಿಯೇ ಪಟ್ಟಾಭಿಷಕ್ತರಾಗಿ, ರಾಜರ್ಷಿ ಎಂದು ಖ್ಯಾತರಾದ ನಾಲ್ವಡಿ ಕೃಷ್ಣರಾಜ ಒಡೆಯರವರ ಜೀವನ ಚರಿತ್ರೆ)
ಲೇ: ಸಿ.ಕೆ. ವೆಂಕಟರಾಮಯ್ಯ
ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಬೆಲೆ: ರೂ 400/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

25 ವರ್ಷಗಳ ಹಿಂದೆಯೇ ಉಚಿತ ವಿದ್ಯುತ್ ಪಡೆದ ಗ್ರಾಮವೊಂದು ಮುಧೋಳ ತಾಲೂಕಿನಲ್ಲಿದೆ!

ಶಿರೋಳಕ್ಕೆ ಉಚಿತ ವಿದ್ಯುತ್!



» ಮಲ್ಲಿಕಾರ್ಜುನ ಹೆಗ್ಗಳಗಿ. ಮುಧೋಳ

ನಮ್ಮ ರಾಜ್ಯಸರಕಾರವು ಎಲ್ಲರಿಗೂ 200ಯೂನಿಟ್ ಉಚಿತ ವಿದ್ಯುತ್ ಪೂರೈಕೆಯನ್ನು 2023 ರಿಂದ ಆರಂಭಿಸಿದೆ. ಆದರೆ ಬಾಗಲಕೋಟೆ ಜಿಲ್ಲೆಯ, ಮುಧೋಳ ತಾಲೂಕ್ ಶಿರೋಳ ಗ್ರಾಮದ ಜನ ಕಳೆದ 25 ವರ್ಷಗಳಿಂದ ಸಂಪೂರ್ಣ ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ! ಇದು ಈ ಹಿಂದಿನ ಯಾವುದೇ ಸರ್ಕಾರದ ಗ್ಯಾರಂಟಿ ಅಲ್ಲ; ಶಿರೋಳ ಗ್ರಾಮದ ರೈತರು ನಡೆಸಿದ ಉಗ್ರ ಹೋರಾಟದ ಫಲ.

ಈ ಹೋರಾಟ ಎಂಥದ್ದು? ಶಿರೋಳ ಗ್ರಾಮಸ್ಥರು 25 ವರ್ಷಗಳ ಹಿಂದೆ ಬರಗಾಲಕ್ಕೆ ಸಿಕ್ಕಿಕೊಂಡರು; ತೀವ್ರ ಆರ್ಥಿಕ ಸಂಕಷ್ಟ. ಇದರಿಂದಾಗಿ, ನಾಲ್ಕು ತಿಂಗಳು ವಿದ್ಯುತ್ ಬಿಲ್ ಪಾವತಿ ಮಾಡಲಿಲ್ಲ. ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಸರಕಾರದ ಅಧಿಕಾರಿಗಳು ಗ್ರಾಮಕ್ಕೆ ಬಂದು ವಿದ್ಯುತ್ ಸಂಪರ್ಕ ಕಡಿತ ಮಾಡತೊಡಗಿದರು. ತಮ್ಮ ಪ್ರದೇಶದಲ್ಲಿ ತೀವ್ರ ಬರಗಾಲವಿರುವುದರಿಂದಾಗಿ, ವಿನಾಯತಿ ನೀಡಿ ಎಂದು ರೈತರು ಹೇಳಿದರೂ, ಕೇಳಲಿಲ್ಲ. ವಾದ ವಿವಾದ ವಾಯಿತು; ಕೋಪತಾಪಗಳಾದವು; ರೊಚ್ಚಿಗೆದ್ದ ಗ್ರಾಮದ ರೈತರೆಲ್ಲ ಸೇರಿ ಸರಕಾರಿ ಅಧಿಕಾರಿಗಳನ್ನು ಹಿಡಿದು ರೂಮಿನಲ್ಲಿ ಕೂಡಿ ಹಾಕಿದರು.

ಸುದ್ದಿ ಹರಡಿತು. ಹಿರಿಯಅಧಿಕಾರಿಗಳು ಧಾವಿಸಿ ಬಂದರು. ಅವರನ್ನೂ ಕೂಡಿ ಹಾಕಿದರು! ಗ್ರಾಮ ಮಟ್ಟದ ಪ್ರತಿಭಟನೆಯು ಈಗ ಜಿಲ್ಲಾ ಮಟ್ಟಕ್ಕೆ ಬೆಳೆಯಿತು. ಬೇರೆ ಬೇರೆ ಗ್ರಾಮಗಳಿಂದ 20 ಸಾವಿರಕ್ಕೂ ಹೆಚ್ಚು ರೈತರು ಬೆಂಬಲಕ್ಕೆ ಬಂದು ನಿಂತರು. ಪ್ರೊ. ಎಂ.ಡಿ.ನಂಜುಂಡಸ್ವಾಮಿ, ಬಾಬಾ ಗೌಡ ಪಾಟೀಲ್ ಅವರೂ ಬಂದರು; ಬರಗಾಲಕ್ಕೆ ಸಿಲುಕಿ ತೊಂದರೆಯಲ್ಲಿದ್ದ ರೈತರಿಗೆ ಬೆಂಬಲ ಸೂಚಿಸಿದರು. ಕೂಡಿ ಹಾಕಲಾಗಿದ್ದ ಅಧಿಕಾರಿಗಳನ್ನು ಸುಟ್ಟು ಹಾಕುವ ಭಯ ಆವರಿಸಿತು. ಗ್ರಾಮದ ತುಂಬಾ ಉದ್ವಿಗ್ನ ವಾತಾವರಣ ಹರಡಿತ್ತು.

ಆಗ ರಾಜ್ಯಮಟ್ಟದ ಅಧಿಕಾರಿಗಳು ಬಂದು ಸಭೆ ನಡೆಸಿದರು. ಅಂದಿನ ಚರ್ಚೆಯ ಅನುಸಾರ, ಗ್ರಾಮಸ್ಥರು ಸಾಮೂಹಿಕ ನಿರ್ಧಾರ ಮಾಡಿ ವಿದ್ಯುತ್ ಬಿಲ್ ಪಾವತಿ ಮಾಡುವುದನ್ನು ನಿಲ್ಲಿಸಿದ್ದಾರೆ. ರಾಜ್ಯದಲ್ಲಿ ಪೂರ್ಣ ಉಚಿತ ವಿದ್ಯುತ್ ಪಡೆಯುವ ಏಕೈಕ ಗ್ರಾಮ ಇದಾಗಿದೆ! ಯಾರೂ ಬಿಲ್ ಕೇಳಲು ಬರುವುದಿಲ್ಲ. ವಿದ್ಯುತ್ ಮಾತ್ರ ನಿರಂತರವಾಗಿ ಹರಿಯುತ್ತಿದೆ.

ಶಿರೋಳ ಗ್ರಾಮದ ರೈತ ಮುಖಂಡ ರಮೇಶ ಗಡ್ಡದನ್ನವರ ಈ ಹೋರಾಟದ ನೇತೃತ್ವ ವಹಿಸಿದ್ದರು. ಇವರು ಎಂಎಸ್‌ಸಿ, ಎಲ್ ಎಲ್.ಬಿ. ಪದವೀಧರರಾಗಿದ್ದರು. ಈ ಗ್ರಾಮದ ಆತ್ಮವೇ ಆಗಿದ್ದರು. ಆ ಪ್ರದೇಶದ ಎಲ್ಲಾ ರೈತ ಹೋರಾಟಗಳಲ್ಲೂ ಭಾಗವಹಿಸಿದ್ದರು ಮತ್ತು ಬಡ ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡುವಲ್ಲಿ ಸರಕಾರದ ಮನವೊಲಿಸಲು ತೀವ್ರ ಕ್ರಮ ಕೈಗೊಂಡಿದ್ದರು. ಕಳೆದ 25 ವರ್ಷಗಳಿಂದ ಇಲ್ಲಿಯ ಗ್ರಾಮ ಪಂಚಾಯಿತಿಯಲ್ಲಿ, ಸಹಕಾರಿ ಸಂಘಗಳಲ್ಲಿ ರೈತ ಸಂಘದ ಆಡಳಿತವಿದೆ. ಎಲ್ಲ ರೈತರ ಹೆಗಲ ಮೇಲೆ ಹಸಿರು ಟ್ರಾವೆಲ್ ರಾರಾಜಿಸುತ್ತಿದೆ. ಇದಕ್ಕೆಲ್ಲ ರಮೇಶ್ ಗಡ್ಡದನ್ನವರ್ ಅವರ ಪ್ರಾಮಾಣಿಕ ದಿಟ್ಟ ಹೋರಾಟ ಕಾರಣ. ಅವರು ಅನಾರೋಗ್ಯದಿಂದ ಈಚೆಗೆ ನಿಧನರಾದರು. ಇದು ನಿಜಕ್ಕೂ ಗ್ರಾಮಕ್ಕೆ ತುಂಬಲಾರದ ನಷ್ಟ. ಶಿರೋಳ ಗ್ರಾಮಸ್ಥರೆಲ್ಲ ಸೇರಿ, 13.4.2026ರಂದು ರಮೇಶ ಅವರ ಕಂಚಿನ ಭವ್ಯ ಪ್ರತಿಮೆಯನ್ನು ನಿರ್ಮಿಸಿ ಗ್ರಾಮದ ಪ್ರವೇಶದಾರದಲ್ಲಿ ಸ್ಥಾಪಿಸಿದ್ದಾರೆ! ಅಂದು ರಮೇಶ್ ಗಡ್ಡದನ್ನವರ್ ಅವರ 64ನೆಯ ಜನ್ಮದಿನೋತ್ಸವವನ್ನೂ ಆಚರಿಸಲಾಗಿತ್ತು.

ಅದೊಂದು ಕಾಲವಿತ್ತು | ಯಾರೆಲ್ಲಾ ಪಾಸಾಗಿದ್ದಾರೆ ಎಂದು ಗೊತ್ತಾಗುವುದೇ ಎಪ್ರಿಲ್ ಹತ್ತರಂದು!

ಎಪ್ರಿಲ್ ಹತ್ತರ ಮಹತ್ವ ಗೊತ್ತೇ?

» ಬಿ.ಕೆ.ಮೀನಾಕ್ಷಿ, ಮೈಸೂರು

ಆಗಿನ ಕಾಲಕ್ಕೆ ಅಂದರೆ ನಮ್ಮ ಕಾಲಕ್ಕೆ ಏಪ್ರಿಲ್ ಹತ್ತು ಅಂದರೆ ನಿದ್ದೆಗೆಟ್ಟು ಕಾಯುವ ಕಾತರದ ದಿನ. ಕೆಲ ಮಕ್ಕಳಿಗೆ ಕುತ್ತು! ಛೇ! ಹೀಗೆ ಹೇಳೋದಕ್ಕೆ ಮನಸ್ಸಿಗೆ ಬೇಸರವಾಗುತ್ತದೆ. ಆದರೆ ಏನು ಮಾಡಲಿ? ಹೇಳಲೇ ಬೇಕಾಗಿದೆ. ಅಬ್ಬಬ್ಬಾ! ನಾವು ಚಿಕ್ಕವರಿದ್ದಾಗ ಏಪ್ರಿಲ್ ಹತ್ತು ಅಂದರೆ ಸಾಕು; ಭಯ, ಕಳವಳ, ನೆಮ್ಮದಿ ಕಳೆದುಕೊಂಡ ಹಿಂದಿನ ರಾತ್ರಿ, ನಾಳೆ ಏನೋ ಆಗಿಬಿಡುತ್ತದೆ ಎಂಬ ಆತಂಕ! ಅನುತ್ತೀರ್ಣಗೊಂಡರೆ ಯಾರ್‍ಯಾರು ಯಾವ ಯಾವ ರೀತಿ ನಮ್ಮನ್ನು ಅವಮಾನಿಸಬಹುದೆಂಬ ಕಲ್ಪನೆಯಲ್ಲೇ ಕದಡಿ ಹೋಗುವ ನಮ್ಮ ಮನಸ್ಸುಗಳು. ಟೆಸ್ಟು ಅಥವಾ ಅರ್ಧ ವಾರ್ಷಿಕಗಳಲ್ಲಿ ಯಾವುದಾದರೂ ವಿಷಯ ಅಥವಾ ಭಾಷೆಗಳಲ್ಲಿ ಅನುತ್ತೀರ್ಣಗೊಂಡಿದ್ದರೆ, ಆಯಾ ಶಿಕ್ಷಕರನ್ನು ಕತ್ತೆತ್ತಿ ನೋಡುತ್ತಲೇ ಇರಲಿಲ್ಲ; ಅವರ ನೇರ ನೋಟಕ್ಕೆ ಸಿಲುಕಿಕೊಳ್ಳುತ್ತಲೇ ಇರಲಿಲ್ಲ. ಹಾಗೇನಾದರೂ ಸಿಕ್ಕಿಬಿಟ್ಟರೆ ಅವರ ಇರಿಯುವ ನೋಟವನ್ನು ಎದುರಿಸುವ ಶಕ್ತಿ ಕುಂದಿ ನಮ್ಮ ಮುಖಗಳು ಕಳಾಹೀನವಾಗುತ್ತಿದ್ದವು. ಇದೊಂದು ಬಗೆಯಾದರೆ ಇನ್ನೊಂದು ಬಗೆ ಹೀಗಿದೆ : ಪರೀಕ್ಷೆಗಳೆಲ್ಲ ಮುಗಿದು ಫಲಿತಾಂಶಕ್ಕೆ ಕಾಯುವ ದಿನಗಳಲ್ಲಿ ನಮಗೆ ಪಾಠಗಳು ಸರಿಯಾಗಿ ಅರ್ಥವಾಗಿ, ಪ್ರಶ್ನೆಗೆ ಉತ್ತರಗಳು ಸಲೀಸಾಗಿ ಬಾಯಿಗೆ ಬರುತ್ತಿದ್ದವು. ಹಳೆಯ ಪುಸ್ತಕಗಳನ್ನು ತಿರುವಿ ಹಾಕಿಕೊಂಡು ಜೋಡಿಸಿಟ್ಟು, ಆ ತರಗತಿಗೆ ಬರುವ ನಮ್ಮ ತಮ್ಮ ತಂಗಿ ಅಥವಾ ಅಕ್ಕಪಕ್ಕದ ಮನೆಯ ಪರಿಚಯಸ್ಥ ಮಕ್ಕಳಿಗೆ ಕೊಡುವಾಗ, ಅದರಲ್ಲಿರುವ ಎಲ್ಲವನ್ನೂ ಅರೆದು ಕುಡಿದಂತೆ ಬಾಯಿಗೆ ಬರುತ್ತಿದ್ದವು! ಅದಕ್ಕೆ ಮೊದಲು ಪರೀಕ್ಷೆಯ ಮುಗಿವವರೆಗೂ ಎಲ್ಲವೂ ಕಲಸು ಮೇಲೋಗರ! ಯಾವುದೂ ಸ್ಪಷ್ಟವಿಲ್ಲ! ಅದರ ಉತ್ತರ ಈ ಪ್ರಶ್ನೆಗೆ, ಇದರ ಉತ್ತರ ಆ ಪ್ರಶ್ನೆಗೆ ತಗುಲಿಕೊಂಡು ಎಲ್ಲ ಅಯೋಮಯ! ಈಸಾರಿ ಹೇಗಾದರೂ ಪಾಸಾಗಿಬಿಟ್ಟರೆ ಸಾಕು, ಮುಂದಿನ ಸರ್ತಿ ಚೆನ್ನಾಗಿ ಮೊದಲಿನಿಂದಲೇ ಓದಿಕೊಳ್ಳುತ್ತೇನೆ ಎಂದು ಅದೆಷ್ಟೆಷ್ಟು ಲೆಕ್ಕವಿಲ್ಲದ ಪ್ರತಿಜ್ಞೆಗಳಾಗಿ ಹೋಗುತ್ತಿದ್ದವೋ!

ಒಂದೂ ಪಾಠ ಬಿಡದಂತೆ ಓದಿಕೊಳ್ಳಬೇಕು, ಬೋರ್ಡು ಮೇಲೆ ಬರೆದದ್ದನ್ನು ಸರಿಯಾಗಿ ನೋಟುಪುಸ್ತಕದಲ್ಲಿ ತಪ್ಪಿಲ್ಲದಂತೆ ಬರೆದುಕೊಂಡು ಮನೆಗೆ ಬಂದ ಕೂಡಲೇ ಓದಿಕೊಳ್ಳಬೇಕು... ಇನ್ನುಮುಂದೆ ಅವತ್ತಿನ ಪಾಠವನ್ನು ಅವತ್ತೇ ಓದಿಕೊಳ್ಳಬೇಕು...ಯಾರು ಕರೆದರೂ ಆಟಕ್ಕೆ ಹೋಗಬಾರದು ಫಲಿತಾಂಶ ಬರುವ ಮೊದಲು ಇಂತಹ ನೂರಾರು ಪ್ರತಿಜ್ಞೆಗಳು ಮನಸ್ಸಿನಲ್ಲಿ ಮೂಡಿ ಸ್ಥಿರಗೊಂಡು ಅದಕ್ಕೆ ಬದ್ಧರಾಗಿರಲು ಅವತ್ತಿನಿಂದಲೇ ಶ್ರೀಕಾರ ಹಾಕಿಬಿಡುತ್ತಿದ್ದೆವು. ನಮ್ಮ ಒಳ್ಳೆಯತನ, ನಡೆ ನುಡಿ ನೋಡಿ ನಮ್ಮ ಹಿರಿಯರು ತಬ್ಬಿಬ್ಬುಗೊಳ್ಳುವಂತೆ ಮಾಡಿಬಿಡುತ್ತಿದ್ದೆವು. ಆದರೆ, ಅದು ಸ್ವಲ್ಪ ದಿನಗಳ ಮಟ್ಟಿಗೆ ಮಾತ್ರ!

ಎಪ್ರಿಲ್ ಹತ್ತನೇ ತಾರೀಖು ಶಾಲೆಗೆ ಎಲ್ಲರೂ ಕಡ್ಡಾಯವಾಗಿ ಹೋಗಲೇಬೇಕು. ಇಲ್ಲದಿದ್ದರೆ ಪಾಸು ಫೇಲು ಹೇಳುವುದಿಲ್ಲ. ಹಾಗಾಗಿ ಅವತ್ತು ನಮ್ಮ ಹಾಜರಿ ಕಡ್ಡಾಯ ತರಗತಿಗಳಲ್ಲಿ! ನಮ್ಮ ಘನಂದಾರಿ ಕೆಲಸಗಳನ್ನೆಲ್ಲ ಬಿಟ್ಟು ಬಂದು ಕೂರುತ್ತೇವೆ ತರಗತಿಗಳಲ್ಲಿ. ಅವರಿವರ ತೋಟಕ್ಕೆ ಲಗ್ಗೆ ಹಾಕುವುದು, ಹಣ್ಣು ಕೀಳುವುದು, ಕಾಲುವೆಯಲ್ಲಿ ಕಾಲು ಇಳಿಬಿಟ್ಟು ಹೆಣ್ಣು ಮಕ್ಕಳು ಕುಳಿತರೆ, ಗಂಡು ಮಕ್ಕಳು ಈಜಾಡಿ ನಲಿದಾಡುವುದು, ಮಾವಿನ ತೋಪಿನಲ್ಲಿ ಕದಿಯುವ ಆಟಕ್ಕೆ ಕೊನೆಯೇ ಇಲ್ಲ! ಇಂತಹ ಮಹಾನ್ ಕಾರ್ಯಗಳನ್ನು ಬಿಟ್ಟು ಸುಮ್ಮನೆ ಮುಖ ಇಳಿ ಬಿಟ್ಟು ಮೂದೇವಿಗಳಂತೆ, ನೋಡಿದವರಿಗೆ ಅಯ್ಯೋ ಎನಿಸುವಂತೆ ಸಪ್ಪಗೆ ಕುಳಿತ ನಮ್ಮನ್ನು ನೋಡಿ, ನಮ್ಮ ಟೀಚರುಗಳು, ನಾವು ಫೇಲಾಗಿದ್ದರೂ ಪಾಸು ಮಾಡಿಬಿಡಬೇಕು, ಹಾಗಿರುತ್ತಿತ್ತು ನಮ್ಮ ಅದ್ಭುತ ಅಭಿನಯ! ರಿಸಲ್ಟ್ ಬರುವ ದಿನ ನಾವೆಲ್ಲರೂ ಬಹು ಸಂಭಾವಿತರು, ಒಬ್ಬರಿಗೊಬ್ಬರು ಬಿಟ್ಟೂ ಬಿಡದ ಸ್ನೇಹಿತರಾಗಿ ಜೊತೆಜೊತೆಯಾಗಿ ಕೂರುತ್ತೇವೆ. ಹಸಿವನ್ನು ತಡೆಯುತ್ತೇವೆ.

ಹೆಸರು ಯಾವ ಪಟ್ಟಿಯಲ್ಲಿದೆ?

ನಾಲ್ಕು ಗಂಟೆಯಾಗುವುದನ್ನೇ ಕ್ಷಣಗಳನ್ನೆಣಿಸುತ್ತಾ ಕೂರುವ ನಾವು, ನಮ್ಮ ಟೀಚರುಗಳು ಫಲಿತಾಂಶದ ಹಾಳೆಗಳನ್ನು ನೋಟೀಸು ಬೋರ್ಡಿಗೆ ಅಂಟಿಸಲು ತರುವುದೇ ತಡ, ಒಟ್ಟಿಗೇ ಮುಗಿಬಿದ್ದು, ನಾ ಮುಂದೆ ತಾಮುಂದೆ ಎಂದು ನೂಕಾಡುತ್ತಿದ್ದರೆ, ಕೆಲವರು ಇದನ್ನೆಲ್ಲ ನೋಡುತ್ತಾ ಸುಮ್ಮನೆ ನಿಂತಿರುತ್ತಾರೆ. ಯಾಕೆ ಗೊತ್ತಾ? ಅವರ ಬಗ್ಗೆ ಅವರು ಭರವಸೆಯನ್ನೇ ಕಳೆದುಕೊಂಡು ಇನ್ನೇನು ಪಾಸು ಫೇಲು ನೋಡುವುದು, ಫೇಲೇ ಆಗಿರ್ತೀನಿ ಅಂತ ಗ್ಯಾರಂಟಿ ಮಾಡಿಕೊಂಡು ಅಳುತ್ತಾ ಮನೆಗೆ ಹೋಗಲು ತಯಾರಾಗಿರುತ್ತಾರೆ. ಇಂತಹವರ ಗೆಳೆಯ ಗೆಳತಿಯರ್‍ಯಾರಾದರೂ, ಅಕಸ್ಮಾತ್ ಇವರ ಹೆಸರು ಕಣ್ಣಿಗೆ ಬಿದ್ದರೆ ಜೋರಾಗಿ ಕೂಗಿ ಹೇಳುತ್ತಾರೆ, 'ಏಏಏ ನಿನ್ನೆಸ್ರು ಇಲ್ಲಿ ಇದೆ' ಅಂತ. ಆ ಕಡೆಯಿಂದ ಇವರು, 'ಪಾಸಲ್ಲಿ ಬರ್ದಿದ್ದಾರೋ? ಫೇಲಲ್ಲಿ ಬರ್ದಿದ್ದಾರೋ?' ಅಂತ ಒಂದು ಬಗೆಯ ನಿರಾಶೆ ಹೊತ್ತ ಆಶಾಭಾವದಿಂದ ಕೇಳುತ್ತಾರೆ.

ಕೆಲವು ಮಕ್ಕಳು ಪಾಸಾಗಿದ್ದೇನೆ ಅಂತ ಜೋರಾಗಿ ಡಂಗೂರ ಸಾರಿ, ಮನೆಗೆ ಓಡಿ ಹೋಗಿ, ಮತ್ತೆ ಅದೇ ವೇಗದಿಂದ ಕೈಯ್ಯಲ್ಲೊಂದು ಚೀಲ ಹಿಡಿದು ವಾಪಸ್ಸು ಬರುತ್ತಾರೆ. ಸ್ವೀಟು! ಮೊದಲು ಶಿಕ್ಷಕರಿಗೆ, ತನ್ನ ತರಗತಿಯವರಿಗೆ ನಂತರ ಬೇಕಾದ ಗೆಳೆಯ ಗೆಳತಿಯವರಿಗೆ ಹಂಚಿಕೆ! ಇಂದಿನ ಹಾಗೆ ಬಗೆ ಬಗೆಯದ್ದಲ್ಲ, ಪುಟಾಣಿ ಪೆಪ್ಪರಮೆಂಟು!

ಆ ದಿನ ಜೋಲು ಮೋರೆ ಹಾಕಿದವರು, ಇಡೀ ಪ್ರಪಂಚವನ್ನೇ ಗೆದ್ದಂತೆ ಅಟ್ಟಹಾಸ ಮಾಡಿದವರು, ಮುಂದಿನ ತರಗತಿಗೆ ಪುಸ್ತಕ ಕೊಳ್ಳಬೇಕು ಎಂದು ಏನೂ ಆಗೇ ಇಲ್ಲ ಎನ್ನುವಂತೆ ಹೊರಡುವ ನಿರ್ಲಿಪ್ತ ಭಾವದ ಮಕ್ಕಳು..... ಹೀಗೆ ಭಾವನೆಗಳು ಬಗೆಬಗೆಯದು! ನೋಡುವ ನಮ್ಮ ಕಣ್ಣುಗಳು ಎರಡೇ! ಈ ನೆನಪುಗಳೆಲ್ಲ ಅದೆಷ್ಟು ಮಧುರವಾಗಿ ಮನದಲ್ಲಿ ಜತನವಾಗಿವೆ ಎಂದರೆ, ಯಾವತ್ತೂ ಈ ನೆನಪುಗಳು ಮಾಸುವುದೇ ಇಲ್ಲ ಸದಾ ಹಸಿರು! ನಮ್ಮ ಬಾಳಿನ ಉಸಿರು.

ನಂತರ ನಾನೇ ಶಿಕ್ಷಕಿಯಾಗಿಬಿಟ್ಟೆ. ಇದಂತೂ ಇನ್ನೂ ರೋಚಕ ಅನುಭವ. ನಾವು ಪುಟ್ಟವರಿದ್ದಾಗ ಪಡೆದ ಅನುಭವಕ್ಕೂ, ಪುಟ್ಟ ಮಕ್ಕಳನ್ನು ನೋಡಿ ಅನುಭವಿಸುವ ಆನಂದಕ್ಕೂ ಓಹ್! ಏನೆಂದು ವರ್ಣಿಸುವುದದರ ಸೌಂದರ್ಯವನ್ನು! ಆ ಮುಗ್ಧತೆ, ಸುಂದರ ಮನಸ್ಸು, ನಮ್ಮ ಟೀಚರ್ ಎನ್ನುವ ಅಭಿಮಾನ, ಎಷ್ಟೇ ಬೈಸಿಕೊಂಡರೂ ಅಭಿಮಾನದಿಂದ ನಮ್ಮೆಡೆಗೆ ಪ್ರೀತಿಯ ನೋಟ ಬೀರುವ ಆ ಎರಡು ಮುದ್ದು ಕಣ್ಣುಗಳು! ಛೇ! ಯಾಕಾದರೂ ನಿವೃತ್ತಿ ಬಂದಿತೋ ಅಂತ ಪಶ್ಚಾತ್ತಾಪ ಪಡುವಂತಾಗುತ್ತದೆ.

ನಮ್ಮ ಶಾಲೆಯಲ್ಲಿ ಒಂದು ಹುಡುಗಿ ಇದ್ದಳು. ಮಮತಾ ಅಂತಿಟ್ಟುಕೊಳ್ಳೋಣ. ನಾನು ಕೆಲಸಕ್ಕೆ ಸೇರಿದ ಹೊಸದು. ಇಂಗ್ಲಿಷ್ ಕ್ಲಾಸು ತೆಗೆದುಕೊಳ್ಳುತ್ತಿದ್ದೆ. ಏಳನೇ ತರಗತಿ. ಮೊದಲ ಟೆಸ್ಟ್ ಬಂದಿತು. ಮೌಲ್ಯಮಾಪನಕ್ಕೆ ಕುಳಿತೆ. ಪರವಾಗಿಲ್ಲ, ಮಕ್ಕಳಿಗೆ ಪಾಠ ಅರ್ಥವಾಗಿದೆ, ಚೆನ್ನಾಗಿ ಬರೆದಿದ್ದಾರೆ ಎಂದು ಸಂತೋಷಿಸುವಷ್ಟರಲ್ಲೇ ಒಂದು ಪೇಪರ್ ಬಂದಿತು. ಪೇಪರನ್ನು ತಿರುಗಿಸಿ ಮಗುಚಿ ನೋಡಿದೆ. ಏನೂ ಅರ್ಥವಾಗುತ್ತಿಲ್ಲ. ಪ್ರಶ್ನೆ ಅರ್ಥವಾಗುತ್ತಿದೆ. ಉತ್ತರ ಅರ್ಥವಾಗುತ್ತಿಲ್ಲ. ಅಯ್ಯೋ, ಇದೇನಿದು ಅಂದುಕೊಂಡು ಈ ಹುಡುಗಿಗೆ ಅಂಕಗಳನ್ನು ನೀಡುವುದಾದರೂ ಹೇಗೆಂದು ಚಿಂತಿಸುತ್ತಾ ಕುಳಿತೆ. ಕಡೆಗೂ ಉತ್ತರವೇನೆಂದು ಅಂದಾಜಿಸಲಾಗಲಿಲ್ಲ. ಸರಿ, ಮಧ್ಯಾಹ್ನದ ಊಟದ ಬಿಡುವಿನಲ್ಲಿ, ಬೇರೆ ಶಿಕ್ಷಕರಿಗೆ ತೋರಿಸಿದೆ. ಅವರು ನಕ್ಕರು. 'ಏನು? ಯಾಕೆ ನಗ್ತೀರಿ?' ಅಂದೆ. 'ಅವಳು ಆಯಾ ಪ್ರಶ್ನೆಯನ್ನು ಉಲ್ಟಾ ಬರೆದಿರುತ್ತಾಳೆ ಅಷ್ಟೆ' ಎಂದು ನಕ್ಕರು. ಆಗ ಬಲಗಡೆಯಿಂದ ಓದಿದೆ. ಅಚ್ಚರಿ ಪಡಬೇಕೋ, ನಗಬೇಕೋ, ಕರುಣೆಯಿಂದ ನೋಡಬೇಕೋ ತಿಳಿಯದಾಯಿತು. ಕಡೇ ಪಕ್ಷ ಎ.ಬಿ.ಸಿ.ಡಿ.ಗಳಾದರೂ ಸರಿಯಾಗಿ ಗೊತ್ತಾ? ಗೊತ್ತಿಲ್ಲದಿದ್ದರೆ, ಅದನ್ನಾದರೂ ಈ ವರ್ಷ ಮುಗಿಯುವಷ್ಟರಲ್ಲಿ ಕಲಿಸಿಬಿಡಬೇಕು ಎಂದು ನಿರ್ಧರಿಸಿದೆ. ಇಲ್ಲದಿದ್ದರೆ ಪ್ರೌಢಶಾಲೆಯಲ್ಲಿ ನಮ್ಮನ್ನು ಬೈಯ್ಯುತ್ತಾರೆ.

ಒಂದು ರುಪಾಯಿ ನೀಡಿದ ಬಾಲಕಿ!

ಇನ್ನೊಂದು ಘಟನೆ ಹೇಳಲೇ ಬೇಕು. ನಾಲ್ಕನೇ ತರಗತಿ. ಹುಡುಗಿ ಹೆಸರು ಗೀತಾ. ಇದೇ ತರಗತಿಯಲ್ಲೇ ಕೆಲವೊಂದು ಬಾಲಕ ಬಾಲಕಿಯರು ಪಾಠವನ್ನು ತುಂಬ ಗಮನವಿಟ್ಟು ಕೇಳುತ್ತಿದ್ದರು. ಕಿರುಪರೀಕ್ಷೆ ಮತ್ತು ಅರ್ಧವಾರ್ಷಿಕ ಪರೀಕ್ಷೆಗಳಲ್ಲಿ ಪೂರ್ಣ ಅಂಕಗಳನ್ನು ತಮ್ಮದಾಗಿಸಿಕೊಳ್ಳುತ್ತಿದ್ದರು. ಈ ಗೀತಾ ನಾನೊಬ್ಬಳೇ ಇರುವ ಸಂದರ್ಭ ನೋಡಿಕೊಂಡು, ಒಂದುದಿನ ಆಫೀಸು ರೂಮಿಗೆ ಬಂದಳು. 'ಏನಮ್ಮಾ ಗೀತಾ, ಏನ್ಸಮಾಚಾರ?' ಅಂದೆ. ಅಂಜುತ್ತಂಜುತ್ತಲೇ ಒಂದು ರೂಪಾಯಿ ಕೈಗೆ ಕೊಟ್ಟಳು. ಯಾಕಮ್ಮಾ? ಅಂದೆ. ಕತ್ತು ಎತ್ತದೆ, 'ಮಿಸ್, ನಂಗೆ ನೂರುಕ್ಕೆ ನೂರೂ ನಂಬರು ಕೊಡಿ ಮಿಸ್' ಅಂದಳು. ನನಗೆ ಒಂದುಕ್ಷಣ ಏನೂ ಅರ್ಥವಾಗಲಿಲ್ಲ. ಆದರೂ ಕೇಳಿದೆ, 'ಇದೇಕಮ್ಮಾ ಒಂದು ರೂಪಾಯಿ?' 'ಜಾಸ್ತಿ ನಂಬರ್ ಕೊಡಕ್ಕೆ ಮಿಸ್' ಅಂದಳು. 'ದುಡ್ಡು ಕೊಟ್ರೆ ನಂಬರ್ ಕೊಡ್ತಿನಿ ಅಂತ ನಿನಗ್ಯಾರಮ್ಮಾ ಹೇಳಿದ್ದು?' ಎಂದೆ. 'ಜಾಸ್ತಿ ನಂಬರ್ ಬರುತ್ತಲ್ಲ, ಅವರೆಲ್ಲ ಶ್ರೀಮಂತ್ರು ಅಲ್ವಾ? ಅವ್ರೆಲ್ಲ ನಿಮಗೆ ದುಡ್ಡು ಕೊಟ್ಟಿರ್ತೋದು ಅಂತ ಅನ್ಕೊಂಡೆ.' ಹಿಂದುಮುಂದು ಯೋಚಿಸದೆ ಮುಗ್ಧವಾಗಿ ನುಡಿದ ಆ ಮಗುವಿನ ಮಾತಿಗೆ ನನಗೆ ಕೋಪವೂ ಬರಲಿಲ್ಲ, ನೀವು ದುಡ್ಡು ತಗೊಂಡು ಜಾಸ್ತಿ ನಂಬರ್ ಕೊಡ್ತೀರಾ ಅಂತ ಪರೋಕ್ಷವಾಗಿ ನುಡಿದ ಆಕೆಯ ಬಗ್ಗೆ ಬೇಸರವೂ ಆಗಲಿಲ್ಲ. ಬದಲಿಗೆ ಆಕೆಯ ಪರಿಸರದ ಬಗೆಗೆ ನನಗೆ ಒಂದು ಸೂಕ್ಷ್ಮ ಎಳೆ ಸಿಕ್ಕಿತು. ಮತ್ತೊಮ್ಮೆ ಇದೇ ಹುಡುಗಿ ಡ್ಯಾನ್ಸ್‌ಗೆ ಸೇರಿಸಿಕೊಳ್ಳಿ ಅಂತ ಐದು ರೂಪಾಯಿ ತಂದಿದ್ದಳು. ಚಿಕ್ಕಮಕ್ಕಳ ಮುಂದೆ ವಿಷಯಗಳನ್ನು ಚರ್ಚಿಸಬೇಕಾದರೆ ಎಚ್ಚರಿಕೆಯಿಂದಿರಬೇಕೆಂಬ ಅರಿವು ಮನೆಯ ಹಿರಿಯರಿಗಿರಬೇಕು. ಅದು ಅವರ ಮನೆಯವರಲ್ಲಿ ಕಂಡ ಕೊರತೆ.

ಇನ್ನು ಮಕ್ಕಳ ಪ್ರೀತಿಯ ಬಗ್ಗೆ ಅದೇನೆಂದು ವರ್ಣಿಸಲಿ! ಅವರ ಮನೆಯ ಅಂಗಳದಲ್ಲಿ ಅರಳಿದ ಹೂವುಗಳನ್ನು ಅದೆಷ್ಟು ಜೋಪಾನವಾಗಿ ತಂದು ಕೊಡುತ್ತಿದ್ದವೆಂದರೆ, ಈ ಹೂವನ್ನು ಬಾಡದಂತೆ ಕಾಪಾಡಿಕೊಳ್ಳಬೇಕೆಂದು ಮನಸ್ಸು ಹಂಬಲಿಸುತ್ತಿತ್ತು. ಮಕ್ಕಳಿಗೆ ಪ್ರೀತಿಪಾತ್ರರಾದ ಶಿಕ್ಷಕರು ನಾವಾಗಿಬಿಟ್ಟರೆ, ಅವರ ಅಕ್ಷರಗಳು ಅದೆಷ್ಟು ಆಸ್ಥೆಯಿಂದ ಮೂಡಿ ಬರುತ್ತಿದ್ದವೋ.....ಪುಸ್ತಕಕ್ಕೆ ರಕ್ಷಾಕವಚವನ್ನು ಅದೆಷ್ಟು ಕಷ್ಟಪಟ್ಟು ಹಾಕಿಕೊಂಡು ಬರುತ್ತಿದ್ದರೋ, ಮನೆಯಲ್ಲಿ ವಿದ್ಯುತ್ ಇಲ್ಲದಿದ್ದರು ಬುಡ್ಡಿದೀಪದ ಬೆಳಕಿನಲ್ಲಿ ಹೋಂವರ್ಕ್ ಮಾಡಿ ತರುತ್ತಿದ್ದರೋ...ಶಿಸ್ತಿನಿಂದ ಬರಲು ಏನೇನು ಮಾಡಿಕೊಂಡು ಬರಬೇಕೆಂದು ಹೇಳುತ್ತಿದ್ದೆವೋ ಅದನ್ನೆಲ್ಲ ಸಾಧ್ಯವಾದಷ್ಟು ಅನುಸರಿಸಿಕೊಂಡು ಬರುವ ಮಕ್ಕಳನ್ನು ಕಂಡರೆ, ಮನಸ್ಸಿನಲ್ಲಿ ತಂತಾನೇ ವಾತ್ಸಲ್ಯ ಉಕ್ಕುತ್ತಿತ್ತು.

ಏಪ್ರಿಲ್ ಹತ್ತರಂದು ಅವರ ಎಳೆಮುಖಗಳಲ್ಲಿ ತುಂಬಿರುತ್ತಿದ್ದ ಆತಂಕ, ದುಗುಡಗಳನ್ನು ಅದೆಷ್ಟು ಬೇಗ ನಿವಾರಿಸಿಬಿಡಬೇಕೆಂಬ ತಹತಹ ನನ್ನಲ್ಲಂತೂ ತುಂಬಿ ನಿಲ್ಲುತ್ತಿತ್ತು. ಎಷ್ಟೆಂದು ಈ ಮಕ್ಕಳನ್ನು ಕಾಯಿಸುವುದು? ಆದರೆ ನಾಲ್ಕು ಗಂಟೆಯಾಗಲೇ ಬೇಕಿತ್ತು! ಫೇಲಾದ ಮಕ್ಕಳ ಪೇಲವ ವದನ ನೋಡಲು ಬಹಳ ಬೇಸರವಾಗುತ್ತಿತ್ತು. ಅನುತ್ತೀರ್ಣಗೊಳಿಸುವುದು ಕೆಲವೊಮ್ಮೆ ಆ ಕಾಲದಲ್ಲಿ ಅನಿವಾರ್ಯವಾಗುತ್ತಿತ್ತು. ಈಗೆಲ್ಲ ಅದರ ಗೊಡವೆಯೇ ಇಲ್ಲ; ಎಲ್ಲರೂ ಪಾಸು. ಬಡ ಮಕ್ಕಳು, ಎಷ್ಟು ಕಷ್ಟ ಪಟ್ಟು ಓದುತ್ತಿದ್ದರೆಂದರೆ, ಎಂಥ ಮುತ್ತಿನಂಥ ಮಕ್ಕಳಿವು ಎಂದು ಅಭಿಮಾನಿಸುತ್ತಿದ್ದೆ ನಾನು. ಉಡಾಫೆ ಮಕ್ಕಳಿಗೇನೂ ಕೊರತೆಯಿರಲಿಲ್ಲ ಶಾಲೆಯಲ್ಲಿ. ಆದರೆ ಅಂತಹ ಮಕ್ಕಳ ಭವಿಷ್ಯವೂ ನಮ್ಮ ಕೈಲೇ ಇರುತ್ತಿದ್ದುದರಿಂದ, ಅವರನ್ನು ತಿದ್ದಿ ಬುದ್ಧಿ ಹೇಳಿ ಸರಿ ಮಾರ್ಗಕ್ಕೆ ತರುವ ಪ್ರಯತ್ನದಲ್ಲಿ ಕೆಲವೊಮ್ಮೆ ಸೋಲು, ಮತ್ತೆ ಕೆಲವೊಮ್ಮೆ ಗೆದ್ದು ನಮ್ಮ ಬಗ್ಗೆ ನಮಗೇ ಹೆಮ್ಮೆಯಾಗುತ್ತಿದ್ದುದೂ ಅಷ್ಟೇ ನಿಜ. ಇನ್ನಿವು ಗಳನ್ನು ತಿದ್ದಲು, ಕಲಿಸಲು ಸಾಧ್ಯವೇ ಇಲ್ಲ ಎಂಬ ಮಕ್ಕಳನ್ನು ಮಾತ್ರ ಇನ್ನೊಂದು ವರ್ಷ ಕಲಿಯಲಿ ಎಂದು ಅದೇ ತರಗತಿ ಯಲ್ಲಿ ಕೂರಿಸಲು ಎಲ್ಲರೂ ಸೇರಿ ತೀರ್ಮಾನಿಸುತ್ತಿದ್ದೆವು. ನಿಜಕ್ಕೂ ನನಗೆ ಆಶ್ಚರ್ಯವಾಗುತ್ತಿತ್ತು. ಆ ಮಕ್ಕಳು ಆಗ ಸ್ವಲ್ಪ ಭಯ ಭಕ್ತಿ, ಆಸಕ್ತಿ ರೂಢಿಸಿಕೊಂಡು ತಮ್ಮ ಕಲಿಕೆಯನ್ನು ಉತ್ತಮಗೊಳಿಸಿಕೊಳ್ಳುತ್ತಿದ್ದರು. ನಮಗೂ ಸಮಾಧಾನವಾಗುತ್ತಿತ್ತು.

ಪಾಸು ಮಾಡಲು ಧಮ್ಕಿ!

ಒಂದು ಹುಡುಗಿ ಶಾಲೆಗೆ ಒಂದೇ ಸಮನೆ ಗೈರು ಹಾಜರಾಗುತ್ತಿದ್ದಳು. ಹೋಗಿ ಕರೆದು ಬಂದೆವು, ಮಕ್ಕಳ ಕೈಲಿ ಹೇಳಿ ಕಳಿಸಿದೆವು. ಊಹ್ಞೂಂ! ಜಪ್ಪಯ್ಯ ಅನ್ನಲಿಲ್ಲ! ಇನ್ನೂ ಬಹಳ ಒತ್ತಾಯ ಮಾಡಿ ಹೇಳಿ ಕಳಿಸಿದ್ದಕ್ಕೆ ಆಕೆಯ ಉತ್ತರವೇನು ಗೊತ್ತೇ? 'ನೀವು ಹೀಗೇ ಹೇಳಿ ಕಳಿಸುತ್ತಿದ್ದರೆ ನಾನು ಕಬಿನಿ ಹೊಳೆಗೆ ಹಾರ್‍ಕೊತ್ತೀನಿ ಅಂತ ಹೇಳೋಗು ಟೀಚರ್‌ಗೆ' ಅಂತ ಮಾರುತ್ತರ ಹೇಳಿಕಳೀಸಿದ್ದಳು. ಮತ್ತೆ ಅವರ ಮನೆಗೆ ಹೋಗಿ ಮನವೊಲಿಸಿದ್ದಕ್ಕೆ, 'ಪಾಸು ಮಾಡ್ತೀರಾ ಅಂದ್ರೆ ಶಾಲೆಗೆ ಬರ್ತೀನಿ. ಇಲ್ದಿದ್ರೆ ಬರಲ್ಲ' ಅಂತ ನಮಗೇ ಧಮ್ಕಿ ಹಾಕುವುದೇ? ಈಗ ಪ್ರಾಥಮಿಕ ಶಾಲಾಮಕ್ಕಳು ಸಾರಾಸಗಟಾಗಿ ಉತ್ತೀರ್ಣರಾಗುವುದರಿಂದ ಏಪ್ರಿಲ್ ಹತ್ತು ನೀರಸವಾಗಿದೆ. ಏಪ್ರಿಲ್ ಹತ್ತರಂದು ರಜ ಎಲ್ಲಿಯವರೆಗೆ ಕೊಡುತ್ತಾರೆ ಎಂದು ತಿಳಿದುಕೊಳ್ಳಲು ಮಕ್ಕಳು ಅದೆಷ್ಟು ಕಾತುರರಾಗಿರುತ್ತಿದ್ದರು! ಈಗ ಅಂತಹ ಕುತೂಹಲವಾಗಲೀ, ಆಸಕ್ತಿಯಾಗಲೀ ಮಕ್ಕಳಲ್ಲಿ ಉಳಿದಿಲ್ಲ. ಸಾಮಾಜಿಕ ಜಾಲತಾಣಗಳ ಮೋಹ ಪುಟ್ಟ ಮಕ್ಕಳ ತಲೆಯನ್ನು ತುಂಬಿಕೊಂಡು ಆಟ, ಪಾಠ, ಬಂದು ಹೋಗುವ ಜನರ ನಡುವಿನ ಮಾತುಕತೆ, ಸಂಬಂಧಗಳ ತಿಳಿವಳಿಕೆಗಳ ಬಗ್ಗೆ ಆಸಕ್ತಿಯೇ ಇಲ್ಲ. ಆಕಾಶವೇ ಕಳಚಿಬಿದ್ದರೂ, ಕೈಯ್ಯಲ್ಲೊಂದು ಮೊಬೈಲ್ ಇದ್ದುಬಿಟ್ಟರೆ ಸಾಕೆಂಬ ಪರಿಸ್ಥಿತಿ ಬಂದಿದೆ. ಪ್ರಾಣವನ್ನು ಒತ್ತೆಯಿಟ್ಟಾದರೂ ಮೊಬೈಲ್ ಪಡೆಯಬೇಕೆಂಬ ಹಠ ಈಗಿನ ಮಕ್ಕಳಿಗೆ!

ಕಾಲ ಬದಲಾಗಿದೆಯೋ, ನಾವು ಬದಲಾಗಿದ್ದೇವೆಯೊ, ವ್ಯವಸ್ಥೆಯೋ ಯಾವುದೋ ಒಂದು. ಒಟ್ಟಿನಲ್ಲಿ ಅಂದಿನ ಸುಂದರ ಬದುಕು, ಆಪ್ತಭಾವ, ಆತ್ಮೀಯತೆ ಇಂದಿನ ಬಾಲಬಾಲೆಯರಲ್ಲಿ ಕಾಣಲು ಶ್ರಮ ಪಡಬೇಕು. ಈಗ ಪುಟ್ಟ ಪುಟ್ಟ ಮಕ್ಕಳು ರಿಸಲ್ಟ್ ನೋಡಲೇ ಹೋಗುವುದಿಲ್ಲ! ಪಾಸಾಗುತ್ತೇವೆಂದು ಗೊತ್ತು. ಆದರೂ ನಮ್ಮ ಕಾಲದ ನೆನಪುಗಳನ್ನು ಸರಿಗಟ್ಟಲು ಇಂದಿನ ಯಾವುದಕ್ಕೂ ಸಾಧ್ಯವಿಲ್ಲ ಅಲ್ಲವೇ?

ಆರೋಗ್ಯಕ್ಕೆ ಬಲು ಹಿತ ರೊಟ್ಟಿ ಒಗ್ಗರಣೆ!

» ಮಹೇಶ್ ಹೊಸಮನಿ

ಒಗ್ಗರಣೆ ಅಂದರೆ ಯಾರಿಗೆ ಇಷ್ಟವಿಲ್ಲ ಹೇಳಿ? ಅಡುಗೆಯಲ್ಲೂ, ಮಾತಿನಲ್ಲೂ ಒಗ್ಗರಣೆ ಸೇರಿದರೆ, ಎಲ್ಲವೂ ರುಚಿಯಾಗುತ್ತದೆ! ಒಗ್ಗರಣೆ ಹಾಕಿದ ಮೊಸರಿನಿಂದ ಹಿಡಿದು ಅವಲಕ್ಕಿ, ಸಬ್ಬಕ್ಕಿ ,ಕಳ್ಳೇಪುರಿ ಎಲ್ಲರಿಗೂ ಇಷ್ಟ. ಕೇಳಿದಾಕ್ಷಣ ಬಾಯಲ್ಲಿ ನೀರೂರುತ್ತದೆ. ಈ ಪಟ್ಟಿಯಲ್ಲಿ ರೊಟ್ಟಿ ಒಗ್ಗರಣೆಯನ್ನೂ ಸೇರಿಸಬೇಕು. ನಮ್ಮಮ್ಮ ಬಾಲ್ಯದಲ್ಲಿ ಮಾಡಿ ನಮಗೆ ಮಾಡಿಕೊಡುತ್ತಿದ್ದ ರುಚಿಕರ 'ರೊಟ್ಟಿ ಒಗ್ಗರಣೆ'ಯನ್ನು, ನನ್ನಾಕೆ ಇಂದು ಮಾಡಿ ಬಡಿಸಿದಾಗ, ಬಾಲ್ಯದೆಲ್ಲ ನೆನಪುಗಳು ಪುಟಿದೆದ್ದು ಕಣ್ಣುಗಳು ತೇವಗೊಂಡವು; ಇತ್ತ, ನಾಲಗೆಯಲ್ಲೂ ನೀರೂರಿ, ಬಾಯಿಯೂ ತೇವಗೊಂಡಿತು!

ಉತ್ತರ ಕರ್ನಾಟಕದವರಾದ ನಮಗೆ ಜೋಳದ ರೊಟ್ಟಿ ಇಷ್ಟವೆಂದು ವಿಶೇಷವಾಗಿ ಹೇಳಬೇಕಾಗಿಲ್ಲ; ಹೊಸದಾಗಿ ತಯಾರಿಸಿದ್ದಾಗಲೀ, ತಯಾರಿಸಿಟ್ಟ ಒಣರೊಟ್ಟಿಯಾಗಲೀ ಎಲ್ಲರಿಗೂ ಅಚ್ಚುಮೆಚ್ಚು. ಅಡುಗೆಯಲ್ಲಿ ಅಳಿದುಳಿದ ರೊಟ್ಟಿಗಳನ್ನು ಚೂರು ಚೂರು ಮಾಡಿ ನೆನೆಸಿ, ಈರುಳ್ಳಿ, ಬೆಳ್ಳುಳ್ಳಿ ಜೊತೆಗೆ ತರಕಾರಿಗಳನ್ನೂ ಸೇರಿಸಿ ಒಗ್ಗರಣೆ ಕೊಟ್ಟಾಗ ತಯಾರಾಗುವುದೇ 'ರೊಟ್ಟಿ ಒಗ್ಗರಣೆ'. ಇದು ರುಚಿಕರವೂ ಹೌದು, ಆರೋಗ್ಯಕ್ಕೂ ಹಿತ. ಹದವಾಗಿ ಹುಳಿ ಬಂದಿದ್ದರೆ, ಫರ್ಮೆಂಟೆಡ್ ಆಹಾರವಾಗಿಯೂ, ಹೊಟ್ಟೆಯ ಬ್ಯಾಕ್ಟೀರಿಯಾಗಳನ್ನು ಪೋಷಿಸಬಲ್ಲದು; ಇತ್ತ ದೇಹಕ್ಕೆ ಕಸುವನ್ನೂ ತುಂಬಿಕೊಡಬಲ್ಲದು. ಒಮ್ಮೆ ತಿಂದು ಸವಿದವರೇ ಬಲ್ಲರು ಆ ಸವಿಯ! ಆಹಾ! ನೀವೂ ಒಮ್ಮೆ ಸವಿದು ನೋಡಿ.

ಗಮನಕ್ಕೆ: ನಿಮ್ಮ ಹಳ್ಳಿಯಲ್ಲೂ ಇಂತಹ ಹಳೆಯ ಕಾಲದ ತಿಂಡಿಗಳನ್ನು ನೀವು ಸವಿದಿದ್ದರೆ, ಅದರ ಅನುಭವ ವನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ಸೂಕ್ತ ಎನಿಸಿದರೆ ಪ್ರಕಟಿಸುತ್ತೇವೆ.
viramapost@gmail.com

ಗೋಡಂಬಿ ಜ್ಯೂಸ್ ರುಚಿಕರ

» ಕೆ.ಎನ್.ಶೆಟ್ಟಿ, ಕಾರ್ಕಳ

ನಮ್ಮ ರಾಜ್ಯದ ಕರಾವಳಿಯಲ್ಲಿ ಸಾಕಷ್ಟು ಗೋಡಂಬಿ ಹಣ್ಣನ್ನು ಮಾರುವುದಿಲ್ಲ. ಮಕ್ಕಳು ಅದರ ಹಣ್ಣನ್ನು ಒಂದೆರಡು ತಿಂದರೆ ಆಯಿತು; ದೊಡ್ಡವರು ತಿನ್ನುವುದು ಕಡಿಮೆ, ಏಕೆಂದರೆ, ಜಾಸ್ತಿ ತಿಂದರೆ ಗಂಟಲು ಕೆರೆತ ಬರುತ್ತದೆ. ಗೋಡಂಬಿ ಹಣ್ಣನ್ನು ಎಸೆಯುವುದು, ಜಾನುವಾರುಗಳಿಗೆ ಕೊಡುವುದು, ಗೊಬ್ಬರದ ಗುಂಡಿಗೆ ಸುರಿಯುವುದು ಸಾಮಾನ್ಯ. ಕಳೆದ ವಾರದ 'ವಿರಾಮ' ಪುರವಣಿಯಲ್ಲಿ, ಗೋಡಂಬಿ ಹಣ್ಣಿನ ರಸವನ್ನು ತಯಾರಿಸುವ ಲೇಖನವನ್ನೋದಿ ಖುಷಿಯಾಯಿತು. ಗೋಡಂಬಿ ಹಣ್ಣಿನ ರಸದಿಂದ 'ಟ್ಯಾನಿನ್' ಎಂಬ ಅಂಶವನ್ನು ತೆಗೆದರೆ, ಅದರ ಒಗರು ಕಡಿಮೆಯಾಗುತ್ತದೆ

ಎಂದು ತಿಳಿದು, ಕುತೂಹಲವಾಗಿ, ಮಾಹಿತಿ ಸಂಗ್ರಹಿಸಿದಾಗ, ಒಂದು ವಿಚಾರ ಗೊತ್ತಾಯಿತು. ನಮ್ಮ ರಾಜ್ಯದ ಕರಾವಳಿಯಲ್ಲಿ ಹಲವರು, ಈ ರೀತಿ ಗೋಡಂಬಿ ರಸವನ್ನು ಟ್ಯಾನಿನ್ ರಹಿತ ಮಾಡಿ, ರುಚಿಕರ ಜ್ಯೂಸ್ ಮಾಡಿದ್ದಾರೆ ಎಂಬುದೇ ಆ ವಿಚಾರ. ಕಾಸರಗೋಡು ಏತಡ್ಕದ ಗಣಪತಿ ಭಟ್ ಎಂಬುವವರು, ಒಗರು ತೆಗೆಯುವ ಹೊಸ ವಿಧಾನವನ್ನು ಹುಡುಕಿದ್ದಾರೆ ಎಂಬ ಮಾಹಿತಿಯೂ ಫೇಸ್‌ಬುಕ್‌ನಲ್ಲಿ ದೊರಕಿದೆ. ಅವರ ವಿಧಾನ : ಗೋಡಂಬಿ ಹಣ್ಣನ್ನು ತುಂಡು ತುಂಡು ಮಾಡಿ, ಉಪ್ಪು ನೀರಿನಲ್ಲಿ 15 ನಿಮಿಷ ನೆನೆಸಬೇಕು; ನಂತರ ಒಳ್ಳೆಯ ನೀರಿನಲ್ಲಿ ತೊಳೆಯಬೇಕು; ಆ ನಂತರ ಮಿಕ್ಸಿಗೆ ಹಾಕಿ ಜ್ಯೂಸ್ ಮಾಡಿ, ಸೋಸಿದರೆ, ಬಹಳ ಕಡಿಮೆ ಒಗರು ಇರುವ ರುಚಿಕರ ಜ್ಯೂಸ್ ಸಿದ್ಧವಾಗುತ್ತದೆ. ಇನ್ನು ಕೆಲವರು, ಸಾಬಕ್ಕಿ ಪುಡಿಯನ್ನು ಗೋಡಂಬಿ ರಸಕ್ಕೆ ಹಾಕಿ, ಹಲವು ಗಂಟೆಗಳ ಕಾಲ ಬಿಟ್ಟು, ಅದರ ಒಗರು ರುಚಿ ತೆಗೆದಿದ್ದಾರೆ.. ರುಚಿಕರ ಗೋಡಂಬಿ ಜ್ಯೂಸ್‌ನ್ನು ಈ ರೀತಿಯ ಉತ್ತಮ ರುಚಿಯನ್ನು ಹೊಂದುವಂತೆ ಮಾಡಿ, ನಮ್ಮ ರಾಜ್ಯದಾದ್ಯಂತ ಮಾರಾಟ ಮಾಡಲಿ ಎಂಬುದು ನನ್ನ ಆಸೆ.

ಕಬ್ಬಿಣದ ಕಾವಲಿ ಉತ್ತಮವೇ?

» ಡಾ. ಶಶಿಕಿರಣ್ ಉಮಾಕಾಂತ್

ಮಾರುಕಟ್ಟೆಯಿಂದ ತರುವ ಆಹಾರದಲ್ಲಿ ಸಕ್ಕರೆ ಎಷ್ಟಿದೆ, ರಾಸಾಯನಿಕಗಳಿವೆಯಾ ಅಥವಾ ಇಲ್ಲವಾ ಎಂಬುದನ್ನು ಗಮನಿಸುತ್ತೇವೆ. ಆದರೆ ಆ ಆಹಾರವನ್ನು ಬೇಯಿಸುವ ಪಾತ್ರೆಗಳ ಬಗ್ಗೆ ಸಹಾ ಅದೇ ರೀತಿ ಯೋಚಿಸಬೇಕಲ್ಲವೇ? ಇಂದಿನ ಆಧುನಿಕ ಅಡುಗೆಮನೆ ಸೌಕರ್ಯ ಮತ್ತು ಸಂಪ್ರದಾಯಗಳ ನಡುವಿನ ರಾಜಿಯಾಗಿಬಿಟ್ಟಿದೆ. ಹಲವಾರು ಬಾರಿ ಸಂಪ್ರದಾಯ ಅಥವಾ ಆರೋಗ್ಯದ ಕಾಳಜಿಗಿಂತಾ ಸೌಕರ್ಯವೇ ಮುಖ್ಯವಾಗಿರಲೂಬಹುದು. ನೀವು ಉಪಯೋಗಿಸುತ್ತಿರುವ ಪಾತ್ರೆಗಳು ನಿಮಗೇ ತಿಳಿಯದಂತೆ ನಿಮ್ಮ ಆಹಾರಕ್ಕೆ ವಿಷಯುಕ್ತ ರಾಸಾಯನಿಕಗಳನ್ನು ಸೇರಿಸುತ್ತಿರಬಹುದೇ?

'ಡಾಕ್ಟರ್, ನಾನ್-ಸ್ಟಿಕ್ ಕಾವಲಿ ಸುರಕ್ಷಿತವೇ?' ಹಲವರು ಕೇಳುವ ಪ್ರಶ್ನೆ ಇದು. ನಾನ್-ಸ್ಟಿಕ್ ಪಾತ್ರೆಗಳಲ್ಲಿ 'ಟೆಫ್ಲಾನ್' ಎಂಬ ಕೋಟಿಂಗ್ ಇರುತ್ತದೆ. ಇದು ಕಡಿಮೆ ಉಷ್ಣತೆಯಲ್ಲಿ ಸುರಕ್ಷಿತ. ಆದರೆ ನಮ್ಮ ಭಾರತೀಯ ಅಡುಗೆ ಶೈಲಿಯಲ್ಲಿ ಉಷ್ಣತೆ ಯಾವಾಗಲೂ ಹೆಚ್ಚೇ ಇರುತ್ತದೆ. ಗರಿಗರಿಯಾದ ದೋಸೆ ಮಾಡಲು ಕನಿಷ್ಠ 200 ರಿಂದ 230 ಡಿಗ್ರಿವರೆಗೆ ಬಿಸಿಯಾಗಿರಬೇಕು. ಈ ಉಷ್ಣತೆಯ ಹಂತದಲ್ಲಿ ಟೆಫ್ಲಾನ್ ಒಡೆದು, ಕಣ್ಣಿಗೆ ಕಾಣದ ಅಪಾಯಕಾರಿ ಹೊಗೆಗಳನ್ನು ಬಿಡುಗಡೆ ಮಾಡುತ್ತದೆ. ಇದಲ್ಲದೇ, ಕಾವಲಿಯನ್ನು ಸ್ಟೀಲ್ ನಾರಿನಿಂದ ಉಜ್ಜಿದರೆ ಅಥವಾ ಚೂಪಾಗಿರುವ ಸಟ್ಟುಗ ಬಳಸಿದರೆ ಅದರ ಕೋಟಿಂಗ್ ಕಿತ್ತುಬರುತ್ತದೆ.



ಮಿಥ್ಯ: ಗೀಚಿದ ನಾನ್-ಸ್ಟಿಕ್ ತವಾದ ಕೋಟಿಂಗ್ ಹೊಟ್ಟೆಗೆ ಸೇರಿದರೆ ಕ್ಯಾನ್ಸರ್ ಬರುತ್ತದೆ.

ವಾಸ್ತವ: ಹೊಟ್ಟೆ ಸೇರಿದ ಟೆಫ್ಲಾನ್ ಚೂರುಗಳು ನೇರವಾಗಿ ಕ್ಯಾನ್ಸರ್ ತರಿಸುವುದಿಲ್ಲ, ಅವು ಮಲದ ಮೂಲಕ ಹಾಗೆಯೇ ಹೊರಹೋಗುತ್ತವೆ. ಆದರೆ ನಿಜವಾದ ಅಪಾಯವಿರುವುದು ಗೀರು ಬಿದ್ದ ಆ ಕಾವಲಿಯಲ್ಲಿ! ಅದು ಕಾಯಿಸಿದಾಗಲೆಲ್ಲಾ ಲಕ್ಷಾಂತರ 'ಮೈಕ್ರೋಪ್ಲಾಸ್ಟಿಕ್' ಕಣಗಳನ್ನು ನಿಮ್ಮ ಆಹಾರಕ್ಕೆ ಸೇರಿಸುತ್ತದೆ. ಅವು ಅಪಾಯಕಾರಿ. ಹಾಗಾಗಿ ಗೀರು ಬಿದ್ದ ಕಾವಲಿ ಉಪಯೋಗಿಸುವುದನ್ನು ತಕ್ಷಣ ನಿಲ್ಲಿಸಿ. ದೋಸೆ, ಚಪಾತಿ ಮಾಡಲು 'ಬೀಡು ಕಬ್ಬಿಣ'ದ ಕಾವಲಿಯನ್ನೇ ಬಳಸಿ.

ಅಲ್ಯೂಮಿನಿಯಂ ಪಾತ್ರೆ

ಕ್ಷ ಕಿರಣ

ಅಲ್ಯೂಮಿನಿಯಂ ಪಾತ್ರೆಯಲ್ಲಿ ಅಡುಗೆ ಮಾಡಿದರೆ ಅಲ್ಜೈಮರ್ಸ್ (ಮರೆವಿನ ಕಾಯಿಲೆ) ಬರುತ್ತದೆ ಎಂಬ ಭಯ ಅನೇಕರಿಗಿದೆ. ಆದರೆ ನಮ್ಮ ದೇಹ ಆಹಾರದಲ್ಲಿರುವ ಅಲ್ಯೂಮಿನಿಯಂ ಅನ್ನು ಫಿಲ್ಟರ್ ಮಾಡಿ ಹೊರಹಾಕುತ್ತದೆ. ಅಲ್ಯೂಮಿನಿಯಂ ವಿಷವಲ್ಲ. ಆದರೆ, ಇದರಲ್ಲಿ ಹುಣಸೆಹಣ್ಣು, ಟೊಮೆಟೊ, ನಿಂಬೆಹಣ್ಣು ಹಾಕಿ ಸಾರು ಅಥವಾ ಸಾಂಬಾರ್ ಮಾಡಿದರೆ, ಅವುಗಳಲ್ಲಿರುವ ಆಮ್ಲಗಳು ಲೋಹವನ್ನು ಕರಗಿಸುತ್ತದೆ. ಹಾಗಾಗಿ, ಸಾರು-ಸಾಂಬಾರ್ ಮಾಡಲು ಅಗ್ಗದ ಅಲ್ಯೂಮಿನಿಯಂ ಪಾತ್ರೆ ಬಳಸಬೇಡಿ. ಬದಲಿಗೆ 'ಹಾರ್ಡ್ ಅನೋಡೈಸ್ಡ್' ಅಲ್ಯೂಮಿನಿಯಂ ಅಥವಾ ಸ್ಟೀಲ್ ಪಾತ್ರೆ ಬಳಸಿ.

ಕಬ್ಬಿಣದ ಪಾತ್ರೆ ಉತ್ತಮ!

ಕಬ್ಬಿಣದ ಪಾತ್ರೆಗಳಲ್ಲಿ ಹುಳಿ ಇರುವ ಪದಾರ್ಥಗಳನ್ನು (ಉದಾಹರಣೆಗೆ ಟೊಮೆಟೊ ಸಾರು) ಬೇಯಿಸಿದಾಗ, ಆಹಾರದಲ್ಲಿ ಕಬ್ಬಿಣಾಂಶ ಗಣನೀಯವಾಗಿ ಹೆಚ್ಚಾಗುತ್ತದೆ ಎಂದು ಅಧ್ಯಯನಗಳು ಸಾಬೀತುಪಡಿಸಿವೆ. ಇದು ಸಾಮಾನ್ಯವಾಗಿ ನಮ್ಮ ದೇಹಕ್ಕೆ ಒಳ್ಳೆಯದು. ಕಬ್ಬಿಣದ ಪಾತ್ರೆಗೆ ಪದೇ ಪದೇ ಎಣ್ಣೆ ಹಚ್ಚಬೇಕು ಎಂದುಕೊಂಡಿದ್ದಾರೆ. ಆದರೆ ಇದರ ವಿಜ್ಞಾನ ಸರಳ. ಕಬ್ಬಿಣದ ಪಾತ್ರೆಗೆ ಎಣ್ಣೆ ಸವರಿ, ಹೊಗೆ ಬರುವಷ್ಟು ಕಾಯಿಸಿದಾಗ ಆ ಎಣ್ಣೆ ಪಾತ್ರೆಯ ಲೋಹದೊಂದಿಗೆ ಬೆರೆತು, ಗಟ್ಟಿಯಾದ ನಾನ್-ಸ್ಟಿಕ್ ಪದರವನ್ನು ತಾನೇ ಸೃಷ್ಟಿಸುತ್ತದೆ. ಒಮ್ಮೆ ಈ ಪದರ ಸೃಷ್ಟಿಯಾದರೆ, ಆ ಎಣ್ಣೆ ನಿಮ್ಮ ಆಹಾರಕ್ಕೆ ಸೇರುವುದಿಲ್ಲ. ಹಾಗಾಗಿ ಇದು ಸಂಪೂರ್ಣ ಸುರಕ್ಷಿತ ನೈಸರ್ಗಿಕ ನಾನ್-ಸ್ಟಿಕ್. ಒಮ್ಮೆ ತೊಳೆದರೆ ಆ ನಾನ್-ಸ್ಟಿಕ್ ಹೋಗುವುದರಿಂದ, ಪ್ರತಿ ಬಾರಿ ಉಪಯೋಗಿಸುವ ಮೊದಲು ಎಣ್ಣೆ ಸವರಿ ಒಂದು ಬಾರಿ ಹೊಗೆ ಬರುವಷ್ಟು ಕಾಯಿಸಬೇಕು, ಅಷ್ಟೇ.

ಮೈಕ್ರೋವೇವ್

'ರೇಡಿಯೇಶನ್' ಎಂಬ ಪದ ಕೇಳಿ ಭಯಪಡಬೇಡಿ. ಮೈಕ್ರೋವೇವ್ ಕೇವಲ ನೀರಿನ ಅಣುಗಳನ್ನು ತೀವ್ರವಾಗಿ ಕಂಪಿಸುವಂತೆ ಮಾಡಿ ಆಹಾರ ಬಿಸಿಮಾಡುತ್ತದೆಯೇ ಹೊರತು, ಆಹಾರಕ್ಕೆ ಯಾವುದೇ ಕೊಡಕು ಮಾಡುವ ರೇಡಿಯೇಶನ್ ಅದರಲ್ಲಿಲ್ಲ. ಆದರೆ ನಿಜವಾದ ಅಪಾಯ ಇರುವುದು ಪ್ಲಾಸ್ಟಿಕ್‌ನಲ್ಲಿ. ಮೈಕ್ರೋವೇವ್ ಸೇಫ್ ಎಂದು ಬರೆದಿದ್ದರೂ, ಪ್ಲಾಸ್ಟಿಕ್ ಡಬ್ಬಿಗಳನ್ನು ಮೈಕ್ರೋವೇವ್‌ನಲ್ಲಿ ಇಡಲೇಬೇಡಿ. ಬಿಸಿಯಾದಾಗ ಪ್ಲಾಸ್ಟಿಕ್‌ನ ರಾಸಾಯನಿಕಗಳು ಆಹಾರಕ್ಕೆ ಸೇರುತ್ತವೆ. ಗಾಜಿನ ಅಥವಾ ಸೆರಾಮಿಕ್ ಪಾತ್ರೆಗಳನ್ನು ಮಾತ್ರ ಮೈಕ್ರೋವೇವ್‌ನಲ್ಲಿ ಬಳಸಿ. ಮೈಕ್ರೋವೇವ್ ಸುರಕ್ಷಿತ, ಆದರೆ ಅದರಲ್ಲಿ ಪ್ಲಾಸ್ಟಿಕ್ ಬೇಡ.

ಇನ್ನು ಏರ್ ಫ್ರೈಯರ್ ಅಡುಗೆಯಲ್ಲಿ ಎಣ್ಣೆಯ ಉಪಯೋಗ ಕಡಿಮೆ ಮಾಡಲು ಇರುವ ಅತ್ಯುತ್ತಮ ಸಾಧನ. ಅಷ್ಟೇ ಅಲ್ಲದೆ, ಇದರಿಂದ ಇನ್ನೊಂದು ಲಾಭವಿದೆ. ಆಲೂಗಡ್ಡೆಯಂತಹ ಪಿಷ್ಟ ಹೆಚ್ಚಿರುವ ಪದಾರ್ಥಗಳನ್ನು ಅತಿಯಾದ ಉಷ್ಣತೆಯಲ್ಲಿ ಎಣ್ಣೆಯಲ್ಲಿ ಕರಿದಾಗ, ಅದರಲ್ಲಿ 'ಅಕ್ರಿಲಮೈಡ್' ಎಂಬ ಕ್ಯಾನ್ಸರ್‌ಕಾರಕ ರಾಸಾಯನಿಕ ವಸ್ತು ಉತ್ಪತ್ತಿಯಾಗುತ್ತದೆ.

ಆದರೆ ಏರ್ ಫ್ರೈಯರ್‌ನಲ್ಲಿ ಬಿಸಿ ಎಣ್ಣೆಯ ಬದಲು ಬಿಸಿ ಗಾಳಿಯನ್ನು ಬಳಸಿ ಕರಿಯುವುದರಿಂದ, ಈ ಅಪಾಯಕಾರಿ ರಾಸಾಯ ನಿಕ ಉತ್ಪತ್ತಿಯಾಗುವುದನ್ನು ನಾವು ತಡೆಯ ಬಹುದು. ಹಾಗಾಗಿ ಎಣ್ಣೆಯಲ್ಲಿ ಕರಿಯುವುದಕ್ಕಿಂತ ಏರ್ ಫ್ರೈಯರ್ ಖಂಡಿತಾ ಸುರಕ್ಷಿತ.

ಒಂದೇ ದಿನದಲ್ಲಿ ಅಡುಗೆಮನೆಯ ಪಾತ್ರೆಗಳನ್ನೆಲ್ಲಾ ಬದಲಾಯಿಸಲು ಸಾಧ್ಯವಿಲ್ಲ. ಆದರೆ ಒಂದು ಸಣ್ಣ ಬದಲಾವಣೆ ಮಾಡಿ. ದೋಸೆ ಮಾಡಲು ಒಂದು ಒಳ್ಳೆಯ ಹಳೆಯ ಶೈಲಿಯ ಕಬ್ಬಿಣದ ಕಾವಲಿ ತನ್ನಿ. ಎತ್ತುವಾಗ ಅದು ಸ್ವಲ್ಪ ಭಾರ ಅನ್ನಿಸಬಹುದು, ಆದರೆ ಅದು ನಿಮ್ಮ ದೇಹದಲ್ಲಿ ಅಪಾಯಕಾರಿ ರಾಸಾಯನಿಕಗಳ ಭಾರವನ್ನು ಖಂಡಿತ ಕಡಿಮೆ ಮಾಡುತ್ತದೆ!

ಅಡುಗೆ ಪಾತ್ರೆಗಳ ಚೆಕ್‌ಲಿಸ್ಟ್

- **ಸ್ಟೇನ್‌ಲೆಸ್ ಸ್ಟೀಲ್: ಸಾಂಬಾರ್, ಸಾರು, ಅನ್ನ ಮಾಡಲು ಇದು ಉತ್ತಮ. ಇದು ತುಕ್ಕು ಹಿಡಿಯುವು ದಿಲ್ಲ, ಆಹಾರದೊಂದಿಗೆ ರಿಯಾಕ್ಟ್ ಆಗುವುದಿಲ್ಲ.**
- **ಕಬ್ಬಿಣದ ಕಾವಲಿ, ಬಾಣಲೆ: ದೋಸೆ ಮತ್ತು ಚಪಾತಿಗೆ, ಪಲ್ಯ ಮಾಡಲು ಇದು ಅಡುಗೆ ಮನೆಯ ರಾಜ.**
- **ಮಣ್ಣಿನ ಪಾತ್ರೆಗಳು: ಸಾಂಪ್ರದಾಯಿಕ ಮತ್ತು ಅತ್ಯಂತ ಆರೋಗ್ಯಕರ (ಆದರೆ ಹೊಳಪಿಲ್ಲದೇ ಇರಬೇಕು).**
- **ಗೀರು ಬಿದ್ದ ನಾನ್-ಸ್ಟಿಕ್ ಪಾತ್ರೆಗಳು: ಕೋಟಿಂಗ್ ಕಿತ್ತುಬರುತ್ತಿದ್ದರೆ, ನೀವು ಪ್ರತಿದಿನ 'ಮೈಕ್ರೋಪ್ಲಾಸ್ಟಿಕ್' ತಿನ್ನುತ್ತಿದ್ದೀರಿ ಎಂದರ್ಥ. ಅದನ್ನು ತಕ್ಷಣ ಎಸೆಯಿರಿ.**
- **ಅಗ್ಗದ ಸಾಮಾನ್ಯ ಅಲ್ಯೂಮಿನಿಯಂ ಪಾತ್ರೆ: ಹುಣಸೆಹಣ್ಣು, ಟೊಮೆಟೊ, ನಿಂಬೆಹಣ್ಣು ಇರುವಂತಹ 'ಹುಳಿ' ಪದಾರ್ಥಗಳನ್ನು ಇದರಲ್ಲಿ ಬೇಯಿಸಲೇಬಾರದು.**
- **ಮೈಕ್ರೋವೇವ್‌ನಲ್ಲಿ ಪ್ಲಾಸ್ಟಿಕ್ ಡಬ್ಬಿಗಳು: ಲೇಬಲ್ ಮೇಲೆ ಮೈಕ್ರೋವೇವ್ ಸೇಫ್ ಎಂದು ಬರೆದಿದ್ದರೂ ಪ್ಲಾಸ್ಟಿಕ್ ಡಬ್ಬಿಗಳನ್ನು ಮೈಕ್ರೋವೇವ್ ಒಳಗೆ ಇಟ್ಟು ಬಿಸಿ ಮಾಡಬೇಡಿ. ಕೇವಲ ಗಾಜು ಅಥವಾ ಸೆರಾಮಿಕ್ ಮಾತ್ರ ಬಳಸಿ.**

ಪ್ರಿವೆಡಿಂಗ್ ರೀಲ್ಸ್‌ಗಳನ್ನು ಜಾಲತಾಣದಲ್ಲಿ ಹಂಚಿಕೊಳ್ಳಬಹುದೇ?

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಜಗದೀಶ, (ಇಮೇಲ್ ಮೂಲಕ)

● **ಭಟ್ರೇ, ನನ್ನ ಮದುವೆ ಈ ಮೇ ತಿಂಗಳಲ್ಲಿ ನಿಗದಿಯಾಗಿದೆ. ನನ್ನ ಭವಿಷ್ಯದ ಪತ್ನಿಗೆ ಫೋಟೋಶೂಟ್ ಬಗ್ಗೆ ತುಂಬಾ ಆಸಕ್ತಿ ಇದೆ. ಅವಳು ಫೋಟೋಗಳನ್ನು ತೆಗೆದು ರೀಲ್‌ಗಳಾಗಿ ಮಾಡಬೇಕು ಎಂದು ಬಯಸುತ್ತಾಳೆ. ಆದರೆ ನಾನು ತುಂಬಾ ಖಾಸಗಿ ಸ್ವಭಾವದವನು; ನನ್ನ ವೈಯಕ್ತಿಕ ಜೀವನವನ್ನು ಸಾರ್ವಜನಿಕವಾಗಿ ಹಂಚಿಕೊಳ್ಳಲು ಇಷ್ಟವಿಲ್ಲ. ಈ ರೀತಿಯಲ್ಲಿ ಫೋಟೋಶೂಟ್‌ಗೆ ಹೋಗುವುದು ನನಗೆ ತುಂಬಾ ಮುಜುಗರ. ನಾನು ಅವಳಿಗೆ ಮನವರಿಕೆ ಮಾಡಲು ಪ್ರಯತ್ನಿಸಿದ್ದೇನೆ, ಆದರೆ ಅವಳು ಕೇಳುತ್ತಿಲ್ಲ. ಅವಳನ್ನು ಸಮಾಧಾನಪಡಿಸಲು ಅಥವಾ ಮನವರಿಕೆ ಮಾಡಲು ಉತ್ತಮ ಮಾರ್ಗವಿದೆಯೇ?**

–ಜಗದೀಶ ಅವರೇ, ಮದುವೆಯ ಸಂಭ್ರಮದ ನಡುವೆ ಇಂಥ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಸಹಜ. ಇದು ಕೇವಲ ಫೋಟೋಶೂಟ್ ಬಗ್ಗೆ ಅಲ್ಲ, ಇಬ್ಬರ ವ್ಯಕ್ತಿತ್ವದ ನಡುವಿನ ಸಮತೋಲನದ ವಿಷಯವಾಗಿದೆ. ಅವಳ ಆಸೆಯನ್ನು ಪೂರೈಸುತ್ತಾ, ನಿಮ್ಮ ಖಾಸಗಿತನವನ್ನು ಕಾಪಾಡಿಕೊಳ್ಳಲು ಕೆಲವು ಮಾರ್ಗಗಳನ್ನು ಪ್ರಯತ್ನಿಸಬಹುದು.

ಅವಳಿಗೆ ಫೋಟೋಶೂಟ್ ಎಂದರೆ ಇಷ್ಟ ಎಂದು ಹೇಳಿದ್ದಾಳೆ; ಆದರೆ ನಿಮಗೆ ಅದನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುವುದು ಇಷ್ಟವಿಲ್ಲ. ಹಾಗಾಗಿ, 'ಫೋಟೋಶೂಟ್ ಮಾಡಿಸೋಣ, ಆದರೆ ಅದನ್ನು ಸೋಶಿಯಲ್ ಮೀಡಿಯಾದಲ್ಲಿ ಹಾಕೋದು ಬೇಡ. ಅದು ಕೇವಲ ನಮ್ಮ ನೆನಪಿಗಾಗಿ ಆಲ್ಬಂನಲ್ಲಿ ಇರಲಿ' ಎಂದು ಹೇಳಿ. ಶೂಟಿಂಗ್ ಎನ್ನುವುದು ಸಂಭ್ರಮದ ಭಾಗವಾಗಲಿ, ಪ್ರದರ್ಶನದ ಭಾಗವಾಗದಿರಲಿ ಎಂಬುದು ನಿಮ್ಮ ನಿಲುವಾಗಿರಲಿ.

ಪೂರ್ತಿ ಬೇಡ ಎನ್ನುವ ಬದಲು, ಒಂದು ಮಧ್ಯಮ ಮಾರ್ಗವನ್ನು ಕಂಡುಕೊಳ್ಳಿ. ನೂರಾರು ಫೋಟೋ ಅಥವಾ ರೀಲ್ಸ್‌ಗಳನ್ನು ಹಂಚಿಕೊಳ್ಳುವುದು ಬೇಡ, ಯಾವುದಾದರೂ ಒಂದು ಒಳ್ಳೆಯ ಫೋಟೋ ಮಾತ್ರ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳೋಣ ಎಂದು ಅವರಿಗೆ ತಿಳಿಸಿ. ಇದರಿಂದ ಅವಳ ಆಸೆಯೂ ಈಡೇರುತ್ತದೆ, ನಿಮ್ಮ ಮುಜುಗರವೂ ಕಡಿಮೆಯಾಗುತ್ತದೆ.

ಕೇವಲ 'ನನಗೆ ಮುಜುಗರ' ಎನ್ನುವ ಬದಲು, ಇಂದಿನ ಡಿಜಿಟಲ್ ಕಾಲದಲ್ಲಿ ವೈಯಕ್ತಿಕ ಫೋಟೋಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುವುದರಿಂದ ಆಗುವ ಸುರಕ್ಷತೆಯ ಸಮಸ್ಯೆಗಳ ಬಗ್ಗೆ ಪ್ರೀತಿಯಿಂದ ವಿವರಿಸಿ. ನಮ್ಮ ಖಾಸಗಿ ಕ್ಷಣಗಳು ನಮಗೆ ಮಾತ್ರ ಸೀಮಿತವಾಗಿರುವುದು ಹೆಚ್ಚು ಅರ್ಥಪೂರ್ಣ ಎಂದು ಭಾವನಾತ್ಮಕವಾಗಿ ಮನವರಿಕೆ ಮಾಡಿ.

ನೀವು ಕ್ಯಾಮೆರಾ ಮುಂದೆ ಬರಲು ಇಷ್ಟವಿಲ್ಲದಿದ್ದರೆ, ನೀವು ನೇರವಾಗಿ ಕಾಣಿಸದ ರೀತಿಯಲ್ಲಿ (ಉದಾಹರಣೆಗೆ, ನೆರಳುಗಳು, ಕೇವಲ ಕೈ ಹಿಡಿದಿರುವ ದೃಶ್ಯಗಳು ಅಥವಾ ದೂರದಿಂದ ತೆಗೆದ ಫೋಟೋಗಳು) ಶೂಟ್ ಮಾಡಲು ಸೂಚಿಸಿ. ಇದು ಅವಳ ಕ್ರಿಯೇಟಿವಿಟಿಗೂ ಅವಕಾಶ ನೀಡುತ್ತದೆ ಮತ್ತು ನಿಮ್ಮ ಮುಜುಗರವನ್ನೂ ತಪ್ಪಿಸುತ್ತದೆ. ಅವಳು ಯಾಕೆ ಇದನ್ನು ಇಷ್ಟಪಡುತ್ತಾಳೆ ಎಂದು ಕೇಳಿ ತಿಳಿದುಕೊಳ್ಳಿ. ಬಹುಶಃ ಅವಳು ಮದುವೆಯ ಸಂಭ್ರಮವನ್ನು ದಾಖಲಿಸಲು ಬಯಸುತ್ತಿರಬಹುದು. ಅವಳ ಉದ್ದೇಶ ಒಳ್ಳೆಯದಾಗಿರುತ್ತದೆ, ಆದರೆ ರೀತಿ ಮಾತ್ರ ನಿಮಗೆ ಒಪ್ಪಿಗೆಯಿಲ್ಲ ಅಷ್ಟೇ. ನನಗೆ ನಿನ್ನ ಸಂಭ್ರಮದಲ್ಲಿ ಪಾಲ್ಗೊಳ್ಳಲು ಇಷ್ಟವಿದೆ, ಆದರೆ ಸೋಷಿಯಲ್ ಮೀಡಿಯಾ ಅಬ್ಬರ ಇಷ್ಟವಿಲ್ಲ ಎಂದು ಹೇಳುವುದರಿಂದ ಅವಳಿಗೆ ನಿಮ್ಮ ಮೇಲೆ ಬೇಸರವಾಗುವುದಿಲ್ಲ.

ಮದುವೆಯ ಆರಂಭದ ದಿನಗಳಲ್ಲಿ ಹೊಂದಾಣಿಕೆ ಬಹಳ ಮುಖ್ಯ. ಒಂದು ದಿನದ ಫೋಟೋಶೂಟ್‌ಗಿಂತ ನಿಮ್ಮಿಬ್ಬರ ನಡುವಿನ ನೆಮ್ಮದಿ ದೊಡ್ಡದು. ಅವಳಿಗೆ ಅತಿಯಾಗಿ ಒತ್ತಾಯ ಮಾಡಬೇಡಿ, ಬದಲಾಗಿ ನನ್ನ ಈ ಸ್ವಭಾವವನ್ನು ಗೌರವಿಸು ಎಂದು ಪ್ರೀತಿಯಿಂದ ಕೇಳಿಕೊಳ್ಳಿ. ಖಂಡಿತಾ ಅವಳು ಅರ್ಥ ಮಾಡಿಕೊಳ್ಳುತ್ತಾಳೆ.

ಶುಭವಾಗಲಿ! ನಿಮ್ಮ ವೈವಾಹಿಕ ಜೀವನ ಸುಖಮಯವಾಗಿರಲಿ.

ಶಾರದಾ, ಬೆಂಗಳೂರು

● **ಭಟ್ರೇ, ನನ್ನ ಮಗನು ಈಗ 12ನೇ ತರಗತಿಯಲ್ಲಿ ಓದುತ್ತಿದ್ದಾನೆ. ಆದರೆ ಅವನು ಓದಿನಲ್ಲಿ ಹೆಚ್ಚಿನ ಗಮನ ಕೊಡುತ್ತಿಲ್ಲ. ಯಾವಾಗಲೂ ಮೊಬೈಲ್‌ನಲ್ಲಿ ಸಮಯ ಕಳೆಯುವುದು ಅಥವಾ ಸ್ನೇಹಿತರ ಜತೆ ಹೊರಗೆ ತಿರುಗಾಡುವುದು ಅವನ ಅಭ್ಯಾಸವಾಗಿದೆ. ನಾನು ಓದಲು ಹೇಳಿದಾಗ, ಅವನು ಸರಿಯಾದ ಪ್ರತಿಕ್ರಿಯೆ ನೀಡುವುದಿಲ್ಲ. ನಾನು ಮತ್ತೆ ಮತ್ತೆ ಹೇಳಲು ಪ್ರಯತ್ನಿಸಿದರೆ, ಅವನು ಬೇಸರಗೊಂಡಂತೆ ಕಾಣಿಸುತ್ತಾನೆ. ಇತ್ತೀಚಿನ ದಿನಗಳಲ್ಲಿ ನಾವು ಕೇಳುತ್ತಿರುವ ಘಟನೆಗಳನ್ನು ಗಮನಿಸಿದಾಗ, ಅವನು ಯಾವುದೇ ತೀವ್ರವಾದ ನಿರ್ಧಾರ ತೆಗೆದುಕೊಳ್ಳಬಹುದು ಎಂಬ ಭಯ ನನಗೆ ಇದೆ. ಆದ್ದರಿಂದ, ನಾನು ಅವನಿಗೆ ಓದಿನ ಮಹತ್ವವನ್ನು ಹೇಗೆ ತಿಳಿಸಬೇಕು? ಮಕ್ಕಳನ್ನು ಸರಿಯಾದ ದಾರಿಗೆ ಹೇಗೆ ಪ್ರೇರೇಪಿಸಬಹುದು?**

–ಶಾರದಾ ಅವರೇ, ಮಕ್ಕಳು ಹದಿಹರೆಯದಲ್ಲಿದ್ದಾಗ ಪೋಷಕರಿಗೆ ಇಂಥ ಆತಂಕಗಳು ಎದುರಾಗುವುದು ಸಹಜ. ಈ ವಯಸ್ಸಿನಲ್ಲಿ ಅವರು ಭಾವನಾತ್ಮಕವಾಗಿ ಬಹಳ ಸೂಕ್ಷ್ಮವಾಗಿರುತ್ತಾರೆ, ಹಾಗಾಗಿ ನಾವು ಅವರಿಗೆ ಬುದ್ಧಿ ಹೇಳುವ ರೀತಿ ಬಹಳ ಮುಖ್ಯವಾಗುತ್ತದೆ. ನಿಮ್ಮ ಮಗನಿಗೆ ಬೇಸರವಾಗದಂತೆ ಮತ್ತು ಅವನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಕೆಲವು ಹಂತಗಳನ್ನು ಅನುಸರಿಸಬಹುದು. ಮಕ್ಕಳಿಗೆ ಪದೇ ಪದೆ 'ಓದು' ಎಂದು ಆರ್ಡರ್ ಮಾಡಿದರೆ ಅವರಿಗೆ ಅದು ಕಿರಿಕಿರಿ ಎನಿಸಬಹುದು. ಅದರ ಬದಲಿಗೆ, ಅವನಿಗೆ ಇಷ್ಟವಾದ ವಿಷಯಗಳ ಬಗ್ಗೆ ಮೊದಲು ಚರ್ಚಿಸಿ. ಅವನು ಮೊಬೈಲ್‌ನಲ್ಲಿ ಏನು ನೋಡುತ್ತಾನೆ ಅಥವಾ ಸ್ನೇಹಿತರ ಜತೆ ಎಲ್ಲಿಗೆ ಹೋಗುತ್ತಾನೆ ಎಂಬ ಬಗ್ಗೆ ಕುತೂಹಲ ತೋರಿ. ಇದರಿಂದ ಅವನಿಗೆ ನಿಮ್ಮ ಮೇಲೆ ನಂಬಿಕೆ ಹೆಚ್ಚುತ್ತದೆ.

ಓದದಿದ್ದರೆ ಜೀವನ ಹಾಳಾಗುತ್ತದೆ ಎನ್ನುವ ನಕಾರಾತ್ಮಕ ಮಾತುಗಳಿಗಿಂತ, 'ನಿನಗೆ ಏನು ಸಾಧಿಸಲು ಇಷ್ಟ?' ಎಂಬ ಆಶಾವಾದಿ ಮಾತುಗಳನ್ನಾಡಿ. ಓದುವುದು ಒಂದು ಹೊರೆ ಎಂದು ಮಗು ಭಾವಿಸಿದಾಗ ಮಾತ್ರ ಮೊಬೈಲ್ ಅಥವಾ ಹೊರಗಿನ ತಿರುಗಾಟ ಅವರಿಗೆ ನೆಮ್ಮದಿ ನೀಡುತ್ತದೆ. ದಿನವಿಡೀ ಓದಲು ಹೇಳುವ ಬದಲು, ದಿನಕ್ಕೆ ಕೇವಲ 2–3 ಗಂಟೆಗಳ ಗುಣಮಟ್ಟದ ಸಮಯವನ್ನು ನಿಗದಿಪಡಿಸಿ. ಆ ಸಮಯದಲ್ಲಿ ಅವನು ಓದಿದರೆ, ಉಳಿದ ಸಮಯದಲ್ಲಿ ಅವನಿಗೆ ಇಷ್ಟವಾದುದನ್ನು ಮಾಡಲು ಅವಕಾಶ ನೀಡಿ.

ಮೊಬೈಲ್‌ನ್ನು ಸಂಪೂರ್ಣವಾಗಿ ಕಿತ್ತುಕೊಳ್ಳುವ ಬದಲು, ಇಷ್ಟು ಕೆಲಸ ಮುಗಿಸಿದರೆ ಅರ್ಧ ಗಂಟೆ ಮೊಬೈಲ್ ಬಳಸಬಹುದು ಎಂಬ ಒಪ್ಪಂದ ಮಾಡಿಕೊಳ್ಳಿ. ಕೇವಲ ಅಂಕಗಳಿಗಾಗಿ ಓದುವುದಕ್ಕಿಂತ, ಭವಿಷ್ಯದ ಸುಂದರ ಜೀವನದ ಕಲ್ಪನೆಯನ್ನು ಅವನಿಗೆ ನೀಡಿ. ಅವನಿಗೆ ಇಷ್ಟವಾದ ಕ್ಷೇತ್ರದಲ್ಲಿ (ಉದಾಹರಣೆಗೆ ತಂತ್ರಜ್ಞಾನ, ಕ್ರೀಡೆ ಅಥವಾ ಕಲೆ) ಯಶಸ್ವಿಯಾದವರ ಕಥೆಗಳನ್ನು ಹಂಚಿಕೊಳ್ಳಿ. ಆ ಯಶಸ್ಸಿಗೆ ಶಿಕ್ಷಣ ಹೇಗೆ ಅಡಿಪಾಯವಾಯಿತು ಎಂದು ವಿವರಿಸಿ.

ಇತ್ತೀಚಿನ ದಿನಗಳಲ್ಲಿ ಮಕ್ಕಳು ತೀವ್ರ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬ ನಿಮ್ಮ ಭಯ ನ್ಯಾಯಸಮ್ಮತವಾಗಿದೆ. ಇದನ್ನು ನಿಭಾಯಿಸಲು ಅವನಿಗೆ ಪ್ರೀತಿಯ ಭರವಸೆ ನೀಡಿ. 'ನಿನ್ನ ಅಂಕಗಳಿಗಿಂತ ನೀನು ನಮಗೆ ಮುಖ್ಯ. ನಿನಗೆ ಯಾವುದೇ ಕಷ್ಟವಿದ್ದರೂ ನಮ್ಮೊಂದಿಗೆ ಹಂಚಿಕೊ, ನಾವು ನಿನ್ನ ಜತೆಗಿದ್ದೇವೆ' ಎಂಬ ಧೈರ್ಯವನ್ನು ಪದೇ ಪದೆ ನೀಡಿ. ನಾಲ್ಕು ಜನರ ಮುಂದೆ ಅಥವಾ ಮನೆಯವರ ಮುಂದೆ ಅವನನ್ನು ಇತರರ ಜೊತೆ ಹೋಲಿಸಿ ಅವಮಾನಿಸಬೇಡಿ.

ಮನೆಯಲ್ಲಿ ಓದಲು ಪೂರಕವಾದ ಶಾಂತ ವಾತಾವರಣವಿರಲಿ. ನೀವು ಕೂಡ ಅವನ ಎದುರು ಮೊಬೈಲ್ ಬಳಸುವ ಬದಲು ಒಂದು ಪುಸ್ತಕ ಹಿಡಿದು ಕುಳಿತರೆ, ಅದು ಅವನ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತದೆ. ಒಂದು ವೇಳೆ ಪರಿಸ್ಥಿತಿ ನಿಮ್ಮ ಕೈ ಮೀರುತ್ತಿದೆ ಎಂದು ಅನ್ನಿಸಿದರೆ, ಒಬ್ಬ ನುರಿತ ಕೆರಿಯರ್ ಕೌನ್ಸಿಲರ್ (Career Counselor) ಅಥವಾ ಮಕ್ಕಳ ಮನಶ್ಶಾಸ್ತ್ರಜ್ಞರನ್ನು ಭೇಟಿ ಮಾಡುವುದು ಉತ್ತಮ. ಅವರು ಮಗುವಿನ ಆಸಕ್ತಿಗಳನ್ನು ಗುರುತಿಸಿ, ಅವನಿಗೆ ಸರಿಯಾದ ದಾರಿ ತೋರಿಸಲು ಸಹಾಯ ಮಾಡುತ್ತಾರೆ. ತಾಳ್ಮೆಯಿಂದ ಹೆಜ್ಜೆ ಇರಿಸಿ, ಪ್ರೀತಿಯಿಂದ ಮಾತ್ರ ಇಂದಿನ ಮಕ್ಕಳನ್ನು ಗೆಲ್ಲಲು ಸಾಧ್ಯ. ನಿಮ್ಮ ಮಗ ಖಂಡಿತವಾಗಿಯೂ ಉತ್ತಮ ಹಾದಿಗೆ ಮರಳುತ್ತಾನೆ ಎಂಬ ನಂಬಿಕೆ ಇರಲಿ.

ಪಿ. ರಾವ್, ಮೈಸೂರು

● **ಭಟ್ರೇ, ನಾನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ, ನೀವು ದಿನಪೂರಾ ತುಂಬಾ ಬ್ಯುಸಿಯಾಗಿರುತ್ತೀರಿ. ಬೆಳಗ್ಗೆ ಐದು ಗಂಟೆಯಲ್ಲೇ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡುತ್ತೀರಿ. ಕೆಲವೊಮ್ಮೆ ಮಧ್ಯರಾತ್ರಿ ಕೂಡ ಪೋಸ್ಟ್ ಮಾಡುತ್ತೀರಿ. ರಾತ್ರಿ ಎರಡು ಗಂಟೆಯಲ್ಲಿ ನಿಮ್ಮ ವಾಟ್ಸಾಪ್ ಆನ್‌ಲೈನ್ ಎಂದು ತೋರಿಸುತ್ತಿರುತ್ತದೆ. ಹಾಗಾದರೆ ನೀವು ಯಾವಾಗ ನಿದ್ರೆ ಮಾಡುತ್ತೀರಿ? ಇಷ್ಟು ಬರವಣಿಗೆ, ಪ್ರಯಾಣ ಮತ್ತು ಇತರ ಕೆಲಸಗಳ ನಡುವೆ ನೀವು ನಿದ್ರೆಗೆ ಸಮಯವನ್ನು ಹೇಗೆ ಹೊಂದಿಸಿಕೊಳ್ಳುತ್ತೀರಿ? ನನಗೆ ಇದನ್ನು ತಿಳಿದುಕೊಳ್ಳುವ ಕುತೂಹಲ ಇದೆ.**

–ರಾವ್ ಅವರೇ, ನಿದ್ರೆ ಎನ್ನುವುದು ಕೇವಲ ಕಣ್ಣು ಮುಚ್ಚಿ ಮಲಗುವುದಲ್ಲ. ನಾನು ದಿನಕ್ಕೆ ಕೇವಲ 4 ರಿಂದ 5 ಗಂಟೆ ಮಾತ್ರ ನಿದ್ರೆ ಮಾಡುತ್ತೇನೆ. ಆದರೆ ಆ ಅಲ್ಪ ಸಮಯದ ಗಾಢ ನಿದ್ರೆ ನನಗೆ ಇಡೀ ದಿನಕ್ಕೆ ಬೇಕಾದ ಚೈತನ್ಯ ನೀಡುತ್ತದೆ. ಕೆಲಸದ ಮೇಲಿರುವ ಪ್ಯಾಶನ್ ನಿದ್ದೆಗಿಂತ ದೊಡ್ಡದು! ಬೆಳಗ್ಗೆ 5 ಗಂಟೆಗೆ ಫೇಸ್‌ಬುಕ್ ಪೋಸ್ಟ್ ಅಂದಾಕ್ಷಣ ನಾನು ಆಗಲೇ ಎದ್ದಿರುತ್ತೇನೆ ಎಂದರ್ಥ. ಪ್ರಶಾಂತವಾದ ಆ ಮುಂಜಾನೆ ಬರೆಯುವುದು ನನಗೆ ಒಂದು ರೀತಿಯ ಧ್ಯಾನವಿದ್ದಂತೆ. ಜಗತ್ತು ಎಚ್ಚರವಾಗುವ ಮೊದಲೇ ನನ್ನ ಅಕ್ಷರಗಳು ಎಚ್ಚರವಾಗಿರುತ್ತವೆ.

ನೀವು ಹೇಳಿದಂತೆ ನಾನು ತಿಂಗಳಿಗೆ ಹಲವು ಬಾರಿ ವಿಮಾನ ಪ್ರಯಾಣ ಮಾಡುತ್ತೇನೆ. ವಿಮಾನದ ಸೀಟು ಅಥವಾ ವಿಮಾನ ನಿಲ್ದಾಣದ ಲೌಂಜ್‌ಗಳು ನನಗೆ ವಿಶ್ರಾಂತಿ ಪಡೆಯುವ ತಾಣಗಳು. ಅಲ್ಲಿ ಸಿಗುವ ಅಲ್ಪ ಸಮಯದಲ್ಲಿ ನಾನು 'ಪವರ್ ನ್ಯಾಪ್' ತೆಗೆದುಕೊಳ್ಳುತ್ತೇನೆ. ಮಧ್ಯರಾತ್ರಿಯ ವಾಟ್ಸಾಪ್ ಆನ್‌ಲೈನ್ ಇರುವುದು ಕೇವಲ ಮೆಸೇಜ್ ನೋಡುವುದಕ್ಕಲ್ಲ, ಅದು ಓದುವ ಅಥವಾ ಬರೆಯುವ ಪ್ರಕ್ರಿಯೆಯ ಭಾಗವೂ ಆಗಿರುತ್ತದೆ. ಪತ್ರಕರ್ತನಿಗೆ ಸುದ್ದಿಯ ಹಸಿವಿರುವಾಗ ನಿದ್ರೆಯ ಹಸಿವು ಗೌಣವಾಗುತ್ತದೆ.

ಪುಸ್ತಕಗಳನ್ನು ಬರೆಯಬೇಕಾದರೆ ಅಥವಾ ಪ್ರತಿದಿನ ಪತ್ರಿಕೆಯನ್ನು ಹೊರತರಬೇಕಾದರೆ ಸಮಯವನ್ನು ನಾನು ನಿಯಂತ್ರಿಸಬೇಕೇ ಹೊರತು, ಸಮಯ ನನ್ನನ್ನು ನಿಯಂತ್ರಿಸಬಾರದು. ಕೈಯಲ್ಲಿ ಸದಾ ಒಂದು ಪುಸ್ತಕ ಅಥವಾ ಮೊಬೈಲ್ ಇದ್ದರೆ ಸಾಕು, ಸಮಯ ವ್ಯರ್ಥವಾಗುವುದೇ ಇಲ್ಲ.

ಕೆಲಸವನ್ನು ಪ್ರೀತಿಸುವವನಿಗೆ ವಿಶ್ರಾಂತಿಯೇ ಕೆಲಸ ಮತ್ತು ಕೆಲಸವೇ ವಿಶ್ರಾಂತಿ. ನನ್ನ ಈ ಓಟಕ್ಕೆ ನನ್ನ ಓದುಗರ ಪ್ರೀತಿಯೇ ಶಕ್ತಿ. ನಾವು ಮಾಡುವ ಕೆಲಸದ ಮೇಲೆ ನಮಗೆ ಅತಿಯಾದ ಪ್ರೀತಿ ಮತ್ತು ಆಸಕ್ತಿ ಇದ್ದಾಗ, ಆ ಕೆಲಸವೇ ನಮಗೆ ಚೈತನ್ಯ ನೀಡುತ್ತದೆ. ಆಗ ಆಯಾಸ ಎಂಬುದು ಗೌಣವಾಗುತ್ತದೆ. ಬರವಣಿಗೆ, ಓದು ಮತ್ತು ಪ್ರಯಾಣ ಇವೆಲ್ಲವೂ ಕೇವಲ ಕೆಲಸವಲ್ಲ, ಅವು ಒಂದು ರೀತಿಯ ಹವ್ಯಾಸವಾದಾಗ ಸಮಯ ಹೇಗೆ ಕಳೆಯುತ್ತದೆ ಎಂದು ಗೊತ್ತಾಗುವುದಿಲ್ಲ.

ರಕ್ಷಾ (ಇಮೇಲ್ ಮೂಲಕ)

● **ಸಂಪಾದಕರೇ, ನಾನು ನಿಮಗೆ ಒಂದು ತುಂಬಾ ವೈಯಕ್ತಿಕ ಪ್ರಶ್ನೆಯನ್ನು ಕೇಳಲು ಬಯಸುತ್ತೇನೆ. ಅದನ್ನು ಸಾರ್ವಜನಿಕವಾಗಿ ಕೇಳುವುದು ನನಗೆ ಸ್ವಲ್ಪ ನಾಚಿಕೆಯ ಸಂಗತಿಯಾಗಿದೆ. ಆದ್ದರಿಂದ ನಾನು ಆ ಪ್ರಶ್ನೆಯನ್ನು ನಿಮ್ಮ ವೈಯಕ್ತಿಕ ಇಮೇಲ್ ಐಡಿಗೆ ಕಳುಹಿಸಿದರೆ, ನೀವು ಅದಕ್ಕೆ ಉತ್ತರ ನೀಡಲು ಸಾಧ್ಯವೇ? ಏಕೆಂದರೆ ನಾನು ಪ್ರಶ್ನೆ ಕೇಳಿ ನಿಮ್ಮ ಮುಂದೆ ಹಾಸ್ಯಾಸ್ಪದನಾಗಬಾರದು ಎಂಬ ಭಯವಿದೆ.**

–ರಕ್ಷಾ ಅವರೇ, ಇಮೇಲ್ ಮೂಲಕ ನಿಮ್ಮ ಪ್ರಶ್ನೆಯನ್ನು ಕಳುಹಿಸಬಹುದು. ಸಂವಹನಕ್ಕೆ ಇಮೇಲ್ ಯಾವತ್ತೂ ಒಂದು ಸುರಕ್ಷಿತ ಮತ್ತು ಆಪ್ತವಾದ ದಾರಿ. ಮುಖಾಮುಖಿ ಮಾತನಾಡುವಾಗ ಉಂಟಾಗುವ ಮುಜುಗರ ಅಲ್ಲಿ ಇರುವುದಿಲ್ಲ. ಪ್ರಶ್ನೆ ಕೇಳಲು ನಾಚಿಕೆ ಪಡಬಾರದು. ಈ ಜಗತ್ತಿನಲ್ಲಿ ನಾವೆಲ್ಲರೂ ಒಂದಲ್ಲ ಒಂದು ವಿಷಯದಲ್ಲಿ ಮುಗ್ಧರೇ! ಹಾಸ್ಯಾಸ್ಪದನಾಗುವ ಭಯ ಬೇಡ, ಯಾಕೆಂದರೆ ಸದಾ 'ಸೀರಿಯಸ್' ಆಗಿರುವವರ ನಡುವೆ ತುಸು ಮುಸಿಮುಸಿ ನಗುವಿನ ಮನುಷ್ಯ ಕಾಣಿಸುವುದು ಚಂದವೇ. ನಿಮ್ಮ ಪ್ರಶ್ನೆ ಎಷ್ಟೇ ವಿಚಿತ್ರವಾಗಿದ್ದರೂ ಅದು ನಿಮ್ಮ ಕುತೂಹಲದ ಸಂಕೇತ. ಇಮೇಲ್ ಎಂಬುದು ಒಂದು ಹಳೆಯ ಪತ್ರದ ಆಧುನಿಕ ರೂಪ. ನೀವು ಅಲ್ಲಿ ನಿಮ್ಮ ಪ್ರಶ್ನೆಯನ್ನು ನಿರಾಳವಾಗಿ ಹರಿಬಿಡಿ.

ಕೆ.ನಾರಾಯಣ, (ಇಮೇಲ್ ಮೂಲಕ)

● **ಸಂಪಾದಕರೇ, ನೀವು ಸಿದ್ದರಾಮಯ್ಯ ಅವರ ಜತೆ ವೇದಿಕೆ ಹಂಚಿಕೊಳ್ಳುತ್ತೀರಿ, ಹಾಗೆಯೇ ಬಿಜೆಪಿಯ ಪ್ರತಾಪ ಸಿಂಹ ಅವರ ಜತೆ ಊಟ ಮಾಡುತ್ತೀರಿ. ಇನ್ನೂ ಜನತಾ ದಳದ ಕುಮಾರಸ್ವಾಮಿ ಅವರನ್ನೂ ಭೇಟಿ ಮಾಡಿರುವುದನ್ನೂ ನಾನು ನೋಡಿದ್ದೇನೆ. ಹಾಗಾದರೆ ನೀವು ವಿಭಿನ್ನ ರಾಜಕೀಯ ಪಕ್ಷಗಳವರ ಜತೆ ಈ ರೀತಿಯಾಗಿ ಹೇಗೆ ಹೊಂದಿಕೊಳ್ಳುತ್ತೀರಿ? ಒಬ್ಬ ವ್ಯಕ್ತಿ ಸಾರ್ವಜನಿಕ ಜೀವನದಲ್ಲಿ ಅಜಾತಶತ್ರುವಾಗಿ ಎಲ್ಲರೊಂದಿಗೆ ಸ್ನೇಹಪೂರ್ಣ ಸಂಬಂಧವನ್ನು ಹೇಗೆ ಬೆಳೆಸಿಕೊಳ್ಳಬಹುದು?**

–ನಾರಾಯಣ ಅವರೇ, ಒಬ್ಬ ಪತ್ರಕರ್ತನಿಗೆ ಬಿಜೆಪಿ, ಕಾಂಗ್ರೆಸ್ ಅಥವಾ ಜೆಡಿಎಸ್ ಎನ್ನುವುದು ಕೇವಲ ಸುದ್ದಿಯ ಮೂಲಗಳು. ಕುಮಾರಣ್ಣನವರ ಹತ್ತಿರ ಹೋದಾಗ ಅವರ ಕಥೆ ಕೇಳುತ್ತೇನೆ, ಸಿದ್ದರಾಮಯ್ಯನವರ ಹತ್ತಿರ ಹೋದಾಗ ಅವರ ಕಥೆಗಳನ್ನು ಕೇಳುತ್ತೇನೆ. ಎಲ್ಲರ ಮನೆಯ ಅಡುಗೆಯ ರುಚಿ ನೋಡದಿದ್ದರೆ ಒಬ್ಬ ಪತ್ರಕರ್ತ ಪರಿಪೂರ್ಣನಾಗುವುದು ಹೇಗೆ?

ನಾನು ಯಾರನ್ನೂ ಅವರ ರಾಜಕೀಯ ಬಣ್ಣದ ಮೇಲೆ ಅಳೆಯುವುದಿಲ್ಲ, ಬದಲಿಗೆ ಅವರ ವ್ಯಕ್ತಿತ್ವದ ಮೇಲೆ ಅಳೆಯುತ್ತೇನೆ. ಮುಖದ ಮೇಲೆ ಯಾವಾಗಲೂ ಒಂದು ನಗು ಮತ್ತು ಮಾತಿನಲ್ಲಿ ಪ್ರೀತಿ, ಆತ್ಮೀಯತೆ ಇದ್ದರೆ ಸಾಕು, ಎಂಥ ಕಡುವೈರಿಯೂ ಸ್ನೇಹಿತನಾಗುತ್ತಾನೆ. ನಗು ಎನ್ನುವುದು ಎಲ್ಲ ಸಿದ್ಧಾಂತಗಳನ್ನೂ ಕರಗಿಸುವ ಅದ್ಭುತ ಆಮ್ಲ!

ನಾನು ಜಾಸ್ತಿ ಮಾತನಾಡುವುದಕ್ಕಿಂತ ಅವರು ಹೇಳುವುದನ್ನು ಜಾಸ್ತಿ ಕೇಳಿಸಿಕೊಳ್ಳುತ್ತೇನೆ. ನಾನು ವಕ್ತಾರನನಂತೆ ಎಂದೂ ಮಾತಾಡುವುದಲ್ಲ. ಯಾವತ್ತೂ ಒಳ್ಳೆಯ ಕೇಳುಗ ಎಲ್ಲೆಡೆ ಸಹ್ಯವಾಗುತ್ತಾನೆ. ನೀವು ಯಾರ ಮಾತುಗಳನ್ನಾದರೂ ಶ್ರದ್ಧೆಯಿಂದ ಕೇಳಿದರೆ, ಅವರು ನಿಮ್ಮನ್ನು ಆತ್ಮೀಯ ಗೆಳೆಯ ಎಂದು ಭಾವಿಸುತ್ತಾರೆ.

ಎಲ್ಲರ ಜತೆಗೂ ಸ್ನೇಹವಿರಲಿ, ಆದರೆ ಯಾರೊಬ್ಬರಿಗೂ ಮಾರಾಟವಾಗಬಾರದು. 'ಎಲ್ಲರನ್ನೂ ಪ್ರೀತಿಸು, ಯಾರನ್ನೂ ನಂಬಬೇಡ' ಎನ್ನುವ ಶೇಕ್ಸ್‌ಪಿಯರ್ ಮಾತು ರಾಜಕೀಯ ಸ್ನೇಹಕ್ಕೆ ಅನ್ವಯಿಸುವುದಿಲ್ಲ, ಬದಲಿಗೆ ಎಲ್ಲರ ಜತೆಗೂ ಇರು, ಆದರೆ ನಿನ್ನ ಅಸ್ತಿತ್ವ ನಿನ್ನದಾಗಿರಲಿ ಎಂಬ ಪಾಲಿಸಿ ಹೆಚ್ಚು ತಿಂಡಿಇಾ ಆಗುತ್ತದೆ.

ರಾಜಕೀಯದಲ್ಲಿ ಯಾರೂ ಶಾಶ್ವತ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ. ಹೀಗಿರುವಾಗ ನಾನು ಮಾತ್ರ ಏಕೆ ಒಬ್ಬರಿಗೇ ಅಂಟಿಕೊಳ್ಳಲಿ? ಎಲ್ಲರ ಜತೆ ನಗುತ್ತಾ, ಊಟ ಮಾಡುತ್ತಾ, ಅವರವರ ಕಾಲೆಳೆಯುತ್ತಾ ಇರುವುದರಲ್ಲೇ ಜೀವನದ ಅಸಲಿ ಮಜಾ ಇದೆ! ಸ್ನೇಹಿತರು ಯಾರೇ ಇರಲಿ, ನಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವುದು ಮತ್ತು ಎಲ್ಲರನ್ನೂ ಗೌರವಿಸುವುದು ಜೀವನದ ದೊಡ್ಡ ಪಾಠ.

ಚಿತ್ರದಲ್ಲೇ ಕಥೆ ಹೇಳಿದ ರಘುರಾಯ್

» ಶಶಿಧರ ಹಾಲಾಡಿ

ಒಂದು ಚಿತ್ರವು ಸಾವಿರ ಪದಗಳಿಗೆ ಸಮ ಎನ್ನುತ್ತಾರೆ; ಆದರೆ, ರಘು ರಾಯ್ ಅವರ ಒಂದು ಚಿತ್ರವು ಸಾವಿರಾರು ಪದಗಳಿಗೆ ಸಮನಾದುದು! ಫೋಟೋ ಜರ್ನಲಿಸಂ ಕ್ಷೇತ್ರದಲ್ಲಿ ನಮ್ಮ ದೇಶದ ಹೆಸರನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದ ಪ್ರಥಮ ಅಗ್ರಗಣ್ಯ ಛಾಯಾಚಿತ್ರಗ್ರಾಹಕ ರಘು ರಾಯ್ (1942–2026), ಇತ್ತೀಚೆಗೆ ನಿಧನರಾದರು. ಅವರ ಆರು ದಶಕಗಳ ಫೋಟೋಗ್ರಾಫಿಯನ್ನು ಗಮನಿಸುತ್ತಾ ಹೋದರೆ, ನಮ್ಮ ದೇಶದ ಪ್ರಮುಖ ವಿದ್ಯಮಾನಗಳನ್ನು ಚಿತ್ರಗಳಲ್ಲಿ ಸೆರೆಹಿಡಿಯುವುದರ ಜತೆ, ಅಂತಹ ಛಾಯಾಚಿತ್ರಗಳಿಗೆ ಕಲಾತ್ಮಕ ಚೌಕಟ್ಟನ್ನು, ಸ್ಪರ್ಶವನ್ನು ಕೊಡುವಲ್ಲಿ ಅವರು ತೋರಿದ ಕೌಶಲ ಮನದಟ್ಟಾದೀತು.

ಅವರ ಕೆಲವು ಪ್ರಸಿದ್ಧ ಛಾಯಾಚಿತ್ರಗಳು ಹೇಳುವ ಕಥೆಯ ವ್ಯಾಪ್ತಿ, ಆಯಾಮ ಅನೂಹ್ಯವಾದುದು. ಸ್ವತಂತ್ರ ಭಾರತದ ಪ್ರಮುಖ ಪ್ರೆಸ್ ಫೋಟೋಗ್ರಾಫರ್ ಸಹ ಆಗಿದ್ದ ಅವರಿಗೆ, ದೆಹಲಿಯ ಅಧಿಕಾರಶಾಹಿಯ ಪಡಸಾಲೆಗೆ ಸುಲಲಿತ ಪ್ರವೇಶ ಇತ್ತು. ಅಂದಿನ ಪ್ರಧಾನಿ ಇಂದಿರಾಗಾಂಧಿಯವರ ಹಲವು ಅರ್ಥಪೂರ್ಣ ಛಾಯಾಚಿತ್ರಗಳನ್ನು ಅವರು ಸೆರೆಹಿಡಿದ್ದಾರೆ.



ಅವು ಗಳಲ್ಲಿ ಒಂದು ಎಂದರೆ, ಇಂದಿರಾ ಗಾಂಧಿ ಯವರು ಕುರ್ಚಿಯಲ್ಲಿ ಕುಳಿತಿದ್ದು, ಅವರ ಸುತ್ತಲೂ ಹಿರಿಯ ರಾಜಕಾರಣಿಗಳು, ಮಂತ್ರಿಗಳು ವಿನೀತರಾಗಿ ನಿಂತಿದ್ದಾರೆ! ಇಂದಿರಾ ಗಾಂಧಿಯವರು, ಅಧಿಕಾರದಲ್ಲಿದ್ದಾಗ, ಅವರ ಪಕ್ಷದ ಇತರ ರಾಜಕಾರಣಿಗಳನ್ನು, ಮಂತ್ರಿಗಳನ್ನು ಯಾವ ಸ್ಥಾನದಲ್ಲಿಟ್ಟಿದ್ದರು, ಎಷ್ಟರಮಟ್ಟಿಗೆ ನಿಯಂತ್ರಿಸುತ್ತಿದ್ದರು ಎಂಬುದನ್ನು, ಈ ಒಂದು ಚಿತ್ರವು ಅದೆಷ್ಟು ಮಾರ್ಮಿಕವಾಗಿ ಸೆರೆ ಹಿಡಿದಿದೆ ಎಂದರೆ, ಈ ಚಿತ್ರವನ್ನು ನೋಡಿದಾಗ ಮನಸ್ಸಿನಲ್ಲಿ ಮುಡುವ ಚಿತ್ರಣವು, ಸಾವಿರಾರು ಪದಗಳಲ್ಲಿ ವರ್ಣಿಸಿದರೂ, ದಕ್ಕಲಾರದು!

ರಘು ರಾಯ್ ಅವರು 1942ರಲ್ಲಿ, ಪಂಜಾಬ್ ರಾಜ್ಯದ ಭಾಗದಲ್ಲಿ ಜನಿಸಿದರು; ಅವರ ಜನ್ಮಸ್ಥಳವು 1947ರಲ್ಲಿ ಪಾಕಿಸ್ತಾನಕ್ಕೆ ಸೇರಿಹೋಯಿತು. ಅವರು ಓದಿದ್ದು ಇಂಜಿನಿಯರಿಂಗ್. ಅವರ ಸಹೋದರ ಶರಮ್‌ಪಾಲ್ ಚೌಧುರಿ (ಎಸ್.ಪಾಲ್) ಪತ್ರಿಕಾ ಛಾಯಾಚಿತ್ರಗ್ರಾಹಕರಾಗಿದ್ದರು; ಅವರಿಂದ ಎರವಲು ಪಡೆದ ಒಂದು ಕ್ಯಾಮೆರಾ ಬಳಸಿ, ರಘುರಾಯ್ ಅವರು ಚಿತ್ರಿಸಿದ ಒಂದು ಕತ್ತೆಯ ಚಿತ್ರವು, ಟೈಮ್ ಪತ್ರಿಕೆಯಲ್ಲಿ ಪ್ರಕಟಗೊಂಡದ್ದೇ, ರಘು ರಾಯ್ ಅವರ ಭವಿಷ್ಯದ ಹಾದಿಯನ್ನು ಬದಲಿಸಿತು. ಇಂಜಿನಿಯರ್ ಆಗಬೇಕಿದ್ದ ಅವರು ಪತ್ರಿಕಾ ಛಾಯಾಚಿತ್ರಗ್ರಾಹಕರಾಗಿ ತಮ್ಮ ಬದುಕನ್ನು ರೂಪಿಸಿಕೊಂಡರು. 1966ರಲ್ಲಿ, ಅಂದರೆ 22ನೆಯ ವಯಸ್ಸಿಗೆ 'ದ ಸ್ಟೇಟ್ಸ್‌ಮನ್' ಪತ್ರಿಕೆ ಸೇರಿದರು; 1976ರಲ್ಲಿ ಕೊಲ್ಕೊತ್ತಾದ 'ಸಂಡೇ' ವಾರಪತ್ರಿಕೆಯಲ್ಲಿ ತಮ್ಮ ವೃತ್ತಿಜೀವನವನ್ನು ಮುಂದುವರಿಸಿದರು. ಅಂದಿನ ದಿನಗಳಲ್ಲಿ 'ಸಂಡೇ' ಪತ್ರಿಕೆಯು, ಛಾಯಾಚಿತ್ರಗಳಲ್ಲಿ ನಾನಾ ರೀತಿಯ ಪ್ರಯೋಗಗಳನ್ನು ಮಾಡುವ ಅವಕಾಶ ನೀಡುತ್ತಿತ್ತು; ಅಲ್ಲಿ ಬೆಳೆದ ರಘುರಾಯ್ ಅವರು ಮುಂದೆ ಸೇರಿದ್ದು ಇಂಡಿಯಾ ಟುಡೇ (1982–91) ಪತ್ರಿಕೆಯನ್ನು.

ಈ ಸಮಯದಲ್ಲೇ, ನಮ್ಮ ದೇಶದ ಕುಖ್ಯಾತ ಕೈಗಾರಿಕಾ ದುರಂತ ಘಟಿಸಿತು: ಅದೇ ಭೋಪಾಲ್ ಅನಿಲ ದುರಂತ (1984). ಆ ದುರಂತ ಸನ್ನಿವೇಶವನ್ನು ರಘು ರಾಯ್ ಅವರು ಚಿತ್ರಗಳ ಮೂಲಕ ಸೆರೆ ಹಿಡಿದ ಪರಿಯು, ಇಡೀ ವಿಶ್ವದ ಗಮನ ಸೆಳೆಯಿತು. ಅಲ್ಲಿನ ಮಾರ್ಮಿಕ ಚಿತ್ರಗಳನ್ನು ಬಳಸಿ, 'ಎಕ್ಸ್‌ಪೋಷರ್ : ಎ ಕಾರ್ಪೊರೇಟ್ ಕ್ರೈಮ್' ಎಂಬ ಪುಸ್ತಕವನ್ನೂ ರಚಿಸಿ, ಜಗತ್ತಿನ ಹಲವು ಪ್ರಮುಖ ದೇಶಗಳಲ್ಲಿ ಆ ದುರಂತದ ಚಿತ್ರಗಳ ಪ್ರದರ್ಶನವನ್ನೂ ಏರ್ಪಡಿಸಿದರು. ಬಹುರಾಷ್ಟ್ರೀಯ ಕಂಪೆನಿಯೊಂದರ ನಿರ್ಲಕ್ಷ್ಯದಿಂದ ಘಟಿಸಿದ ಭೋಪಾಲ್ ದುರಂತದ ತೀವ್ರತೆಯನ್ನು ಜಗತ್ತಿನ ಮುಂದಿಡುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೇ, ಆಳುವವರ ಸಂಭಾವ್ಯ ಬೆದರಿಕೆಗೂ ಜಗ್ಗದೇ ರಘುರಾಯ್ ಅವರು ತಮ್ಮ ಚಿತ್ರಗಳನ್ನು ಪ್ರಕಟಿಸಿದರು ಎಂಬುದು ಗಮನಾರ್ಹ.

1971ರ ಬಾಂಗ್ಲಾ ವಿಮೋಚನೆಯ ಸಮಯದಲ್ಲಿ ಅಲ್ಲಿನ ನಿರಾಶ್ರಿತರ ಸಂಕಷ್ಟಗಳನ್ನು ರಘುರಾಯ್ ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದ್ದಾರೆ; ಕೊಲ್ಕೊತ್ತಾದಲ್ಲಿದ್ದ ಮದರ್ ತೆರೆಸಾ ಅವರ ಬದುಕಿನ ಹಲವು ಸನ್ನಿವೇಶಗಳು ಇವರ ಛಾಯಾಚಿತ್ರಗಳಲ್ಲಿ ಮೂಡಿ ಬಂದಿವೆ. ನಮ್ಮ ರಾಜ್ಯದ ಹಂಪೆಯ ಸ್ಮಾರಕಗಳನ್ನು ಸಹ ರಘುರಾಯ್ ಅವರು ಚಿತ್ರಿಸಿ, ಪುಸ್ತಕವನ್ನು ರಚಿಸಿದ್ದಾರೆ.

ರಘುರಾಯ್ ಅವರು ಚಿತ್ರಿಸಿದ ಛಾಯಾಚಿತ್ರಗಳನ್ನು ಬಳಸಿಕೊಂಡು ಹಲವು ಪುಸ್ತಕಗಳು ಹೊರಬಂದಿವೆ; ಅವುಗಳಲ್ಲಿ 'ರಘು ರಾಯ್ಸ್ ಇಂಡಿಯಾ' ಹೆಚ್ಚು ಪ್ರಸಿದ್ಧ. ಕಪ್ಪು ಬಿಳುಪು ಚಿತ್ರಗಳನ್ನು ಮಾತ್ರ ಬಳಸಿಕೊಂಡು ಹೊರಬಂದಿರುವ ಈ ಪುಸ್ತಕವು, ಸ್ವಾತಂತ್ರ್ಯೋತ್ತರ ಭಾರತದ ಪ್ರಗತಿಯನ್ನು, ಜನರ ಸಂಕಷ್ಟಗಳನ್ನು, ರಾಜಕೀಯ ಸನ್ನಿವೇಶಗಳನ್ನು ಹಿಡಿದಿಟ್ಟಿರುವ ಪರಿ ಅನನ್ಯ.

ರಘುರಾಯ್ ಅವರು ಛಾಯಾಚಿತ್ರಕಲೆಯಲ್ಲಿ, ಫೋಟೋಜರ್ನಲಿಸಂ ಕ್ಷೇತ್ರದಲ್ಲಿ ಹಾಕಿಕೊಟ್ಟ ಮಾದರಿಯು ನಮ್ಮ ದೇಶದ ಪತ್ರಿಕೆ ಮತ್ತು ಸುದ್ದಿ ಕ್ಷೇತ್ರದಲ್ಲಿ ಅಚ್ಚಳಿಯದ ಛಾಪನ್ನು ಒತ್ತಿದೆ.

30ನೆಯ ವಯಸ್ಸಿನಲ್ಲೇ ಪದ್ಮಶ್ರೀ!

ಫೋಟೋಗ್ರಾಫಿ ಕ್ಷೇತ್ರದಲ್ಲಿ ಬಹಳ ಗೌರವ ಹೊಂದಿರುವ 'ಮ್ಯಾಗ್ನಮ್ ಫೋಟೋಸ್' ಸಂಸ್ಥೆಗೆ ರಘುರಾಯ್ ಸೇರಿದಾಗ, ಜಗತ್ತಿನ ಪ್ರಮುಖ ಛಾಯಾಚಿತ್ರಗ್ರಾಹಕರಲ್ಲಿ ಇವರೊಬ್ಬರು ಎಂದು ಜಗತ್ತೇ ಬೆರಗಿನಿಂದ ನೋಡುವಂತಾಯಿತು. ಆಗ ಅವರಿಗೆ ಕೇವಲ 35 ವರ್ಷ ವಯಸ್ಸು! 1971ರ ಬಾಂಗ್ಲಾ ವಿಮೋಚನೆಯ ಸಮಯದಲ್ಲಿ ಇವರು ಸೆರೆಹಿಡಿದ ಚಿತ್ರಗಳು ಎಲ್ಲರ ಗಮನ ಸೆಳೆದವು. ಅದರ ಮುಂದಿನ ವರ್ಷ ಅವರು ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದರು. ಆಗ ಅವರ ವಯಸ್ಸು ಕೇವಲ 30! ಕಿರಿಯ ವಯಸ್ಸಿನಲ್ಲೇ ಅಪಾರ ಸಾಧನೆ ಮಾಡಿದ ಇವರು, ಫೋಟೋಜರ್ನಲಿಸಂನಲ್ಲಿ ನಡೆಸಿದ ಯಶಸ್ವಿ ಪ್ರಯೋಗಗಳು ಹಲವು.

» ಚಿತ್ರಕೃಪೆ: ರಘು ರಾಯ್



'ಶ್ರೀನಿವಾಸರಾಯರೇ,
ನಾನು ನಿಮ್ಮ ಒಳಿತಿಗಾಗಿ ಅನೇಕ ವ್ಯವಹಾರಗಳ ಮಾರ್ಗ
ತೋರಿಸಿದೆ. ಆದರೆ ನೀವು ಯಾವುದಕ್ಕೂ ಮುಂದೆ ಬರಲಿಲ್ಲ.
ಮುಖ್ಯವಾಗಿ ನಿಮಗೆ ಯಾವುದೇ ವ್ಯವಹಾರದಲ್ಲಿ ಆಸಕ್ತಿಯಿಲ್ಲ.
ಧೈರ್ಯವೂ ಇಲ್ಲ. ಕೊನೆಗೆ ದಿನಪತ್ರಿಕೆ ಏಜೆನ್ಸಿಯಾದರೂ
ನಿಮಗೆ ಕೊಡಿಸೋಣವೆಂದು ಪ್ರಸ್ತಾಪಿಸಿದರೆ ಅದಕ್ಕೂ
ಹೇಡಿಯಂತೆ ನಕಾರ ಸೂಚಿಸಿದಿರಿ. ಒಂದಂತೂ ನನಗೆ ಖಾ
ತ್ರಿಯಾಗಿದೆ. ನೀವು ಏನೂ ಮಾಡಲು ನಾಲಾಯಕ್! ವೇಸ್ಟ್
ಬಾಡಿ! ನಿಮ್ಮ ಬದುಕು ಇಷ್ಟೇ. ಮನೆಯಲ್ಲಿ ಮಕ್ಕಳೊಂದಿಗೆ
ಆಟವಾಡುತ್ತ ಸ್ನೇಹಿತರೊಂದಿಗೆ ಕಾಡುಹರಟೆ ಹೊಡೆಯುತ್ತ
ಇದ್ದುಬಿಡಿ. ಇನ್ನು ನನ್ನನ್ನು ಮಾತನಾಡಿಸಬೇಡಿ.'

ಟರ್ನಿಂಗ್ ಪಾಯಿಂಟ್ ಆದ ಪೋಸ್ಟ್ ಕಾರ್ಡ್!

» ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಬಹಳ ಹಿಂದೆ ಅಂದರೆ ನನ್ನ ತಾರುಣ್ಯದ ಕಾಲ. ಅಪ್ಪನಿಗೆ ಸಹಾಯಕನಾಗಿ ಹೋಟೆಲ್ ನಡೆಸಿದೆ. ನಂತರ, ಕಾರಣಾಂತರದಿಂದ ಹೋಟೆಲನ್ನು ಗುತ್ತಿಗೆಗೆ ಕೊಟ್ಟು ಬೇರೆ ಒಬ್ಬನೇ ಮಾಡಬಹುದಾದ ವ್ಯವಹಾರಗಳ ಹುಡುಕಾಟ ಆರಂಭಿಸಿದ್ದೆ. ಆಗಾಗ ಬರುತ್ತಿದ್ದ ತಂದೆಯ ವರ ಗೆಳೆಯ ದಕ್ಷಿಣ ಕನ್ನಡದ ಹಿರಿಯರೊಬ್ಬರು ನನಗೆ ತುಂಬಾ ಆಪ್ತರಾಗಿದ್ದರು. ಅವರು ನನ್ನ ಮುಂದಿನ ಹೆಜ್ಜೆಯ ಬಗ್ಗೆ ಮಾರ್ಗದರ್ಶನ ನೀಡುತ್ತ ಬಟ್ಟೆ ಅಂಗಡಿ , ಫ್ಯಾನ್ಸಿ ಸ್ಟೋರ್, ಬೇಕರಿ, ಎಲೆಕ್ಟ್ರಾನಿಕ್ ಶಾಪ್ ಮತ್ತಿತರೆ ಮಾಡುವಂತೆ ಸಲಹೆ ಕೊಟ್ಟರು. ನನಗಾಗ ಬಂಡವಾಳ ಹಾಕುವ ಚೈತನ್ಯವಿರಲಿಲ್ಲ. ಬರುವ ಅಲ್ಪ ಬಾಡಿಗೆ ಹಣ ತಂದೆ ತಾಯಿ, ಪತ್ನಿ, ಮಕ್ಕಳ ಊಟ,ತಿಂಡಿ, ಶಾಲೆಯ ವೆಚ್ಚಕ್ಕೇ ಖಾಲಿ! ಹಾಗಾಗಿ ಎಲ್ಲಕ್ಕೂ ಹಿಂಜರಿದೆ. ಹಾಗೆಯೇ ಮೂರು ವರ್ಷ ಕಳೆದರೂ ಉದ್ಯೋಗದ ಸಮಸ್ಯೆ ಅಂತ್ಯ ಕಾಣಲಿಲ್ಲ. ಅವರೂ ಯಾವುದ್ಯಾವುದೋ ವ್ಯವಹಾರ ಮಾಡುವಂತೆ ಒತ್ತಾಯಿಸುತ್ತಿದ್ದರು. ಯಾವು ದಕ್ಕೆ ಪ್ರಯತ್ನಿಸಿದರೂ ಬೆಕ್ಕು ಅಡ್ಡಬಂದ ಅನುಭವ! ಆ ಹಿರಿಯರು ಸಲಹೆ ಕೊಟ್ಟದ್ದು ನನಗೆ ಸರಿಕಾಣುತ್ತಿರಲಿಲ್ಲ. ಅವರಿಗೂ ಒಂಥರಾ ಬೇಸರ ! ಒಂದು ದಿನ ಬೆಳಿಗ್ಗೆ ತಿಂಡಿ ವೇಳೆಗೆ ಹಿರಿಯರು ಬಂದರು. 'ಶ್ರೀನಿವಾಸ, ಒಂದು ಲೀಡಿಂಗ್ ದಿನ ಪತ್ರಿಕೆಯ ಹರಪನಹಳ್ಳಿ ಏಜೆನ್ಸಿ ಖಾಲಿಯಿದ್ದು ಹೊಸ ಏಜೆನ್ಸಿ ಕೊಡಲು ಅರ್ಜಿ ಕೇಳಿದ್ದಾರೆ. ನೀನು ಮಾಡ್ತೀಯ? ನನಗೆ ಆ ಪತ್ರಿಕೆಯವರು ಪರಿಚಯ. ನಾನು ಹೇಳಿದರೆ ಖಂಡಿತ ಕೊಡುತ್ತಾರೆ. ಈಗಲೇ ಅರ್ಜಿ ಹಾಕು' ಎಂದರು.

ನನ್ನದು ಯಥಾಪ್ರಕಾರ ಮೌನೇನ ಕಲಹಂ ನಾಸ್ತಿ! ಪೇಪರ್ ಏಜೆನ್ಸಿ ಕಷ್ಟ; ನಿತ್ಯ ಬೆಳಿಗ್ಗೆ 4 ಕ್ಕೇ ಏಳಬೇಕು. ಮನೆಗಳಿಗೆ ಹಂಚಲು ಹುಡುಗರು ಅವಶ್ಯ. ಅವರಿಗೆ ಕಾಫಿ ತಿಂಡಿ, ಜೊತೆಗೆ ಸೈಕಲ್ ಒದಗಿಸುವುದು ಸಾಧ್ಯವೇ? ಅಷ್ಟಕ್ಕೂ ಅವರು ಕೈಕೊಟ್ಟರೆ ನಾನೇ ಮನೆ ಮನೆಗೆ ಪತ್ರಿಕೆ ಕೊಟ್ಟುಬರಬೇಕು. ಈ ಉಸಾಬರಿಯೇ ಬೇಡ. ನನ್ನ ನಿರುತ್ತರದಿಂದ ಅವರಿಗೆ ಕೋಪ ಬಂದಿತೆಂದು ಕಾಣು ತ್ತದೆ. ದುರ್ದಾನ ತೆಗೆದುಕೊಂಡವರಂತೆ ಎದ್ದು ಬಿರಬಿರನೆ ಹೊರಹೊರಟರು. ಊರಿಗೆ ಹೋಗಿ, ಉಡುಪಿಯಿಂದ ಅಂಚೆ ಕಾರ್ಡ್ ಬರೆದಿದ್ದರು. ಒಕ್ಕಣೆ ಹೀಗಿತ್ತು.

'ಶ್ರೀನಿವಾಸರಾಯರೇ, ನಾನು ನಿಮ್ಮ ಒಳಿತಿಗಾಗಿ ಅನೇಕ ವ್ಯವಹಾರಗಳ ಮಾರ್ಗ ತೋರಿಸಿದೆ. ಆದರೆ ನೀವು ಯಾವುದಕ್ಕೂ ಮುಂದೆ ಬರಲಿಲ್ಲ. ಮುಖ್ಯವಾಗಿ ನಿಮಗೆ ಯಾವುದೇ ವ್ಯವಹಾರದಲ್ಲಿ ಆಸಕ್ತಿಯಿಲ್ಲ. ಧೈರ್ಯವೂ ಇಲ್ಲ. ಕೊನೆಗೆ ದಿನಪತ್ರಿಕೆ ಏಜೆನ್ಸಿಯಾದರೂ ನಿಮಗೆ ಕೊಡಿಸೋಣವೆಂದು ಪ್ರಸ್ತಾಪಿಸಿದರೆ ಅದಕ್ಕೂ ಹೇಡಿಯಂತೆ ನಕಾರ ಸೂಚಿಸಿದಿರಿ. ಒಂದಂತೂ ನನಗೆ ಖಾತ್ರಿಯಾಗಿದೆ. ನೀವು ಏನೂ ಮಾಡಲು ನಾಲಾಯಕ್! ವೇಸ್ಟ್ ಬಾಡಿ! ನಿಮ್ಮ ಬದುಕು ಇಷ್ಟೇ. ಮನೆಯಲ್ಲಿ ಮಕ್ಕಳೊಂದಿಗೆ ಆಟವಾಡುತ್ತ ಸ್ನೇಹಿತರೊಂದಿಗೆ ಕಾಡು ಹರಟೆ ಹೊಡೆಯುತ್ತ ಇದ್ದುಬಿಡಿ. ಇನ್ನು ನನ್ನನ್ನು ಮಾತನಾಡಿಸಬೇಡಿ.' ನನಗೆ ಆಕಾಶವೇ ಕಳಚಿ ಬಿದ್ದಂತಾಗಿತ್ತು! ಇಷ್ಟೊಂದು ಭರ್ತ್ಸನೆಯೇ? ನಿಜಕ್ಕೂ ನಾನು ಸೋಮಾರಿಯೇ? ಏನೂ ಮಾಡಲಾಗದ ಅಯೋಗ್ಯನೇ ? ಕಣ್ಣು ಕೆಂಪಾ ಗಿತ್ತು. ರೋಷ ಉಕ್ಕೇರಿತ್ತು. ಅವರು ಬರೆದ ಕಾರ್ಡ್ ಕಣ್ಣೆದುರು ಗಹಗಹಿಸಿ ನಕ್ಕಂತಾಯಿತು!

ನಾನೇನು, ನನ್ನ ಯೋಗ್ಯತೆಯೇನು ತೋರಿಸಲೇ ಬೇಕು ಎಂದು ನಿರ್ಧರಿಸಿ ರಣಧೀರ ಕಂಠೀರವನಂತೆ ಎದ್ದೆ. ದೇವರಿಗೆ ಕೈಮುಗಿದು, ನಾವೇ ಬಾಡಿಗೆಗೆ ಕೊಟ್ಟಿದ್ದ ಹೋಟೆಲಿಗೆ ಹೋದೆ. ಅವರಾಗಲೇ ವ್ಯಾಪಾರ ತುಂಬಾ ಕುಸಿದಿದ್ದರಿಂದ ಹೋಟೆಲ್ ಬಿಡಲು ಯೋಚಿಸುತ್ತಿದ್ದದ್ದು ಗೊತ್ತಿತ್ತು. ಹೋದವನೇ 'ನೀವು ಹೋಟೆಲ್ ವಾಪಸ್ ಕೊಡಲು ಎಷ್ಟು ಹಣ ಕೊಡಬೇಕು?' ಎಂದೆ. ಒಂದು ಸುತ್ತಿನ ಮಾತುಕತೆಯ ನಂತರ ನಿರ್ಧಾರವಾಗಿ ಮತ್ತೊಬ್ಬರ ಬಳಿ ಸಾಲ ತಂದು ಹಾಳಾಗಿದ್ದ ಕುರ್ಚಿ, ಟೇಬಲ್, ರುಬ್ಬುವ ಮಷಿನ್, ಎಲ್ಲವನ್ನೂ ಬದಲಾಯಿಸಿ ಹೋಟೆಲ್ ಹೆಸರು ಬದಲಾಯಿಸಿ ಆರಂಭಿಸಿದೆ. ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಶ್ರಮಿಸಿದ ಫಲವಾಗಿ ಎರಡು ವರ್ಷದಲ್ಲಿ ಸಾಲಮುಕ್ತನಾದೆ. ವ್ಯಾಪಾರ, ಜನಮೆಚ್ಚುಗೆ ಲಭಿಸಿ ಕಟ್ಟಡವೂ ಹೊಸದಾಯಿತು.ಇಂದು ಜೀವನ ಹಸಿರಾಗಿದ್ದು ಎಲ್ಲವೂ ಸುಂದರವಾಗಿ ತೋರುತ್ತಿದೆ.

ಒಂದಂತೂ ದಿಟ! ಆ ಹಿರಿಯರು ಕಟುವಾದ ಶಬ್ದ ಗಳಿಂದ ಆ ಕಾರ್ಡ್‌ನ್ನು ಬರೆಯದಿದ್ದರೆ ನನ್ನ ಬದುಕು ಹೇಗಿರುತ್ತಿತ್ತೋ? ಅವರು ಬರೆದ ಆ ಅಂಚೆಕಾರ್ಡ್ ನನ್ನ ಬದುಕಿಗೆ ಒಂದು ತಿರುವು ನೀಡಿತ್ತು! ನನ್ನ ಭವಿಷ್ಯವನ್ನೇ ಬದಲಿಸಿದ ಆ ಕಾರ್ಡನ್ನು ಜೋಪಾನವಾಗಿರಿಸಿದ್ದೇನೆ! ಈಗಲೂ ತಿಂಗಳಿಗೊಮ್ಮೆ ಆ ಪತ್ರವನ್ನು ಓದಿ ಧೈರ್ಯ ವನ್ನು ರೀಚಾರ್ಜ್ ಮಾಡಿಕೊಳ್ಳುತ್ತೇನೆ.